ಹೈದ್ರಾಬಾದ್ ಕರ್ನಾಟಕದ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಗತಿಗಳು

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ (ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ವಿನಾಯಕ ಜೆ

ಮಾರ್ಗದರ್ಶಕರು
ಡಾ. ಎಲ್ ಶ್ರೀನಿವಾಸ
ಸಹ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಜಗದೀಶಕುಮಾರ ಜ. ನಾಯಕ
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ

ಮಾನವಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೯

ಹೈದ್ರಾಬಾದ್ ಕರ್ನಾಟಕದ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಗತಿಗಳು

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ (ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು
ವಿನಾಯಕ ಜೆ

ಮಾರ್ಗದರ್ಶಕರು
ಡಾ. ಎಲ್ ಶ್ರೀನಿವಾಸ
ಸಹ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಜಗದೀಶಕುಮಾರ ಚ. ನಾಯಕ
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ

ಮಾನವಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೯

ಸಂಶೋಧಕರ ಪ್ರಮಾಣ ಪತ್ರ

"ಹೈದ್ರಾಬಾದ್ ಕರ್ನಾಟಕದ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಗತಿಗಳು" (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಎಲ್ ಶ್ರೀನಿವಾಸ** ಅವರ ಮಾರ್ಗದರ್ಶನದಲ್ಲಿ ಹಾಗೂ **ಡಾ. ಜಗದೀಶಕುಮಾರ ಚ. ನಾಯಕ** ಅವರ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ದಿನಾಂಕ : 04/12/2019

ಸ್ಥಳ : ವಿದ್ಯಾರಣ್ಯ

ವಿನಾಯಕ ಜೆ

ಸಂಶೋಧನ ವಿದ್ಯಾರ್ಥಿ

ಮಾನವಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವಿನಾಯಕ ಜೆ ಇವರು **"ಹೈದ್ರಾಬಾದ್ ಕರ್ನಾಟಕದ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಗತಿಗಳು" (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆ ಪಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

ಶ್ರೀನಿವಾಸ

ಡಾ. ಎಲ್ ಶ್ರೀನಿವಾಸ
ಸಹ ಪ್ರಾಧ್ಯಾಪಕರು
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸಹ ಮಾರ್ಗದರ್ಶಕರ ದೃಢೀಕರಣ ಪತ್ರ

ವಿನಾಯಕ ಜೆ ಇವರು **"ಹೈದ್ರಾಬಾದ್ ಕರ್ನಾಟಕದ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಗತಿಗಳು"** (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆ ಪಹಾಪ್ರಬಂಧವನ್ನು ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 04-12-19
ಸ್ಥಳ : ವಿದ್ಯಾರಣ್ಯ

ಡಾ. ಜಗದೀಶಕುಮಾರ ಚ. ನಾಯಕ
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು ಹುಣಸಗಿ,
ಸುರಪುರ ತಾಲೂಕು, ಯಾದಗಿರಿ ಜಿಲ್ಲಾ

M.A M.Phil Slet Ph.D
Government First Grade College

ಪರಿವಿಡಿ

ಕೋಷ್ಟಕಗಳು

ಅಧ್ಯಾಯ : ಒಂದು
ಪ್ರವೇಶ

ಅಧ್ಯಾಯ : ಒಂದು

ಪ್ರವೇಶ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ನಮೂನೆಯ ಮಾದರಿ

೧.೫. ಅಧ್ಯಯನದ ವಿಧಾನಗಳು

೧.೬. ಅಧ್ಯಯನದ ಮಹತ್ವ

೧.೭. ಸಾಹಿತ್ಯ ಸಮೀಕ್ಷೆಗಳು

೧.೮. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು
ಪ್ರವೇಶ

೧.೧ ಪೀಠಿಕೆ

ಭಾರತ ಕೃಷಿ ಪ್ರಧಾನವಾದ ದೇಶ ನಾಗರಿಕತೆಯ ವಿಕಾಸದ ಪ್ರಾರಂಭದಲ್ಲಿ ಮನುಷ್ಯನು ಅಲೆಮಾರಿಯಾಗಿ ಗಡ್ಡೆ–ಗೆಣಸುಗಳನ್ನು ತಿಂದು ಬದುಕುತ್ತಿದ್ದ. ತದನಂತರದಲ್ಲಿ ಒಂದುಕಡೆ ನೆಲೆಯೂರಿ ತನ್ನ ಜೀವನೋಪಾಯಕ್ಕಾಗಿ ಕೃಷಿ ಭೂಮಿಯನ್ನು ಸೃಷ್ಟಿಸಿ ಆಹಾರ ಬೆಳೆಗಳನ್ನು, ತರಕಾರಿಗಳನ್ನು ಬೆಳೆಯಲು ಪ್ರಾರಂಭಿಸಿದ. ಜಾಗತೀಕರಣದ ಬಿಸಿ ತಟ್ಟಿದರೂ ತನ್ನ ಉಳಿವಿಗಾಗಿ ಹೋರಾಡುತ್ತಾ ಬಂದ ಕಷ್ಟಗಳನ್ನು ಎದುರಿಸಿ ಜೀವನ ಸಾಗಿಸುತ್ತಿದ್ದಾರೆ. ಅದರಲ್ಲೂ ಬಹುಮುಖ್ಯವಾಗಿ ಮಹಿಳಾ ಕೃಷಿಕೂಲಿಕಾರರ ಬದುಕು ಜಾಗತೀಕರಣದಿಂದ ಇನ್ನಷ್ಟು ಸಂಕಷ್ಟಗಳನ್ನು ಹೇರಿವೆಯೇ ಹೊರತು ಅವರ ಸ್ಥಿತಿಗತಿಗಳು ಬದಲಾಗಿಲ್ಲ. ಜಾಗತೀಕರಣ, ಖಾಸಗೀರಣ, ಉದಾರೀಕರಣ ಸಾಮಾನ್ಯ ಜನತೆಯ ಬದುಕಿಗೆ ಬೆಳದಿಂಗಳಂತೆ ಕಂಡರೂ, ಇದು ಶ್ರಮಿಕರನ್ನು ಕತ್ತಲೆಯ ಕೂಪಕ್ಕೆ ತಳ್ಳುತ್ತದೆ. ಮನುಷ್ಯನ ಶ್ರಮದ ದುಡಿಮೆಗೆ ಬೆಲೆ ಇಲ್ಲದಂತಾಗಿ ನೂರು ಜನ ಮಾಡುವ ಕೆಲಸವನ್ನು ಒಂದು ಯಂತ್ರವೇ ಪೂರೈಸುತ್ತದೆ. ಕಡಿಮೆ ಖರ್ಚಿನಲ್ಲಿ ಸ್ವಲ್ಪ ಸಮಯದಲ್ಲಿ ಹೆಚ್ಚು ಕೆಲಸವನ್ನು ಯಂತ್ರಗಳೇ ನಿಭಾಯಿಸುತ್ತಿರುವುದರಿಂದ ಕೂಲಿಗಾರರನ್ನು ಯಾರು ತಾನೇ ಕೆಲಸಕ್ಕೆ ಕರೆಯುತ್ತಾರೆ? ಮನುಷ್ಯನ ಶ್ರಮದ ಬದುಕು ಜಾಗತೀಕರಣದಿಂದಾಗಿ ತುಂಬಾ ಕಡಿಮೆಯಾಗಿ ಅನಾರೋಗ್ಯಕ್ಕೆ, ಯಂತ್ರದಾಸ್ಯಕ್ಕೆ ಬಲಿಯಾಗುತ್ತಿದ್ದಾರೆ. ದೈಹಿಕ ಶ್ರಮವನ್ನೇ ದೂರೀಕರಿಸಿ ಸಾವಿನ ಬದುಕಿನತ್ತ ದಾಪುಗಾಲಾಕುತ್ತಿದ್ದಾರೆ. ಭಾರತದಲ್ಲಿ ಕೃಷಿ ಕ್ಷೇತ್ರದಲ್ಲಿ ಹೆಚ್ಚು ದುಡಿಯುತ್ತಿರುವವರು ಮಹಿಳೆಯರೇ ಆದರೂ; ಪುರುಷನು ಮಾತ್ರ ಕೇಂದ್ರಬಿಂದು ಆಗಿರುವುದು ಶೋಚನಿಯ ಸಂಗತಿ. ಅದು ಮಹಿಳೆಗೆ ಈ ವಾಕ್ಯ ಅನ್ವಯಿಸಿ ಬಳಸುತ್ತಿಲ್ಲ. ಮಹಿಳೆಯು ತನ್ನ ಕುಟುಂಬದ ಹೊರೆಯನ್ನು ಹೊತ್ತು ಒಂದು ಕಡೆ ಗಂಡ–ಮಕ್ಕಳ ಪಾಲನೆ–ಪೂಷಣೆ ಮಾಡುತ್ತಾಳೆ. ಜೊತೆಗೆ ಹೊಲ–ಗದ್ದೆಗಳಲ್ಲೂ ದುಡಿಯುತ್ತಾಳೆ. ಅದರೂ ಮಹಿಳೆಯ ದುಡಿಮೆಗೆ ಇಂದಿಗೂ ಬೆಲೆ ಇಲ್ಲ. ಕೃಷಿ ಬೆಳವಣಿಗೆಗೆ ಅನೇಕ ರೀತಿಯ ಯಂತ್ರ–ತಂತ್ರಜ್ಞಾನಗಳು

ಆಧುನಿಕ ಸಂಧರ್ಭದಲ್ಲಿ ಇದ್ದರೂ ಕೃಷಿಯಿಂದ ಮಹಿಳೆಯ ಆರ್ಥಿಕ ಸ್ಥಿತಿ ಸುಧಾರಿಸಿಲ್ಲ. ಬದಲಾಗಿ ಇನ್ನೂ ಕಳಪೆಯಾಗಿದೆಯೆಂದೇ ಹೇಳಬಹುದು. ಜಾಗತೀಕರಣದ ಸಂಧರ್ಭದಲ್ಲಿ ಮಹಿಳೆಯರ ಕೃಷಿ ಆಧಾರಿತ ಜೀವನ ಹೇಗಿದೆ ಎಂಬುದರ ಕುರಿತು ಇಂದು ಚಿಂತನೆ ಮಾಡುವ ಅಗತ್ಯತೆ ಇದೆ. ಅಭಿವೃದ್ಧಿ ಶೀಲ ದೇಶಗಳಲ್ಲಿ ಕೃಷಿ ಕಾರ್ಮಿಕರ ಒಟ್ಟಾರೆ ಶೇಕಡ ೪೩ ರಷ್ಟು ಪಾಲು ಮಹಿಳೆಯರದೇ ಆಗಿದೆ. ಸಮೀಕ್ಷೆಗಳ ಪ್ರಕಾರ ಕೃಷಿಗೆ ಮಹಿಳೆಯರ ಕೊಡುಗೆ ಅಭಿವೃದ್ಧಿಶೀಲ ದೇಶಗಳಲ್ಲಿ ಗಣನೀಯವಾಗಿ ಹೆಚ್ಚಾಗಿರುತ್ತದೆ. ಮಹಿಳೆ ಕೃಷಿ ಕ್ಷೇತ್ರದಲ್ಲಿ ಕಣ್ಣು ಇದ್ದಂತೆ ಎಂಬ ವರ್ಣನೆಯೊಂದಿದೆ. ಏಕೆಂದರೆ ಮಹಿಳೆ ಮನೆ ಕೆಲಸದ ಜೊತೆ ಜೊತೆಗೆ ಕೃಷಿಯ ಕೆಲಸಗಳಾದ ಕಳೆ ಕೀಳುವುದು, ಹೂ ಬಿಡಿಸುವುದು, ಕೊಯ್ಲ ಪ್ರಕ್ರಿಯೆಯಲ್ಲಿ ಬಾಗಿಯಾಗುವುದು, ಸಸಿ ನೆಡುವುದು, ಅಡಿಕೆ ಸುಲಿಯುವುದು, ಶೇಂಗಾ ಬಿಡಿಸುವುದು, ದಾನ್ಯಗಳನ್ನು ಒಣಗಿಸುವುದು, ಹೀಗೆ ಹತ್ತು ಹಲವು ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾಳೆ. ಕೃಷಿ ಕ್ಷೇತ್ರಕ್ಕೆ ಮಹಿಳೆಯ ಕೊಡುಗೆ ಅಪಾರ, ಆದರೂ ಪ್ರಾಯೋಗಿಕವಾಗಿ ಮಹಿಳೆಯರ ದುಡಿಮೆಯನ್ನು ಪರಿಶೀಲಿಸುತ್ತಿಲ್ಲ ಎಂಬುದು ಬೇಸರದ ಸಂಗತಿ. ಕೃಷಿ ಕ್ಷೇತ್ರದಲ್ಲಿ ಇನ್ನೊಂದು ನೋವಿನ ವಿಚಾರವೆಂದರೆ ಅದು ಕೂಲಿಗೆ ಸಂಬಂದಿಸಿದ್ದು. ನಿರಂತರ ದುಡಿಮೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವ ಮಹಿಳೆಗೆ ನಿಗದಿತ ಕೂಲಿಯಾಗಲಿ, ಸಮಾನ ವೇತನವಾಗಲಿ, ಈವರೆಗೆ ಲಭ್ಯವಾಗುತ್ತಿಲ್ಲ. ಭಾರತದ ಕೃಷಿ ಸಮುದಾಯದಲ್ಲಿ ಮಹಿಳೆಯರ ಪ್ರಮಾಣ ಒಂದು ಅಂದಾಜಿನ ಪ್ರಕಾರ ೬೦ ರಷ್ಟಿದೆ. ಶೇಕಡ ೭೦ ರಷ್ಟು ಕೃಷಿ ಕೆಲಸಗಳನ್ನು ಮಾಡುವವರು ಅವರೇ, ಹೆಚ್ಚಿನ ಕೌಶಲ್ಯ ಬೇಕಿಲ್ಲದ ಈ ವಲಯದಲ್ಲಿ ಮಹಿಳೆಗೆ ಕೆಲಸವಿಲ್ಲದೆ ಆಹಾರವನ್ನು ನೀಡುತ್ತದೆ. ಹೀಗಾಗಿ ಆಹಾರ ಉತ್ಪಾದನೆಯಲ್ಲಿ ಮಹಿಳೆಯರದ್ದೇ ಪ್ರಮುಖ ಪಾತ್ರ. ಅಡುಗೆ ಮನೆಯಲ್ಲಿ ಆಹಾರ ಬೇಯಿಸುವವಳು ಅವಳೇ ಆದರೂ ಆಕೆಯನ್ನೇ ಅಪೌಷ್ಟಿಕತೆ ತೀವ್ರವಾಗಿ ಕಾಡುತ್ತದೆ ಏಕೇ? ಅದು ಆಕೆಗೆ ಸಿಗಬೇಕಾದ ನ್ಯಾಯ ಸಮಪಾಲು ಸಿಗದಿರುವುದು. ಸಮಪಾಲು ಸಿಗುವುದರಲ್ಲಿ ಆಕೆಯ ಅಸ್ತಿತ್ವವೇ ಅಗೋಚರವಾಗುವ ಕಟು ವಾಸ್ತವವೂ ಇದೆ. ಇಂತಹ ಸನ್ನಿವೇಶದಲ್ಲಿ ಜಾಗತೀಕರಣ ಮತ್ತು ಆಧುನೀಕರಣದ ಬಾಹುಗಳು ನಮ್ಮ ಬದುಕಿನ ವಲಯವನ್ನು ಆಕ್ರಮಿಸಿಕೊಳ್ಳುತ್ತಿವೆ. ಕೃಷಿಯಲ್ಲಿ ಮಹಿಳೆ ಕೈಗೊಳ್ಳುವ ಕೆಲಸಗಳಲ್ಲಿ ಹೆಚ್ಚಿನವು ಕಡಿಮೆ ಕೂಲಿಯ ಬಿತ್ತನೆ, ನಾಟಿ ಮಾಡುವುದು ಕಳೆ ತೆಗೆಯುವುದು, ಹೂ ಬಿಡಿಸುವುದು, ಸುಗ್ಗಿಯ ಕೆಲಸಗಳು ಅವರಿಗೆ ಸಿಗುವುದು ಮಾತ್ರ ಅಲ್ಲದೇ ಪುರುಷರ ವೇತನಗಳು ಶೇ ೭೦ರಷ್ಟು ಮಾತ್ರ, ಆದರೆ ಅವರಿಗೆ ಮನೆಯೊಳಗೂ ವೇತನವಿಲ್ಲದ ಶ್ರಮ ಇದೆ. ಕೃಷಿಯಲ್ಲಿರುವ ಶೇ ೫೦ ರಷ್ಟು ಮಹಿಳೆಯರು ಅನಕ್ಷರಸ್ಥರು. ಅಂದರೆ ವ್ಯವಸ್ಥಿತ ವಲಯದ ಕೌಶಲ್ಯದ ಉದ್ಯೋಗಗಳಿಗೆ ಸುಲಭವಾಗಿ ಹೋಗುವುದು ಸಾದ್ಯವಿಲ್ಲ. ನಿಜ ಹೇಳಬೇಕೆಂದರೆ ಏನೂ ಅಭಿವೃದ್ದಿಯಿಲ್ಲದ ಕೃಷಿ ಕ್ಷೇತ್ರವನ್ನು ತೊರೆದು ಬೇರೆ ಉದ್ಯೋಗಗಳರಸಿ ವಲಸೆ ಹೋಗುವ ಪುರುಷರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಇದರಿಂದ ಕೃಷಿ ಲೋಕ ಹೆಚ್ಚೆಚ್ಚು ಮಹಿಳಾಮಯವಾಗುತ್ತಿದೆ. ಹೀಗಿದ್ದು ಹೆಚ್ಚಿನ ಸಂದರ್ಭಗಳಲ್ಲಿ ಭೂಮಿಯ ಒಡೆತನ ಮಹಿಳೆಯರಾಗಿರುವುದಿಲ್ಲ.

ಭೂಮಿಯ ಮೇಲೆ ಅವರದೇ ವಾಸ್ತವ ನಿಯಂತ್ರಣ ಇದ್ದರೂ ಅದು ಅವರದಾಗಿರುವುದಿಲ್ಲ. ಬೆಳೆಯ ಆಯ್ಕೆ ಮಾರಟ ಭೂಮಿಯನ್ನು ಅಡವಿಡುವುದು/ ಭೂಮಿ ಮಾರಾಟ ಉತ್ಪಾದನೆಯ ಸಲಕರಣೆಗಳನ್ನು ಕುರಿತಂತಹ ನಿರ್ಧಾರಗಳನ್ನು ಮಾಡುವವರು ಮನೆಯೇ ಗಂಡಸರೇ. ಭಾರತದ ಭವ್ಯ ಭವಿಷ್ಯವನ್ನು ರೂಪಿಸಲು ಮತ್ತಷ್ಟು ಮಹತ್ವದ ಅವಕಾಶಗಳು ಮಹಿಳೆಯರ ಮಡಿಲಿಗೆ ಬದಿವೆ. ಮಹಿಳೆಯರ ಸಬಲೀಕರಣ ಹಾಗೂ ಸ್ವಾತಂತ್ರ್ಯಗಳು ಮಹಿಳೆಯರನ್ನು ಪ್ರವರ್ಧಮಾನಕ್ಕೆ ತರಲು ಸಹಾಯಕವಾಗುತ್ತದೆ ಮಹಿಳೆಯರು ತಿಳುವಳಿಕೆಯುಳ್ಳವರಾದರೆ ಕುಟುಂಬಗಳು ಬೆಳಗುತ್ತವೆ. ಕುಟುಂಬಗಳು ಪ್ರವರ್ದಮಾನಕ್ಕೆ ಬಂದರೆ ಸಮುದಾಯಗಳು ಮತ್ತು ಆ ಮೂಲಕ ಇಡೀ ದೇಶವೇ ಪ್ರಕಾಶಿಸುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಗತಿಯನ್ನು ತಿಳಿಯಲು ಅಧ್ಯಯನಕ್ಕೆ ಪೂರಕವಾಗಿ ಈ ಹಿಂದೆ ಇದ್ದ ಮಹಿಳಾ ಸಾಂಸ್ಕೃತಿಕ ಸಾಮಾಜಿಕ ಬದುಕಿನ ಬಗೆಯನ್ನು ತಿಳಿಯಲು, ಇತಿಹಾಸವನ್ನು ತಿರುವು ಹಾಕಿದಾಗ, ಹೆಣ್ಣಿನ ಯಾವುದೇ ರೀತಿಯ ಉದ್ಯೋಗ ಮತ್ತು ಶಿಕ್ಷಣಕ್ಕೆ ಅವಕಾಶವನ್ನು ಕೊಟ್ಟಿಲ್ಲ, ವೇದಗಳ ಕಾಲದಲ್ಲಿ ಮಹಿಳೆಗೆ ಶಿಕ್ಷಣದ ಅಧಿಕಾರವೇ ಇರಲಿಲ್ಲ. ಗಾರ್ಗಿ, ಮೈತ್ರೀಯ ಕೈಬೆರಳಣಿಕೆಯಷ್ಟು ಮೇಲ್ಜಾತಿ ವರ್ಗದ ಮಹಿಳೆಯರು ಅದು ಹೇಗೋ ಅವಕಾಶ ಪಡೆದುಕೊಂಡು ವಿದ್ವಾಂಸರಾದರು ಅವರನ್ನು ಹೊರತುಪಡಿಸಿ, ಇತರೆ ಜಾತಿ. ವರ್ಗ, ಬೇದವಿಲ್ಲದೆ ಕೋಟ್ಯಾಂತರ ಮಹಿಳೆಯರಿಗೆ ಅಕ್ಷರ ಜ್ಞಾನ ಭಂಡಾರ ದೂರದ ನಿಧಿಯೇ ಆಗಿತ್ತು. ಕರ್ತವ್ಯಗಳ ಹೊರೆ. ಮಕ್ಕಳ ಹೆರುವಿಕೆ, ದೈಹಿಕ ದೌರ್ಬಲ್ಯ ಹೀಗೆ ಹಲವು ನೆಪಗಳನ್ನು ಮುಂದೆ ಮಾಡಿ ಜ್ಞಾನಾರ್ಜನೆಯ ಹಕ್ಕನ್ನು ಅವಳಿಗೆ ನಿರಾಕರಿಸಲಾಗಿತ್ತು. ಅವರ ಪಾರಂಪರಿಕ ಜ್ಞಾನ, ಜ್ಞಾನದ ವ್ಯಾಪ್ತಿಯೊಳಗೇ ಬರದಂತೆ ನೋಡಿಕೊಳ್ಳಲಾಗಿತ್ತು. ಹೆಣ್ಣು ಓದಿ ಕೆಡ್ತು, ಗಂಡು ಕೂತು ಕೆಡ್ತು ಈ ತರಹದ ಗಾದೆಗಳಲ್ಲಿ ಆದು ನುಡಿಗಳಲ್ಲಿ ಸ್ವಾರ್ಥಿಯಾಗಿ ಮಹಿಳೆಗೆ ಜ್ಞಾನದ ನಿರಾಕರಣೆ ಕಂಡುಬರುತ್ತದೆ. ಸಾವಿರಾರು ವರ್ಷಗಳಿಂದ ಹೀಗೆ ಕೋಟ್ಯಾಂತರ ಮಹಿಳೆಯರ ವಿವೇಕ ಜ್ಞಾನಗಳು ನಾಲ್ಕು ಗೋಡೆಯೊಳಗಿನ ಕುಟುಂಬ ನಿಭಾಯಿಸಲು ಮಾತ್ರ ಅವಶ್ಯಕವೆಂದು ಭಾವಿಸಲಾಗಿತ್ತು. ಹೆಂಗಸರ ಬುದ್ದಿ ಮೊಳಕಾಲು ಕೆಳಗೆ ಎಂದು ಅವಳ ಅರಿವನ್ನು ತುಚ್ಛವಾಗಿ ಕಾಣಲಾಗಿತ್ತು. ಆದರೆ ಮಹಿಳೆಯ ಅರಿವು ತುದಿ ಬೆರಳ ಅರಿವು, ಒಲೆ ಮೇಲೆ ಅಕ್ಕಿ ಕುದಿವ ಪಾತ್ರೆಯಿಂದ ತುದಿಬೆರಳಲ್ಲಿ ಎರಡಗಳು ಹಿಸುಕಿ ಬೆಂದಿದೆಯೋ ಇಲ್ಲವೋ ತಿಳಿಯ ಬಲ್ಲಂತಹ ಸೂಕ್ಷ್ಮ ಅರಿವು ಅದು. ಈ ಅರಿವಿನ ಜೊತೆಗೆ ವಿಶಾಲ ಸಮಾಜದ ಜ್ಞಾನ ವೈಶಾಲ್ಯ ಕೂಡಿಸಿಕೊಂಡರೆ ಅದು ಮಹಿಳಾ ಜಾಗೃತಿಯ ಮೊದಲ ಹೆಜ್ಜೆ. ಭಾರತವೆಂಬ ಅಖಂಡ ಭೌಗೋಳಿಕ ಕಲ್ಪನೆಯೇ ಮೂಲಭೂತವಾಗಿ ಅನೇಕ ಸಮಸ್ಯೆಗಳನ್ನು ನಮ್ಮ ಎದುರಿಗಿಡುತ್ತದೆ. ಆದಿ ಮಾನವನ ಕಾಲದಿಂದ ಈ ನೆಲದ ಮೇಲೆ ಅನೇಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘರ್ಷಗಳು ನಡೆದುಕೊಂಡು ಬಂದಿವೆ. ಒಂದು ಜನಾಂಗದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಅಧಿಕಾರ ವಲಯಗಳ ಶಕ್ತಿ ಕೇಂದ್ರದಿಂದ ಹೊರ ಹೊಮ್ಮುವ ಅಂತರಂಗ ಸಂಸ್ಕೃತಿಯ ಪರಭಾಷೆಯು ಸ್ವಾಭಾವಿಕವಾಗಿ ಉಪ ಸಂಸ್ಕೃತಿಯನ್ನು ಹೊರಗಿಡುತ್ತದೆ. ವ್ಯಕ್ತಿಯ ಅಂತರಂಗದ ನೆಲೆಗಳನ್ನು ಕೇಂದ್ರವಾಗಿಟ್ಟುಕೊಂಡ ವ್ಯಾಖ್ಯಾನಗಳು, ಸಂಸ್ಕೃತಿಯನ್ನು ಹಳೆಯ ಆಕೃತಿಗಳಾಗಿ ಸ್ವೀಕರಿಸುವುದುಂಟು.

ವ್ಯಕ್ತಿಯ ಬಹಿರಂಗ ನೆಲೆಯನ್ನು ಪ್ರಧಾನವಾಗಿ ಪರಿಗಣಿಸಿದ ವ್ಯಾಖ್ಯಾನಗಳು. ವಸ್ತು ಸಂಸ್ಕೃತಿಯ ವಿವರಗಳನ್ನು ಒಳಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಡಿ.ಡಿ.ಕೊಸಾಂಬಿಯವರ ಮಾತುಗಳು ಕೇವಲ ಚರಿತ್ರೆಗಾರರಿಗೆ ಮಾತ್ರವಲ್ಲ ಒಂದು ಜನಾಂಗದ ಅಧ್ಯಯನ ಮಾಡುವವರಿಗೂ ಅವಶ್ಯಕ. ಕೊಸಾಂಬಿಯವರ ಮಾತುಗಳಲ್ಲಿ ಹೇಳುವುದಾರೆ, ಭೂತ ಮತ್ತು ವರ್ತಮಾನಗಳ ನಡುವಿನ ಸಂಬಂಧ ಮತ್ತು ಸಂಶೋಧನಾತ್ಮಕ ಪ್ರಕ್ರಿಯೆಯನ್ನು ಸಂಗತಿ ಕ್ರಮದಲ್ಲಿ ಗ್ರಹಿಸಲಾಗಿದೆ. ಭೂಮಿಯ ಮೇಲಿನ ಮಾನವನ ಜೀವನದ ಪ್ರಾರಂಭದೊಂದಿಗೆ ಸಂಸ್ಕೃತಿಯ ಪರಂಪರೆಯ ಪ್ರಾರಂಭವನ್ನು ಕಾಣಬಹುದು. ಈ ಮಾನವನು ಎಂದು ಗುಂಪಿನ ಜೀವನವನ್ನು ಕಂಡುಕೊಂಡನೋ ಅಂದಿನಿಂದಲೇ ನಾಗರೀಕತೆಯನ್ನು ಕಂಡುಕೊಂಡನು. ಈ ನಾಗರೀಕ ಹಂತದಲ್ಲಿ ಹಲವಾರು ದೈಹಿಕ ಬದಲಾವಣೆಗಳೊಂದಿಗೆ ಸಾಂಸ್ಕೃತಿಕ ಬದಲಾವಣೆಗಳು ಸಹ ಆಗುತ್ತಾ ಬಂದವು. ಇಂತಹ ಸಾಂಸ್ಕೃತಿಕ ಬದಲಾವಣೆಗಳನ್ನು ಅಥವಾ ವಿಕಾಸಗಳನ್ನು ವಿದ್ವಾಂಸರು ಬುಡಕಟ್ಟು ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ತಮ್ಮ ನಗರ ಸಂಸ್ಕೃತಿಗಳೆಂಬ ಮೂರು ಹಂತಗಳಲ್ಲಿ ಗುರುತಿಸಿದ್ದಾರೆ. ಎಲ್ಲಾ ಬುಡಕಟ್ಟುಗಳಲ್ಲಿ ಏಕ ಕಾಲದಲ್ಲಿ ಹೊಸ ಹೊಸ ಆವಿಷ್ಕಾರ ಮತ್ತು ಚಿಂತನೆಗಳುಂಟಾಗಲಿಲ್ಲ. ಕೆಲವು ಹೊಸ ಶೋಧನೆ ಮತ್ತು ಚಿಂತನೆಗಳಿಂದ ಆಧುನಿಕತೆಯ ಕಡೆ ಚಲಿಸಿದರೆ ಇನ್ನು ಕೆಲವು ಆಧುನಿಕತೆಗೆ ಬೆನ್ನು ಮಾಡಿದ್ದೂ ಉಂಟು. ಹೀಗಾಗಿ ಒಂದು ಬುಡಕಟ್ಟು ನಾಗರಿಕತೆಯ ತುತ್ತ ತುದಿಯಲ್ಲಿ ನಿಂತಿದ್ದರೆ, ಇನ್ನೊಂದು ಬುಡಕಟ್ಟು ನಾಗರೀಕತೆಯ ಶೈಶಾವಸ್ಥೆಯಲ್ಲಿಯೇ ಇರುವ ಸಾಧ್ಯತೆ ಇದೆ. ಆದ್ದರಿಂದಲೇ ಭಾರತದಲ್ಲಿ ಇಂದಿಗೂ ಗ್ರಾಮ ಮತ್ತು ನಗರಗಳಿಂದ ದೂರವಿರುವ ಆಧುನಿಕತೆಯ ಸೋಂಕಿಲ್ಲದ ಅನೇಕ ಬುಡಕಟ್ಟುಗಳು ಅಸ್ತಿತ್ವದಲ್ಲಿವೆ. ಇತ್ತೀಚಿನ ಬೆಳವಣಿಗೆಗಳಂತೂ ಸಮುದಾಯದ ಸ್ವರೂಪವನ್ನೇ ಬದಲಾಯಿಸುತ್ತಿವೆ. ಒಂದು ಕಡೆ ಅರಣ್ಯ ನಾಶ, ಇನ್ನೊಂದು ಕಡೆ ಅರಣ್ಯ ರಕ್ಷಣಾ ನೀತಿಗಳು, ಹೊಸ ಆಣೆಕಟ್ಟುಗಳ ನಿರ್ಮಾಣ, ಬೃಹತ್ ಕೈಗಾರಿಕೆ, ಗಣಿಗಾರಿಕೆ, ಪ್ರೋತ್ಸಾಹ ಇಂಥ ಹಲವು ಕಾರಣಗಳಿಂದ ಜನರು ಗ್ರಾಮ ಮತ್ತು ನಗರಗಳಿಗೆ ವಲಸೆ ಬರುತ್ತಿದ್ದಾರೆ. ಹೀಗೆ ವಲಸೆ ಬಂದ ಜನರು ತಮ್ಮ ಜೀವನದಲ್ಲಿ ಸಂಪೂರ್ಣ ಹೊಸತನ್ನು ಅಳವಡಿಸಿಕೊಳ್ಳದೆ ಸ್ವಂತಿಕೆಯನ್ನು ಉಳಿಸಿಕೊಳ್ಳುವ ವಿಫಲ ಪ್ರಯತ್ನ ನಡೆಸಿದ್ದಾರೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಯಾವುದೇ ಬುಡಕಟ್ಟುಗಳು ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲದೇ ಹೊಸ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಈ ಬದಲಾವಣೆ ಅನಿವಾರ್ಯ. ಯಾವುದೇ ಬೆಳೆಯುತ್ತಿರುವ ಸಮಾಜದಲ್ಲಿ ಈ ಅನಿವಾರ್ಯತೆ ಉದ್ಭವಿಸುತ್ತಲೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಅನೇಕ ಬುಡಕಟ್ಟುಗಳು ಮಾರ್ಪಾಟುಗಳನ್ನು ಒಪ್ಪಿಕೊಂಡು ತಮ್ಮ ಆಚಾರ-ವಿಚಾರಗಳನ್ನು ತಮ್ಮದೇ ಆದ ವಿಶಿಷ್ಟತೆಗಳನ್ನು ಸಮಾಜ, ಸಂಸ್ಕೃತಿಯ ವೈಶಿಷ್ಟ್ಯತೆಗಳನ್ನು ಉಳಿಸಿಕೊಂಡು ಬಂದಿವೆ. ಗ್ರಾಮೀಣ ಪರಿಸರದಲ್ಲಿ ಮಹಿಳೆಯ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಭಾರತದ ಬಹುತೇಕ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ. ಇದರಲ್ಲು ಬಹುಪಾಲು ಮಹಿಳೆಯರು ಕೃಷಿ ಕೂಲಿ, ಅಸಂಘಟಿತ ವಲಯದ ಕೂಲಿಯನ್ನೇ ಅವಲಂಬಿಸಿದ್ದಾರೆ. ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಗೃಹಕೃತ್ಯಗಳಲ್ಲಿಯೇ ತೊಡಗುವ ಮತ್ತು ಅವರ ಕಾರ್ಯವನ್ನು

ಯಾವುದೇ ವೃತ್ತಿಯೆಂದು ಪರಿಗಣಿಸದ ಸ್ಥಿತಿಯಲ್ಲಿದ್ದಾರೆ ಹಾಗೂ ಇಂತಹ ಮಹಿಳೆಯರು ಪ್ರಾಥಮಿಕ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ಕೃಷಿ ಮತ್ತು ಇತರ ಕಷ್ಟಕರ ಕೆಲಸಗಳಲ್ಲಿ ಮಹಿಳೆಯರ ಪಾಲು ಶೇ ೫೦ ಕ್ಕಿಂತ ಹೆಚ್ಚಿದ್ದರೂ ಸಹಿತ ಆರ್ಥಿಕ ಸ್ವಾವಲಂಬನೆಯಿಂದ ಅವಳು ವಂಚಿತಳಾಗಿದ್ದಾಳೆ. ಅಷ್ಟೇ ಅಲ್ಲ ಮಹಿಳೆ ಸಾಮಾಜಿಕ ಹಾಗೂ ರಾಜಕೀಯ ಸಮಾನತೆಗಳಿಂದಲೂ ದೂರವುಳಿಯಬೇಕಾದ ಅನಿವಾರ್ಯ ಸ್ಥಿತಿಗೆ ನೂಕಲ್ಪಟ್ಟಿದ್ದಾಳೆ. ಇಂತಹ ಸ್ಥಿತಿಗೆ ಒಳಪಟ್ಟ ಕೃಷಿ ಮಹಿಳಾ ಕಾರ್ಮಿಕರ ಸ್ಥಿತಿಗತಿ, ಅವರ ಸಾಮಾಜಿಕ, ಶೈಕಣಿಕ, ಆರ್ಥಿಕ ಹಾಗೂ ಆರೋಗ್ಯದ ಪರಿಸ್ಥಿತಿಯ ಸಮಸ್ಯೆಗಳನ್ನು ಹೈದ್ರಾಬಾದ್ ಕರ್ನಾಟಕದಲ್ಲಿಯೇ ವಿಶೇಷವಾಗಿ ಗುರುತಿಸಿಕೊಂಡ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ನೆಲೆಸಿರುವ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಬುಡಕಟ್ಟುಗಳು ಎಂದರೆ ಯಾರು ?

ಒಂದು ಸಮುದಾಯವನ್ನು ಆದಿವಾಸಿ ಅಥವಾ ಬುಡಕಟ್ಟು ಎಂದು ಕರೆಯಬೇಕಾದರೆ ಆ ಸಮುದಾಯವು ತಮ್ಮದೇ ಆದ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ. ಒಂದು ಚಿಕ್ಕ ಜನರ ಗುಂಪು ಅಥವಾ ಜನಸಮೂಹ ನಾಗರಿಕ ಸಮಾಜದ ನೆರಳಿನಿಂದ ದೂರವಿದ್ದುಕೊಂಡೆ, ಪ್ರಕೃತಿಯ ನಾನಾ ಬಗೆಯ ಪರಿಸರದ ಮಡಿಲಿನಲ್ಲಿ ವಿಶೇಷವಾದ ಜೀವನವನ್ನು ನಡೆಸುತ್ತ ಬಂದಿರುವ ಒಂದು ಜನಾಂಗವೇ ಬುಡಕಟ್ಟು ಅಥವಾ ಆದಿವಾಸಿ ಸಮುದಾಯ ಅಥವಾ ಗಿರಿ ಅರಣ್ಯವಾಸಿಗಳು. ಇದರು ವ್ಯವಸ್ಥಿತವಾಗಿ ಒಂದೆಡೆ ನೆಲೆನಿಂತು ಜೀವನ ನಿರ್ವಹಿಸುವ ಪ್ರವೃತ್ತಿಯನ್ನು ಹೊಂದದೇ ಕಾಡುಮೇಡುಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ, ಅಲ್ಲಿ ದೊರೆಯುವ ಗೆಡ್ಡೆ-ಗೆಣಸು, ಹಣ್ಣು-ಹಂಪಲು, ಸೊಪ್ಪು-ಸೆದೆ ಮುಂತಾದ ಸಹಜೋತ್ಪನ್ನಗಳನ್ನು ಸೇವಿಸುತ್ತಾ, ಅಗತ್ಯಕ್ಕೆ ತಕ್ಕಂತೆ ಅರಣ್ಯ ಪ್ರಾಣಿಗಳನ್ನು ಬೇಟೆಯಾಡುತ್ತಾ ತಮ್ಮ ಬದುಕನ್ನು ಸಾಗಿಸುವವರು. ಬೇಸಾಯ ಮಾಡಿದರೂ ಬೇಸಾಯವನ್ನು ಸ್ಥಳದಿಂದ ಸ್ಥಳಕ್ಕೆ ಬದಲಿಸಿಕೊಂಡು, ತಮ್ಮ ಭವಿಷ್ಯದ ಕನಸನ್ನು ಕಾಣದೆ, ಅದಕ್ಕಾಗಿ ಸಂಪತ್ತನ್ನು ಕೂಡಿಡದೆ ವರ್ತಮಾನದ ಜೀವನಕ್ಕಾಗಿ ಹೆಚ್ಚು ಶ್ರಮವಹಿಸುವ ತೃಪ್ತಿಪಡುವ ಜನರೇ ಇವರು. ಮಾನವಶಾಸ್ತ್ರದಲ್ಲಿ ಬುಡಕಟ್ಟು ಎನ್ನುವ ಪದಕ್ಕೆ ಸಮನಾದ ಹಲವಾರು ಪದಗಳನ್ನು ಕಾಣುತ್ತೇವೆ. ಉದಾಹರಣೆಗೆ ಆದಿವಾಸಿಗಳು, ಅನಾಗರಿಕರು, ಮೂಲನೆಲೆಯುಳ್ಳ, ಆದಿವಾಸಿ, ತುಳಿತಕ್ಕೊಳಗಾದ ವರ್ಗ, ಸರಳಸಮಾಜ, ಹಿಂದುಳಿದ ಹಿಂದೂಗಳು, ಅಶಿಕ್ಷಿತ ಜನಸಮುದಾಯ ಮುಂತಾದವು. ಇಂಗ್ಲೀಷಿನ 'ಟ್ರೈಬ್' ಪದಕ್ಕೆ 'ಆದಿವಾಸಿ' 'ಬುಡಕಟ್ಟು' ಅಥವಾ 'ಗಿರಿಜನರು' ಎನ್ನುವುದು ಮೂಲದಿಂದಲೂ ಬುಡಕಟ್ಟು ಎನ್ನುವ ಪದವನ್ನು ವ್ಯಾಖ್ಯಾನಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಗಿದೆ. ಆದರೆ ಒಮ್ಮತದ ಪದವನ್ನು ಇನ್ನೂ ಹೆಸರಿಸಲಾಗಿಲ್ಲ. ಹಲವಾರು ತಜ್ಞರು ತಮ್ಮದೇ ಆದ ನಿಟ್ಟಿನಲ್ಲಿ ಬುಡಕಟ್ಟು ಪದದ ಅರ್ಥವನ್ನು ತಿಳಿಸಿದ್ದಾರೆ. ಇವರು ನೀಡಿದ ವ್ಯಾಖ್ಯಾನಗಳು ಸಾಮಾನ್ಯವಾಗಿ ಇವರು ನೆಲೆಸಿರುವ ಭೌಗೋಳಿಕ ಪರಿಸರದ ನಿಟ್ಟಿನ ಮೇಲೆ ಅವಲಂಬಿತವಾಗಿರುತ್ತದೆ. ಆದಕಾರಣ ಬುಡಕಟ್ಟಿನವರು ಕಾಡುಗಳಲ್ಲಿ,

ಗುಡ್ಡಬೆಟ್ಟಗಳಲ್ಲಿ, ದ್ವೀಪಗಳಲ್ಲಿ, ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ನೆಲೆಸಿರುತ್ತಾರೆ. ಬುಡಕಟ್ಟು ಸಮುದಾಯದ ಬಗ್ಗೆ ವಿವಿಧ ವ್ಯಾಖ್ಯಾನಗಳನ್ನು ನೀಡಲು ಪ್ರಯತ್ನಿಸಿದ್ದಾರೆ.

ಇಂಪೇರಿಯಲ್ ಗೆಜೆಟಿಯರ್ಸ್ ಆಫ್ ಇಂಡಿಯಾದಲ್ಲಿನ ಪ್ರಕಾರ 'ಬುಡಕಟ್ಟು ಎನ್ನುವುದು ಒಂದೇ ಕುಟುಂಬಕ್ಕೆ ಸೇರಿದ ಗುಂಪು. ಇವರು ಒಂದೇ ನಾಮವನ್ನು ಹೊಂದಿದ್ದು, ಒಂದೇ ಪ್ರಾದೇಶಿಕ ನುಡಿಯನ್ನು ಆಡುವುದಲ್ಲದೇ, ಒಂದೇ ಪ್ರದೇಶದಲ್ಲಿ ವಾಸವಾಗಿದ್ದು, ವಿವಾಹದಲ್ಲಿ ಒಂದೇ ವಿಧವಾದ ಪದ್ಧತಿಯನ್ನು ಅನುಸರಿಸುತ್ತಾರೆ. ಆರಂಭದಲ್ಲಿ ಇವರು ಅನುಸರಿಸಿರದಿದ್ದರೂ ನಂತರದಲ್ಲಿ ಇವರು ಒಂದೇ ವಿವಾಹ ಪದ್ಧತಿಯನ್ನು ಅನುಸರಿಸುವುದು' ಕಂಡುಬರುತ್ತದೆ.

ಡಿ.ಎನ್.ಮಜುಮ್‌ದಾರ್ ಅವರ ಪ್ರಕಾರ 'ಬುಡಕಟ್ಟು ಒಂದೇ ಗುಂಪಿಗೆ ಸೇರಿದ ಕುಟುಂಬ. ಒಂದೇ ಭಾಷೆಯನ್ನು ಆಡುವುದು ಮಾತ್ರವಲ್ಲದೇ ಒಂದೇ ಪ್ರದೇಶದಲ್ಲಿ ವಾಸಿಸುತ್ತಾ, ವಿವಾಹ ಪದ್ಧತಿಗಳು ಹಾಗೂ ಕಸುಬುಗಳು ಒಂದೇ ಆಗಿದ್ದು ಪರಸ್ಪರ ವಿನಿಮಯಗಳು' ಕಂಡುಬರುತ್ತವೆ.

ಗಿಲಿನ್ ಮತ್ತು ಗಿಲಿನ್ ಅವರ ಪ್ರಕಾರ ಯಾವುದೇ ಅನಕ್ಷರಸ್ಥ ಗುಂಪನ್ನು 'ಬುಡಕಟ್ಟು' ಎಂದು ಕರೆಯಬಹುದು. ಇವರೆಲ್ಲರೂ 'ಒಂದೇ ಪ್ರದೇಶದಲ್ಲಿ ವಾಸವಾಗಿದ್ದು, ಒಂದೇ ಭಾಷೆ ಹಾಗೂ ಒಂದೇ ವಿಧದ ಸಂಸ್ಕೃತಿಯನ್ನು ಅನುಸರಿಸುತ್ತಾರೆ'.ಹಾಗೂ ಒಂದೇ ವಿಧದ ಸಂಸ್ಕೃತಿಯನ್ನು ಅನುಸರಿಸುತ್ತಾರೆ'.

ಬುಡಕಟ್ಟು ಸಮುದಾಯದ ಲಕ್ಷಣಗಳು

ಸಾಮಾನ್ಯ ಭೂ ಪ್ರದೇಶ: ಪ್ರತಿಯೊಂದು ಆದಿವಾಸಿ ಜನಾಂಗವೂ ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುತ್ತಿರುತ್ತದೆ. ಉದಾಹರಣೆ ನಾಗಾ, ರೆಂಗಮನಾಗಾ ಸಮೂಹಗಳು ನಾಗಲ್ಯಾಂಡಿನಲ್ಲಿಯಾ, ಗಾರೋ, ಖಾಸಿ, ಖಾಸ, ಮೊದಲಾದವು ಅಸ್ಸಾಂನಲ್ಲಿಯೂ ಗೊಂಡರು ಮದ್ಯ ಪ್ರದೇಶದಲ್ಲಿಯೂ, ತೊಡವರು ನೀಲಗಿರಿ ಬೆಟ್ಟಗಳಲ್ಲಿಯೂ ವಡ್ಡ ಜನರು ಸಿಟೋನಿನಲ್ಲಿಯು ನೆಲೆಸಿರುವುದನ್ನು ಕಾಣಬಹುದು.

ವಿಶಿಷ್ಠ ನಾಮಾಂಕಿತ: ಪ್ರತಿಯೊಂದು ಜಾತಿಗೂ ತನ್ನದೇ ಆದ ಸಾಮಾಜವಿರುವಂತೆ ಪ್ರತಿಯೊಂದು ಆದಿವಾಸಿ ಸಮುದಾಯವು ತನ್ನದೇ ಆದ ವಿಶಿಷ್ಠವಾದ ಹೆಸರನ್ನು ಹೊಂದಿರುವುದು ಉದಾಹರಣೆ: ಲಂಬು ಗೊಂಡ, ಕೊರಗ, ಮಲಸರ್, ನಾಯಕ, ತೊಡವ ಮುಂತಾದ(ಭಾರತದ ಆದಿವಾಸಿ ಸಮೂಹ) ರೆಡಿ ಇಂಡಿಯನ್ ಪಿಣ್ಮಗಳು ವಿಸ್ಮಿಮೋ,ದಾವೆ ಲಾಮಗೋ ಇತ್ಯಾದಿ ಇವೆ.

ಸಾಮಾನ್ಯ ಭಾಷೆ: ಆದಿವಾಸಿಗಳು ತಮ್ಮದೇ ಆದ ಆಡು ಭಾಷೆಯನ್ನು ಹೊಂದಿರುತ್ತಾರೆ ಆ ಭಾಷೆಯನ್ನು ಇತರರು ಅರ್ಥ ಮಡಿಕೊಳ್ಳುವುದು ಕಷ್ಟವಿದೆ. ಅಂದರೆ ಈ ಭಾಷೆಯು ವಿಶಿಷ್ಟವಾದುದಾಗಿದ್ದು ನಾಗರಿಕ ಸಮಾಜಗಳ ಭಾಷೆಗಳಿಂದ ಭಿನ್ನವಾಗಿದ್ದರೂ ಮಾತ್ರವದಲ್ಲದೆ ಉಳಿದ ಆದಿವಾಸಿ ಸಮೂಹಗಳ ಭಾಷೆಗಳಿಂದಲೂ ಪ್ರತ್ಯೇಕವಿರುವುದು ಇದು ಅವರ ಐಕ್ಯತೆಯನ್ನು ಹೆಚ್ಚಿಸಿದೆ. ಆದಿವಾಸಿ ಭಾಷೆಗೆ ಲಿಪಿಯಲ್ಲದೇ ಇರುವುದರಿಂದ ಅವರ ಶಿಕ್ಷಣದಲ್ಲಿ ತೊಡಕುಂಟಾಗಿದೆ.

ಪೂರ್ವಜರಲ್ಲಿ ನಂಬಿಕೆ: ಒಂದು ಆದಿವಾಸಿ ಸಮೂಹಕ್ಕೆ ಸೇರಿದವರೆಲ್ಲರು ತಾವು ಒಬ್ಬ ಸ್ತ್ರೀ ಅಥವಾ ಪುರುಷ ಪೂರ್ವಜರಿಂದ ಜನ್ಮ ತಾಳಿದ್ದೇವೆಂಬ ನಂಬಿಕೆಯನ್ನು ಹೊಂದಿರುವರು. ಈ ಪೂರ್ವಜ ಬಹಳ ಪುರಾತನ ವ್ಯಕ್ತಿಯಾಗಿರಬಹುದು ಇಲ್ಲವೇ ಇತ್ತೀಚಿನವನಾಗಿರಬಹುದು. ಕುಟುಂಬ, ಕುಲ, ವಂಶಪಾರಂಪರ್ಯದ ಆಧಾರದ ಮೇಲೆ ಅವರು ತಮ್ಮ ಪೂರ್ವಿಕರನ್ನು ಪೂಜಿಸುವ ಕ್ರಮವೂ ಅವರಲ್ಲಿ ಆಚರಣೆಯಲ್ಲಿದೆ.

ರಕ್ತ ಬಂಧದ ಭಾಂಧವ್ಯ: ಆದಿವಾಸಿ ಸಮುದಾಯದಲ್ಲಿ "ಬಂಧುತ್ವ" ಸಂಬಂಧ ಅಥವಾ ರಕ್ತ ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯವಿದೆ ಕುಟುಂಬ, ವಂಶ ರಕ್ತಸಂಬಂಧ ಮುಂತಾದ ಚಿಕ್ಕ ಸಮೂಹಗಳು ರಕ್ತಸಂಬಂಧದ ಅಧಾರದ ಮೇಲೆ ರಚಿತವಾಗಿದೆ ಬಂಧ ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳು ಬೆಳೆಯುತ್ತದೆ ತಾವೆಲ್ಲರೂ ಒಡನಾಡಿಗಳು ಎಂದು ಅವರು ನಂಬಿರುತ್ತಾರೆ. ಕುಲಗಳು ಬೇರೆ, ಬೇರೆ ಇದ್ದರೂ ಭ್ರಾತೃ ಪ್ರೇಮದ ಭಾವನೆ ಅವರಲ್ಲಿ ಜಾಗೃತವಿರುತ್ತದೆ.

ಐಕ್ಯದ ಭಾವನೆ: ಆದಿವಾಸಿಗಳಿದ್ದು ಸಂಘಟಿತ ಜೀವನ ಅವರಲ್ಲಿ ಐಕ್ಯದ ಭಾವನೆ ಎಂದಿಗೂ ಹಸಿರಾಗಿಯೇ ಇರುತ್ತದೆ ಅಪಾಯ ಸಂಕಟ ಸಮಸ್ಯೆಗಳು ಎದುರಾದಾಗ ಐಕ್ಯದ ಭಾವನೆ ಎದ್ದು ಕಾಣುವುದು ಸಮುದಾಯಿಕ ಭಾವನೆ ಅವರಲ್ಲಿ ತೀವ್ರವಾಗಿದ್ದು ಸಮುದಾಯಕ್ಕೋಸ್ಕರ ದೊಡ್ಡ ತ್ಯಾಗಕ್ಕೂ ಅವರು ಸಿದ್ದರಾಗಿರುತ್ತಾರೆ ಧಾರ್ಮಿಕ ನಂಬಿಕೆಗಳು. ಆದಿವಾಸಿ ಜನರು ಧಾರ್ಮಿಕ ನಿಷ್ಠೆಯುಳ್ಳವರೂ ಸಂಪ್ರದಾಯ ಶರಣರೂ ಆಗಿರುವುದು ಪ್ರಕೃತಿ ಪೂಜೆ, ಪಿತೃಪೂಜೆ ಮತ್ತು ಕುಲದೇವತಾ ಪೂಜೆಗಳನ್ನು ಅವರು ಅಚರಿಸುವ ನಂಬಿಕೆಯಿದೆ.

ರಾಜಕೀಯ ವ್ಯವಸ್ಥೆ: ಪ್ರತಿಯೊಂದು ಆದಿವಾಸಿ ಜನಾಂಗವು ತನ್ನದೇ ಆದ ಸಂಪ್ರಾದಾಯಿಕ ಆಡಳಿತ ಕ್ರಮವನ್ನು ಹೊಂದಿದೆ ಅಧುನಿಕ ಅರ್ಥದಲ್ಲಿ ಅಲ್ಲವಾದರೂ ಆದಿವಾಸಿಗಳು ತಮ್ಮದೇ ಆದ ಆಡಳಿತ ಸರ್ಕಾರವನ್ನು ಹೊಂದಿರುವರು ಪ್ರತಿಯೊಂದು ಆದಿವಾಸಿ ಸಮೂಹವೂ ತನ್ನದೇ ಆದ ನಾಯಕನನ್ನು ಹೊಂದಿರುವುದು ನಾಯಕನ ನಿಯತ್ತು ಅನುವಂಶಿಕವಾಗಿ ಇಲ್ಲವೇ ಚುನಾವಣೆಯ ಮೂಲಕ ನಡೆಯುತ್ತದೆ.

ರಕ್ಷಣೆಯ ಅಗತ್ಯ: ಆದಿವಾಸಿಗಳು ಯಾವಾಗಲೂ ರಕ್ಷಣೆ ಮತ್ತು ಭದ್ರತೆಗೆ ಹೆಚ್ಚಿನ ಮಹತ್ವ ನೀಡುವುದು ಅವರ ಅನುಭವದಲ್ಲಿ ಅದರ ಅಗತ್ಯ ತೀವ್ರವಾಗಿದೆ ನಾಗರೀಕ ಜನತೆಯ ಸಂಪರ್ಕದ ಸಂದರ್ಭದಲ್ಲಿ ಇದು ಅತೀ ಅಗತ್ಯವಾಗಿರುತದೆನ್ನುವುದು ಅವರ ಅನಿಸಿಕೆಯಾಗಿದೆ.

ಒಳಪಂಗಡ ವಿವಾಹ ಪದ್ಧತಿ: ಬಹುತೇಕ ಆದಿವಾಸಿಗಳು ಒಳಪಂಗಡ ವಿವಾಹ ಪದ್ಧತಿಗೆ ಬದ್ಧವಾಗಿರುವವರು ತಮ್ಮ ಸಮೂಹದ ಪಾವಿತ್ರ್ಯತೆ ಐಕ್ಯ, ಸಂಪತ್ತು ಪ್ರತ್ಯೇಕತೆ ಇವುಗಳನ್ನು ಉಳಿಸಿಕೊಳ್ಳಲು ಪ್ರಾಯಶ; ಅವರು ಈ ವಿವಾಹದ ನಿಯಮವನ್ನು ಅನುಸರಿಸಿರುವವರು. ಆದರೆ ಪ್ರತಿಯೊಂದು ಆದಿವಾಸಿ ಸಮೂಹವು ಹೂರ ಪಂಗಡ ವಿವಾಹ ಪದ್ಧತಿಯನ್ನು ಅನುಸರಿಸುವುದು ಸಾಮಾನ್ಯವಾಗಿದೆ.

ಕಾರಣವೇನೆಂದರೆ ಪ್ರತಿಯೊಂದು ಕುಲದ ಸದಸ್ಯರು ಭ್ರಾತೃ ಸಂಬಂಧವನ್ನು ಹೊಂದುವರೆಂದು ನಂಬಿಕೆಯಿರುವುದು.

ಹೀಗೆ ಆದಿವಾಸಿ ಅಥವಾ ಬುಡಕಟ್ಟು ಸಮುದಾಯಗಳನ್ನು ಅಧ್ಯಯನ ಮಾಡುವಾಗ ಅವರ ಪರಿಚಯ, ಗುಣಲಕ್ಷಣಗಳನ್ನು ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಅರ್ಥೈಸಬೇಕಾಗುತ್ತದೆ. ಜೊತೆಗೆ ಮಾನವಶಾಸ್ತ್ರಕ್ಕೂ ಹಾಗೂ ಬುಡಕಟ್ಟು ಅಧ್ಯಯನಕ್ಕೂ ನಿಕಟವಾದ ಸಂಪರ್ಕವಿದೆ. ಮಾನವಶಾಸ್ತ್ರವು ಒಂದು ವೈಜ್ಞಾನಿಕ ಹಾಗೂ ಸಂಶೋಧನಾ ವಿಷಯವಾಗಿ ಬುಡಕಟ್ಟಿನ ಸಮುದಾಯಗಳ ಬಗ್ಗೆ ಅಧ್ಯಯನ ನಡೆಸುತ್ತದೆ. ಈ ಕಾರಣಕ್ಕಾಗಿ ಮಾನವಶಾಸ್ತ್ರವನ್ನು ಬುಡಕಟ್ಟುಶಾಸ್ತ್ರವೆಂದು ಕರೆಯುವುದು. ಉಳಿದ ಸಮಾಜದಂತೆ ಬುಡಕಟ್ಟು ಸಮಾಜವು ಸ್ಥಿರವಲ್ಲದ ಚಲನಾತ್ಮಕವಾದ ಸಮಾಜ. ಆದರೆ ಬುಡಕಟ್ಟು ಸಮಾಜದಲ್ಲಿ ಬದಲಾವಣೆಯು ನಿಧಾನಗತಿಯದಾಗಿದೆ. ಆ ಕಾರಣಕ್ಕಾಗಿ ಅವರು ಹಿಂದುಳಿದಿರುವುದಲ್ಲದೇ, ಉಳಿದವರಿಗೆ ಹೋಲಿಸಿದರೆ ಬಡವರಾಗಿದ್ದಾರೆ. ಅವರು ಭೌತಿಕವಾಗಿ ಹಿಂದುಳಿದಿರುವುದರಿಂದ ಹಾಗೂ ಆರ್ಥಿಕವಾಗಿ ಬಡವರಾಗಿದ್ದಾರೆ. ರಾಷ್ಟ್ರ ಹಾಗೂ ರಾಜ್ಯ ಸರಕಾರಗಳು ಬುಡಕಟ್ಟಿನ ಅಭಿವೃದ್ಧಿಗಾಗಿ ವಿಶೇಷ ಗಮನಹರಿಸುತ್ತಿವೆ. ಅಂದರೆ ಯೋಜನಾ ಬದ್ಧವಾದ ಬದಲಾವಣೆಯನ್ನು ಬುಡಕಟ್ಟು ಸಮಾಜದಲ್ಲಿ ತರಲು ಯತ್ನಿಸುತ್ತಿವೆ.

೧.೨ ಅಧ್ಯಯನದ ಉದ್ದೇಶಗಳು

ಭಾರತವು ಪ್ರಮುಖವಾಗಿ ಕೃಷಿ ಆಧಾರಿತ ರಾಷ್ಟ್ರವಾಗಿದೆ. ಶೇಕಡಾ ೫೦% ಕ್ಕೂ ಅಧಿಕ ಜನರು ಕೃಷಿಯನ್ನು ಅವಲಂಭಿಸಿದ್ದಾರೆ. ಇವರು ಕೈಗಾರಿಕೆಗಳಿಗೆ ಕಚ್ಚಾ ಸಾಮಾಗ್ರಿಗಳನ್ನು ಒದಗಿಸುತ್ತವೆ ಮತ್ತು ಬಹುತೇಕ ಜನಸಂಖ್ಯೆಗೆ ಉದ್ಯೋಗವಕಾಶವನ್ನು ದೊರಕಿಸುತ್ತದೆ. ಭಾರತವು ಹಳ್ಳಿಗಳ ರಾಷ್ಟ್ರವಾಗಿದೆ. ಕೈಗಾರೀಕರಣ ಹಾಗೂ ನಗರೀಕರಣವು ಗ್ರಾಮೀಣ ಜೀವನ ಶೈಲಿಯಲ್ಲಿ ಮಹತ್ತರ ಬದಲಾವಣೆಯನ್ನುಂಟು ಮಾಡಿದೆ. ಪ್ರಸ್ತುತ ಅಧ್ಯಯನವು ಬೇಡ ಸಮುದಾಯದ ಗ್ರಾಮೀಣ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವ ಉದ್ದೇಶವನ್ನು ಹೊಂದಿದೆ. ಹೊಲದಲ್ಲಿ ಕೆಲಸ ಮಾಡಿ ಕೂಲಿಯನ್ನು ಗಳಿಸುವ ಕಾರ್ಮಿಕರಿಗೆ ಕೃಷಿ ಕಾರ್ಮಿಕರೆನ್ನಲಾಗುತ್ತದೆ. ಸಾಮಾನ್ಯವಾಗಿ ಕೃಷಿ ಕಾರ್ಮಿಕರನ್ನು ಪ್ರಾಸಂಗಿಕ ಕಾರ್ಮಿಕರು ಹಾಗೂ ಅಂಚಿನ ಕಾರ್ಮಿಕರೆಂದು ವರ್ಗೀಕರಿಸಲಾಗಿದೆ. ಕೃಷಿ ಕಾರ್ಮಿಕರ ಪರಿಸ್ಥಿತಿಯನ್ನು ಅರಿತುಕೊಳ್ಳಲು ವಿವಿಧ ರೀತಿಯ ಕೃಷಿ ಕಾರ್ಮಿಕರ ಕುರಿತು ತಿಳಿದುಕೊಳ್ಳುವ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ಸೂಕ್ಷ್ಮ ಅಧ್ಯಯನದ ಅಗತ್ಯವಿದೆ. ಕೂಲಿಗಾಗಿ ಕೃಷಿ ಕಾರ್ಮಿಕರು ಭೂ ಒಡೆಯರನ್ನು ಅವಲಂಬಿಸಿರುತ್ತಾರೆ. ಅವರ ಕೆಲಸದ ಲಕ್ಷಣಗಳು ವಿಭಿನ್ನವಾಗಿರುತ್ತದೆ. ಹಲವು ಕೂಲಿಗಳನ್ನು ಶಾಶ್ವತವಾಗಿ ಜೀತಕ್ಕೆ ನೇಮಿಸಿಕೊಳ್ಳಲಾಗಿರುತ್ತದೆ. ಇವರು ಅನಿವಾರ್ಯವಾಗಿ ಇವರ ಭೂಮಿಯಲ್ಲಿ ದುಡಿಯಬೇಕಾಗುತ್ತದೆ. ಕಾರಣ ಇವರ ಹಿಂದಿನ ಪೀಳಿಗೆಯವರು ಇವರಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ. ಇವರು ಜಮೀನುದಾರರ ಭೂಮಿಯಲ್ಲಿ ಜೀತಗಳಾಗಿ ದುಡಿಯುತ್ತಿರುತ್ತಾರೆ.

- ಬೇಡ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆಯನ್ನು ತಿಳಿಯುವುದು
- ಪ್ರಾದೇಶಿಕ ಹಿನ್ನೆಲೆಯಲ್ಲಿ ಬೇಡ ಮಹಿಳೆಯರ ಜೀವನ ಶೈಲಿಯನ್ನು ಗ್ರಹಿಸುವುದು.
- ಬೇಡ ಮಹಿಳಾ ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಪ್ರಸ್ತುತ ಸಮಾಜಕ್ಕೆ ಮುಖಾಮುಖಿಯಾಗಿಸುವುದು.
- ಬೇಡ ಮಹಿಳಾ ಕೃಷಿ ಕಾರ್ಮಿಕ ವೃತ್ತಿಯು ಮಹಿಳೆಯರನ್ನು ಆರ್ಥಿಕವಾಗಿ ಸಬಲಗೊಳಿಸಿದೆಯೇ ಎಂಬುದನ್ನು ತಿಳಿಯುವುದು.
- ಬೇಡ ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ, ಶೈಕ್ಷಣಿಕ, ಹಾಗೂ ಆರೋಗ್ಯ ಸ್ಥಿತಿಗತಿಯ ಸುಧಾರಣೆಯಲ್ಲಿ ಸರಕಾರಿ ಯೋಜನೆಗಳ ಪಾತ್ರವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದು.

೧.೩ ಅಧ್ಯಯನದ ವ್ಯಾಪ್ತಿ

ಇಂದು ಜಾತಿ ವರ್ಗಗಳಿಂದ ಕಿಕ್ಕಿರಿದ ಈ ಸಮಾಜದಲ್ಲಿ ಬುಡಕಟ್ಟುಗಳಿಗೇ ವಿಶಿಷ್ಟ ಸ್ಥಾನವಿದೆ. ಅಂತಹ ಬುಡಕಟ್ಟುಗಳಲ್ಲಿ ಬೇಡ ಸಮುದಾಯವು ಒಂದು. ಇಂತಹ ಸಮುದಾಯವು ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುತ್ತದೆ. ಈ ಬುಡಕಟ್ಟು ಸಮುದಾಯದೊಳಗಿನ ಮಹಿಳೆಯರನ್ನು ಕೃಷಿ ಚಟುವಟಿಕೆಯಲ್ಲಿ ಅವರ ಪಾಲ್ಗೊಳ್ಳುವಿಕೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಇಡೀ ರಾಜ್ಯ ಅಥವಾ ರಾಷ್ಟ್ರವೊಂದನ್ನು ಅಧ್ಯಯನಕ್ಕೆ ಅಳವಡಿಸುವುದು ಅಧ್ಯಯನದ ಕಾಲಮಿತಿಯ ದೃಷ್ಟಿಯಿಂದ ಕಷ್ಟಕರವಾದ ಕೆಲಸವೆಂದು ಭಾವಿಸಿ ಕೇವಲ ಹೈದ್ರಾಬಾದ ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಒಳಪಡುವ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು ಮಹಿಳೆಯರನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತ ಹನ್ನೊಂದು ತಾಲೂಕುಗಳಿವೆ. ಈ ಹನ್ನೊಂದು ತಾಲೂಕುಗಳಲ್ಲಿ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಬೇಡ ಬುಡಕಟ್ಟಿನ ಜನಸಂಖ್ಯೆ ಇದೆ. ಹೀಗಾಗಿ ಜಿಲ್ಲೆಯ ತಾಲೂಕುಗಳನ್ನು ಭೌಗೋಳಿಕ, ಪ್ರಾದೇಶಿಕ, ಆರ್ಥಿಕ ಮತ್ತು ಸಾಮಾಜಿಕ ಅಂಕಿ-ಅಂಶಗಳ ಮೂಲಕ ಹೊಸಪೇಟೆ ನೀರಾವರಿ ಪ್ರದೇಶ ಹೊಂದಿದ ಅಭಿವೃದ್ಧಿ ತಾಲೂಕು ಮತ್ತು ಕೂಡ್ಲಿಗಿ ಒಣಭೂಮಿ ಪ್ರದೇಶ ಹೊಂದಿದ ಹಿಂದುಳಿದ ತಾಲೂಕು ಎಂದು ಪರಿಗಣಿಸಿ ಅಧ್ಯಯನಕ್ಕೆ ಎರಡು ತಾಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೧.೪. ನಮೂನೆಯ ಮಾದರಿ

ಹೊಸಪೇಟೆ ತಾಲೂಕಿನ ಐದು ಗ್ರಾಮ ಪಂಚಾಯತಿಗಳು ಹಾಗೂ ಕೂಡ್ಲಿಗಿ ತಾಲೂಕಿನ ಐದು ಗ್ರಾಮ ಪಂಚಾಯಿತಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದರಲ್ಲಿ ಹೊಸಪೇಟೆ ತಾಲೂಕಿನ ಪ್ರತಿ ಗ್ರಾಮ ಪಂಚಾಯತಿಯಿಂದ ಐದು ಗ್ರಾಮಗಳು, ಕೂಡ್ಲಿಗಿ ತಾಲೂಕಿನ ಪ್ರತಿ ಗ್ರಾಮ ಪಂಚಾಯತಿಯಿಂದ ನಾಲ್ಕು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಒಂದೊಂದು ಗ್ರಾಮದಿಂದ ೧೦ ಕುಟುಂಬಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಈ ಅಧ್ಯಯನ ವ್ಯಾಪ್ತಿಯು ಕೇವಲ ಬಳ್ಳಾರಿ

ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಬೇಡ ಸಮುದಾಯದ ಹೊಸಪೇಟೆ ತಾಲೂಕಿನ ವ್ಯಾಪ್ತಿಯ ಗ್ರಾಮಗಳಿಂದ ಒಟ್ಟು ೨೫೦ ಕುಟುಂಬಗಳು ಹಾಗೂ ಕೂಡ್ಲಿಗಿ ತಾಲೂಕಿನ ವ್ಯಾಪ್ತಿಯಿಂದ ೨೦೦ ಕುಟುಂಬಗಳನ್ನು ಅಧ್ಯಯನಕ್ಕೆ ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟು ೪೫೦ ಕುಟುಂಬಗಳ ಬೇಡ ಸಮುದಾಯದ ಕೃಷಿ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೫. ಅಧ್ಯಯನ ವಿಧಾನಗಳು

ಬುಡಕಟ್ಟುಗಳನ್ನು ಎರಡು ಉದ್ದೇಶಗಳಿಗಾಗಿ ಅಧ್ಯಯನ ಮಾಡಲಾಗುತ್ತದೆ. ೧) ಪ್ರತಿಯೊಂದು ಬುಡಕಟ್ಟಿನ ಸಂಸ್ಕೃತಿಯನ್ನು ತಿಳಿಯುವುದಕ್ಕಾಗಿಯೇ ಅಧ್ಯಯನ ಮಾಡುವುದು; ೨) ಒಟ್ಟಾರೆ ಮಾನವ ಸಂಸ್ಕೃತಿಯ ಸ್ವರೂಪವೇನು ಎಂಬುದನ್ನು ತಿಳಿಯುವ ಉದ್ದೇಶದಿಂದ ಅಧ್ಯಯನ ಮಾಡುವುದು, ಪ್ರಪಂಚದ ವಿವಿಧ ಬುಡಕಟ್ಟುಗಳ ಅಧ್ಯಯನ ನಡೆದ ನಂತರವೇ ಸಂಸ್ಕೃತಿಯ ಸ್ವರೂಪ, ಸಂಸ್ಕೃತಿಯ ಕಾರ್ಯ ಮೊದಲಾದವನ್ನು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಯಿತು. ಸಾಮಾಜಿಕ ಮಾನವ ವಿಜ್ಞಾನದಲ್ಲಿ ಇಂದು ಆದಿವಾಸಿ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಹಾಗೂ ನಗರ ಸಂಸ್ಕೃತಿಗಳ ಅಧ್ಯಯನವನ್ನು ಮಾಡಲಾಗುತ್ತಿದೆ. ಆದರೆ ಆರಂಭದಿಂದಲೂ ಮಾನವಕುಲ ವಿಜ್ಞಾನಿಗಳು ಕೇವಲ ಬುಡಕಟ್ಟುಗಳ ಸಂಸ್ಕೃತಿಯ ಅಧ್ಯಯನವನ್ನು ಮಾತ್ರ ಮಾಡುತ್ತಾ ಬಂದಿರಲು ಕಾರಣವೇನು ಎಂಬುದನ್ನು ಸ್ಥೂಲವಾಗಿ ಕೆಳಕಂಡಂತೆ ನಿರೂಪಿಸಬಹುದು. ೧೯ನೆಯ ಶತಮಾನದ ಮಾನವ ವಿಜ್ಞಾನಿಗಳು ಮಾನವನ ಸಂಸ್ಕೃತಿ ಕಾಲದಿಂದ ಕಾಲಕ್ಕೆ ವಿಕಾಸವಾಗಿದೆ ಎಂಬುದನ್ನು ಪ್ರತಿಪಾದಿಸುವ ಉದ್ದೇಶದಿಂದ ಬುಡಕಟ್ಟುಗಳ ಸಂಸ್ಕೃತಿಯ ಸ್ವರೂಪ ಏನು ಎಂಬುದನ್ನು ತಿಳಿಯಲು ಅದರ ಎಲ್ಲಾ ಹಂತಗಳನ್ನೂ ಅಭ್ಯಾಸ ಮಾಡಬೇಕಾಗುತ್ತದೆ. ಅವುಗಳಲ್ಲಿ ಬುಡಕಟ್ಟುಗಳ ಸಂಸ್ಕೃತಿಯೂ ಒಂದು ಹಂತವಾದುದರಿಂದ ಆ ಬಗ್ಗೆ ಅಧ್ಯಯನವನ್ನು ಮುಂದುವರಿಸುವುದು ಅಗತ್ಯವಾಯಿತು. ಬುಡಕಟ್ಟುಗಳ ಸಂಸ್ಕೃತಿ ಸರಳವಾದುದು; ಆಧುನಿಕ ಸಂಸ್ಕೃತಿಯಷ್ಟು ಜಟಿಲವಾದುದಲ್ಲ. ಬುಡಕಟ್ಟು ಸಮಾಜಗಳ ವ್ಯಾಪ್ತಿ ಕಡಿಮೆ ಇರುವುದರಿಂದ ಸಂಸ್ಕೃತಿಯ ಅಧ್ಯಯನಕ್ಕೆ ಸಂಬಂಧಿಸಿದ ಅಧ್ಯಯನದ ವಿಧಾನಗಳನ್ನು (Methods) ರೂಪಿಸಲು ಆರಂಭದ ವರ್ಷಗಳಲ್ಲಿ ಸಹಾಯವಾಯಿತು. ಇದರಿಂದ ಸರಳ ರಚನೆಯ ಬುಡಕಟ್ಟುಗಳ ಸಂಸ್ಕೃತಿಯ ಅಧ್ಯಯನಕ್ಕೆ ಮಹತ್ವ ಕೊಟ್ಟಿದ್ದಾರೆ. ಇದು ಮೊದಲನೆಯ ಕಾರಣ. ಎರಡನೆಯದಾಗಿ ಬುಡಕಟ್ಟು ಸಂಸ್ಕೃತಿ ನಾಗರೀಕತೆಯ ಪ್ರಭಾವಕ್ಕೆ ಸಿಕ್ಕಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುವ ಮೊದಲೇ ಅದರ ಅಧ್ಯಯನ ಮಾಡದೇ ಹೋದರೆ ಅದು ಎಂದೆಂದಿಗೂ ಮಾನವ ಸಂಸ್ಕೃತಿಯ ಅಧ್ಯಯನದಲ್ಲಿ ದೊಡ್ಡ ಕೊರತೆಯಾಗಿಯೇ ಉಳಿಯುತ್ತದೆ. ಈ ಕಾರಣದಿಂದ ಮಾನವ ವಿಜ್ಞಾನಿಗಳು ಆರಂಭದಿಂದಲೂ ಬುಡಕಟ್ಟು ಸಂಸ್ಕೃತಿಯ ಅಧ್ಯಯನವನ್ನು ಕೈಗೊಂಡರು. ಅದೇ ರೀತಿಯಾಗಿ ಮಾನವ ವಿಜ್ಞಾನಿಗಳು ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಮಾಡುವ ಕ್ರಮ ಸಾಮಾನ್ಯವಾಗಿ ಈ ರೀತಿ ಇರುತ್ತದೆ. ಬುಡಕಟ್ಟಿನ ಅಧ್ಯಯನ ಮಾಡಲು ಹೊರಡುವ ಮೊದಲು ಮಾನವ ವಿಜ್ಞಾನಿ ಕೆಲವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಬುಡಕಟ್ಟಿನ ಜನ ವಾಸಿಸುವ ಸ್ಥಳಕ್ಕೆ ಸಂಬಂಧಿಸಿದ ಅಗತ್ಯವಾದ ಎಲ್ಲಾ

ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ. ಅಧ್ಯಯನಕ್ಕೆ ಅಗತ್ಯವಾಗಿ ಬೇಕಾಗುವ ಸಲಕರಣೆಗಳಾದ ಪ್ರಶ್ನಾವಳಿ, ಟೇಪ್‌ರೆಕಾರ್ಡ್, ಕ್ಯಾಮರಾ, ಪೆನ್ನು, ಹಾಳೆ ಮುಂತಾದ ಅಗತ್ಯ ಪರಿಕರಗಳನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ವಿಧಾನ (ರ್‍ಯಾಂಡಮ್)ನ್ನು ಬಳಸಲಾಗಿದೆ. ಮುಖ್ಯವಾಗಿ ಈ ಅಧ್ಯಯನ ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಹಭಾಗಿತ್ವ ವಿಧಾನಗಳನ್ನು ಹಾಗೂ ಪ್ರಶ್ನಾವಳಿ ವಿಧಾನಗಳನ್ನು ಬಳಸಲಾಗಿದೆ. ಹಾಗೆಯೇ ನಕ್ಷೆಗಳು, ಕೋಷ್ಠಕಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಚಾರಿತ್ರಿಕ ವಿಧಾನ: ಬೇಡ ಬುಡಕಟ್ಟಿಗೆ ಅದರದೇ ಆದ ಇತಿಹಾಸವಿದೆ. ಆ ಇತಿಹಾಸವನ್ನು ಅರಿಯಲು ಚಾರಿತ್ರಿಕ ವಿಧಾನದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಬೇಡ ಸಮುದಾಯದ ಐತಿಹಾಸಿಕತೆಯನ್ನು ತಿಳಿಯಲು ಅಧ್ಯಯನದ ದೃಷ್ಟಿಯಿಂದ ಚಾರಿತ್ರಿಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ಸಂಖ್ಯಾಶಾಸ್ತ್ರೀಯ ವಿಧಾನ: ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ನೆಲೆಸಿರುವ ಬೇಡ ಬುಡಕಟ್ಟು ಮಹಿಳೆಯರು, ಕೃಷಿಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ತಿಳಿಯಲು ಅವರ ಜನಸಂಖ್ಯೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಹಾಗೂ ಆರೋಗ್ಯ ಇತ್ಯಾದಿ ಸ್ಥಿತಿಗತಿಗಳನ್ನರಿಯಲು ಕೋಷ್ಠಕ, ಪೈಚಾರ್ಟ್ ಇತ್ಯಾದಿಗಳನ್ನು ರಚಿಸಿಕೊಳ್ಳಲು ಸಂಖ್ಯಾಶಾಸ್ತ್ರದ ನೆರವನ್ನು ಪಡೆಯಲಾಗಿದೆ.

ಸಂದರ್ಶನ ವಿಧಾನ: ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕಿನ ಆಯ್ದ ಗ್ರಾಮಗಳಲ್ಲಿ ನೆಲೆಸಿರುವ ಬೇಡ ಬುಡಕಟ್ಟು ಕೃಷಿಕ ಮಹಿಳೆಯರನ್ನು ನೇರವಾಗಿ ಸಂದರ್ಶಿಸುವ ಮೂಲಕ ಆ ಬುಡಕಟ್ಟಿನ ಆಚಾರ ವಿಚಾರಗಳಲ್ಲದೆ ಅವರಲ್ಲಿ ಪುರುಷ ಹಾಗೂ ಮಹಿಳೆಯರ ಕೃಷಿ ಚಟುವಟಿಕೆಗಳ ಸ್ವರೂಪಗಳನ್ನು ತಿಳಿಯಲು ಸಂದರ್ಶನದ ಮೂಲಕ ಕಲೆಹಾಕಿದ ಮಾಹಿತಿಯನ್ನು ಕ್ರೋಡೀಕರಿಸಿ ಅಧ್ಯಯನದಲ್ಲಿ ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ.

ಸಹಭಾಗಿತ್ವ ವಿಧಾನ: ಬೇಡ ಬುಡಕಟ್ಟು ಮಹಿಳೆಯರು ಕೃಷಿಯ ಚಟುವಟಿಕೆಗಳಲ್ಲಿ ಭಾಗಿಯಾದ ಸಂಧರ್ಭದಲ್ಲಿ ಅಂದರೆ ಹೊಲ–ಗದ್ದೆಗಳಲ್ಲಿ ದುಡಿಯುವ ಸಂದರ್ಭಗಳಲ್ಲಿ ಅವರ ಜೀವನ ಶೈಲಿಯನ್ನು ಅರಿತುಕೊಳ್ಳಲು ಸಹಭಾಗಿತ್ವ ಅವಶ್ಯವಾಗಿದೆ. ಅಲ್ಲದೇ ಅವರ ಕುಲಪಂಚಾಯತಿ, ಹಬ್ಬ ಹರಿದಿನಗಳಲ್ಲಿ ನಡೆಸುವ ಆಚರಣೆಗಳನ್ನು ಅರಿಯಲು ಅವರೊಂದಿಗೆ ಸಹಭಾಗಿಯಾಗಿ ಮಾಹಿತಿಯನ್ನು ಕ್ರೋಢೀಕರಿಸಿ ಅಧ್ಯಯನದಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಪ್ರಶ್ನಾವಳಿಯ ವಿಧಾನ: ಬೇಡ ಬುಡಕಟ್ಟು ಕುಟುಂಬಗಳ ಮಾಹಿತಿಯನ್ನರಿಯಲು ಅಧ್ಯಯನಕ್ಕೆ ಒಳಪಡಿಸಿದ ಪ್ರತಿಯೊಂದು ಕುಟುಂಬದ ಮಾಹಿತಿಯನ್ನು ಪಡೆಯಲು ಪ್ರಶ್ನಾವಳಿಯ ಮಾದರಿಗಳನ್ನು ಬಳಸಲಾಗಿದೆ. ಒಂದು ಪ್ರಶ್ನಾವಳಿಯು ಸಾಮಾನ್ಯವಾದ ಮಾಹಿತಿ ಪಡೆಯಲು ಬಳಸಿದರೆ ಮತ್ತೊಂದು ಪ್ರಶ್ನಾವಳಿಯು ವಿಶೇಷವಾಗಿದ್ದು ಮಾದರಿ ಪ್ರಶ್ನಾವಳಿಯಾಗಿದೆ. ಮಾಹಿತಿದಾರರಿಂದ ವಿಸ್ತೃತವಾದ

ಮಾಹಿತಿಯನ್ನು ಪಡೆಯಲು ಈ ಪ್ರಶ್ನಾವಳಿಯನ್ನು ಬಳಸಲಾಗಿದೆ. ಪ್ರಶ್ನಾವಳಿಗಳ ಮಾಹಿತಿಯನ್ನು ಕ್ರೋಢೀಕರಿಸಿ ಅಧ್ಯಯನದಲ್ಲಿ ಅವಶ್ಯಕವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಹಾಗೆಯೇ ಈ ಅಧ್ಯಯನದಲ್ಲಿ ಬೇಡ ಸಮುದಾಯದ ಕೃಷಿಕ ಮಹಿಳೆಯರ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟಿಯರಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿ, ಪರಿಶಿಷ್ಟ ಪಂಗಡಗಳ ಕುರಿತಾಗಿ ಬಂದಿರುವ ವರದಿಗಳು, ಆಯೋಗಗಳ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ಬಳ್ಳಾರಿಯ ಜಿಲ್ಲೆಯ ಅಧ್ಯಯನಕ್ಕೆ ಆಯ್ದ ಗ್ರಾಮಗಳಲ್ಲಿ ನೆಲೆಸಿರುವ ಬೇಡ ಮಹಿಳೆಯರನ್ನು ನೇರವಾಗಿ ಸಂದರ್ಶನ ನಡೆಸಲಾಗಿದೆ. ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಚಾರಿತ್ರಿಕ ವಿಧಾನ, ಸಂಖ್ಯಾ ಶಾಸ್ತ್ರೀಯ ವಿಧಾನ, ಸಹಭಾಗಿತ್ವ ವಿಧಾನಗಳಿಂದ ಕ್ರೋಢಿಕರಿಸಿದ ಅಂಶಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಪ್ರಾಕಲ್ಪನೆ

- ಬೇಡ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿ ನಿರ್ಲಕ್ಷ್ಯವಾಗಿದೆ
- ಬೇಡ ಮಹಿಳಾ ಕೃಷಿ ಕಾರ್ಮಿಕ ವೃತ್ತಿಯು ಮಹಿಳೆಯರನ್ನು ಆರ್ಥಿಕವಾಗಿ ಸಬಲಗೊಳಿಸಿದೆ
- ಬೇಡ ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ, ಶೈಕ್ಷಣಿಕ, ಹಾಗೂ ಆರೋಗ್ಯ ಸ್ಥಿತಿಗತಿಯ ಸುಧಾರಣೆಯಲ್ಲಿ ಸರಕಾರಿ ಯೋಜನೆಗಳು ಪರಿಣಾಮಕಾರಿಯಾಗಿವೆ

೧.೬. ಅಧ್ಯಯನದ ಮಹತ್ವ

ಬೇಡ ಸಮುದಾಯದ ಕುರಿತು ವಿವಿಧ ಹಿನ್ನೆಲೆಯಲ್ಲಿ ಅಧ್ಯಯನಗಳಾಗಿವೆ. ಆದರೆ ಸಮಾಜಶಾಸ್ತ್ರ ಹಾಗೂ ಮಾನವಶಾಸ್ತ್ರೀಯ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅದರಲ್ಲೂ ಬುಡಕಟ್ಟು ವಲಯದ ಕೃಷಿಯ ಚಟುವಟಿಕೆಗಳ ಮೇಲೆ ಕನ್ನಡದಲ್ಲಿ ಅಧ್ಯಯನಗಳಾಗದೇ ಇರುವುದರಿಂದ ಈ ಅಧ್ಯಯನವು ಮಹತ್ವದ್ದಾಗಿದೆ. ಕರ್ನಾಟಕದಲ್ಲಿ ಅನೇಕ ಸಮುದಾಯಗಳಿದ್ದು ಅದರಲ್ಲಿ ಬೇಡ ಸಮುದಾಯದ ಮಹಿಳೆಯರು ಕೃಷಿಯಲ್ಲಿ ಪಾಲ್ಗೊಳ್ಳುವ ಕುರಿತಂತೆ, ಪ್ರಸ್ತುತ ಕೃಷಿಯ ಸ್ಥಿತಿಗತಿ ಹಾಗೂ ಮಹಿಳಾ ಸಮಸ್ಯೆಗಳು ಹೇಗಿವೆ ಹಿಂದೆ ಇದ್ದಂತಹ ಕೃಷಿಯ ಪರಂಪರೆ ಹೇಗಿದೆ? ಇಂದು ಕೃಷಿಯ ವಾಸ್ತವ ಚಿತ್ರಣ ಹೇಗಿದೆ? ಕೈಗಾರೀಕರಣ, ಆಧುನೀಕರಣ, ಜಾಗತೀಕರಣ ಸಂದರ್ಭದಲ್ಲಿ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ನೈಜ ಅಂಶಗಳ ಕುರಿತು ಅಧ್ಯಯನ ನಡೆಸಲಾಗಿರುವುದರಿಂದ ಸಮುದಾಯದ ಮಹಿಳಾ ಕೃಷಿ ಕಾರ್ಮಿಕ ಮಹಿಳೆಯರ ಅಭಿವೃದ್ಧಿಯ ಸುಧಾರಣೆಗೆ ಪ್ರಸ್ತುತ ಅಧ್ಯಯನವು ಅತ್ಯಂತ ಉಪಯುಕ್ತವಾಗಿದೆ. ಬೇಡ ಸಮುದಾಯವು ತನ್ನದೇ ಆದ ವಿಶಿಷ್ಟ ವೃತ್ತಿ ಸಾಮಾಜಿಕ ಸ್ಥಾನಮಾನ, ಚರಿತ್ರೆ, ಭಾಷೆ, ಆಚಾರ–ವಿಚಾರ, ಸಂಪ್ರದಾಯಗಳು, ವಿವಾಹ ಕ್ರಮಗಳನ್ನು ಹೊಂದಿದ್ದು, ಈ ಅಧ್ಯಯನದಲ್ಲಿ ಸಮುದಾಯದ ಪರಂಪರೆ ಪ್ರಸ್ತುತವಾಗಿ ಹೇಗಿದೆ? ಅದರ

ಸ್ಥಿತಿಗತಿಗಳೇನು? ಎಂಬುದನ್ನು ಕಂಡುಕೊಳ್ಳುವುದರ ಜೊತೆಗೆ ಆಧುನಿಕ ಸಂದರ್ಭದಲ್ಲಿ ಹೇಗೆ ಸ್ಥಿತ್ಯಂತರಗೊಂಡಿದೆ, ಎಂಬುದನ್ನು ಪತ್ತೆಹಚ್ಚುವುದರ ಮೂಲಕ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಆರೋಗ್ಯದ ದೃಷ್ಟಿಕೋದಿಂದ ಬೇಡ ಸಮುದಾಯದ ಕೃಷಿ ಮಹಿಳೆಯರ ಸಮಸ್ಯೆಗಳನ್ನು ನೋಡುವುದಾಗಿದೆ. ಬೇಡ ಸಮುದಾಯದ ಪಾರಂಪರಿಕ ಆದಾಯದ ಮೂಲ ಕೃಷಿ. ಹೊಸಪೇಟೆ ಹಾಗೂ ಕೂಡ್ಲಿಗಿ ಪ್ರದೇಶಗಳಲ್ಲಿ ನೆಲೆಸಿರುವ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರನ್ನು ತೆಗೆದುಕೊಂಡಿದೆ. ಈ ಪ್ರದೇಶಗಳಲ್ಲಿ ಬೇಡ ಸಮುದಾಯವೇ ಜನಸಂಖ್ಯೆಯಲ್ಲಿ ಅಧಿಕವಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಮಳೆಯಾಶ್ರಿತ ಪ್ರದೇಶದಿಂದ ಕೂಡಿದ ಕೂಡ್ಲಿಗಿ ತಾಲೂಕಿನಲ್ಲಿ ನೆಲೆಸಿರುವ ಬೇಡ ಕೃಷಿ ಕಾರ್ಮಿಕ ಮಹಿಳೆಯರನ್ನು ಹಾಗೂ ನೀರಾವರಿ ಪ್ರದೇಶದಿಂದ ಕೂಡಿದ ಹೊಸಪೇಟೆ ತಾಲೂಕಿನ ಆಯ್ದ ಗ್ರಾಮಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿದೆ. ಅಧ್ಯಯನದ ದೃಷ್ಟಿಯಿಂದ ಒಂದು ಮುಂದುವರೆದ ತಾಲೂಕು, ಹಾಗೂ ಹಿಂದುಳಿದ ತಾಲೂಕನ್ನು ಅಧ್ಯಯನಕ್ಕೆ ಒಳಪಡಿಸಿರುವುದರಿಂದ ಈ ಅಧ್ಯಯನ ತುಂಬಾ ಮಹತ್ವ ಪಡೆದುಕೊಂಡಿದೆ.

ಸಮಸ್ಯೀಕರಣ

ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆ ಮನೆಯೊಳಗೆ ಸುರಕ್ಷಿತಳು ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳು ಅವಳ ಮೇಲೆ ಬಹುತೇಕ ಪ್ರಭಾವ ಬೀರಿಲ್ಲವಾದರೂ ಮುಖ್ಯವಾಹಿನಿಗೆ ಹೋಲಿಸಿದಾಗ ಬುಡಕಟ್ಟು ಮಹಿಳೆಯರಲ್ಲಿ ಅನೇಕ ಸಮಸ್ಯೆಗಳಿವೆ. ಅನಕ್ಷರತೆ ಬಡತನ, ಕೌಶಲ್ಯಗಳ ಕೊರತೆ, ಮೂಡನಂಬಿಕೆಗಳು, ಬಿಡುವಿಲ್ಲದ ಶ್ರಮದ ಕೆಲಸ, ಕೂಲಿ, ದುಡಿಮೆಯಲ್ಲಿ ತಾರತಮ್ಯತೆ, ಉದ್ಯೋಗದ ಅಭದ್ರತೆ, ಆರೋಗ್ಯ ಸಮಸ್ಯೆ ಮತ್ತು ಮಾಹಿತಿಯ ಕೊರತೆಯಿಂದಾಗಿ ಬುಡಕಟ್ಟು ಮಹಿಳೆಯರನ್ನು ಸಂಕಷ್ಟಕ್ಕೀಡು ಮಾಡಿವೆ. ಕುಟುಂಬದ ಒಳಗೆ ಮತ್ತು ಹೊರಗೆ ಪುರುಷರ ಅಧಿಪತ್ಯವೇ ಹೆಚ್ಚು. ಇದರಿಂದಾಗಿ ಮಹಿಳೆಯರ ಪ್ರತಿಭೆಗೆ ಪ್ರೋತ್ಸಾಹ ಹಾಗೂ ಅದನ್ನು ಗುರುತಿಸುವುದು ಅತಿ ಕಡಿಮೆ. ಇಂತಹ ಸ್ಥಿತಿಯಿರುವಾಗ ಕೃಷಿ ಕಾರ್ಮಿಕ ಮಹಿಳೆಯರ ಪರಿಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿದೆ. ಬೇಡ ಕೃಷಿ ಕಾರ್ಮಿಕ ಮಹಿಳೆಯರು ಸಾಂಸ್ಕೃತಿಕವಾಗಿ ಹಾಗೂ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಆರೋಗ್ಯದ ದೃಷ್ಟಿಯಿಂದಲೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸರ್ಕಾರಗಳೂ ನಿರ್ಲಕ್ಷ್ಯವಹಿಸಿವೆ. ಹೀಗಾಗಿ ಅದೆಷ್ಟೋ ಸರ್ಕಾರಿ ಸೌಲಭ್ಯಗಳು ಬೇಡ ಕೃಷಿ ಕಾರ್ಮಿಕ ಮಹಿಳೆಯರನ್ನು ತಲುಪುವುದೇ ಇಲ್ಲ. ಇವೆಲ್ಲವುಗಳ ಬಗ್ಗೆ ಸಮಗ್ರ ಅಧ್ಯಯನವಾಗಬೇಕಿದೆ. ಈಗಾಗಲೇ ಈ ಬಗ್ಗೆ ಅಧ್ಯಯನ ಮಾಡಿರುವುದರ ಸಂಕ್ಷಿಪ್ತ ವಿವರವನ್ನಿಲ್ಲಿ ನೀಡಲಾಗಿದೆ. ಬುಡಕಟ್ಟು ಮಹಿಳೆಯರ ಅನೇಕ ಸಮಸ್ಯೆಗಳು ಇತ್ತೀಚೆಗೆ ಹೆಚ್ಚುತ್ತಿರುವ ವಿಚಾರ ಅಧ್ಯಯನಗಳಿಂದ ತಿಳಿದು ಬರುತ್ತವೆ. ಭೌಗೋಳಿಕವಾಗಿ ಅವರು ನಾಗರಿಕ ಸಮಾಜದಿಂದ ದೂರವಿರುವುದರಿಂದ ಸಂಪರ್ಕ ಕಷ್ಟವಾಗಿದೆ. ಅವರ ವಿಶಿಷ್ಟ ಭಾಷೆ, ಜೀವನ ಪದ್ಧತಿಯಿಂದಾಗಿ ನಾಗರಿಕ ಜನರೊಂದಿಗೆ ಸಾಮರಸ್ಯತೆಯನ್ನು ಹೊಂದಲಾಗದ ಸಾಂಸ್ಕೃತಿಕ ಅಂತರ ನಿರ್ಮಾಣವಾಗಿದೆ.

ಅಂಧಶ್ರದ್ಧೆ ಮಂತ್ರ ತಂತ್ರಗಳಲ್ಲಿ ಇನ್ನೂ ನಂಬಿಕೆಯಿಟ್ಟಿರುವ ಮತ್ತು ಆಧುನಿಕ ವೈದ್ಯಕೀಯ ಸೌಲಭ್ಯಗಳ ಬಗ್ಗೆಯೂ ಅಪನಂಬಿಕೆ ಇರುವುದರಿಂದ ರೋಗರುಜಿನಗಳಿಗೆ ಅವರು ಬಹು ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ. ಆರ್ಥಿಕವಾಗಿ ಅವರು ಸಂಪೂರ್ಣವಾಗಿ ಸ್ವಾವಲಂಭಿಗಳಾಗಿದ್ದ ಕಾಲ ಮುಗಿದಿದ್ದು ನಾಗರಿಕ ಸಮಾಜದತ್ತ ತಮ್ಮ ಆರ್ಥಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಕೈಚಾಚಬೇಕಾಗಿದೆ. ಮಹಿಳೆ ಕುಟುಂಬದ ಕೇಂದ್ರ ಬಿಂದು ಆಗಿರುವುದರಿಂದ ಈ ಮೇಲೆ ಪ್ರಸ್ತುತ ಪಡಿಸಿದ ವಿಚಾರಗಳು, ಮಹಿಳೆ ಮತ್ತು ಮಕ್ಕಳಿಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವ ಬೀರುತ್ತದೆ. ಕೃಷಿ ಕ್ಷೇತ್ರದಲ್ಲೂ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಕೆಲಸಗಳು ಮತ್ತು ಕೂಲಿಗಳು ಹಂಚಿಕೆಯಾಗಿವೆ. ಈ ರೀತಿಯ ಲಿಂಗ ಸಂಬಂಧ ಕೂಲಿಯಿಂದಾಗಿ ಬೇಡ ಪುರುಷರಿಗೆ ಹೆಚ್ಚಿನ ಅಧಿಕಾರವನ್ನು, ಸಂಪನ್ಮೂಲಗಳ ಮೇಲೆ ಅಂಕುಶವನ್ನೂ ಒದಗಿಸುತ್ತಿವೆ. ಹಾಗೆಯೇ ಎಷ್ಟೇ ದುಡಿದರೂ ಮಹಿಳೆಯರನ್ನು ಪುರುಷರ ಅಧೀನ ಸ್ಥಿತಿಯಲ್ಲಿರುವಂತೆ ಮಾಡಿವೆ. ಇದರಿಂದಾಗಿ ಬೇಡ ಕುಲದ ಮಹಿಳೆಯರಲ್ಲಿ ಅಧೀನತೆಯ ಭಾವ ಮೂಡುವಂತಾಗಿದೆ. ಪುರುಷರು ಪ್ರಧಾನರು, ತಾವು ಅಪ್ರಧಾನರು ಎಂಬ ಭಾವನೆ ಈ ಮಹಿಳೆಯರಲ್ಲಿ ಸಾಮಾನ್ಯವಾಗಿದೆ. ಇನ್ನು ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರು ಮೂಲತಃ ಅಸಂಘಟಿತರು. ಆ ಕಾರಣಕ್ಕಾಗಿ ದುಡಿಯುವ ಸಂದರ್ಭದಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ವಿಫಲರಾಗುತ್ತಿದ್ದಾರೆ. ಈ ದೃಷ್ಟಿಯಲ್ಲಿ ಪ್ರಸ್ತುತ ಸಮಾಜದಲ್ಲಿ ಬೇಡ ಬುಡಕಟ್ಟು ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳು ಅಥವಾ ಅವರ ಸ್ಥಿತಿಗತಿಗಳನ್ನು ಅಧ್ಯಾಯನ ಮಾಡಲು ವಿವಿಧ ಆಯಾಮಗಳ ಪ್ರಕ್ರಿಯೆಯನ್ನು ಪರಿಶೀಲಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಸಮಾಜದ ಯಾವುದೇ ಭಾಗದ ಹಿಂದುಳಿಯುವಿಕೆಯು ಆ ಸಮುದಾಯದ ಮೇಲೆ ಮಾತ್ರ ಪರಿಣಾಮ ಬೀರದೆ ಅದು ದೇಶದ ಒಟ್ಟಾರೆ ಅಭಿವೃದ್ಧಿಯನ್ನು ಭಾಧಿಸುತ್ತದೆ. ಸ್ವಾತಂತ್ರ್ಯ ನಂತರ ಬುಡಕಟ್ಟು ಅಭಿವೃದ್ದಿಗೆ ಸರಕಾರ ಅನೇಕ ಯೋಜನೆಗಳನ್ನು ಅನುಷ್ಟಾನಕ್ಕೆ ತರುತ್ತಿದೆ. ಪ್ರಸ್ತುತ ಅಧ್ಯಯನವು ಬುಡಕಟ್ಟು ಸಮುದಾಯದ ಮುಖ್ಯವಾಗಿ ಬೇಡ ಕೃಷಿ ಕಾರ್ಮಿಕರ ಮಹಿಳೆಯರಲ್ಲಿನ ಬದಲಾವಣೆಯ ದಿಕ್ಕು ಹಾಗೂ ಗತಿಯನ್ನು ಮೌಲ್ಯೀಕರಿಸಲು ಸಹಾಯವಾಗುತ್ತದೆ. ಸಮಾಜವಿಜ್ಞಾನ ಕ್ಷೇತ್ರ, ಸಮಾಜಶಾಸ್ತ್ರ ಸಾಮಾಜಿಕ ಮಾನವಶಾಸ್ತ್ರ ಹಾಗೂ ಅಭಿವೃದ್ಧಿ ಅಧ್ಯಯನ ಕ್ಷೇತ್ರಗಳಿಗೂ ಈ ಅಧ್ಯಯನವು ಕೊಡುಗೆ ನೀಡಬಲ್ಲದು. ಹಾಗೆಯೇ ಬುಡಕಟ್ಟು ಸಮುದಾಯಗಳ ಬಗ್ಗೆ ಅನೇಕ ಅಧ್ಯಯನಗಳಿದ್ದರೂ ಬಳ್ಳಾರಿ ಜಿಲ್ಲೆಯಲ್ಲಿನ ಬೇಡ ಬುಡಕಟ್ಟು ಕೃಷಿ ಕಾರ್ಮಿಕ ಮಹಿಳೆಯರಿಗೆ ಸಿಮೀತವಾಗಿರುವ ಅಧ್ಯಯನಗಳು ಇದ್ದು ಹೊಸಪೇಟೆ ಮತ್ತು ಕೂಡ್ಲಿಗಿ ಭಾಗವನ್ನು ಕೇಂದ್ರಿಕರಿಸಿಕೊಂಡ ಅಧ್ಯಯನಗಳು ಇದುವರೆಗೂ ನಡೆದಿರುವುದಿಲ್ಲ. ಕೆಲವು ಸಂಶೋಧನಾಕಾರರು ಬುಡಕಟ್ಟು ಜನಾಂಗದ ಕುಲಕಸುಬುಗಳ ಕುರಿತು ಆಹಾರ ಪದ್ದತಿ ಸಮುದಾಯಗಳ ಸ್ಥಿತ್ಯಂತರಗಳು, ಅಭಿವೃದ್ದಿಯಲ್ಲಿನ ತೊಡಕುಗಳ ಕುರಿತು ಬುಡಕಟ್ಟು ಸಮುದಾಯದ ಶಿಕ್ಷಣ ಮತ್ತು ಆರೋಗ್ಯದ ಕುರಿತು ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ

ಜಿಲ್ಲೆಯ ಬುಡಕಟ್ಟುಗಳ ಅಭಿವೃದ್ಧಿ ಹಾಗೂ ಮುಂತಾದವುಗಳ ಕುರಿತು ಅನೇಕ ತಜ್ಞರು ತಮ್ಮ ಅಧ್ಯಯನಗಳಲ್ಲಿ ವಿಷಯಗಳನ್ನು ಮಂಡಿಸಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು ಕೃಷಿ ಕಾರ್ಮಿಕ ಮಹಿಳೆಯರ ಕುರಿತಂತೆ ಅಧ್ಯಯನಗಳು ಆಗಿಲ್ಲ. ಹಾಗೆಯೇ ಬೇಡ ಬುಡಕಟ್ಟು ಕೃಷಿ ಕಾರ್ಮಿಕ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ಆರೋಗ್ಯ ಸಮಸ್ಯೆಗಳಲ್ಲಿನ ತೊಡಕುಗಳನ್ನು ಮೌಲ್ಯೀಕರಿಸಿ ಪರಿಶೀಲಿಸುವ ಪ್ರಯತ್ನವೂ ಇದಾಗಿದೆ.

೧.೭ ಸಾಹಿತ್ಯ ಸಮೀಕ್ಷೆ

ಪ್ರಸ್ತುತ ಅಧ್ಯಾಯದಲ್ಲಿ ಕೃಷಿ ಕಾರ್ಮಿಕ ಮಹಿಳೆಯರ ವಿವಿಧ ವಿದ್ವಾಂಸರುಗಳು ಪ್ರಕಟಿಸಿರುವ ಗ್ರಂಥಗಳ ವಿಶ್ಲೇಷಣೆಗೆ ಒಳಪಡಿಸಿರುವುದನ್ನು ಇಲ್ಲಿ ಪರಾಮರ್ಶಿಸಲಾಗಿದೆ.

ಶೈಲಜಾ ಕೆ, ೨೦೧೬, ಪರಿಶಿಷ್ಟಜಾತಿ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳು, ಒಂದು ಮಾನವಶಾಸ್ತ್ರೀಯ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್ ಡಿ ಅಪ್ರಕಟಿತ ಮಹಾಪ್ರಬಂಧದಲ್ಲಿ ಮಹಿಳಾ ಕೃಷಿ ಕಾರ್ಮಿಕರು ಗ್ರಾಮೀಣ ಭಾರತದ ಆರ್ಥಿಕತೆಯ ಬೆನ್ನೆಲುಬು ಆಗಿದ್ದಾರೆ ಮಹಿಳೆಯರು ಜೀವನ ನಿರ್ವಹಣೆಗಾಗಿ ವಿವಿಧ ಉದ್ಯೋಗಗಳಲ್ಲಿ ತೊಡಗಿಕೊಂಡಿರುವುದನ್ನು ಹಾಗೂ ಮೈಸೂರು ಭಾಗದಲ್ಲಿ ಕಂಡು ಬರುವ ಪರಿಶಿಷ್ಟ ಜಾತಿ ಕೃಷಿ ಮಹಿಳೆಯರನ್ನು ಒಳಗೊಂಡ ಅವರು ಅನುಭವಿಸುತ್ತಿರುವ ನೈಜ ಬದುಕಿನ ಅನಾವರಣವನ್ನು ತಿಳಿಸಿಕೊಡುತ್ತದೆ.

ಸಿದ್ದಗಂಗಮ್ಮ, ೨೦೧೩, ಮಹಿಳಾ ಶ್ರಮ ಘನತೆ, ಕೃತಿಯಲ್ಲಿ ಕ್ರಯ ಸಹಿತ ದುಡಿಮೆಯಲ್ಲೂ ವೇತನ/ಕೂಲಿಯ ತಾರತಮ್ಯವಿದೆ. ಕಡಿಮೆ ಕೂಲಿಗೆ ಹೆಚ್ಚು ದುಡಿಯುತ್ತಾ ಸ್ವಂತ ಪರಿಶ್ರಮದಿಂದ ಕುಟುಂಬ ನಿರ್ವಹಿಸುತ್ತಿರುವ ಸಾರ್ಥಕ ಬದುಕಿನ ಸಾಧಕಿಯರ ಶ್ರಮವನ್ನು ಕೃತಿಯು ವಿವರಿಸುತ್ತದೆ.

ಚಂದ್ರಶೇಖರ ಟಿ ಆರ್, ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ ಗ್ರಂಥದಲ್ಲಿ ಕೃಷಿಯಲ್ಲಿ ಮಹಿಳಾ ದುಡಿಮೆಗಾರರ ಕುರಿತು ವಿವರಿಸಿದ್ದಾರೆ. ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರು ಸಾಮಾಜಿಕವಾಗಿ ಅಂಚಿಗೆ ದೂಡಲ್ಪಟ್ಟವರಾಗಿರುತ್ತಾರೆ. ಆರ್ಥಿಕವಾಗಿ ಅಧೀನ ಸ್ಥಿತಿಯಲ್ಲಿರುತ್ತಾರೆ, ಶೈಕ್ಷಣಿಕವಾಗಿ ನಿರಕ್ಷರಸ್ಥರಾಗಿರುತ್ತಾರೆ. ರಾಜಕೀಯವಾಗಿ ಅಂತಂತ್ರ ಸ್ಥಿತಿಯಲ್ಲಿರುತ್ತಾರೆ ಎಂಬ ಇತ್ಯಾದಿ ಅಂಶಗಳನ್ನು ವಿವರಿಸಿದ್ದಾರೆ.

ಶುಕ್ಲಾ ಎಸ್ ಪಿ, ಜಯಾ ಮೆಹ್ತಾ, ವಿನೀತ್ ತಿವಾರಿ, ಸಿದ್ದನಗೌಡ ಪಾಟೀಲ, ೨೦೧೯, ಕೃಷಿ ಬಿಕ್ಕಟ್ಟು ಮತ್ತು ಅದರ ಪರಿಹಾರ ಎಂಬ ಕೃತಿಯಲ್ಲಿ ಕೃಷಿಯ ಸಮಸ್ಯೆಗಳನ್ನು ವಿವರಿಸುತ್ತಾ ಕೃಷಿ ಕಾರ್ಮಿಕ ಮಹಿಳೆಯರ ಸ್ಥಿತಿಗತಿಗಳನ್ನಿರಿಸಿ ಪ್ರಸ್ತುತ ಸಂದರ್ಭಗಳಲ್ಲಿ ಕೃಷಿಯಲ್ಲಿನ ತಲ್ಲಣಗಳ ಜೊತೆಗೆ ಕೃಷಿಗೆ ಸೂಕ್ತವಾದ ಪರಿಹಾರೋಪಾಯಗಳನ್ನು ಹೇಗೆ ಕಂಡುಕೊಳ್ಳಬೇಕು ಎಂಬುದನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಿದ್ದಾರೆ.

ಮಂಜುನಾಥ ಬೇವಿನಕಟ್ಟಿ, ೨೦೦೯, ಸಂಪಾದಕತ್ವದ "ವಾಲ್ಮೀಕಿ ಸಮುದಾಯ" ಕೃತಿಯಲ್ಲಿ ಉಳ್ಳೇಶ್ವರಪ್ಪ ಎಂ. ಅವರು ಬರೆದ 'ಹೊಸಪೇಟೆ ತಾಲೂಕಿನ ಬೇಡ ಸಮುದಾಯದ ಮಹಿಳೆ"

ಎಂಬ ಲೇಖನದಲ್ಲಿ ಬೇಡ ಸಮುದಾಯದ ಮಹಿಳೆಯರು ಸಂಸಾರದ ಆರ್ಥಿಕ ಸಾಮಾಜಿಕ ಜೀವನದಲ್ಲಿ ನಿರ್ಣಾಯಕ ಸಂದರ್ಭದಲೆಲ್ಲಾ ಗಂಡಸರಿಗಿಂತ ಮಹಿಳೆಯರ ಪಾತ್ರ ಮುಖ್ಯ ಎಂದಿದ್ದಾರೆ ಅಲ್ಲದೇ ಅವರು ಮುಖ್ಯವಾಗಿ ತರಕಾರಿ ಮಾರುವ, ಗಣಿಗಾರಿಕೆ, ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಇಡಿ ಸಾಂಸಾರಿಕ ಜೀವನವನ್ನು ನಡೆಸುತ್ತಾಳೆ ಎಂಬ ಅಂಶಗಳನ್ನು ಉಲ್ಲೇಖಿಸಿದ್ದಾರೆ. ಈ ನಿಟ್ಟಿನಲ್ಲಿ ಬೇಡ ಮಹಿಳೆಯರ ಸ್ಥಾನಮಾನ ಹೇಗಿದೆ ಮತ್ತು ಈ ಸಮುದಾಯದ ಮಹಿಳೆ ಸ್ವತಂತ್ರವಾಗಿ ಸಮರ್ಥವಾಗಿ ಬೆಳೆಯಲು ಕಾರಣವಾದ ಅಂಶಗಳನ್ನು ಪತ್ತೆಹಚ್ಚಲು ಪೂರಕವಾಗಿದೆ.

ಚೆನ್ನಮ್ಮ ಕೆ.ಸಿ, ೨೦೧೦, 'ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ' ಎಂಬ ಕಿರುಹೊತ್ತಿಗೆಯಲ್ಲಿ ಮಹಿಳೆಯರ ಆರ್ಥಿಕತೆಗೆ ಸಂಬಂಧಿಸಿದ ನೆಲೆಯಲ್ಲಿ ಬುಡಕಟ್ಟು ಮಹಿಳೆಯರನ್ನು ಕೇಂದ್ರಿಕರಿಸಿಕೊಂಡು ಅವರ ದುಡಿಮೆಯ ವಿವಿಧ ಅಂಶಗಳನ್ನು ನೀಡಿದ್ದಾರೆ. ತರಕಾರಿ ಮಾರುವ ಮಹಿಳೆಯ ಜೀವನವನ್ನು ಉತ್ತಮಗೊಳಿಸುವ ಮತ್ತು ಆರ್ಥಿಕ ಅವಕಾಶಗಳು ಸ್ವಾತಂತ್ರ್ಯಗಳು ಯಾವುವು? ಯಾವ ವಿಷಯ ಅವರ ಸಾಮಾರ್ಥ್ಯವನ್ನು ಹೆಚ್ಚಿಸುವಂಥದ್ದಾಗಿದೆ. ಯಾವುದು ಅವರಿಗೆ ಪ್ರತಿಕೂಲವಾಗಿದೆ ಅದನ್ನು ಪರಿಹರಿಸಿಕೊಳ್ಳಲು ಅವರು ಕಂಡುಕೊಂಡ ಉಪಾಯ ಯಾವುದು ? ಈ ಸ್ಥಿತಿಯಲ್ಲಿ ಅವರ ಮಾರುಕಟ್ಟೆಯ ಸವಾಲುಗಳು ಯಾವುವು? ಎಂಬ ಪ್ರಶ್ನೆಗಳನ್ನು ಇಟ್ಟುಕೊಂಡು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಒಟ್ಟಿನಲ್ಲಿ ತರಕಾರಿ ಮಾರುವ ಕೆಲಸದಲ್ಲಿ ತೊಡಗಿರುವ ಮಹಿಳೆಯರು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

ನ್ಯಾ॥ ನಾಗಮೋಹನದಾಸ್ ಹೆಚ್ ಎನ್, ೨೦೧೪, ಮಹಿಳಾ ಅಸಮಾನತೆ, ಕೃತಿಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಕೃಷಿಯ ಚಟುವಟಿಕೆಯಲ್ಲಿ ಮಹಿಳೆಯರು ಅನುಭವಿಸುತ್ತಿರುವ ಅಸಮಾನತೆಯ ನೆಲೆಗಳನ್ನು ದುಡಿಯುವ ವರ್ಗದ ಮಹಿಳೆಯರ ಬದುಕಿನ ಸಮಸ್ಯೆಗಳನ್ನು ವಾಸ್ತವದ ನೆಲೆಗಟ್ಟಿನ ಮೇಲೆ ಅಸಮಾನತೆಯ ಬಗೆಯ ಕುರಿತು ವಿವರಿಸಿದ್ದಾರೆ.

ಕೊತ್ಲಮ್ಮ ಟಿ, ೨೦೦೭, "ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ" ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಹೆಚ್.ಡಿ. ಪ್ರಬಂಧದಲ್ಲಿ ಬುಡಕಟ್ಟು ದೇವದಾಸಿಯರ ಸ್ಥಿತಿಗತಿ'ಯ ಕುರಿತು ವಿವರಿಸುವ ಮೂಲಕ ಅವರ ನೈಜ ಪರಿಸ್ಥಿತಿಯನ್ನು ಹೊರ ಜಗತ್ತಿಗೆ ಅನಾವರಣಗೊಳಿಸಿದ್ದು, ಅವರು ಹೇಗೆ ಸರಕಾರಿ ಸೌಲಭ್ಯಗಳು, ಯೋಜನೆಗಳನ್ನು ಬಳಸಿಕೊಳ್ಳಬೇಕು, ಎಂಬುದರ ಕುರಿತು ಮಾಹಿತಿಗಳನ್ನು ಪ್ರಬಂಧದಲ್ಲಿ ದಾಖಲಿಸಿದ್ದಾರೆ. ಅಲ್ಲದೇ ಇಲ್ಲಿ ಮುಖ್ಯವಾಗಿ, 'ಬಳ್ಳಾರಿ ಜಿಲ್ಲೆಯ ಸಮಗ್ರ ಭೌಗೋಳಿಕ ಹಿನ್ನೆಲೆ, ಚರಿತ್ರೆಯನ್ನು ದಾಖಲಿಸಿ, ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವ ಬುಡಕಟ್ಟು ಸಮುದಾಯಗಳು ಹಾಗೂ ಬುಡಕಟ್ಟು ಮಹಿಳೆಯರ ಸ್ಥಿತಿಗತಿಯ ಅಂಶಗಳು ಹೇಗಿವೆ ಎಂಬುದನ್ನು ವಿವರಿಸುವುದರಿಂದ ಅಧ್ಯಯನಕ್ಕೆ ನೆರವಾಗಬಲ್ಲ ಅನೇಕ ಮಹಿಳಾ ವಿಷಯಗಳು ಸಹಕಾರಿಯಾಗಿವೆ.

ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩, ಮ್ಯಾಸ ಮಂಡಲ, ಗ್ರಂಥದಲ್ಲಿ ನಾಯಕ ಜನಾಂಗದ ಐತಿಹಾಸಿಕ ಹಿನ್ನೆಲೆಯೊಂದಿಗೆ, ಅವರು ಹೇಗೆ ವಿವಿಧ ಹೆಸರುಗಳಿಂದ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಾರೆ ಯಾವ ಯಾವ ಪ್ರದೇಶಗಳಲ್ಲಿ ಭಿನ್ನತೆ ಹಾಗೂ ಸಾಮತ್ಯೆಯೊಂದಿಗೆ ಸಂಬಂಧವನ್ನಿರಿಸಿಕೊಂಡಿದ್ದಾರೆ ಪಶುಪಾಲನೆಯನ್ನೇ ನಂಬಿ ಬದುಕುತ್ತಿದ್ದ ಸಮುದಾಯವು ಪ್ರಸ್ತುತ ಹೇಗೆ ಸಮಾಜದಲ್ಲಿ ಸಮಾಜದೊಂದಿಗೆ ಮುಖಾಮುಖಿಯಗಿದೆ ಎಂಬ ಅಂಶಗಳನ್ನು ವಿವರಿಸಿದ್ದಾರೆ.

ಕೃಷಿ ಆಚರಣೆ (೨೦೦೯) ಮಲ್ಲಿಕಾರ್ಜುನ ಹೊಸಪಾಳ್ಯರವರ ಪ್ರಕಾರ ಆಧುನಿಕ ಯುಗದಲ್ಲಿ ಕೃಷಿ ಚಟುವಟಿಕೆಗಳು ಕಣ್ಮರೆಯಾಗುತ್ತಿರುವ ಕಾಲದಲ್ಲಿ ಅವುಗಳ ಮಹತ್ವ ಮತ್ತು ಆಚರಣೆಗಳ ಹಿಂದಿನ ವೈಶಿಷ್ಟ್ಯಗಳ ಬಗ್ಗೆ ತಿಳಿಸಲಾಗಿದೆ. ಮಳೆಯ ಕುರಿತಾದ ಆಚರಣೆಗಳು ಮತ್ತು ನಂಬಿಕೆಗಳ ಬಗ್ಗೆ ಹೇಳುತ್ತಾ ಬಿತ್ತನೆ ಮಾಡಲು ಯಾವ ರೀತಿಯಾದ ದೇಶೀಯ ಕೃಷಿ ಜ್ಞಾನವನ್ನು ಹೊಂದಿದ್ದರು ಎಂಬುದನ್ನು ಈ ಗ್ರಂಥ ತಿಳಿಸುತ್ತಿದೆ. ಕೃಷಿ ಚಟುವಟಿಕೆಗಳು ನಡೆಯುತ್ತಿರುವ ಸಂದರ್ಭಗಳಲ್ಲಿ ಜನರು ಮಾಡುವ ಕಾರಹಬ್ಬ, ಕೊಂಗೆಪೂಜೆ, ನೇಗಿಲು ಪೂಜೆ, ಗೌರಿ ಪೂಜೆ ಇತ್ಯಾದಗಿಳನ್ನು ಹೆಸರಿಸಿದ್ದಾರೆ. ಹೊನ್ನೇರು ಕಟ್ಟಿ ರೈತ ಭೂಮಿತಾಯಿಗೆ ಪೂಜಿಸುವ ಪದ್ಧತಿಗಳು ಇಂದಿಗೂ ಉಳಿದಿವೆ. ಸುಗ್ಗಿಯ ಕಾಲಕ್ಕೆ ಬಂದಾಗ ಮೊದಲಿಗೆ ರೈತ ಸಂಕ್ರಾಂತಿ ಹಬ್ಬವನ್ನು ಆಚರಿಸಿ ನಂತರ ಒಕ್ಕಣಿ ಮಾಡಲು ಅಣಿಯಾಗುತ್ತಿದ್ದ. ಆದರೆ ಇಂದಿನ ವಾಣಿಜ್ಯ ಬೆಳೆಗಳ ಯುಗದಲ್ಲಿ ರಾಶಿ ಪೂಜೆಗಳು, ಗೂಡು ಪೂಜೆಗಳು ಬಹುತೇಕ ಹಳ್ಳಿಗಳಲ್ಲಿ ನಡೆಯುತ್ತಿಲ್ಲ. ಕಾರಣ ಇಂದು ರಸ್ತೆಗೆ ಬೆಳೆಗಳನ್ನು ಟ್ರ್ಯಾಕ್ಟರ್ ಮುಖಾಂತರ ತುಳಿಸಿಕೊಳ್ಳುತ್ತಿದ್ದಾರೆ. ಇದು ಮನುಷ್ಯ ಆಧುನಿಕತೆಗೆ ತಕ್ಕಂತೆ ಸೋಮಾರಿಯಾಗುತ್ತಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಕೃಷಿ ಚಟುವಟಿಕೆಗಳಲ್ಲಿ ರೈತ ಇಂದು ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ಕೃಷಿ ಕಾರ್ಮಿಕರನ್ನು ನಂಬಿ ಕೃಷಿಯನ್ನು ಕೈಗೊಳ್ಳುತ್ತಿದ್ದಾನೆ. ಬೇಸಾಯಕ್ಕೆ ಬೇಕಾದ ಗೊಬ್ಬರದ ಬಗ್ಗೆ ಜನರಿಗೆ ಅತಿಯಾದ ಗೌರವವಿರುವುದರಿಂದ ದೀಪಾವಳಿಯಂದು ತಿಪ್ಪೆಪೂಜೆಯನ್ನು ನೆರವೇರಿಸುತ್ತಾರೆ. ಇದಲ್ಲದೆ ಸಗಣಿಯಿಂದ ಹೊಡೆದಾಡುವ ಗೊರೆಹಬ್ಬವನ್ನು ಸಹ ಕೆಲವೆಡೆ ಆಚರಿಸುತ್ತಿರುವುದರ ಬಗ್ಗೆ ಈ ಗ್ರಂಥದಲ್ಲಿ ತಿಳಿಸಲಾಗಿದೆ.

"**ಶ್ರೀನಿವಾಸ ಎಂ ಸಿ, ೨೦೦೪,** ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ, ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಮಹಾ ಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯ ಪರಿಚಯ, ಬುಡಕಟ್ಟು ಸಮುದಾಯಗಳ ಪರಿಚಯ, ಗಿರಿಜನ ಉಪಯೋಜನೆಯಡಿಯಲ್ಲಿ ಬರುವ ಕಾರ್ಯಕ್ರಮಗಳ ಪರಿಚಯ ಹಾಗೂ ಅವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಯಾವ ಯಾವ ಯೋಜನೆಗಳು ಕಂಡು ಬರುತ್ತವೆ. ಅವುಗಳ ಸಾಧಕ ಭಾದಕಗಳ ಕುರಿತು ವಿಶ್ಲೇಷಿಸಿದ್ದಾರೆ. ಗಿರಿಜನ ಉಪಯೋಜನೆಯಡಿಯಲ್ಲಿ ಬುಡಕಟ್ಟು ಸಮುದಾಯಗಳ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹೇಗೆ ಅಭಿವೃದ್ಧಿಗೊಳ್ಳಬೇಕು ಎಂಬುದನ್ನು ತಿಳಿಸಿದ್ದಾರೆ. ಹಾಗೂ ಯೋಜನೆಗಳ ಮಾಹಿತಿಯನ್ನು ಕಾಣಬಹುದು.

ಗೀತಾ ಮೆನನ್ ೧೯೮೪, "ಟ್ರೈಬಲ್ ವುಮೆನ್ ವಿಕ್ಟಿಮಾ ಅಫ್ ಡೆವಲಪ್‌ಮೆಂಟ್ ಪ್ರೊಸೆಸ್"ಎಂಬ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಅವರು ಸಾಮಾನ್ಯ ಆಸ್ತಿ, ಸಂಪನ್ಮೂಲಗಳ ನಷ್ಟ ಮತ್ತು ಪರಿಣಾಮಗಳು ಬುಡಕಟ್ಟು ಮಹಿಳೆಯರ ಕಷ್ಟಗಳು ಹೆಚ್ಚಾಗುತ್ತಿವೆ. ಹಾಗೂ ಸಾಮನ್ಯ ಆಸ್ತಿ ಮತ್ತು ಸಂಪನ್ಮೂಲಗಳಲ್ಲಿನ ಬುಡಕಟ್ಟುಗಳ ಸಾಂಪ್ರದಾಯಿಕ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವುದರಿಂದ ಬಹು ಸಂಖ್ಯಾತ ಬುಡಕಟ್ಟು ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಯ ಬಲಿಪಶುಗಳಾಗುತ್ತಿದ್ದಾರೆ ಎನ್ನುವ ಸತ್ಯವನ್ನು ಹೊರಗೆಡವಿದ್ದಾರೆ. ಆದರೆ ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರು ಕುಟುಂಬ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ಎಂತಹ ಸ್ಥಾನ ಮಾನ ಹೊಂದಿದ್ದಾರೆ ಎನ್ನುವುದರ ಬಗ್ಗೆ ಗಮನ ಹರಿಸದಿರುವುದು ಕಂಡು ಬಂದಿದೆ.

ಸರೋಜ ಕೆ, ೨೦೦೧, "ಮಹಿಳೆ ಮತ್ತು ಆರೋಗ್ಯ" ಕೃತಿಯಲ್ಲಿ ಮಹಿಳೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೇಗೆ ಪುರುಷರನ್ನು ಅವಲಂಭಿಸಿದ್ದಾರೆ ಜೊತೆಗೆ ನಿರ್ಣಯತೆಗೆದುಕೊಳ್ಳುವಲ್ಲಿನ ವಿಚಾರಗಳನ್ನು ಹೇಳಿದ್ದಾರೆ. ಅಂದರೆ ನಮ್ಮ ಸಮಾಜದಲ್ಲಿ ಹಾಗೂ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಲಿಂಗ ಸಮಾನತೆಯಿಂದಾಗಿ ಮತ್ತು ಸ್ತ್ರೀ ಜೀವನ ವಿರೋಧಿಯಾದ ಧಮನಕಾರಿ ಮೌಲ್ಯಗಳಿಂದಾಗಿ ಮಹಿಳೆಯರಿಗೆ ಮತ್ತು ಆರೋಗ್ಯಕ್ಕೆ ಸಂತಾನೋತ್ಪತ್ತಿಗೆ ತಮ್ಮ ಸ್ವಂತ ದೇಹಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ನಿರ್ಧಾರತೆಗೆದುಕೊಳ್ಳುವ ಸರಿಯಾದ ಸಂಪೂರ್ಣ ಹಕ್ಕು ಹಾಗೂ ಆಯ್ಕೆಗಳಿಲ್ಲ ಜೊತೆಗೆ ಸ್ತ್ರೀಯರ ಮೂಲಭೂತ ಅಗತ್ಯಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಿರ್ಲಕ್ಷಿಸಲಾಗಿದೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ಹಾಗೂ ಕೌಟುಂಬಿಕ ಲಿಂಗ ಅಸಮಾನತೆಯ ಸ್ತ್ರೀಯರ ಸಾಮಾಜಿಕ ಮತ್ತು ವಸ್ತು ಸ್ಥಿತಿಗಳನ್ನು ಮಹಿಳೆಯರ ಅನುಭವಾತ್ಮಕ ನೆಲೆಯಿಂದ ಪರಿಶೀಲಿಸಿದ್ದಾರೆ.

ಪ್ರಿಯಾಭರತ್ ಕರ್ಮಾಕರ್, (ಸಂ) (೨೦೧೩) 'ಗ್ಲೋಬಲ್ ರಿಸರ್ಚ್ ಜರ್ನಲ್, ಮಾಸ ಪತ್ರಿಕೆಯಲ್ಲಿ "Socio-economic status of Tribal Women : a case study in Karanataka" ನಾಗರಾಜ, ಪಲ್ಲವಿ ಅವರ (ಲೇ), ಸಾಮಾಜಿಕ ಆರ್ಥಿಕ ಸ್ಥಾನಮಾನಗಳನ್ನು ಪಡೆದುಕೊಳ್ಳುವಲ್ಲಿ ಬುಡಕಟ್ಟು ಮಹಿಳೆಯರ ಪಾತ್ರ ಹೇಗಿದೆ. ಜೊತಗೆ ಮುಖ್ಯವಾಹಿನಿಗೆ ಬುಡಕಟ್ಟು ಮಹಿಳೆಯರು ಬರಲು ಸಾಮಾಜಿಕ ಆರ್ಥಿಕ ಪರಿಣಾಮಗಳು ಹೇಗೆ ಕಾರಣವಾಗುತ್ತವೆ ಎನ್ನುವ ಅಂಶಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿನ ಬುಡಕಟ್ಟು ಮಹಿಳೆಯರನ್ನು ಕೇಂದ್ರಿಕರಿಸಿಕೊಂಡಿದ್ದಾರೆ."(ಗುಡಿಮುಂದಲ ಗೋಣಿಬಸಪ್ಪ:೨೦೧೯:ಪುಸಂ:೧೨-೨೨).

ಅಯ್ಯಪ್ಪನ್ ಎಸ್, ೨೦೧೭, ಭಾರತೀಯ ಕೃಷಿ ಸಂಶೋಧನೆ ಮತ್ತು ಶಿಕ್ಷಣ ವ್ಯವಸ್ಥೆ, ಕೃತಿಯಲ್ಲಿ ರೇಣುಕಾ ಎಸ್ ಸಾಳುಂಕೆ ಮತ್ತು ಚೀಟಗುಬ್ಬಿ ಅವರು ಬರೆದ ಮಹಿಳೆಯರಿಗಾಗಿ ಕೃಷಿ ಸಲಕರಣೆಗಳು ಮತ್ತು ತಾಂತ್ರಿಕತೆಗಳು ಲೇಖನದಲ್ಲಿ ಕೃಷಿ ಚಟುವಟಿಕೆಗಳಲ್ಲಿ ಉಪಯೋಗಿಸುತ್ತಿರುವ ಹಳೆ ಪದ್ಧತಿಗಳು ಹಾಗೂ ಮಹಿಳೆಯರು ಮನೆಯಿಂದ ಆಚೆ ಬರದೇ ಹೊರಗಿನ ಪ್ರಪಂಚವನ್ನು ಅರಿಯದೇ ಇರುವುದು.

ಮಹಿಳೆಯರ ಸಾಮಾರ್ಥವ್ಯವನ್ನು ಹೆಚ್ಚಿಸಿ, ಶ್ರಮವನ್ನು ಕಡಿಮೆಗೊಳಿಸಿ ಅವರ ಆರೋಗ್ಯವನ್ನು ಸುಧಾರಿಸುವ ಕ್ರಮಗಳ ಕುರಿತು ವಿವರಿಸಿದ್ದಾರೆ.

ಪದ್ಮನಾಭನ್, ೨೦೦೧, ಮಹಿಳಾ ಕೃಷಿ ಕಾರ್ಮಿಕರ ಕುರಿತು ಮಾಡಿರುವ ಅಧ್ಯಯನದಲ್ಲಿ ಬಹುತೇಕ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು ತುಂಬಾ ಹಿಂದುಳಿದಿದ್ದಾರೆ. ಆದ್ದರಿಂದ ಅವರಿಗೆ ಪರಿಣಾಮಕಾರಿ ತರಬೇತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರೆ ಮಹಿಳಾ ಕೃಷಿ ಕಾರ್ಮಿಕರ ಜೀವನವನ್ನು ಉತ್ತಮಪಡಿಸಬಹುದೆಂದು ಹೇಳಿದ್ದಾರೆ.

ಶೋಭ ಮತ್ತು ರೆಡ್ಡಿ, ೨೦೦೩, ತಮ್ಮ ಅಧ್ಯಯನದಲ್ಲಿ ಆಂಧ್ರಪ್ರದೇಶದ ಎರಡು ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ್ದಾರೆ. ಅವರ ಅಧ್ಯಯನದ ಪ್ರಕಾರ ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಪ್ರಮಾಣ ಏರಿಕೆಯಾಗುತ್ತಿದೆ. ಮಹಿಳಾ ಕೃಷಿ ಕಾರ್ಮಿಕರು ಹೆಚ್ಚಿನ ಪ್ರಮಾಣದಲ್ಲಿ ಭೂರಹಿತ, ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದಾರೆ. ಕೃಷಿಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವ ಮಹಿಳೆಯರ ಪ್ರಮಾಣ ಪುರುಷ ಕಾರ್ಮಿಕರಿಗಿಂತ ಅಧಿಕವಾಗಿದೆ. ಆದರೆ ಉದ್ಯೋಗ ಮತ್ತು ಕೂಲಿ ತಾರತಮ್ಯವಿದ್ದು, ತಾರತಮ್ಯವನ್ನು ನಿವಾರಿಸಿ ಇಬ್ಬರಿಗೂ ಸಮಾನ ಅವಕಾಶ ಮತ್ತು ಸಮಾನ ವೇತನವನ್ನು ನೀಡುವುದು ಅಗತ್ಯವಿದೆ ಎಂದು ಹೇಳಿದ್ದಾರೆ.

ಸತ್ಯ ಸುಂದರಂ, ೨೦೦೩, ತಮ್ಮ 'ಇಂಡಿಯನ್ ಇಕಾನಮಿ ಅಂಡ್ ರೂರಲ್ ವ್ಯೂಮನ್ ವರ್ಕರ್ಸ್' ಎಂಬ ಲೇಖನದಲ್ಲಿ ಕೃಷಿ ಕಾರ್ಮಿಕ ಮಹಿಳೆಯರ ಅಭಿವೃದ್ಧಿಗೆ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಿಂದಾಗಿರುವ ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅವರ ಅಧ್ಯಯನದ ಪ್ರಕಾರ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಕೂಡ ಮಹಿಳಾ ಕಾರ್ಮಿಕರು ತುಂಬಾ ಹಿಂದುಳಿದಿದ್ದಾರೆ. ಇದಕ್ಕೆ ಅವರ ಅನಕ್ಷರತೆಯೇ ಪ್ರಮುಖ ಕಾರಣ ಎಂದು ಹೇಳಿದ್ದಾರೆ.

ತಂಗಮಣಿ ಮತ್ತು ಉಮಾರಾಣಿ, ೨೦೦೫, ತಮ್ಮ ಅಧ್ಯಯನದಲ್ಲಿ ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಪ್ರಮುಖವಾಗಿ ಕೃಷಿ ಕ್ಷೇತ್ರದಲ್ಲಿ ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದ ಮಹಿಳಾ ಕೃಷಿ ಕಾರ್ಮಿಕರಿಗೆ ಬೇಡಿಕೆ ತಗ್ಗಿದ್ದು, ಹಣಕಾಸು ಸೌಲಭ್ಯಗಳ ಅಲಭ್ಯತೆ, ಶಿಕ್ಷಣದ ಕೊರತೆ, ಉತ್ತೇಜಕಗಳ ಕೊರತೆ, ಅಧಿಕ ಅವಧಿಯ ದುಡಿಮೆ, ಕೆಳಮಟ್ಟದ ಸಾಮಾಜಿಕ ಸ್ಥಾನಮಾನ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಪುರುಷರಿಗೆ ಹೋಲಿಕೆ ಮಾಡಿದಾಗ ಮಹಿಳೆಯರ ಸಮಸ್ಯೆಗಳು ಅಧಿಕವಾಗಿವೆ ಎಂದು ಹೇಳಿದ್ದಾರೆ.

ಹುಲುಗಪ್ಪ, ೨೦೦೭, ತಮ್ಮ ಅಧ್ಯಯನದಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುವ ದುಡಿಮೆಗಾರರಲ್ಲಿ ಬಹುತೇಕ ಬಡವರು ತಳ ಸಮುದಾಯಕ್ಕೆ ಸೇರಿದವರಾಗಿದ್ದು, ತಮ್ಮ ಶ್ರಮವನ್ನು ಕಡಿಮೆ ಬೆಲೆಗೆ ಜಮೀನುದಾರರಿಗೆ ಯಾವುದೇ ನೀತಿ–ನಿಯಮವಿಲ್ಲದೆ ಮಾರಿಕೊಳ್ಳುತ್ತಿದ್ದಾರೆ. ಹೀಗಾಗಿ

ಇವರು ಶೋಷಣೆ ತಾರತಮ್ಯತೆಗಳನ್ನು ಅನುಭವಿಸಬೇಕಾಗಿದೆ ಎಂದು ಹೇಳಿದ್ದಾರೆ. ಅಲ್ಲದೆ ಮಹಿಳಾ ಕೃಷಿ ಕಾರ್ಮಿಕರು ವೇತನ ತಾರತಮ್ಯ, ಕೆಲಸದ ಅಭದ್ರತೆ, ಕೆಳಮಟ್ಟದ ಜೀವನ, ಉದ್ಯೋಗ ಅವಕಾಶಗಳ ಕೊರತೆ, ಮೇಲ್ಜಾತಿಯವರಿಂದ ಶೋಷಣೆ, ಸರ್ಕಾರದ ಯೋಜನೆಯಿಂದ ವಂಚನೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕೃಷಿಯೇತರ ಉದ್ಯೋಗಗಳ ಬಗ್ಗೆ ಮಾಹಿತಿ ಇಲ್ಲದೆ ಇರುವುದರಿಂದ ಕೃಷಿಯನ್ನೇ ಅವಲಂಬಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಕುಲಮಣಿ ಪಾದಿ, ೨೦೦೭, ತಮ್ಮ ಲೇಖನದಲ್ಲಿ ಭಾರತೀಯ ಸಮಾಜದಲ್ಲಿ ಕೃಷಿ ಕಾರ್ಮಿಕರು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ಕಡಿಮೆ ಆದಾಯ, ಕಡಿಮೆ ಉದ್ಯೋಗ, ತರಬೇತಿ ಮತ್ತು ಕೌಶಲ್ಯದ ಕೊರತೆ ಹೊಂದಿದ್ದು, ಸಾಮಾಜಿಕವಾಗಿ ಅತ್ಯಂತ ಹೆಚ್ಚು ಕೃಷಿ ಕಾರ್ಮಿಕರು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದವರಾಗಿದ್ದಾರೆ. ಅಸಂಘಟಿತರೂ, ಅಶಕ್ತರೂ ಆಗಿರುವ ಇವರು ದೌರ್ಜನ್ಯದ ವಿರುದ್ಧ ದನಿ ಎತ್ತಲು ದುರ್ಬಲರಾಗಿದ್ದಾರೆ ಎಂದಿದ್ದಾರೆ. ಜೊತೆಗೆ ಮಹಿಳಾ ಕೃಷಿ ಕಾರ್ಮಿಕರನ್ನು ಸಂಕಷ್ಟದಿಂದ ಸಂರಕ್ಷಿಸಬೇಕು ಎಂದಿದ್ದಾರೆ.

ಸುಳಕುಡೆ, ೨೦೦೯, ತಮ್ಮ ಲೇಖನದಲ್ಲಿ ಭಾರತ ದೇಶದ ಸುಮಾರು ೬ ಲಕ್ಷ ಹಳ್ಳಿಗಳಲ್ಲಿ ೧೦೫ ದಶಲಕ್ಷ ರೈತ ಕುಟುಂಬಗಳು ಕೃಷಿ ಆಧಾರಿತ ಬದುಕನ್ನು ಸಾಗಿಸುತ್ತಿವೆ. ಇವರು ದೇಶದ ಜೀವನಾಡಿಗಳೆಂದು ಅರಿತು ಆರ್ಥಿಕ, ಸಾಮಾಜಿಕ, ಧಾರ್ಮಿಕ, ವೈಜ್ಞಾನಿಕ ವಲಯಗಳಲ್ಲಿ ಅಮೂಲಾಗ್ರವಾದ ಬದಲಾವಣೆ ತಂದುಕೊಳ್ಳಬೇಕಿದೆ.ಸಂವಿಧಾನ ನೀಡಿರುವ ಅಧಿಕಾರಗಳಲ್ಲಿ ಮತ್ತು ಸೌಲಭ್ಯಗಳಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರು ಸಮಪಾಲು ಪಡೆಯುವಂತಹ ಪರಿಸರ ನಿರ್ಮಾಣವಾಗಬೇಕಿದೆ.ಆದರೆ ರೈತರು ಮತ್ತು ಕೃಷಿ ಕಾರ್ಮಿಕರು ಸಂವಿಧಾನಾತ್ಮಕ ಸೇವಾ ಸೌಲಭ್ಯಗಳಿಂದ ದೂರವಿರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ತಪ್ಪಾಗಲಾರದು ಎಂದು ಹೇಳಿದ್ದಾರೆ.

ಕೃಷ್ಣಮೂರ್ತಿ, ೨೦೧೦, ತಮ್ಮ ಗ್ರಂಥದಲ್ಲಿ ನಮ್ಮ ದೇಶದಲ್ಲಿ ಬಹುತೇಕ ಕೃಷಿ ಕಾರ್ಮಿಕರು ಅದರಲ್ಲೂ ಮಹಿಳಾ ಕೃಷಿ ಕಾರ್ಮಿಕರು ಅತ್ಯಂತ ನಿರ್ಲಕ್ಷಿತ ವರ್ಗಕ್ಕೆ ಸೇರಿದವರಾಗಿದ್ದು, ಹೆಚ್ಚಿನ ಸಂಖ್ಯೆಯ ಕೃಷಿ ಕಾರ್ಮಿಕರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶೋಷಿತ ಮತ್ತು ಹಿಂದುಳಿದ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅವರು ಕೇವಲ ಬಡವರು ಮತ್ತು ತುಳಿತಕ್ಕೆ ಒಳಗಾದವರು ಮಾತ್ರವಲ್ಲ ಬದಲಿಗೆ ಯಾವುದೇ ನೈಪುಣ್ಯತೆ ಅಥವಾ ತರಬೇತಿಯನ್ನು ಹೊಂದಿಲ್ಲ ಮತ್ತು ಯಾವುದೇ ಪರ್ಯಾಯ ಉದ್ಯೋಗವು ಲಭ್ಯವಿಲ್ಲ. ಅವರು ಸಂಘಟಿತರೂ ಅಲ್ಲ ಮತ್ತು ತಮ್ಮ ಹಕ್ಕಿಗಾಗಿ ಹೋರಾಡುವುದು ಇಲ್ಲ. ಆದ್ದರಿಂದಾಗಿ, ಅವರ ಸ್ಥಿತಿಯು ಹಲವಾರು ದಶಕಗಳ ಯೋಜಿತ ಅಭಿವೃದ್ಧಿಯ ನಂತರವೂ ಸುಧಾರಿಸಿಲ್ಲ ಎಂದು ಹೇಳಿದ್ದಾರೆ.

ವೆಂಕಟರಾವ್ ಡಿ, ೨೦೦೦, ಕೃಷಿ ಬೆಳವಣಿಗೆ, ಕೃತಿಯಲ್ಲಿ ಕೃಷಿ ಎಂದರೇನು? ಮತ್ತು ಕೃಷಿಯ ಮೂಲದ ಬಗ್ಗೆ ತಿಳಿಸುತ್ತದೆ. ನಂತರದ ಕಾಲಘಟ್ಟಗಳಲ್ಲಿ ಕೃಷಿ ಹೇಗೆ ವಿಕಾಸವಾಯ್ತು ಎಂಬುದರ

ಬಗ್ಗೆ ವಿವರಣೆಗಳಿವೆ. ಪ್ರಾಚೀನ ಕೃಷಿಯಲ್ಲಿ ಜಾನುವಾರು ಕೃಷಿಯ ಜೊತೆಗೆ ಸಾಮೂಹಿಕ ಬೇಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದರು ಎಂಬುದನ್ನು ಉಲ್ಲೇಖಿಸುತ್ತದೆ. ಮಧ್ಯಯುಗದಲ್ಲಿ ಶೇಕಡ ೮೦ ರಷ್ಟು ಜನರು ಕೃಷಿಯನ್ನು ಅವಲಂಬಿಸಿದ್ದರು. ಅವರಿಗೆ ಬೇಕಾದಷ್ಟನ್ನು ಬೆಳೆಯಲು ಜನ ಸಮರ್ಥರಿದ್ದರು ಎಂಬ ಅಂಶವನ್ನು ತಿಳಿಸುತ್ತದೆ. ೧೮೮೪ ರಲ್ಲಿ ಕೃಷಿ ಇಲಾಖೆಯನ್ನು ಸ್ಥಾಪಿಸಲಾಯಿತು. ಇದಲ್ಲದೆ ೧೮೮೦, ೧೮೯೦, ೧೯೦೧ ರ ಬರ ಆಯೋಗಗಳು ಕೃಷಿಯನ್ನು ಅಭಿವೃದ್ಧಿಪಡಿಸಲು ಅನೇಕ ಸಲಹೆಗಳನ್ನು ನೀಡಿದ್ದವು. ಕೃಷಿಯ ವಿಧಗಳು ಮತ್ತು ಕೃಷಿಯ ವಿವಿಧ ಹಂತಗಳನ್ನು ತಿಳಿಸುತ್ತಾ, ಕೃಷಿಗೆ ಯೋಗ್ಯವಾದ ಮಣ್ಣು ಮತ್ತು ಅದರ ಸಂರಕ್ಷಣೆಯ ಬಗ್ಗೆ ತಿಳಿಸುತ್ತದೆ. ಕೃಷಿಯ ಸಮಸ್ಯೆಗಳಾದ ನೈಸರ್ಗಿಕ, ತಾಂತ್ರಿಕ ಮತ್ತು ಸಾಮಾಜಿಕ ಸಮಸ್ಯೆಗಳಿಂದ ಉತ್ತಮ ಬೆಳೆಯನ್ನು ಬೆಳೆಯಲು ರೈತ ವಿಫಲನಾಗುತ್ತಿದ್ದಾನೆ. ಆಧುನಿಕ ಕೃಷಿಯ ಕಾಲದಲ್ಲಿ ಭಾರತದಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಿಸಿದ ತಳಿಗಳನ್ನು ಬಳಸುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾನೆ. ವಿದೇಶಗಳಿಗೆ ಹೋಲಿಸಿದ್ರೆ ನಮ್ಮ ರೈತರು ರಾಸಾಯನಿಕ ಗೊಬ್ಬರಗಳನ್ನು ಬಳಸುವ ಪ್ರಮಾಣ ತೀರ ಕಡಿಮೆ. ಭಾರತದಲ್ಲಿ ಕೃಷಿ ಯಾಂತ್ರಿಕರಣಕ್ಕೆ ಕೆಲವೊಮ್ಮೆ ವಿರೋಧಗಳು ಸಹ ವ್ಯಕ್ತವಾಗಿವೆ. ಇಂತಹ ವಿಷಯಗಳ ಮೇಲೆ ಈ ಗ್ರಂಥವು ಬೆಳಕನ್ನು ಚೆಲ್ಲುತ್ತದೆ.

ಜೈ ಕುಮಾರ್, ೨೦೦೯, ಪರಿಸರ ಸ್ನೇಹಿ ಕೃಷಿ ಕ್ಯೂಬಾ ಮಾದರಿ, ಎಂಬ ಗ್ರಂಥದಲ್ಲಿ ಕ್ಯೂಬಾ ದೇಶವು ಒಂದು ದ್ವೀಪ ರಾಷ್ಟ್ರವಾಗಿದ್ದು, ಇದು ನಿರಂಕುಶ ಪ್ರಭುತ್ವ ಆಡಳಿತಕ್ಕೆ ಒಳಪಟ್ಟಿದ್ದರೂ, ಸಹಜ ಕೃಷಿಯನ್ನು ಅವಲಂಬಿಸಲು ವಿಜ್ಞಾನಿಗಳು ಹಾಕಿದ ಶ್ರಮ ವಿಶ್ವಕ್ಕೆ ಮಾದರಿಯಾದುದು. ಇಲ್ಲಿನ ಜನರು ಮೊದಲು ಬ್ರಿಟಿಷ್, ಸ್ಪಾನಿಸ್ ಮತ್ತು ಅಮೇರಿಕದವರ ಲೂಟಿಗೆ ಸಿಲುಕಿತ್ತು. ನಂತರದ ಕಾಲದಲ್ಲಿ ಸಂಭವಿಸಿದ್ದು ಕ್ರಾಂತಿ ಚೆ–ಗುವೆರಾ ಮತ್ತು ಕಾಸ್ಟ್ರೋ ನಾಯಕತ್ವದಲ್ಲಿ. ಇಲ್ಲಿ ರೈತರುಗಳಿಗೆ ಸರ್ಕಾರಿ ಜಮೀನುಗಳನ್ನು ನೀಡಿ ಉತ್ತಮ ಕೃಷಿಯನ್ನು ನಡೆಸುತ್ತಿದ್ದರು. ಇವರು ರಾಸಾಯನಿಕ ಗೊಬ್ಬರ ಮತ್ತು ಕೃಷಿ ಯಂತ್ರಗಳಿಗೆ ಆಶ್ರಯಿಸಿದ್ದು ದೂರದ ರಷ್ಯ ದೇಶವನ್ನು. ಆದರೆ ೧೯೮೯ರಲ್ಲಿ ರಷ್ಯಾ ಪತನ ನಂತರ ಸಹಜ ಕೃಷಿಯನ್ನು ಕೈಗೊಳ್ಳಲು ತೀರ್ಮಾನಿಸಿ ಕೃಷಿ ಭೂಮಿಯನ್ನು ಪುನರ್ ರಚಿಸಲಾಯಿತು. ಈಗ ಇದು ಸಂಪೂರ್ಣ ಸ್ವಾವಲಂಬನೆಯ ಕೃಷಿಯನ್ನು ಕೈಗೊಂಡಿದೆ. ಈಗ ಇಲ್ಲಿ ೪೫ ದಿನಗಳಲ್ಲಿ ೬೦ ಟನ್‌ಗಳಷ್ಟು ಸಾವಯವ ಗೊಬ್ಬರವನ್ನು ತಯಾರಿಸುತ್ತಾರೆ. ಮಣ್ಣಿನ ಸಂರಕ್ಷಣೆಯ ಕಡೆಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಇದಲ್ಲದೆ ಕೃಷಿ ತ್ಯಾಜ್ಯಗಳನ್ನು ಸಹ ಪುನರ್ ಬಳಕೆ ಮಾಡುತ್ತಿದ್ದಾರೆ. ಇಲ್ಲಿ ನಗರೀಕರಣದ ವಿರುದ್ಧವಾಗಿ ಗ್ರಾಮೀಣೀಕರಣ ನಡೆಯಿತು. ಒಂದು ಪುಟ್ಟ ದೇಶ ಅಮೇರಿಕದಂತಹ ದೇಶವನ್ನು ವಿರೋಧಿಸಿ ಇಂತಹ ಕಾರ್ಯ ಚಟುವಟಿಕೆಯನ್ನು ನಡೆಸಿದೆ. ಆದರೆ ಭಾರತದಂತಹ ಬಲಿಷ್ಠ ರಾಷ್ಟ್ರ ಇನ್ನೂ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ.

ಅಶೋಕ ಎಸ್ ಆಯಿರಾ, ೨೦೧೧, ಸಮಗ್ರ ಕೃಷಿ ಅಭಿವೃದ್ಧಿಗೆ ಬಲಶಾಲಿ ರೈತ ಸಂಘಟನೆಗಳು, ಪ್ರಸ್ತುತದಲ್ಲಿ ರೈತರು ಎಡವುತ್ತಿರುವುದು ಸಂಘಟನೆಯಾಗದೇ ಇರುವುದರಿಂದ ರೈತರು ಕೆಲವೊಂದು ಉದ್ದೇಶಗಳನ್ನಿಟ್ಟುಕೊಂಡು ಸಂಘಟನೆಯಾದಾಗ ಮಾತ್ರ. ಸಂಘಟನೆಯಾದ ರೈತರು ಸಮುದಾಯದ

ಅಭಿವೃದ್ಧಿಗೂ ಮಾರ್ಗದರ್ಶನ ನೀಡಬೇಕು. ಆಗಿಂದಾಗೆ ರೈತರ ಕೃಷಿಯ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಿ ಕೃಷಿಯಲ್ಲಿ ಆಗುವ ತಡೆಯಲು ಮಾರ್ಗಗಳನ್ನು ಸೂಚಿಸಬೇಕು. ಗ್ರಾಮೀಣ ರೈತ ಸಮುದಾಯದವರಿಗೂ ಉಪನ್ಯಾಸಗಳನ್ನು ನೀಡಬೇಕು. ಮೌಢ್ಯಗಳನ್ನು ಆಚರಿಸದಂತೆ ಎಚ್ಚರವಹಿಸಿ ಕೃಷಿ ಚಟುವಟಿಕೆಗಳನ್ನು ನಡೆಸಬೇಕೆಂಬ ಮಾಹಿತಿಗಳನ್ನು ನೀಡಬೇಕು ಎಂಬುದನ್ನು ತಿಳಿಸುತ್ತದೆ.

ಬಾಲಕೃಷ್ಣ ಬಿ, ೨೦೧೦, ಕೃಷಿ ವಿಜ್ಞಾನ ಸಾಹಿತ್ಯ ನಡೆದು ಬಂದ ಹಾದಿ, ಎಂಬ ಗ್ರಂಥದಲ್ಲಿ ಭಾರತದಲ್ಲಿ ಈ ಮೊದಲು ಕೃಷಿ ಉದ್ಯಮವಾಗಿರಲಿಲ್ಲ. ಹಾಗೂ ಯಾವುದೇ ಆರ್ಥಿಕ ಲಾಭಕ್ಕಾಗಿ ಕೃಷಿಯನ್ನು ಕೈಗೊಳ್ಳುತ್ತಿರಲಿಲ್ಲ. ಕೃಷಿ ಜೀವನಾಧಾರದ ಬದುಕಿನ ಒಂದು ವಿಧಾನವಾಗಿತ್ತು. ಕೃಷಿಯ ಬಗೆಗಿನ ಜ್ಞಾನ ಪರಂಪರೆಯಾಗಿ ಮೌಖಿಕವಾಗಿ ಹರಿದು ಬರುತ್ತಿತ್ತು. ಕೃಷಿ ಸಾಹಿತ್ಯವು ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಕೃಷಿ ವಾಣಿಜ್ಯ ಕ್ಷೇತ್ರಕ್ಕೆ ಕಾಲಿಟ್ಟ ನಂತರ ಇಂದು ಸಾಹಿತ್ಯ ಅವಶ್ಯಕವಾಗಿದೆ.

ಮಲ್ಲಿಕಾರ್ಜುನ ಹೊಸಪಾಳ್ಯ, ೨೦೦೯, ಕೃಷಿ ಆಚರಣೆ, ಆಧುನಿಕ ಯುಗದಲ್ಲಿ ಕೃಷಿ ಚಟುವಟಿಕೆಗಳು ಕಣ್ಮರೆಯಾಗುತ್ತಿರುವ ಕಾಲದಲ್ಲಿ ಅವುಗಳ ಮಹತ್ವ ಮತ್ತು ಆಚರಣೆಗಳ ಹಿಂದಿನ ವೈಶಿಷ್ಟ್ಯಗಳ ಬಗ್ಗೆ ತಿಳಿಸಲಾಗಿದೆ. ಮಳೆಯ ಕುರಿತಾದ ಆಚರಣೆಗಳು ಮತ್ತು ನಂಬಿಕೆಗಳ ಬಗ್ಗೆ ಹೇಳುತ್ತಾ ಬಿತ್ತನೆ ಮಾಡಲು ಯಾವ ರೀತಿಯಾದ ದೇಶೀಯ ಕೃಷಿ ಜ್ಞಾನವನ್ನು ಹೊಂದಿದ್ದರು ಎಂಬುದನ್ನು ಈ ಗ್ರಂಥ ತಿಳಿಸುತ್ತಿದೆ. ಕೃಷಿ ಚಟುವಟಿಕೆಗಳು ನಡೆಯುತ್ತಿರುವ ಸಂದರ್ಭಗಳಲ್ಲಿ ಜನರು ಮಾಡುವ ಕಾರಹಬ್ಬ, ಕೊಂಗೆಪೂಜೆ, ನೇಗಿಲು ಪೂಜೆ, ಗೌರಿ ಪೂಜೆ ಇತ್ಯಾದಿಗಳನ್ನು ಹೆಸರಿಸಿದ್ದಾರೆ. ಹೊನ್ನೇರು ಕಟ್ಟಿ ರೈತ ಭೂಮಿ ತಾಯಿಗೆ ಪೂಜಿಸುವ ಪದ್ಧತಿಗಳು ಇಂದಿಗೂ ಉಳಿದಿವೆ. ಸುಗ್ಗಿಯ ಕಾಲಕ್ಕೆ ಬಂದಾಗ ಮೊದಲಿಗೆ ರೈತ ಸಂಕ್ರಾಂತಿ ಹಬ್ಬವನ್ನು ಆಚರಿಸಿ ನಂತರ ಒಕ್ಕಣಿ ಮಾಡಲು ಅಣಿಯಾಗುತ್ತಿದ್ದ. ಆದರೆ ಇಂದಿನ ವಾಣಿಜ್ಯ ಬೆಳೆಗಳ ಯುಗದಲ್ಲಿ ರಾಶಿ ಪೂಜೆಗಳು, ಗೂಡು ಪೂಜೆಗಳು ಬಹುತೇಕ ಹಳ್ಳಿಗಳಲ್ಲಿ ನಡೆಯುತ್ತಿಲ್ಲ. ಕಾರಣ ಇಂದು ರಸ್ತೆಗೆ ಬೆಳೆಗಳನ್ನು ಟ್ರ್ಯಾಕ್ಟರ್ ಮುಖಾಂತರ ತುಳಿಸಿಕೊಳ್ಳುತ್ತಿದ್ದಾರೆ. ಇದು ಮನುಷ್ಯ ಆಧುನಿಕತೆಗೆ ತಕ್ಕಂತೆ ಸೋಮಾರಿಯಾಗುತ್ತಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಕೃಷಿ ಚಟುವಟಿಕೆಗಳಲ್ಲಿ ರೈತ ಇಂದು ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ಕೃಷಿ ಕಾರ್ಮಿಕರನ್ನು ನಂಬಿ ಕೃಷಿಯನ್ನು ಕೈಗೊಳ್ಳುತ್ತಿದ್ದಾನೆ. ಬೇಸಾಯಕ್ಕೆ ಬೇಕಾದ ಗೊಬ್ಬರದ ಬಗ್ಗೆ ಜನರಿಗೆ ಅತಿಯಾದ ಗೌರವವಿರುವುದರಿಂದ ದೀಪಾವಳಿಯಂದು ತಿಪ್ಪೆಪೂಜೆಯನ್ನು ನೆರವೇರಿಸುತ್ತಾರೆ. ಇದಲ್ಲದೆ ಸಗಣಿಯಿಂದ ಹೊಡೆದಾಡುವ ಗೊರೆಹಬ್ಬವನ್ನು ಸಹ ಕೆಲವೆಡೆ ಆಚರಿಸುತ್ತಿರುವುದರ ಬಗ್ಗೆ ಈ ಗ್ರಂಥದಲ್ಲಿ ತಿಳಿಸಲಾಗಿದೆ.

ಗಾಣದಾಳು ಶ್ರೀಕಂಠ, ೨೦೦೮, ಕೃಷಿ ಉಪಕರಣ ಈ ಗ್ರಂಥದಲ್ಲಿ ಭಾರತ ಕೃಷಿ ಪ್ರಧಾನ ರಾಷ್ಟ್ರವೆಂಬುದು ಹಿಂದೆ ಇದ್ದ ಖ್ಯಾತಿ. ಈಗ ಈ ಖ್ಯಾತಿ ಬಹುತೇಕ ಕಳೆದು ಹೋಗಿದೆ. ಅದರಲ್ಲೂ ಜಾಗತೀಕರಣದ ಮಾಯ ಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿಯೆಂಬುದು ಕೈಸುಟ್ಟುಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿ ಕಾಯಕವನ್ನು ಬಿಡಲೂ ಆಗದೆ ಕಟ್ಟಿಕೊಳ್ಳಲೂ ಆಗದ

ಸಂದಿಗ್ಧ ಪರಿಸ್ಥಿತಿಯಲ್ಲಿ ರೈತನ ಬದುಕು ಡೋಲಾಯಮಾನವಾಗಿದೆ. ಇದಕ್ಕೆ ಕಾರಣ ಜಾಗತೀಕರಣದ ವಿದ್ಯಮಾನಗಳು ಮಾತ್ರ ಕಾರಣವಲ್ಲ. ಇದಕ್ಕೂ ಮುಖ್ಯ ಕಾರಣ ಹಸಿರುಕ್ರಾಂತಿಯ ಯೋಜನೆಗಳು ಕೃಷಿ ನೆಲವನ್ನು ಬಂಜೆಯಾಗಿಸುವಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೊದ್ಯಮಿಗಳ ಕೈಗೊಂಬೆಯಾಗಿಸುವಲ್ಲಿ ನಮ್ಮ ಆಧುನಿಕ ಕೃಷಿ ಪಂಡಿತರು ಯಶಸ್ವಿಯಾಗಿದ್ದಾರೆ. ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು.

ಶ್ಯಾಮಾಚರಣದುಬೆ, 'ಭಾರತೀಯ ಸಮಾಜ' ೧೯೯೦, ಬರೆದಿರುವ ಈ ಕೃತಿಯಲ್ಲಿ ಭಾರತೀಯ ಸಮಾಜದ ಐತಿಹಾಸಿಕ ಮೂಲಗಳು, ಭಾವನಾತ್ಮಕ ತಳಹದಿಗಳು ಮತ್ತು ಸಾಮಾಜಿಕ ವ್ಯವಸ್ಥೆಗಳ ಬಗೆಗೆ ತಿಳಿದುಕೊಳ್ಳಲು ಹಾಗೂ ಭಾರತೀಯ ಸಮಾಜದಲ್ಲಿ ಲಿಂಗ ಸಂಬಂಧಗಳು ಯಾವ ಸ್ವರೂಪದಲ್ಲಿವೆ ಎಂಬುದನ್ನು ಕುರಿತದಾಗಿದೆ. ಮಹಿಳೆಯರಿಗೆ ನಿಯಂತ್ರಣ ಹಾಕಿರುವ ಕ್ಷೇತ್ರಗಳಲ್ಲಿ ಮಾದಲನೆಯದು ಲೈಂಗಿಕ ಸ್ವಾತಂತ್ರ್ಯವನ್ನು ಪುರುಷರಿಗಿಂತ ಹೆಚ್ಚು ಕಟ್ಟು ನಿಟ್ಟಾಗಿ ಹತೋಟಿಗೊಳಿಸಲಾಗಿದೆ. ಎರಡನೆಯದಾಗಿ ಸ್ತ್ರೀಯರ ಚಲನವಲನಗಳ ಮೇಲೆ ಅವರು ಇಟ್ಟುಕೊಳ್ಳುವ ಸಂಪರ್ಕಗಳ ಮೇಲೆ ನಿಯಂತ್ರಣ, ಮೂರನೇಯದಾಗಿ ಮಹಿಳೆಯರು ಸಂಪನ್ಮೂಲಗಳನ್ನು ನಿಯಂತ್ರಣದಲ್ಲಿರಿಸಬೇಕು ಎಂದು ನಂಬಲಾಗಿತ್ತು. ದುಡಿಮೆ ಮತ್ತು ಕೌಶಲ್ಯ ಪ್ರವೇಶಕ್ಕೆ ಅವಕಾಶವಿರಲಿಲ್ಲ. ಮಹಿಳೆಯರಿಗೆ ತಾವು ಸಂಪಾದಿಸುವ ಆದಾಯವನ್ನು ತಮಗಿಷ್ಟ ಬಂದಂತೆ ಉಪಯೋಗಿಸಲು ಅವಕಾಶವಿರಲಿಲ್ಲ. ಆದರೆ ಆದಿವಾಸಿ ಬುಡಕಟ್ಟು ಕುಟುಂಬದ ಮಹಿಳೆಯರು ಕಾಡುಗಳಲ್ಲಿ, ಹೊಲಗದ್ದೆಗಳಲ್ಲಿ ಕೆಲಸ ಮಾಡುವುದರಿಂದ ಅವರ ಚಲನವಲನಗಳಲ್ಲಿ ಸ್ವಾತಂತ್ರವಿದ್ದು, ಆರ್ಥಿಕ ಹೊಣೆಗಾರಿಕೆಯಿಂದ ದುಡಿಮೆಯಲ್ಲಿ ನಿರ್ಬಂಧಗಳು ಕಡಿಮೆಯಿತ್ತೆಂದು ತಿಳಿದುಬರುತ್ತದೆ. ಈ ಕೃತಿಯಿಂದ ಭಾರತೀಯ ಸಾಮಾಜಿಕ ವ್ಯವಸ್ಥೆ ಒಳಗೆ ಮಹಿಳೆಯರು ಹೇಗೆ ಆರ್ಥಿಕ ಅಸಮಾನತೆಗೆ ಒಳಗಾಗಿದ್ದರು ಎಂಬುದನ್ನು ತಿಳಿಸಲು ಸಹಕಾರಿಯಾಗಿದೆ.

ಉಷಾ ತುತೇಜ, ೨೦೦೦, ಅವರು ತಮ್ಮ ಅಧ್ಯಯನದಲ್ಲಿ ಹರಿಯಾಣ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿನ ಕೃಷಿ ಆರ್ಥಿಕತೆಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪಾತ್ರವನ್ನು ಅಧ್ಯಯನ ಮಾಡಿದ್ದಾರೆ. ಇವರ ಅಧ್ಯಯನದ ಪ್ರಕಾರ ಕುಟುಂಬದ ಆದಾಯದಲ್ಲಿ ಮಹಿಳಾ ಕಾರ್ಮಿಕರು ಪ್ರಮುಖ ಪಾತ್ರವಹಿಸಿರುತ್ತಾರೆ. ಆದರೆ ಭೂರಹಿತ ಮತ್ತು ಅತಿ ಸಣ್ಣರೈತ ಕುಟುಂಬಕ್ಕೆ ಸೇರಿದ ಮಹಿಳಾ ಕೃಷಿ ಕಾರ್ಮಿಕರ ಸಂಪಾದನೆ ತುಂಬಾ ಕಡಿಮೆ ಇದೆ ಎಂದು ವಿವರಿಸಿದ್ದಾರೆ.

ದೋಂಗಡ ಪಾಟೀಲ್ ಮತ್ತು ಪಾಟೀಲ್, ೧೯೮೫, ಅವರು ತಮ್ಮ ಅಧ್ಯಯನದಲ್ಲಿ ಮಹಾರಾಷ್ಟ್ರದ ಜೋಳ, ಹತ್ತಿ ಮತ್ತು ಕಬ್ಬು ಬೆಳೆಯುವ ಪ್ರದೇಶದಲ್ಲಿ ಮಹಿಳಾ ದುಡಿಮೆ ಸಹಭಾಗಿತ್ವವನ್ನು ಕುರಿತು ಅಧ್ಯಯನದ ಮಾಡಿದ್ದಾರೆ. ಜೋಳ ಮತ್ತು ಹತ್ತಿ ಬೆಳೆಯುವ ಪ್ರದೇಶದಲ್ಲಿ ಮಹಿಳಾ ಕಾರ್ಮಿಕರ ಸಹಭಾಗಿತ್ವವು ಅಧಿಕವಾಗುತ್ತಿದ್ದು, ಇವುಗಳ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಆದರೆ

ಕಬ್ಬು ಬೆಳೆಯುವ ಪ್ರದೇಶದಲ್ಲಿ ಮಹಿಳಾ ದುಡಿಮೆಗಾರರ ಸಹಭಾಗಿತ್ವದ ದರ ಕಡಿಮೆಯಾಗುತ್ತದೆ ಎಂದು ವಿವರಿಸಿದ್ದಾರೆ..

ಬಾಲರಮಾನ್‌ಎಸ್, ೧೯೮೫, ಅವರು ಕೃಷಿ ಕ್ಷೇತ್ರದಲ್ಲಿ ಲಿಂಗದ ಆಧಾರದ ಮೇಲೆ ಕೂಲಿಯಲ್ಲಿ ಹೇಗೆ ತಾರತಮ್ಯ ಮಾಡಲಾಗುತ್ತದೆ ಎಂಬುದರ ಕುರಿತು ವಿಶೇಷವಾಗಿ ತಮಿಳುನಾಡು ರಾಜ್ಯವನ್ನು ಅನುಲಕ್ಷಿಸಿ ಅಧ್ಯಯನ ಮಾಡಿದ್ದಾರೆ. ಅವರ ಅಧ್ಯಯನವು ಹೊರಗಡೆವಿರುವ ಫಲಿತಾಂಶದ ಪ್ರಕಾರ ಒಂದೇ ರೀತಿಯ ಕೆಲಸಕ್ಕೆ ಪುರುಷರಿಗೆ ಮತ್ತು ಮಹಿಳೆಯರಿಗೆ ನೀಡುವ ಕೂಲಿಯಲ್ಲಿ ಅಗಾದ ವ್ಯತ್ಯಾಸವಿದ್ದು, ಪುರುಷರಿಗೆ ಜಾಸ್ತಿ ಕೂಲಿ ಹಾಗೂ ಮಹಿಳೆಯರಿಗೆ ಕಡಿಮೆ ಕೂಲಿಯನ್ನು ನೀಡುತ್ತಾರೆ. ಈ ತಾರತಮ್ಯವು ಇಂದಿಗೂ ಕೂಡ ಮುಂದುವರೆದುಕೊಂಡು ಬಂದಿದೆ. ಇದು ಬಹಿರಂಗವಾಗಿ ಮಹಿಳೆಯರ ಮೇಲೆ ನಡೆಯುವ ಆರ್ಥಿಕ ದೌರ್ಜನ್ಯವಾಗಿದ್ದು, ಇದನ್ನು ನಿಷೇದಿಸಿ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವಂತೆ ಕಡ್ಡಾಯ ಕಾನೂನು ಮಾಡಬೇಕೆಂದು ಹೇಳಿದ್ದಾರೆ.

ಶ್ರೀನಿವಾಸ ಎಂ.ಎನ್, ೧೯೭೬, ಅವರು ದಕ್ಷಿಣ ಭಾರತದ ರಾಂಪುರ ಎಂಬ ಹಳ್ಳಿಯನ್ನು ಅಧ್ಯಯನ ಮಾಡಿ ದಕ್ಷಿಣ ಭಾರತದ ಗ್ರಾಮೀಣ ಜನರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ್ದಾರೆ. ಅವರ ಅಧ್ಯಯನದ ಪ್ರಕಾರ ಒಕ್ಕಲಿಗರು ಹಳ್ಳಿಯ ಪ್ರಬಲ ಜಾತಿಯವರಾಗಿದ್ದು, ಹೆಚ್ಚಿನ ಭೂಮಿ ಮತ್ತು ಆಸ್ತಿಯನ್ನು ಹೊಂದಿದ್ದರು ಹಾಗೂ ಅವರು ಆರ್ಥಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಬಲಾಢ್ಯರಾಗಿದ್ದರು ಎಂದು ತಿಳಿಸಿದ್ದಾರೆ. ಆದರೆ ಇನ್ನುಳಿದ ಸಮುದಾಯಗಳು ಅದರಲ್ಲೂ ಜಾತಿಯ ಏಣಿಶ್ರೇಣಿಯಲ್ಲಿ (Hirarechy)ಕೊನೆಯಲ್ಲಿ ಬರುವ ಅಸ್ಪೃಶ್ಯರು ಕೃಷಿ ಕೂಲಿಯಾಳುಗಳಾಗಿ, ಸೇವಕರಾಗಿ ದುಡಿಯುತ್ತಿದ್ದು. ಜಾತಿ ಶ್ರೇಣಿಗೆ ಅನುಗುಣವಾಗಿ ಉದ್ಯೋಗಗಳಿಗೆ ಬೆಲೆ ಕಟ್ಟಲಾಗುತ್ತಿತ್ತು ಎಂದು ಹೇಳಿದ್ದಾರೆ.

ಮಜುಮ್‌ದಾರ್, ೧೯೬೧, ಅವರು ತಮ್ಮ ಅಧ್ಯಯನದಲ್ಲಿ ಭಾರತೀಯ ಪರಿಸ್ಥಿತಿ ಅಗತ್ಯಗಳಿಗೆ ಅನುಗುಣವಾಗಿ ಕೃಷಿ ಕಾರ್ಮಿಕರ ಸ್ಥಿತಿಗತಿಯನ್ನು ಉತ್ತಮ ಪಡಿಸಬೇಕು ಎಂದು ಹೇಳಿದ್ದಾರೆ. ಇವರ ಅಧ್ಯಯನಗಳು ಗ್ರಾಮೀಣರ ಸಮಸ್ಯೆಗಳನ್ನು ತಿಳಿಸುವುದರಲ್ಲಿ ಮುಖ್ಯ ಪಾತ್ರವಹಿಸಿದೆ. ಇವರು ಭಾರತದ ಗ್ರಾಮೀಣ ಸಂರಚನೆಯನ್ನು ವಿಭಿನ್ನ ದೃಷ್ಟಿಗಳಿಂದ ವಿಶ್ಲೇಷಿಸಿದ್ದಾರೆ. ಇವರ ಅಧ್ಯಯನಗಳು ಗ್ರಾಮೀಣ ಜನತೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ.

ಅಶೋಕ ಕುಮಾರ ಯು.ಬಿ, ೨೦೦೧, ಅವರ ಅಧ್ಯಯನವು ಸಂಘಟಿತ ಕೃಷಿ ಕಾರ್ಮಿಕರ ಸಮಸ್ಯೆಗಳ ವಿವಿಧ ಮುಖಗಳ ಕೇಂದ್ರಿಕೃತ ಅಧ್ಯಯನವಾಗಿದ್ದು, ಅವರ ಅಧ್ಯಯನದಲ್ಲಿ ಭೂಹೀನ ಕೃಷಿ ಕೂಲಿಕಾರ ಸಂಯೋಗ ರಚನೆಯನ್ನು ಅನ್ವೇಷಿಸಿದ್ದಾರೆ. ಜೊತೆಗೆ ಉದ್ಯೋಗದಲ್ಲಿನ ಬದಲಾವಣೆಯಲ್ಲಿರುವ ಹಿನ್ನಲೆಯನ್ನು ತಿಳಿಯುವ ವಿಚಾರ ಮಾಡಲಾಗಿದೆ. ಅಲ್ಲದೇ ಗ್ರಾಮೀಣ ಕ್ಷೇತ್ರದ ಕೃಷಿ ಕೂಲಿಕಾರರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಪರೀಕ್ಷಿಸಲಾಗಿದೆ. ಅಲ್ಲದೇ ಕೃಷಿ ಕೂಲಿಕಾರರ ಪ್ರಮುಖ ಆದಾಯವು ಕೃಷಿಕೂಲಿ ಗಳಿಕೆಯಿಂದ ಬಂದದ್ದು ಎಂದು ಹೇಳಿದ್ದಾರೆ. ಕೃಷಿ

ಕ್ಷೇತ್ರದಲ್ಲಿ ಪುರುಷ ಮತ್ತು ಮಹಿಳೆ ಎಂಬ ಬೇದ ಭಾವವಿದ್ದು, ಮಹಿಳಾ ಕೃಷಿ ಕಾರ್ಮಿಕರು ತುಂಬಾ ಸಂಕಷ್ಟದಲ್ಲಿದ್ದಾರೆ. ಮಹಿಳೆಯು ಗೃಹ ಕೆಲಸದ ಜೊತೆಗೆ ಬಿತ್ತನೆ, ನಾಟಿ, ಕಳೆ, ಕೊಯ್ಲು ಮತ್ತು ಒಕ್ಕಲುತನ ಮುಂತಾದ ಕೃಷಿ ಕೆಲಸಗಳಲ್ಲೂ ತೊಡಗುತ್ತಾರೆ. ೯೦% ರಷ್ಟು ಕೂಲಿಕಾರರು ಭೂರಹಿತ ಕೃಷಿ ಕೂಲಿಕಾರರಾಗಿದ್ದು, ಅನೇಕ ಸಮಸ್ಯೆಗಳು ಅವರನ್ನು ಸಾಲಗಾರನ್ನಾಗಿಸಿದೆ ಎಂಬುದಾಗಿ ಹೇಳಿದ್ದಾರೆ.

ನಾರಾಯಣ ಎಂ. ೨೦೦೧, ಅವರು ತಮ್ಮ ಗ್ರಂಥದಲ್ಲಿ ದುಡಿಯುವ ಗ್ರಾಮೀಣ ಮಹಿಳೆಯರು ಮಕ್ಕಳ ಲಾಲನೆ ಪಾಲನೆ ಜೊತೆಗೆ ಅಡುಗೆ ಮಾಡುವುದು, ಗೃಹ ನಿರ್ವಹಣೆ ಮುಂತಾದ ಸಾಂಪ್ರದಾಯಿಕ ಕೆಲಸಗಳ ಜೊತೆಗೆ ಆರ್ಥಿಕ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದು, ದೈಹಿಕ ಹಾಗೂ ಮಾನಸಿಕವಾಗಿ ದುರ್ಬಲರಾಗಿದ್ದಾರೆ. ಆದ್ದರಿಂದ ಪುರುಷರ ಅವಕೃಪೆಗೊಳಗಾಗಿ ಮಹಿಳೆಯರ ಮೇಲಿನ ಕಿರುಕುಳ ಹೆಚ್ಚು ಕುಟುಂಬದಲ್ಲಿ ಕಲಹಗಳು ಉಂಟಾಗುತ್ತದೆ ಎಂದು ಹೇಳಿದ್ದಾರೆ.

ಅರ್ಜುನ್‌ಸೇನ್ ಗುಪ್ತಾ ವರದಿ, ೨೦೦೮, ರಲ್ಲಿ ಸಮಿತಿಯ ಅಧ್ಯಕ್ಷರಾದ ಅರ್ಜುನ್‌ಸೇನ್ ಗುಪ್ತಾ ಅವರು ತಮ್ಮ ಅಧ್ಯಯನದ ಪೀಠಿಕೆಯಲ್ಲಿ ಮಹಿಳೆಯರು, ಮಕ್ಕಳು, ಜೀತದಾಳುಗಳು ಮತ್ತು ವಲಸೆ ಹೋಗುವ ದುಡಿಮೆಗಾರರಿಗೆ ಸಂಬಂಧಿಸಿದಂತೆ ಹೇಳುವುದಾದರೆ ತಾರತಮ್ಯ ನಿಯಮವು ಸರ್ವವ್ಯಾಪಿಯಾಗಿದೆ ಎಂದು ಹೇಳಿದ್ದಾರೆ. ಅಲ್ಲದೆ ತಮ್ಮ ವರದಿಯಲ್ಲಿ ದುಡಿಮೆಗಾರರ ಕೂಲಿ ಮತ್ತು ಆದಾಯದ ಬಗ್ಗೆ ಹೇಳುತ್ತಾ ಗಂಡಸರು ಮತ್ತು ಹೆಂಗಸರು ಒಂದೇ ದುಡಿಮೆಗೆ ಪಡೆಯುವ ಕೂಲಿಯಲ್ಲಿ ವ್ಯತ್ಯಾಸವಿದೆ. ಕೆಳಮಟ್ಟದ ಕೂಲಿಯಾಳುಗಳಲ್ಲಿ ಹೆಂಗಸರಿಗೆ ೨೭ ರೂ. ಗಳಿಂದ ೪೭ ರೂ.ಗಳ ಕೂಲಿ, ಗಂಡಸರಿಗೆ ೩೭ ರಿಂದ ೬೭ ರೂ.ಕೂಲಿ, ಮಧ್ಯಮ ಮಟ್ಟದಲ್ಲಿ ಮಹಿಳೆಯರಿಗೆ ೩೨ ರೂ. ಮತ್ತು ಪುರುಷರಿಗೆ ೪೮ ರೂ. ಕೂಲಿ, ಭಾರ ಹೊರುವಂತ ಕೆಲಸವಾದರೆ ಗಂಡಸರಿಗೆ ೬೦ ರೂ. ಮತ್ತು ಹೆಂಗಸರಿಗೆ ೨೫ ರಿಂದ ೩೦ ರೂ. ದಿನಗೂಲಿಯ ಲೆಕ್ಕಚಾರವಿದ್ರೂ ವೇತನ ದೊರೆಯುವುದು ತಿಂಗಳಿಗೊಮ್ಮೆ ಮತ್ತು ವಾರದಲ್ಲಿ ೬ ದಿನ ಕೂಲಿ ಮಾತ್ರ ದೊರೆಯುತ್ತದೆ. ಆದ್ದರಿಂದ ಆದಾಯದಲ್ಲಿ ಅಷ್ಟೇನೂ ಹೆಚ್ಚಿನ ಮೊತ್ತವಿರುವುದಿಲ್ಲ ಎಂದು ಹೇಳಿದ್ದಾರೆ.

ಮದನ್, ೧೯೭೬, ಅವರು ಕೂಲಿಕಾರರ ಸಾಮಾಜಿಕ ಪರಿಸರ, ಆರ್ಥಿಕ ಸ್ಥಿತಿ, ಉದ್ಯೋಗ, ದುಡಿತದ ರೀತಿ, ಕೆಲಸದ ಅವಧಿ, ತಿನ್ನುವ ಆಹಾರ ಮತ್ತು ಅದರ ಗುಣಮಟ್ಟ, ವಾಸಿಸುವ ಮನೆ, ಅದರ ಪರಿಸರ, ಕೂಲಿಕಾರರ ಸಾಮಾನ್ಯ ತಿಳುವಳಿಕೆ ಮೊದಲಾದ ಅಂಶಗಳು ಕೃಷಿ ಕೂಲಿಕಾರರನ್ನು ಕುಡಿತ ಮತ್ತು ದುಶ್ಚಟಗಳಿಗೆ ಪ್ರಚೋದನೆ ನೀಡುತ್ತದೆ ಎಂದು ಹೇಳಿದ್ದಾರೆ. ಹಾಗೂ ಶೋಷಿತ ಸಮುದಾಯದ ಕೃಷಿ ಕಾರ್ಮಿಕರಲ್ಲಿ ಮದ್ಯಪಾನ ಮತ್ತು ಧೂಮಪಾನ ಸಾಮಾನ್ಯವಾಗಿ ಕಂಡುಬರುತ್ತದೆ ಎಂದಿದ್ದಾರೆ.

ಅಧ್ಯಯನದ ಸ್ವರೂಪ

ಮೊದಲ ಅಧ್ಯಾಯವು ಪ್ರವೇಶ ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಅಧ್ಯಯನ ವಿಧಾನ, ಅಧ್ಯಾಯಗಳ ಸ್ವರೂಪ ಹಾಗೂ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಾಹಿತ್ಯ ಸಮೀಕ್ಷೆ ಮಾಡಲಾಗಿದೆ.

ಎರಡನೇ ಅಧ್ಯಾಯದಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಹೊಂದಿದ ಬಳ್ಳಾರಿ ಜಿಲ್ಲೆಯ ಅಧ್ಯಯನ ಕ್ಷೇತ್ರದ ಭೌಗೋಳಿಕ ಪರಿಚಯ ಮಾಡಿಕೊಡಲಾಗಿದೆ. ಇದರಲ್ಲಿ ಜಿಲ್ಲೆಯ ಪರಿಚಯ, ಜನಸಂಖ್ಯೆ, ಲಿಂಗಾನುಪಾತ, ಸಾಕ್ಷರತೆ, ಜಿಲ್ಲೆಯ ಕಾರ್ಮಿಕರು, ಸಂಪನ್ಮೂಲ ಇತ್ಯಾದಿ ವಿವರಗಳನ್ನು ನೋಡಲಾಗಿದೆ.

ಅಧ್ಯಾಯ ಮೂರರಲ್ಲಿ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ ಹಾಗೂ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ, ಅವರ ಸಮಸ್ಯೆಗಳು, ಕೃಷಿ ಕಾರ್ಮಿಕರ ಮೇಲೆ ಜಾಗತೀಕರಣದ ಪರಿಣಾಮ, ಹಾಗೂ ಬೇಡ ಸಮುದಾಯದ ಮಹಿಳೆಯರ ಆರೋಗ್ಯದ ಮೇಲೆ ಗಣಿಗಾರಿಕೆಯ ಪ್ರಭಾವದ ಕುರಿತು ಗಮನಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಮಹಿಳಾ ಕೃಷಿ ಕಾರ್ಮಿಕರು ಮತ್ತು ಸರಕಾರದ ಯೋಜನೆಗಳ ಪರಿಶೀಲನೆ ಇದೆ. ಅಧ್ಯಾಯ ಐದರಲ್ಲಿ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿ ನೆಲೆಯಲ್ಲಿ ಅವರ ಸಾಮಾಜಿಕ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ ಆರೋಗ್ಯದ ಸ್ಥಿತಿಗತಿ ಹಾಗೂ ಸರಕಾರದ ಸೌಲಭ್ಯಗಳ ಪರಿಶೀಲನೆ ಇದೆ.

ಅಧ್ಯಾಯ ಆರರಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಬೇಡ ಕೃಷಿ ಕಾರ್ಮಿಕ ಮಹಿಳೆಯರ ಆಯ್ದ ಪ್ರಕರಣ ಅಧ್ಯಯನವನ್ನು ನೋಡಲಾಗಿದೆ.

ಕೊನೆಯಲ್ಲಿ ಸಮಾರೋಪವಿದ್ದು ಇದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಕೊನೆಯಲ್ಲಿ ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಮಾಹಿತಿದಾರರ ವಿವರ, ಕೋಷ್ಟಕಗಳು, ನಕ್ಷೆಗಳು, ಹಾಗೂ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು ಮಹಿಳೆಯರ ಅಧ್ಯಯನಕ್ಕೆ ಸಂಬಂಧಿಸಿದಂತೆ ಛಾಯಚಿತ್ರಗಳನ್ನು ಒದಗಿಸಲಾಗಿದೆ.

ಆಧಾರಗಳು

ಅಶೋಕ ಕುಮಾರ ಯು. ಬಿ, ೨೦೦೧, ಕೃಷಿ ಕೂಲಿಕಾರರ ಬದುಕು–ಬವಣೆ, ಚೇತನ ಬುಕ್ ಹೌಸ್, ಮೈಸೂರು

ಅಂಜನಪ್ಪ ಬಿ, ಎಚ್ , ೨೦೦೬, ಮಹಿಳೆ ಮತ್ತು ದುಡಿಮೆ, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು

ಅರ್ಜುನ್ ಸೇನ್ ಗುಪ್ತಾ ವರದಿ, ೨೦೦೮, ಅಸಂಘಟಿತ ಕಾರ್ಮಿಕರ ಹಿತರಕ್ಷಣೆಗೆ ಅಗತ್ಯವಿರುವ ಕ್ರಮಗಳು, ಹೊಸತು. ಅಕ್ಟೋಬರ್ ಸಂಚಿಕೆ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

ಅರ್ಜುನ್ ಸೇನ್ ಗುಪ್ತಾ ವರದಿ, ೨೦೦೮, ಅಸಂಘಟಿತ ವಲಯದ ದುಡಿಮೆಗಾರರ ಕೂಲಿ ಮತ್ತು ಆದಾಯ, ಹೊಸತು, ಏಪ್ರಿಲ್ ಸಂಚಿಕೆ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು

ಅಯ್ಯಪ್ಪನ್, ಎಸ್, ೨೦೧೫, ಭಾರತೀಯ ಕೃಷಿ ಸಂಶೋಧನೆ ಮತ್ತು ಶಿಕ್ಷಣ ವ್ಯವಸ್ಥೆ, ಕೃಷಿ ವಿ ವಿ, ಧಾರವಾಡ.

ಕೃಷ್ಣಮೂರ್ತಿ, ೨೦೧೦, 'ಭಾರತದ ಆರ್ಥಿಕ ವ್ಯವಸ್ಥೆ (The Indian Economy), ಸಪ್ನ ಬುಕ್ ಹೌಸ್, ಬೆಂಗಳೂರು

ಕೊತ್ತಮ್ಮ, ೨೦೧೨, ಬಳ್ಳಾರಿ ಜಿಲ್ಲೆಯ ದೇವದಾಸಿಯರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾರಾಯಣ ಎಂ, ೨೦೦೧, ಗ್ರಾಮೀಣ ಸಮಾಜಶಾಸ್ತ್ರ ಮತ್ತು ಭಾರತೀಯ ಗ್ರಾಮೀಣಾಭಿವೃದ್ಧಿ, ಚೇತನ ಬುಕ್ ಹೌಸ್, ಮೈಸೂರು

ನ್ಯಾ॥ ನಾಗಮೋಹನದಾಸ ಹೆಚ್.ಎನ್, ೨೦೧೪, ಮಹಿಳಾ ಅಸಮಾನತೆ, ಪ್ರಕಾಶಕರು, ಚಿಂತನ ಪುಸ್ತಕ, ಬೆಂಗಳೂರು

ಚಂದ್ರಶೇಖರ್ ಟಿ.ಆರ್, ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚೆನ್ನಮ್ಮ ಕೆ ಸಿ, ೨೦೧೦, ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾರಾಯಣ ಎಂ. ೨೦೦೧, ಗ್ರಾಮೀಣ ಸಮಾಜಶಾಸ್ತ್ರ ಮತ್ತು ಭಾರತೀಯ ಗ್ರಾಮೀಣಾಭಿವೃದ್ಧಿ ಚೇತನ ಬುಕ್ ಹೌಸ್, ಮೈಸೂರು

ಮಂಜುನಾಥ ಬೇವಿನಕಟ್ಟಿ (ಸಂ) ೨೦೦೯, ವಾಲ್ಮೀಕಿ ಸಮುದಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೀರಸಾಬಿಹಳ್ಳಿ ಶಿವಣ್ಣ, ೨೦೦೩, ಮ್ಯಾಸ ಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ರೇಣುಕಾ ಎಸ್, ಸಾಳುಂಕೆ ಮತ್ತು ಗೀತಾ ಚಿಟಗುಬ್ಬಿ, ೨೦೧೭, ಮಹಿಳೆಯರಿಗಾಗಿ ಕೃಷಿ ಸಲಕರಣೆಗಳು ಮತ್ತು ತಾಂತ್ರಿಕತೆಗಳು, ಕೃಷಿ ವಿವಿ, ಧಾರವಾಡ

ಶ್ರೀನಿವಾಸ ಎಂ ಸಿ, ೨೦೦೪, ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ, (ಅಪ್ರಕಟಿತ, ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೈಲಜಾ ಕೆ, ೨೦೧೬, ಪರಿಶಿಷ್ಟಜಾತಿ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳು, ಒಂದು ಮಾನವಶಾಸ್ತ್ರೀಯ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್ ಡಿ ಅಪ್ರಕಟಿತ ಮಹಾಪ್ರಬಂಧ

ಸರೋಜ ಕೆ, ೨೦೦೧, ಮಹಿಳೆ ಮತ್ತು ಆರೋಗ್ಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಸಿದ್ದಗಂಗಮ್ಮ, ೨೦೧೩, ಮಹಿಳಾ ಶ್ರಮ ಘನತೆ, ಗಾನೆ ಪಬ್ಲಿಕೇಷನ್, ಬೆಂಗಳೂರು.

ಸಿದ್ದನಗೌಡ ಪಾಟೀಲ, ೨೦೧೯, ಕೃಷಿ ಬಿಕ್ಕಟ್ಟು ಮತ್ತು ಅದರ ಪರಿಹಾರ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು

ಸುಳಕುಡೆ, ಸಾ.ರಾ, ೨೦೦೯, "ಕೃಷಿವಲಯ ವಿಸ್ತರಣೆಯಿಂದ ಗ್ರಾಮೀಣಾಭಿವೃದ್ಧಿ" ಹೊಸತು, ಡಿಸೆಂಬರ್ ಸಂಚಿಕೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು

ಶುಕ್ಲಾ ಎಸ್ ಪಿ, ಜಯಾ ಮೇಹ್ತಾ, ವಿನೀತ್ ತಿವಾರಿ, ಸಿದ್ದನಗೌಡ ಪಾಟೀಲ್, ೨೦೧೯, ಕೃಷಿ ಬಿಕ್ಕಟ್ಟು ಮತ್ತು ಅದರ ಪರಿಹಾರ, ನವ ಕನಾಟಕ ಪ್ರಕಾಶನ, ಬೆಂಗಳೂರು

ಹುಲುಗಪ್ಪ ಎಚ್, ೨೦೦೭, ಅಸಂಘಟಿತ ವಲಯದಲ್ಲಿ ಬುಡಕಟ್ಟು ಮಹಿಳೆ, ಬುಡಕಟ್ಟು ಅಧ್ಯಯನ, ಸಂ-೪, ಸಂ-೧ ಮತ್ತು ೨ ಪು.ಸಂ.೭೦-೭೭

Balraman S.N, 1985), "Sex Discrimination in Farm Wages in Tamil Nadu" Indian Journal of Agricultural Economics, Vol. XL, No.3, July-September, Pp.277-278

Dharmakumar (1965) 'Land and Caste in South India" Cambridge University Press, Cambridge.

Dhongada M.P. Patil S.D and Patil S.J.(1985) 'Participation of women Labour in Agriculture in Maharashtra' India Journal of Agriculture Economics, Vol, XL, No.3, July-September pp 265-266.

Geetha Menon,1984, Tribal Women Victim of Development Process, Saga Publication , New Delhi

Kulamani, Padhi, (2007), "Agriculture labour in India – A close look" Orissa Review, Feb-March, Pp 23-29

Madan GR (1976). Indian Social Problems Vol-1 Allied Publisher, New Delhi Pp167-168.

Majumdar D.N. (1961) 'Races and Culture of India' Asia Publishing House, Bombay.

Padmanabhan B.S, 2001, "Women Empowerment in Farm Sector", Yojana, Vol.45, No.1, January, Pp 47-50

Priya Bharth Karmakar (ed) Global Research Journal,Bombay 13 EPW, Mumbay

Satya Sundaram, 2003, "India's Economy and Rural Women Workers" Social welfare, August-September, Pp 67-70

Sobha I., and Reddy M.S.N, 2003), "Women workforce in Agriculture" Monthly Public Opinion Survey, Vol.XL VIII. No.8, May, Pp 10-13

Srinivas M.N. (1976) 'The Remembered Village' Oxford University Press, Delhi.

Thangamani K., and Uma Rani K, 2005, "Problems in Agriculture – A Gender analysis", Social Welfare, Vol 53, No.3, June, Pp 23-25

Upadhyay. V S, Gaya Pandey, Tribal Development In India,(A CRITICAL APPRAISAL) Crown PublicationsRanchi.

UshaTuteja (2000) 'Contibution of Female Agricultural workers in Family Income and their Status in Hariyana' Indian Journal of Agricultural Economics Vol 55, No.2 April-June pp 136-148

ಅಧ್ಯಾಯ : ಎರಡು

ಅಧ್ಯಯನ ಕ್ಷೇತ್ರದ ಭೌಗೋಳಿಕ ಪರಿಚಯ

ಅಧ್ಯಾಯ : ಎರಡು

ಅಧ್ಯಯನ ಕ್ಷೇತ್ರದ ಭೌಗೋಳಿಕ ಪರಿಚಯ

೨.೧. ಬಳ್ಳಾರಿ ಜಿಲ್ಲೆಯ ಪರಿಚಯ

೨.೨. ಬಳ್ಳಾರಿ ಜಿಲ್ಲೆಯ ಭೌಗೋಳಿಕತೆ

೨.೩. ಬಳ್ಳಾರಿ ಜಿಲ್ಲೆಯ ಜನಸಂಖ್ಯೆ

೨.೪. ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಪರಿಚಯ

ಅಧ್ಯಾಯ : ಎರಡು

ಅಧ್ಯಯನ ಕ್ಷೇತ್ರದ ಭೌಗೋಳಿಕ ಪರಿಚಯ

ಭಾರತದ ಕೃಷಿಯನ್ನಿರಿಸಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಕೃಷಿಯಲ್ಲಿ ಎಷ್ಟರ ಮಟ್ಟಿಗೆ ಪ್ರಧಾನವಾದ ಪಾತ್ರವಹಿಸಿದೆ ಎಂಬುದನ್ನು ತಿಳಿಯುವ ಅಗತ್ಯತೆ ಇದೆ. ಪ್ರಮುಖವಾಗಿ ಭಾರತ ದೇಶ ಕೃಷಿ ಪ್ರಧಾನವಾದ ದೇಶ, ಕೃಷಿಯನ್ನೇ ನಂಬಿ ಬದುಕುತ್ತಿರುವ ಈ ಹೊತ್ತಿನಲ್ಲಿ ಮಹಿಳೆಯರೇ ಕೃಷಿಗೆ ಜೀವಾಳು. ಕೃಷಿಯಲ್ಲಿ ಮಹಿಳೆಯರ ಪಾತ್ರ ಹಿರಿದು. ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿಯೂ ಕೃಷಿಯ ಚಟುವಟಿಕೆಯನ್ನು ನೋಡಿದಾಗ ಮಹಿಳೆಯರ ಪ್ರಮಾಣ ಗಣನೀಯವಾಗಿದೆ. ಅದರಲ್ಲೂ ಬಳ್ಳಾರಿ ಜಿಲ್ಲೆಯ ಕೃಷಿಯ ಚಟುವಟಿಕೆಯನ್ನು ನೋಡಿದಾಗ ಇತರೆ ಮಹಿಳೆಯರಿಗಿಂತ ಬೇಡ ಬುಡಕಟ್ಟು ಮಹಿಳೆಯರು ಕೃಷಿಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣ ಅಧಿಕವೆಂದರೆ ತಪ್ಪಾಗಲಿಕ್ಕಿಲ್ಲ ಈ ನಿಟ್ಟಿನಲ್ಲಿ ಅಧ್ಯಯನ ಕ್ಷೇತ್ರ ಪರಿಚಯವನ್ನು ಮಾಡಿಸುವ ಉದ್ದೇಶವಿಟ್ಟುಕೊಂಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತತ ಹನ್ನೊಂದು ತಾಲೂಕುಗಳು ಕಂಡುಬರುತ್ತವೆ ಆ ತಾಲೂಕುಗಳೆಂದರೆ, ಬಳ್ಳಾರಿ, ಸಿರುಗುಪ್ಪ, ಕೂಡ್ಲಿಗಿ, ಕಂಪ್ಲಿ, ಕುರುಗೋಡು, ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿ, ಹೊಸಪೇಟೆ, ಸಂಡೂರು, ಹಾಗೂ ಹರಪ್ಪನಹಳ್ಳಿ ತಾಲೂಕುಗಳಿದ್ದು, ಅಧ್ಯಯನದ ದೃಷ್ಟಿಯನ್ನಿರಿಸಿ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕುಗಳ ಚಿತ್ರಣವನ್ನು ಅಧ್ಯಯನವು ನೀಡುತ್ತದೆ.

೨.೧ ಬಳ್ಳಾರಿ ಜಿಲ್ಲೆಯ ಪರಿಚಯ

ಈ ಹಿಂದೆ ನೋಡಿದಂತೆ ಬಳ್ಳಾರಿಗೆ ತುಂಬಾ ಪ್ರಾಚೀನ ಇತಿಹಾಸವಿದೆ ಪ್ರಾಗೈತಿಹಾಸಿಕ ನೆಲೆಗಳು ಇಲ್ಲಿ ಕಂಡುಬರುತ್ತವೆ. ಬಳ್ಳಾರಿಯ ಸಂಗನಕಲ್ಲಿನಲ್ಲಿ ಪ್ರಾಗೈತಿಹಾಸಿಕ ಕಾಲದ ಶಿಲಾ ಆಯುಧಗಳ ಕಾರ್ಯಗಾರವಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ ಬಳ್ಳಾರಿಗೆ ಬಳ್ಳಾರಿ ಎಂದು ಹೆಸರು ಬರಲು ಆ ಊರಿನ ಆದಿದೈವ ಬಳ್ಳಾರಿ ದುರ್ಗಮ್ಮನೇ ಕಾರಣವೆಂಬ ವಾದವೂ ಇದೆ. ಕ್ರಿಶ ೧೨ ನೇ ಶತಮಾನದಲ್ಲಿ ರಚಿತಗೊಂಡ ಯಶೋಧರ ಚರಿತೆಯಲ್ಲಿ ಬಳರಿ ಎಂಬ ಪದ ಪ್ರಯೋಗಗೊಂಡಿದೆ

ಬಳರಿ ಎಂದರೆ ದೇವತೆ, ಸ್ತ್ರೀದೈವ ಎಂಬ ಅರ್ಥಗಳಿವೆ. ಬಳ್ಳಾರಿಯ ಆದಿ ದೈವ ಬಳರಿ (ದುರ್ಗಮ್ಮ)ಯಿಂದಾಗಿಯೇ ಆ ಊರಿಗೆ ಬಳ್ಳಾರಿ ಎಂಬ ಹೆಸರು ಬಂದಿದೆ ಎಂಬ ವಾದವೂ ಇದೆ. "ಈ ನಗರ ಕ್ರಿ.ಶ ೧೨ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿತ್ತೆಂಬ ವಾದವಿದೆ. ಬೈಲೂರಿನಲ್ಲಿ ಸಿಕ್ಕ ಶಾಸನ ಕ್ರಿ.ಶ.೧೧೩೧ರದಾಗಿದ್ದು ಆ ಶಾಸನದಲ್ಲಿ ಬಳ್ಳಾರಿ ಪ್ರದೇಶ ಉಲ್ಲೇಖ ಗೊಂಡಿರುವುದನ್ನು ಕಾಣಬಹುದಾಗಿದೆ. ನಂತರ ಸಿಂಧೀಗೇರಿ, ಕೋಳೂರು, ಕುರುಗೋಡುಗಳಲ್ಲಿ ದೊರತ ಶಾಸನಗಳಲ್ಲಿ ಬಳ್ಳಾರಿ ಎಂಬ ಪದ ಬಳಕೆಗೊಂಡಿರುವುದನ್ನು ಕಾಣಬಹುದಾಗಿದೆ. ಬಳ್ಳಾರಿ ಜಿಲ್ಲೆಯು ನೈರುತ್ಯ ಮತ್ತು ಈಶಾನ್ಯ ದಿಕ್ಕುಗಳ ನಡುವೆ ಬಾಚಿಕೊಂಡಿದೆ. ಇದು ಸರಿಯಾಗಿ ಕರ್ನಾಟಕದ ಮಧ್ಯ ಭಾಗದಲ್ಲಿದೆ.

೨.೨ ಬಳ್ಳಾರಿ ಜಿಲ್ಲೆಯ ಭಾಗೋಳಿಕತೆ

ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ "ನೈರುತ್ಯ ದಿಕ್ಕಿನ ಹಗರಿಬೊಮ್ಮನಹಳ್ಳಿ ತಾಲೂಕು ಕಲ್ಲಹಳ್ಳಿ ಎಂಬ ಗ್ರಾಮದಿಂದ ಈಶಾನ್ಯ ದಿಕ್ಕಿನ ಶಿರುಗುಪ್ಪ ತಾಲೂಕಿನ ಸಲ್ಲಕುದಲೂರು ಎಂಬ ಗ್ರಾಮದವರೆಗೆ ೧೮೭ ಕಿ.ಮೀ ಉದ್ದವಾಗಿ, ಪೂರ್ವ ಪಶ್ಚಿಮವಾಗಿ ಬಳ್ಳಾರಿ ತಾಲೂಕಿನ ಕಾರೇಕಲ್ಲು ವೀರಾಪುರದಿಂದ ಹಡಗಲಿ ತಾಲೂಕಿನ ಹಿರೇಬನ್ನಿ ಹಟ್ಟಿಯವರಿಗೆ ೧೬೧ ಕಿ.ಮೀ ಅಗಲವಾಗಿ ಹರಡಿಕೊಂಡಿದೆ. ಜಿಲ್ಲೆಯು ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದ ಬಹುದೊಡ್ಡ ಜಿಲ್ಲೆಯಾಗಿತ್ತು."(ಚಂದ್ರಶೇಖರ ಟಿ ಆರ್:೧೯೯೪:೦೯). ೧೯೫೩ ಕ್ಕೆ ಮೊದಲು ಜಿಲ್ಲೆಯ ೧೨ ತಾಲೂಕುಗಳನ್ನು ಹೊಂದಿದ್ದು, ಅವುಗಳಲ್ಲಿ ಬಳ್ಳಾರಿ, ಶಿರುಗುಪ್ಪ, ಸಂಡೂರು, ಹೊಸಪೇಟೆ, ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ, ಮಲ್ಲಾಪುರ ಮತ್ತು ಈಗಿನ ಆಂಧ್ರಪ್ರದೇಶದ ಆಲೂರು, ಆದೋನಿ, ರಾಯದುರ್ಗ ತಾಲೂಕುಗಳನ್ನು ಹೊಂದಿತ್ತು. ೧೯೫೬ ರ ರಾಜ್ಯ ಪುನರ್ ವಿಂಗಡಣೆ ಸಂದರ್ಭದಲ್ಲಿ ಪ್ರಾಂತ್ಯವಾಗಿ ಪ್ರತ್ಯೇಕಗೊಂಡಾಗ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಆಲೂರು, ಆದೋನಿ ಮತ್ತು ರಾಯದುರ್ಗ ತಾಲೂಕುಗಳನ್ನು ಹೊಂದಿತ್ತು. ೧೯೫೬ರ ರಾಜ್ಯ ಪುನರ್ ವಿಂಗಡಣೆ ಸಂದರ್ಭದಲ್ಲಿ ಪ್ರಾಂತ್ಯವಾಗಿ ಪ್ರತ್ಯೇಕಗೊಂಡಾಗ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಆಲೂರು, ಆದೋನಿ ಮತ್ತು ರಾಯದುರ್ಗ ತಾಲೂಕುಗಳು ಆಂಧ್ರಪ್ರದೇಶ ರಾಜ್ಯಕ್ಕೆ ಸೇರಿಸಲಾಯಿತು. ಕರ್ನಾಟಕದಲ್ಲಿ ೧೯೯೭ ರಲ್ಲಿ ಹೊಸ ಜಿಲ್ಲೆಗಳ ರಚನೆಯ ಸಂದರ್ಭದಲ್ಲಿ ಜಿಲ್ಲೆಗೆ ಸೇರಿದ್ದ ಮತ್ತೊಂದು ತಾಲೂಕು ಹರಪನಹಳ್ಳಿಯನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಹಾಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆಯು ೧೧ ತಾಲೂಕುಗಳನ್ನು ಹೊಂದಿದೆ.

"ರಾಜ್ಯ ರಾಜಕೀಯದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನಮಾನವಿದೆ. ಜಿಲ್ಲೆಯನ್ನು ಆಡಳಿತಾತ್ಮಕವಾಗಿ ೨ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ಬಳ್ಳಾರಿ ಇನ್ನೊಂದು ಹೊಸಪೇಟೆಯಾಗಿದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೮೪೫೦ ಚ.ಕಿ.ಮೀ ಇದೆ, ರಾಜ್ಯದ ವಿಸ್ತೀರ್ಣದಲ್ಲಿ ಶೇ.೪.೪೦ ರಷ್ಟು ಪಾಲನ್ನು ಹೊಂದಿದೆ. ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ೮ನೇ ಸ್ಥಾನದಲ್ಲಿದೆ."(ಚಂದ್ರಶೇಖರ ಟಿ ಆರ್:೧೯೯೪:೦೬). ಜಿಲ್ಲೆಯ ಉತ್ತರಕ್ಕೆ ಕೊಪ್ಪಳ, ದಕ್ಷಿಣಕ್ಕೆ ಚಿತ್ರದುರ್ಗ, ಪಶ್ಚಿಮಕ್ಕೆ ಧಾರವಾಡ

ಜಿಲ್ಲೆ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶ ರಾಜ್ಯವಿದೆ. ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು, ಕೃಷಿಗೆ ಅನುಕೂಲವಾಗಿದೆ. ಜಿಲ್ಲೆಯ ಹವಾಮಾನ ದೃಷ್ಟಿಯಿಂದ ಅತಿ ಉಷ್ಣವಲಯವಾಗಿದೆ. ಮಳೆಯ ಪ್ರಮಾಣವು ತೀರಾ ಕಡಿಮೆ. ಶುಷ್ಕ ವಾತಾವರಣದಿಂದ ಕೂಡಿದ ಪೂರ್ವಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶವಿದೆ. ಈ ಭಾಗದಲ್ಲಿ ತುಂಗಾಭದ್ರ ನದಿ ಇರುವುದರಿಂದ ಪೂರ್ವ ತಾಲೂಕುಗಳಿಗೆ ಪ್ರಮುಖ ನೀರಾವರಿಯ ಮೂಲವಾಗಿದೆ. ಈ ನದಿಯು ಜಿಲ್ಲೆಯಲ್ಲಿ ೩೨೦ ಕಿ.ಮೀ ನಷ್ಟು ದೂರ ಹರಿಯುತ್ತದೆ. ನೀರಾವರಿ ಕೃಷಿ ಅಭಿವೃದ್ಧಿಗೆ ಈ ನದಿಯು ಬೆನ್ನೆಲುಬು ಆಗಿದೆ. ಈ ನದಿಯನ್ನು ಬಿಟ್ಟರೆ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕೆಲವು ಸಣ್ಣ ಪುಟ್ಟ ಜಲಾಶಯ, ಕೆರೆ ಮತ್ತು ಕಟ್ಟೆಗಳಿವೆ.

ಜಿಲ್ಲೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಕ್ಷಿಪ್ತ ನೋಟ

ಸಾಮಾಜಿಕವಾಗಿ ಜಿಲ್ಲೆಯನ್ನು ನೋಡುವುದಾದರೆ, ಜಿಲ್ಲೆಯು ವಿವಿಧ ಜಾತಿ ವರ್ಗಗಳನ್ನು ಹೊಂದಿದೆ. ಯಾವುದೇ ಒಂದು ಪ್ರದೇಶದ ಅಭಿವೃದ್ಧಿಯಲ್ಲಿ ಆರ್ಥಿಕ ಚಟುವಟಿಕೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿನ ಖನಿಜ ಸಂಪತ್ತು ಔದ್ಯೋಗಿಕ ಪ್ರಗತಿಗೆ ಬೆನ್ನೆಲುಬಾಗಿದೆ. ಜಿಲ್ಲೆಯು ಉತ್ಕೃಷ್ಟ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳಿಗೆ ವಿಶ್ವವಿಖ್ಯಾತಿ ಗಳಿಸಿದೆ. ಕಬ್ಬಿಣ ನಿಕ್ಷೇಪದ ಪ್ರಮಾಣ ೧೦೩೨.೪೦ ದಶಲಕ್ಷ ಟನ್ ಲಭ್ಯವಿದ್ದು, ಮತ್ತು ಮ್ಯಾಂಗನೀಸ್ ಅದಿರಿನ ನಿಕ್ಷೇಪದ ಪ್ರಮಾಣ ೧೮.೮೧ ದಶಲಕ್ಷ ಟನ್ ಎಂದು ಅಂದಾಜು ಮಾಡಲಾಗಿದೆ. ೧೯೯೧ ರ ಮಧ್ಯ ಭಾಗದಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ ಖಾಸಗೀಕರಣ ಪ್ರಕ್ರಿಯೆಯ ಪರಿಣಾಮವಾಗಿ ಜಿಲ್ಲೆಯಲ್ಲಿ ಬೃಹತ್ ಕಂಪನಿಗಳು ಕಬ್ಬಿಣ ಮತ್ತು ಉಕ್ಕು ಉದ್ದಿಮೆ ಮೇಲೆ ಬಂಡವಾಳ ತೊಡಗಿಸಿವೆ. ಜಿಲ್ಲೆಯಲ್ಲಿ ಪ್ರಸ್ತುತ ನಾಲ್ಕು ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳು ಉತ್ಪಾದನೆಯಲ್ಲಿ ತೊಡಗಿವೆ. ಹೀಗಾಗಿ ರಾಷ್ಟ್ರದ ಉಕ್ಕು ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ.

ಜಿಲ್ಲೆಯಲ್ಲಿ ಜರುಗುತ್ತಿರುವ ಈ ಕೈಗಾರೀಕರಣ ಪ್ರಕ್ರಿಯೆಯು ಜಿಲ್ಲೆಯು ಕೆಲವೇ ಭಾಗಗಳಲ್ಲಿ ನೆಲೆಗೊಂಡಿದೆ. ಈಗಾಗಲೇ ಪ್ರಾದೇಶಿಕವಾಗಿ ಜಿಲ್ಲೆಯನ್ನು ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ವಿಂಗಡಿಸಲಾಗಿದೆ. ಪೂರ್ವ ಭಾಗದ ತಾಲೂಕುಗಳಾದ ಬಳ್ಳಾರಿ, ಹೊಸಪೇಟೆ, ಶಿರುಗುಪ್ಪ ಮತ್ತು ಸಂಡೂರು ತಾಲೂಕುಗಳಾಗಿವೆ. ಕೈಗಾರೀಕರಣ ಪ್ರಕ್ರಿಯೆಯಿಂದ ಪೂರ್ವ ತಾಲೂಕುಗಳು ಸಮೃದ್ಧಿಯಾಗಿವೆ. ಪಶ್ಚಿಮ ಭಾಗದ ತಾಲೂಕುಗಳು ಕೈಗಾರೀಕರಣ ಪ್ರಕ್ರಿಯೆಯಿಂದ ಹೊರಗೆ ಉಳಿದಿವೆ. ಅಭಿವೃದ್ಧಿಯ ಕೈಗಾರೀಕರಣ ಸವಲತ್ತುಗಳನ್ನು ಪೂರ್ತಿಯಾಗಿ ಪೂರ್ವ ಭಾಗದ ತಾಲೂಕುಗಳಲ್ಲಿ ನೆಲೆಗೊಂಡಿವೆ. ಹೀಗಾಗಿ ಈ ಎರಡು ಭಾಗಗಳ ನಡುವೆ ಆರ್ಥಿಕ ಅಸಮಾನತೆ ಹೆಚ್ಚು ಕಂಡು ಬಂದಿವೆ. ಇದರಿಂದ ಸಾಪೇಕ್ಷವಾಗಿ ಪೂರ್ವ ಭಾಗದ ತಾಲೂಕುಗಳನ್ನು ಅಭಿವೃದ್ಧಿ ಪ್ರದೇಶಗಳೆಂದು ಪಶ್ಚಿಮ ಭಾಗದ ತಾಲೂಕುಗಳನ್ನು ಹಿಂದುಳಿದ ಪ್ರದೇಶಗಳೆಂದು ಗುರುತಿಸಲಾಗಿದೆ. ಜಿಲ್ಲೆಯಲ್ಲಿ ದುಡಿಮೆ ವರ್ಗವನ್ನು ನೋಡಿದಾಗ ಹೆಚ್ಚು ಕೃಷಿಯನ್ನು ಅವಲಂಬಿಸಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ೬೩.೧೯೧ (೭೩%) ರಷ್ಟು ಕೃಷಿಯನ್ನು ಅವಲಂಬಿಸಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದರೆ

ಶೇ.೧೦ ರಷ್ಟು ಕೃಷಿ ಅವಲಂಬಿತ ಸಂಖ್ಯೆ ಹೆಚ್ಚಿದೆ. ವಲಯವಾರು ದುಡಿಮೆ ವರ್ಗವನ್ನು ನೋಡಿದಾಗ ಪ್ರಾಥಮಿಕ ವಲಯ ೩.೭೭.೮೫೫ (೭೬.೧೮%) ರಷ್ಟು, ದ್ವಿತೀಯ ವಲಯ ೩೧,೪೨,೨೫೩ (೭.೧) ರಷ್ಟು ಮತ್ತು ತೃತೀಯ ವಲಯ ೩,೭೭,೮೫೫ (೧೬,೦೯%) ರಷ್ಟಿದೆ. ಈ ಪ್ರಮಾಣವು ರಾಜ್ಯಕ್ಕೆ ಹೋಲಿಸಿದರೆ ಕ್ರಮವಾಗಿ ೧೩, ೧೬ ಮತ್ತು ೧೨ನೇ ಸ್ಥಾನವನ್ನು ಪಡೆದಿವೆ. ರಾಜ್ಯದ ದುಡಿಮೆಗಾರ ವರ್ಗಕ್ಕೆ ಹೋಲಿಸಿದರೆ ಪ್ರಾಥಮಿಕ ವಲಯದಲ್ಲಿ ಶೇ.೯ ರಷ್ಟು ಹೆಚ್ಚು ದ್ವಿತೀಯ ವಲಯ ಶೇ.೫.೭ ರಷ್ಟು ಮತ್ತು ತೃತೀಯ ವಲಯದಲ್ಲಿ ಶೇ.೨.೫ ರಷ್ಟು ಕಡಿಮೆ ಇರುವುದನ್ನು ಗಮನಿಸಬಹುದು." (ಚಂದ್ರಶೇಖರ ಟ ಆರ್:೧೯೯೪:೪೯).

ಕೋಷ್ಟಕ–೨.೧ ಜಿಲ್ಲೆ, ತಾಲೂಕುಗಳ ಕೆಲವು ಸಾಮಾನ್ಯ ಅಂಕಿ ಅಂಶಗಳು ೨೦೦೧ ಮತ್ತು ೨೦೧೧

ಕ್ರಸಂ	ವಿವರಗಳು	ತಾಲೂಕುಗಳು							ಜಿಲ್ಲೆ
		ಬಳ್ಳಾರಿ	ಹಡಗಲಿ	ಹೆಚ್.ಬಿ.ಹಳ್ಳಿ	ಹೊಸಪೇಟೆ	ಕೂಡ್ಲಿಗಿ	ಸಂಡೂರು	ಸಿರುಗುಪ್ಪ	ಬಳ್ಳಾರಿ
೧	ವಿಸ್ತೀರ್ಣ (ಚ.ಕಿ.ಮೀ)	೧೬೮೮.೮೩ (೧೯.೧೯)	೯೪೭.೮೫	೯೭೩.೯೫	೯೦೪,೧೭	೧೬೧೮.೮೭	೧೧೫೨.೪೨	೧೦೩೬.೧೭	೮೪೫೦.೦೦
೨	ಗ್ರಾಮಗಳ ಸಂಖ್ಯೆ	೧೮೬	೧೧೨	೧೪೪	೧೨೭	೨೧೭	೧೧೪	೧೪೨	೧೦೧೨
೩	ಕುಟುಂಬಗಳ ಸಂಖ್ಯೆ	೧,೧೭,೨೩೩	೩೧,೦೮೪	೨೮,೮೭೧	೭೦,೭೧೯	೪೭೮೧೧	೬೫.೨೧೮	೪೨.೦೯೮	೩೭೩೦೩೪
೪	ಪರಿಶಿಷ್ಟರ ಪ್ರಮಾಣ	೨,೦೩,೦೧೨	೫೦,೬೯೨	೫೧,೬೫೭	೧,೩೬,೨೭೧	೧,೨೫,೮೬೨ (೪೨.೨೪%)	೮೩.೮೪೨	೮೭.೫೨೦	೭೩೮೮೫೬
೫	ಸಾಕ್ಷರತೆ ಪ್ರಮಾಣ (೫೯.೫೯)	೩,೧೭,೯೮೫ (೫೫.೪೬)	೮೬,೧೬೮ (೫೮.೦೭)	೭೭,೩೫೩ (೬೦.೮೮)	೧,೯೪,೨೬೦ (೫೯.೫೪)	೧,೩೫,೬೮೯ (೫೩.೩೪)	೮೪೭೮ (೪೩.೫೫)	೮೪.೪೮೦ (೫೬.೯೫)	೯೮೦೪೮೩
೬	ಲಿಂಗಾನುಪಾತ	೯೬೧	೯೭೭	೯೭೯	೯೭೭	೯೫೫	೯೪೫	೯೯೯	೯೭೦
೭	ಕೃಷಿ ಅವಲಂಬಿತ ವರ್ಗ	೧,೪೩,೯೦೭	೬೭,೫೨೪	೫೭,೪೯೦	೮೪,೦೫೫	೧,೦೬,೪೩೬	೫೪.೪೭೨	೯೮.೭೫೪	೬,೧೨,೬೪೦
೮	ಸಾಗುವಳಿ ಪ್ರದೇಶ (ಹೆಕ್ಟೇರುಗಳಲ್ಲಿ)	೧,೪೯,೭೪೨	೯೭,೯೦೦	೫೮,೭೬೮	೪೫,೪೬೦	೧,೦೧,೫೧೫	೩೦,೯೧೫	೯೭.೫೬೯	೫,೮೧,೮೬೯
೯	ನೀರಾವರಿ ಪ್ರದೇಶ (ಹೆಕ್ಟೇರುಗಳಲ್ಲಿ)	೪೭,೬೯೨	೩೬,೨೪೧	೫೨,೨೬೬	೨೩,೦೦೭ (೫೮.೬೧)	೮೫೦೧ (೯.೮೫)	೬೩೩೭	೫೬,೮೬೮	೧,೫೧,೭೯೬ (೩೦.೪೦)

ಸೂಚನೆ: ಕೈಗಾರಿಕ ಘಟಕಗಳು, ಸಣ್ಣ ಉದ್ದಿಮೆಗಳ ಸಂಖ್ಯೆ ಇವುಗಳಿಗೆ ೨೦೧೧ನೇ ಜನಗಣತಿಯ ಅಂಕಿ ಅಂಶಗಳು ಲಭ್ಯವಿಲ್ಲದ ಕಾರಣ ೨೦೦೧ ರ ಜನಗಣತಿಯ ಅಂಕಿ ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಆವರಣದಲ್ಲಿರುವುದು ಶೇಕಡವಾರು ಪ್ರಮಾಣವನ್ನು ಸೂಚಿಸುತ್ತದೆ. ಅಲ್ಲದೇ ಕಂಪ್ಲಿ, ಕುರುಗೋಡು, ಕೊಟ್ಟೂರು ಹಾಗೂ ಹರಪನಹಳ್ಳಿ ತಾಲೂಕುಗಳು ಬಳ್ಳಾರಿ ಜಿಲ್ಲೆಗೆ ಹೊಸದಾಗಿ ಸೇರ್ಪಡೆಗೊಂಡ ಕಾರಣ ಆ ತಾಲೂಕುಗಳ ಸಾಮಾನ್ಯ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

ಮೂಲ: ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೇಂಗಳೂರು ಗವರ್ನ್‌ಮೆಂಟ್ ಆಫ್ ಕರ್ನಾಟಕ ೨೦೧೧.

ಜಿಲ್ಲೆಯ ಒಟ್ಟು ಶ್ರಮಶಕ್ತಿಯ ವಲಯವಾರು ವಿತರಣೆ ಮತ್ತು ಆ ವಿತರಣೆಯಲ್ಲಿ ೧೯೮೧ ರಿಂದ ೧೯೯೧ ರಲ್ಲಿ ಉಂಟಾದ ಬದಲಾವಣೆ ಅಭಿವೃದ್ಧಿ ದೃಷ್ಟಿಯಿಂದ ಅನುಕೂಲಕರವಾಗಿಲ್ಲ. ಪ್ರಾಥಮಿಕ ವಲಯ ಅಂದರೆ ಕೃಷಿ, ಗಣಿಗಾರಿಕೆ ಮತ್ತು ಮೀನುಗಾರಿಕೆ ಮುಂತಾದ ಕಸುಬುಗಳನ್ನು ಅವಲಂಬಿಸಿಕೊಂಡಿರುವ ಜನರ ಪ್ರಮಾಣ ಶೇ.೮೭.೦೧ ರಿಂದ ಶೇ.೮೭.೮೭ ಕ್ಕೆ ಏರಿದೆ. ಇದನ್ನು ಅಭಿವೃದ್ಧಿಯ ಪ್ರಮುಖ ಚಲನೆ ಎಂದು ಹೇಳಲಾಗಿದೆ. ಇದೇ ಸಮಯದಲ್ಲಿ ಅಂದರೆ ಕೈಗಾರಿಕೆ, ಯಂತ್ರೋದ್ಯಮ, ಇತ್ಯಾದಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣವು ಶೇ.೭.೧೧ ರಿಂದ ಶೇ.೪.೮೬ ಕ್ಕೆ ಇಳಿದಿದೆ. ಅತ್ಯಂತ ಆತಂಕಕಾರಿ ಸಂಗತಿಯೆಂದರೆ ಗಣಿಗಾರಿಕೆ ಬಳ್ಳಾರಿ ಜಿಲ್ಲೆಯ ಮುಖ್ಯ ಕಸುಬು. ಯಾವ ಪ್ರದೇಶ ಪ್ರಾಥಮಿಕ ವಲಯವನ್ನು ಹೆಚ್ಚು ಅವಲಂಬಿಸಿರುತ್ತದೆಯೋ ಆ ಪ್ರದೇಶವನ್ನು ಹಿಂದುಳಿದಿರುವ ಪ್ರದೇಶ ಎಂದು ಗ್ರಹಿಸಲಾಗಿದೆ. ಅಭಿವೃದ್ಧಿ ದೃಷ್ಟಿಯಿಂದ ದ್ವಿತೀಯ ಮತ್ತು ತೃತೀಯ ವಲಯದಲ್ಲಿ ಹೆಚ್ಚು ಅವಲಂಬಿತವಾಗಿದ್ದರೆ ಉತ್ತಮ ಬೆಳವಣಿಗೆ ಎಂದು ಹೇಳಬಹುದು. ಹೀಗೆ ಬಳ್ಳಾರಿ ಜಿಲ್ಲೆಯು ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಒಂದಾಗಿದೆ. ಜಿಲ್ಲೆಯ ಕೃಷಿಗೆ ತುಂಗಾಭದ್ರ ನದಿಯು ಪ್ರಮುಖವಾದ ನೀರಾವರಿಯ ಮೂಲವಾಗಿದೆ. ಈ ನದಿಯು ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ಮೇರೆಯಾಗಿದೆ. ಈ ನದಿಯಿಂದ ಇಡೀ ಜಿಲ್ಲೆಯು ನೀರಾವರಿ ಸಮಸ್ಯೆಗೆ ಪರಿಹಾರವಾಗಿಲ್ಲ. ಜಿಲ್ಲೆಯ ಕೆಲವೇ ತಾಲೂಕುಗಳಿಗೆ ನೀರಾವರಿ ದೊರಕಿದೆ. ಇದು ಜಿಲ್ಲೆಯ ಪೂರ್ವ ತಾಲೂಕುಗಳಿಗೆ ಮಾತ್ರ ಸೀಮಿತವಾಗಿದೆ. ಈ ತಾಲೂಕುಗಳು ಕೃಷಿಯಿಂದ ಅಭಿವೃದ್ಧಿಯ ಪಥದಲ್ಲಿವೆ. ಪಶ್ಚಿಮ ಭಾಗದ ತಾಲೂಕುಗಳು ಪೂರ್ತಿ ಒಣಭೂಮಿ ಕೃಷಿಯನ್ನು ಅವಲಂಬಿಸಿವೆ.

ಬಳ್ಳಾರಿ ಜಿಲ್ಲೆಯ ತಾಲೂಕುಗಳ ಸಾಮಾಜಿಕ, ಆರ್ಥಿಕ ವಿವರಗಳು

ಜಿಲ್ಲೆಯ ವಿವರಣೆ ಮತ್ತು ಆಯ್ಕೆ ನಂತರ ತಾಲೂಕುಗಳ ವಿವರಣೆಯನ್ನು ಅಂಕಿ–ಅಂಶಗಳ ಮೂಲಕ ನೋಡಲಾಗಿದೆ. ಪ್ರಸ್ತುತ ಜಿಲ್ಲೆಯು ೧೧ ತಾಲೂಕುಗಳನ್ನು ಹೊಂದಿದ್ದು, ಪ್ರಾದೇಶಿಕವಾಗಿ ಈ ತಾಲೂಕುಗಳನ್ನು ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ವಿಭಾಗಿಸಲಾಗಿದೆ. ಬಳ್ಳಾರಿ, ಶಿರುಗುಪ್ಪ, ಹೊಸಪೇಟೆ ಮತ್ತು ಸಂಡೂರು ತಾಲೂಕುಗಳನ್ನು ಪೂರ್ವ ತಾಲೂಕುಗಳೆಂದು ಮತ್ತು

ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಮತ್ತು ಹೂವಿನಹಡಗಲಿಯನ್ನು ಪಶ್ಚಿಮ ತಾಲೂಕುಗಳೆಂದು ಕರೆಯುವುದು ವಾಡಿಕೆಯಲ್ಲಿದೆ. ಪ್ರಾಕೃತಿಕವಾಗಿ ಮತ್ತು ಆರ್ಥಿಕವಾಗಿ ಪೂರ್ವ ತಾಲೂಕುಗಳು ಸಮೃದ್ಧಿಯಾದ ಪ್ರದೇಶಗಳಾಗಿದ್ದು ಈ ತಾಲೂಕುಗಳು ಅಭಿವೃದ್ಧಿಯ ಎಲ್ಲಾ ಸವಲತ್ತುಗಳನ್ನು ಅಧಿಕವಾಗಿ ಪಡೆದುಕೊಂಡಿವೆ. ಜಿಲ್ಲೆಯ ಪಶ್ಚಿಮ ಭಾಗದ ತಾಲೂಕುಗಳು ಪೂರ್ತಿ ಬಯಲು ಪ್ರದೇಶ ಮತ್ತು ಒಣಭೂಮಿ ಕೃಷಿಯನ್ನು ಹೊಂದಿದ ಪ್ರದೇಶಗಳಾಗಿವೆ. ಪೂರ್ವ ತಾಲೂಕುಗಳು ಜಿಲ್ಲಾ ಕೇಂದ್ರಕ್ಕೆ ಹತ್ತಿರವಾಗಿದ್ದು ಮತ್ತು ಹೆಚ್ಚು ನೀರಾವರಿ ಕೃಷಿಯನ್ನು ಹೊಂದಿವೆ. ಇದಕ್ಕೆ ವಿರುದ್ಧವಾಗಿ ಪಶ್ಚಿಮ ತಾಲೂಕುಗಳು ಜಿಲ್ಲೆಯಿಂದ ದೂರವಿದ್ದು, ಹೆಚ್ಚು ಒಣಭೂಮಿ ಕೃಷಿಯನ್ನು ಹೊಂದಿವೆ. ಇದಕ್ಕೆ ವಿರುದ್ಧವಾಗಿ ಪಶ್ಚಿಮ ತಾಲೂಕುಗಳು ಜಿಲ್ಲೆಯಿಂದ ದೂರವಿದ್ದು, ಹೆಚ್ಚು ಒಣಭೂಮಿ ಕೃಷಿಯನ್ನು ಹೊಂದಿದೆ. ದೊಡ್ಡ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಪೂರ್ವಭಾಗದ ತಾಲೂಕುಗಳಲ್ಲಿ ೧೯ ಘಟಕಗಳನ್ನು ಹೊಂದಿದ್ದರೆ, ಪಶ್ಚಿಮ ಭಾಗದ ತಾಲೂಕುಗಳಲ್ಲಿ ಒಂದೇ ಒಂದು ಘಟಕವಿದೆ. ಗಣಿಗಾರಿಕೆ ಚಟುವಟಿಕೆಗಳೂ ಸಹ ಪೂರ್ವಭಾಗಕ್ಕೆ ಸೀಮಿತವಾಗಿವೆ. ಪಶ್ಚಿಮ ತಾಲೂಕುಗಳಲ್ಲಿ ಯಾವುದೇ ಗಣಿಗಾರಿಕೆ ಚಟುವಟಿಕೆಗಳು ಇರುವುದಿಲ್ಲ. ಅಂದರೆ ಪಶ್ಚಿಮ ತಾಲೂಕುಗಳಲ್ಲಿ ಹೆಚ್ಚು ಕೃಷಿಯನ್ನು ಅವಲಂಬಿಸಿದ್ದಾರೆ. ಈ ಎಲ್ಲಾ ವಿವರಗಳನ್ನು ನೋಡಿದಾಗ ಪೂರ್ವಭಾಗದ ತಾಲೂಕುಗಳು ಅಭಿವೃದ್ಧಿಯ ಪ್ರದೇಶಗಳೆಂದು ಪಶ್ಚಿಮ ಭಾಗದ ತಾಲೂಕುಗಳನ್ನು ಹಿಂದುಳಿದ ಪ್ರದೇಶಗಳೆಂದು ಗುರುತಿಸಬಹುದು.

ತಾಲೂಕುಗಳಲ್ಲಿ ದುಡಿಮೆ ವರ್ಗ


ಒಂದು ಪ್ರದೇಶದ ಅಭಿವೃದ್ಧಿಯು ಅಲ್ಲಿ ವಾಸಿಸುತ್ತಿರುವ ಜನತೆಯ ದುಡಿಮೆಯ ಮೇಲೆ ನಿರ್ಧರಿತವಾಗುತ್ತದೆ. ಜಿಲ್ಲೆಯ ಹೆಚ್ಚು ಶ್ರಮಶಕ್ತಿಯು ಪ್ರಾಥಮಿಕ ವಲಯವನ್ನು ಅವಲಂಬಿಸಿರುವುದರಿಂದ ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಇದು ಒಂದಾಗಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಹಾಗೆಯೆ ಜಿಲ್ಲೆಯ ತಾಲೂಕುಗಳಲ್ಲಿ ಶ್ರಮಶಕ್ತಿ ವಯಲವಾರು ರಚನೆ ಮತ್ತು ದುಡಿಮೆ ವರ್ಗಗಳ ವಿವರಗಳನ್ನು ನೋಡಿದಾಗ ಯಾವ ತಾಲೂಕುಗಳು ಅಭಿವೃದ್ಧಿ ಹೊಂದಿವೆ ಮತ್ತು ಹಿಂದುಳಿದಿವೆ ಎಂಬುದನ್ನು ಸ್ಪಷ್ಟವಾಗುತ್ತದೆ. ಈ ದುಡಿಮೆ ವರ್ಗವನ್ನು ಅಂಕಿ ಅಂಶಗಲ ಮೂಲಕ ನೋಡಿದಾಗ ಜಿಲ್ಲೆಯಲ್ಲಿ ಕೃಷಿಯು ಪ್ರಧಾನ ಕಸುಬಾಗಿದೆ. ಜಿಲ್ಲೆಯ ಪಶ್ಚಿಮ ಭಾಗದ ತಾಲೂಕುಗಳಾದ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ಮತ್ತು ಹಡಗಲಿ ತಾಲೂಕುಗಳು ಇಡಿ ರಾಜ್ಯದಲ್ಲಿ ಕ್ರಮವಾಗಿ ಶೇ.೯೩.೪೪, ೮೬.೩೫ ಮತ್ತು ೮೫.೧೧ ಸ್ಥಾನಗಳನ್ನು ಪಡೆದಿವೆ. ಪೂರ್ತಿ ಒಣಭೂಮಿ ಹೊಂದಿರುವ ಈ ತಾಲೂಕುಗಳು ಕೃಷಿ ಅವಲಂಬನೆಯನ್ನು ನೋಡಿದರೆ ಸ್ಪಷ್ಟವಾಗಿ ಈ ತಾಲೂಕುಗಳು ಜಿಲ್ಲೆಯಲ್ಲಿ ಹಿಂದುಳಿದಿರುವ ತಾಲೂಕುಗಳೆಂದು ಗುರುತಿಸಬಹುದು. ಪೂರ್ವ ತಾಲೂಕುಗಳಲ್ಲಿ ಕೃಷಿ ಅವಲಂಬನೆ ಇದ್ದರೂ ನೀರಾವರಿ ಪ್ರದೇಶವಾಗಿದ್ದರಿಂದ ಹೆಚ್ಚು ಆದಾಯ ಬರುತ್ತದೆ. ತಾಲೂಕುಗಳ ವಲಯವಾರು ಅಂಕಿ-ಅಂಶಗಳನ್ನು ನೋಡಿದಾಗ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಸಿರುಗುಪ್ಪ, ಹಡಗಲಿ ಮತ್ತು

ಸಂಡೂರುಗಳಲ್ಲಿ ಪ್ರಾಥಮಿಕ ವಲಯದಲ್ಲಿ ಹೆಚ್ಚು ಅವಲಂಬಿತರಾಗಿದ್ದಾರೆ. ಈ ತಾಲೂಕುಗಳಲ್ಲಿ ಸಿರುಗುಪ್ಪ ತಾಲೂಕು ಮಾತ್ರ ನೀರಾವರಿ ಪ್ರದೇಶವಾಗಿದ್ದು ಉಳಿದ ನಾಲ್ಕು ತಾಲೂಕುಗಳು ಒಣಭೂಮಿ ಪ್ರದೇಶಗಳಾಗಿವೆ. ಜಿಲ್ಲೆಯ ಸರಾಸರಿಗಿಂತ ಶೇ.೧೦ ರಷ್ಟು ಅಧಿಕ ಪ್ರಮಾಣವನ್ನು ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಹಡಗಲಿ ಮತ್ತು ಸಿರುಗುಪ್ಪ ತಾಲೂಕುಗಳು ಪ್ರಾಥಮಿಕ ವಲಯವನ್ನು ಅವಲಂಬಿಸಿದ್ದಾರೆ. ಬಳ್ಳಾರಿ ಮತ್ತು ಹೊಸಪೇಟೆ ತಾಲೂಕುಗಳು ಜಿಲ್ಲೆಯ ಸರಾಸರಿಗಿಂತ ಕಡಿಮೆ ಪ್ರಮಾಣವನ್ನು ಪ್ರಾಥಮಿಕ ವಲಯವನ್ನು ಅವಲಂಬಿಸಿದ್ದಾರೆ ದ್ವಿತೀಯ ಮತ್ತು ತೃತೀಯ ವಲಯದಲ್ಲಿ ಬಳ್ಳಾರಿ ಮತ್ತು ಹೊಸಪೇಟೆ ಅಗ್ರಸ್ತಾನದಲ್ಲಿದೆ. ಈ ವಲಯವಾರು ನೋಡಿದಾಗ ತಾಲೂಕುಗಳು ಜಿಲ್ಲೆಯ ಸರಾಸರಿಗಿಂತ ಹೆಚ್ಚು ಉನ್ನತ ಸ್ಥಾನದಲ್ಲಿದೆ. ಉಳಿದ ತಾಲೂಕುಗಳು ಜಿಲ್ಲೆಯ ಸರಾಸರಿಗಿಂತ ಶೇ.೧೦ ರಷ್ಟು ಕಡಿಮೆ ಇರುವುದು ಕಂಡು ಬರುತ್ತದೆ. ಹೀಗೆ ಹೊಸಪೇಟೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ತಾಲೂಕು.

ಕೋಷ್ಟಕ ೨.೨, ಬಳ್ಳಾರಿ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪರಿಶಿಷ್ಟ ಪಂಗಡದ ಒಟ್ಟು ಕೃಷಿ ಕಾರ್ಮಿಕರ ವಿವರ

			ಒಟ್ಟು	ಗಂಡು	ಹೆಣ್ಣು
೧	ಕೃಷಿ ಕಾರ್ಮಿಕ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ	ಗ್ರಾಮೀಣ	೨೨,೧೧೨	೧೦,೧೮೨	೧೧,೯೩೦
		ನಗರ	೮೪೪	೪೪೫	೩೯೯
		ಒಟ್ಟು	೨೨,೯೫೬	೧೦,೬೨೭	೧೨,೩೨೯

(ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್ಸ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು, ಗವರ್ನ್‌ಮೆಂಟ್ ಆಫ್ ಕರ್ನಾಟಕ ೨೦೧೧.)



ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಇಲ್ಲಿ ಸ್ಪಷ್ಟವಾಗುವ ಅಂಶವೇನೆಂದರೆ, ಬಳ್ಳಾರಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಕೃಷಿ ಕಾರ್ಮಿಕರ ಒಟ್ಟು ಚಿತ್ರಣವನ್ನು ನೀಡುತ್ತದೆ. ಕೃಷಿಯನ್ನು ಅವಲಂಭಿಸಿದ ಗ್ರಾಮೀಣ ಪ್ರದೇಶ ಕೃಷಿ ಕಾರ್ಮಿಕರ ಒಟ್ಟು ೨೨,೧೧೨ ಇದ್ದು, ಅದರಲ್ಲಿ ಗಂಡು ೧೦,೧೮೨, ಅಂದರೆ ಶೇ. ೪೬.೦೪ರಷ್ಟಿದೆ. ಹೆಣ್ಣು ೧೧,೯೩೦, ಅಂದರೆ ಶೇ. ೫೩.೯೫ರಷ್ಟಿರುವುದನ್ನು ಕಾಣಬಹುದು. ಕೃಷಿಯನ್ನು ಅವಲಂಭಿಸಿದ ನಗರ ಪ್ರದೇಶ ಕೃಷಿ ಕಾರ್ಮಿಕರ ಒಟ್ಟು ೮೪೪ ಇದ್ದು, ಅದರಲ್ಲಿ ಗಂಡು ೪೪೫, ಅಂದರೆ ಶೇ. ೫೨..೭೨ರಷ್ಟಿದೆ. ಹೆಣ್ಣು ೩೯೯, ಅಂದರೆ ಶೇ. ೪೭.೨೭ರಷ್ಟಿರುವುದನ್ನು ಕಾಣಬಹುದು.

ನೀರಾವರಿ ಮತ್ತು ಒಣಭೂಮಿ ಹೊಂದಿದ ತಾಲೂಕುಗಳು

ಜಿಲ್ಲೆಯ ಪ್ರಮುಖ ನೀರಾವರಿ ಮೂಲಗಳೆಂದರೆ, "ತುಂಗಾಭದ್ರ ನದಿ, ನಾರಿಹಳ್ಳಿ ಜಲಾಶಯ, ಕೆರೆ ಮತ್ತು ಕೊಳವೆ ಬಾವಿಗಳಾಗಿವೆ. ಜಿಲ್ಲೆಯ ಕೆಲವೇ ತಾಲೂಕುಗಳು ತುಂಗಾಭದ್ರ ಕಾಲುವೆ ನೀರನ್ನು ಸಮೃದ್ಧಿಯಾಗಿ ಪಡೆದುಕೊಂಡಿದ್ದರೆ, ಕೆಲವು ತಾಲೂಕುಗಳು ಈ ನೀರಿನಿಂದ ವಂಚಿತವಾಗಿದೆ. ಈ ನದಿಯ ನೀರಾವರಿ ಸಾಮರ್ಥ್ಯ ೧೩ ಲಕ್ಷ ಎಕರೆಗಳು ಇದ್ದು, ಇದರಲ್ಲಿ ಬಳ್ಳಾರಿ ಜಿಲ್ಲೆಯ ಪಾಲು ಕೇವಲ ೩.೧ ಲಕ್ಷ ಎಕರೆಗಳು ಮಾತ್ರ. ಇತರೆ ಜಿಲ್ಲೆ ಮತ್ತು ಆಂಧ್ರಪ್ರದೇಶ ರಾಜ್ಯದ ಪಾಲು ೯.೯ ಲಕ್ಷ ಎಕರೆಯಾಗಿದೆ." (ಶೇಷಾದ್ರಿ ಬಿ: ೧೯೯೮:೨೪). ಜಿಲ್ಲೆಯ ಪೂರ್ವ ತಾಲೂಕುಗಳಾದ ಬಳ್ಳಾರಿ ಹೊಸಪೇಟೆ ಮತ್ತು ಸಿರುಗುಪ್ಪ ಪ್ರದೇಶಗಳು ತುಂಗಾಭದ್ರ ನದಿ ನೀರಿನಿಂದ ಸಮೃದ್ಧಿಯಾಗಿವೆ. ಕೂಡ್ಲಿಗಿ ಮತ್ತು ಹಡಗಲಿ ತಾಲೂಕುಗಳು ಯಾವ ನದಿ ನೀರನ್ನು ಅವಲಂಬಿಸದೇ ಮಳೆಯನ್ನೇ ಆಶ್ರಯಿಸಿ ಕೃಷಿಯನ್ನು ನಡೆಸುತ್ತಿವೆ. ಸಂಡೂರು ಸ್ವಲ್ಪ ಪ್ರಮಾಣದಲ್ಲಿ ಕಾಲುವೆ ನೀರನ್ನು ಹೊಂದಿದೆ. ಒಟ್ಟು ಜಿಲ್ಲೆಯ ೧.೫೧,೭೯೬ (೩೦,೪೦%) ಹೆಕ್ಟೇರ್‌ಗಳಷ್ಟು ನೀರಾವರಿ ಪ್ರದೇಶವನ್ನು ಹೊಂದಿದ್ದು, ಇದರಲ್ಲಿ ಅತಿ ಹೆಚ್ಚು ನೀರಾವರಿ ಪ್ರದೇಶವನ್ನು ಹೊಸಪೇಟೆ ತಾಲೂಕು ೨೩೦೦೭ (೫೮.೬೧%) ಹೆಕ್ಟೇರುಗಳಷ್ಟು ಹೊಂದಿದೆ. ಅತಿ ಕಡಿಮೆ ನೀರಾವರಿ ಪ್ರದೇಶವನ್ನು ಕೂಡ್ಲಿಗಿ ತಾಲೂಕು ೮೫೦೧ (೯.೮೫%) ಹೊಂದಿದೆ." (ಶೇಷಾದ್ರಿ ಬಿ: ೧೯೯೮:೨೭).

ತಾಲೂಕುವಾರು ನೀರಾವರಿ ಪ್ರದೇಶವನ್ನು ನೋಡಿದಾಗ ಪೂರ್ವ ತಾಲೂಕುಗಳಾದ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳು ಮಳೆಯನ್ನೇ ಆಶ್ರಯಿಸಿದ ಅಭಾವದ ಪ್ರದೇಶಗಳಾಗಿವೆ. ನಿರಾವರಿ ದೃಷ್ಟಿಯಿಂದ ಪೂರ್ವ ತಾಲೂಕುಗಳು ಸಮೃದ್ಧಿಯಾಗಿದ್ದರೆ ಪಶ್ಚಿಮ ತಾಲೂಕುಗಳು ಅಭಾವದ ತಾಲೂಕುಗಳಾಗಿವೆ. ಎರಡು ಭಾಗಗಳಲ್ಲಿ ಕೃಷಿ ಪ್ರಧಾನ ಉದ್ಯೋಗವಾಗಿದ್ದರೂ ನೀರಾವರಿ ಕೃಷಿಯಿಂದ ಬರುವ ವರಮಾನ ಹೆಚ್ಚಾಗಿರುತ್ತದೆ. ಹಾಗಾಗಿ ಒಣಭೂಮಿಯ ಪ್ರದೇಶಗಳಿಂದ ಬರುವ ಆರ್ಥಿಕ ವರಮಾನ ಕಡಿಮೆಯಾಗಿರುತ್ತದೆ. ಅಧ್ಯಯನದ ದೃಷ್ಟಿಯಿಂದ ಜಿಲ್ಲೆಯಲ್ಲಿ ಅತಿ ಹೆಚ್ಚು ನೀರಾವರಿ ಪ್ರದೇಶವನ್ನು ಹೊಂದಿದ ಹೊಸಪೇಟೆ ತಾಲೂಕನ್ನು ಹಾಗೂ ಅತಿ ಹೆಚ್ಚು ಒಣಭೂಮಿ ಪ್ರದೇಶವನ್ನು ಹೊಂದಿದ ಕೂಡ್ಲಿಗಿ ತಾಲೂಕನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ತಾಲೂಕುಗಳ ಸಾಕ್ಷರತಾ ಅಂಕಿ-ಅಂಶಗಳು

ಒಂದು ಪ್ರದೇಶದ ಅಭಿವೃದ್ಧಿಯನ್ನು ನಿರ್ಧರಿಸುವ ಬಹುಮುಖ್ಯ ಅಂಶವೆಂದರೆ ಸಾಕ್ಷರತೆ ಪ್ರಮಾಣ. "ಜಿಲ್ಲೆಯ ತಾಲೂಕುಗಳಲ್ಲಿ ಅತಿ ಹೆಚ್ಚು ಸಾಕ್ಷರತೆಯನ್ನು ಬಳ್ಳಾರಿ ತಾಲೂಕು ಹೊಂದಿದ್ದರೆ, ಅತಿ ಕಡಿಮೆ ಸಾಕ್ಷರತೆಯನ್ನು ಶಿರುಗುಪ್ಪ ತಾಲೂಕು ಹೊಂದಿದೆ. ಸಿರುಗುಪ್ಪ ತಾಲೂಕು ನಿರಾವರಿ ಪ್ರದೇಶವಾದರೂ ಸಾಕ್ಷರತೆಯಲ್ಲಿ ಜಿಲ್ಲೆಯಲ್ಲೇ ಕೊನೆಯ ಸ್ಥಾನದಲ್ಲಿದೆ. ಜಿಲ್ಲೆಯ ಸಾಕ್ಷರತೆ ಪ್ರಮಾಣದ ಸರಾಸರಿಗಿಂತ ಹೊಸಪೇಟೆ ಮತ್ತು ಬಳ್ಳಾರಿ ತಾಲೂಕುಗಳು ಹೆಚ್ಚು ಇದ್ದು, ಸಾಕ್ಷರತೆಯಲ್ಲಿ ಈ ತಾಲೂಕುಗಳು ಉತ್ತಮ ಸ್ಥಿತಿಯಲ್ಲಿವೆ. ಕೂಡ್ಲಿಗಿ ತಾಲೂಕು ಜಿಲ್ಲೆಯ ಸಾಕ್ಷರತಾ ಸರಾಸರಿಗೆ ಸ್ವಲ್ಪ ಕಡಿಮೆ ಹೊಂದಿದೆ. ಉಳಿದ ತಾಲೂಕುಗಳು ಜಿಲ್ಲೆಯ ಸರಾಸರಿಗಿಂತ ಬಹಳ ಕಡಿಮೆ ಹೊಂದಿದೆ. ಸಾಕ್ಷರತೆಯಲ್ಲಿ ಶೇ.೧೫ ರಷ್ಟು ಅಂತರವಿದೆ. ೨೦೧೧ರ ಜನಗಣತಿ ಅನ್ವಯ ತಾಲೂಕುವಾರು ಸಾಕ್ಷರತೆ ಪ್ರಮಾಣದಲ್ಲಿ ಹೊಸಪೇಟೆ ಒಂದನೇ ಸ್ಥಾನ, ಬಳ್ಳಾರಿ ಎರಡನೆ ಸ್ಥಾನ, ಮೂರನೇ ಸ್ಥಾನ ಕೂಡ್ಲಿಗಿ, ನಾಲ್ಕನೇ ಸ್ಥಾನ ಹಗರಿಬೊಮ್ಮನಹಳ್ಳಿ, ಐದನೇ ಸ್ಥಾನ ಹಡಗಲಿ, ಆರನೇ ಸ್ಥಾನ ಸಂಡೂರು ಮತ್ತು ಸಿರುಗುಪ್ಪ ಕೊನೆಯ ಏಳನೇ ಸ್ಥಾನವನ್ನು ಹೊಂದಿದೆ." (ಗೌರ್‍ನಮೆಂಟ್ ಆಪ್ ಕರ್ನಾಟಕ: ೨೦೦೨:೧೦೬). ಪೂರ್ವ ತಾಲೂಕುಗಳಲ್ಲಿ ಸಾಕ್ಷರತೆ ಪ್ರಮಾಣ ಉತ್ತಮವಾಗಿದ್ದರೆ, ಪಶ್ಚಿಮ ತಾಲೂಕುಗಳಲ್ಲಿ ಅತಿ ಹೆಚ್ಚು ಸಾಕ್ಷರತೆಯನ್ನು ಕೂಡ್ಲಿಗಿ ಹೊಂದಿದೆ. ಹಗರಿಬೊಮ್ಮನಹಳ್ಳಿ ೨ನೇ ಸ್ಥಾನದಲ್ಲಿದೆ. ಒಟ್ಟಾರೆ ಜಿಲ್ಲೆಯ ತಾಲೂಕುಗಳು ಸಾಕ್ಷರತೆ ಅಂಕಿ-ಅಂಶಗಳನ್ನು ನೋಡಿದಾಗ ಪೂರ್ವ ತಾಲೂಕುಗಳು ಸಾಕ್ಷರತೆಯ ಪ್ರಮಾಣದಲ್ಲಿ ಸುಸ್ಥಿತಿಯಲ್ಲಿವೆ. ಪಶ್ಚಿಮ ತಾಲೂಕುಗಳು ಸಾಕ್ಷರತೆಯ ದೃಷ್ಟಿಯಿಂದ ಪ್ರಗತಿ ಸಾಧಿಸಬೇಕಾಗಿದೆ. ಸಾಕ್ಷರತೆಯಲ್ಲಿಯು ಪೂರ್ವ ತಾಲೂಕುಗಳು ಉತ್ತಮ ಸ್ಥಿತಿಯಲ್ಲಿವೆ. ಪಶ್ಚಿಮ ತಾಲೂಕುಗಳು ಸಾಕ್ಷರತೆಯಲ್ಲಿ ಹಿಂದುಳಿದಿವೆ. ಆದ್ದರಿಂದ ಅಧ್ಯಯನಕ್ಕೆ ಪೂರ್ವಭಾಗದ ತಾಲೂಕುಗಳಲ್ಲಿ ಅಧಿಕ ಸಾಕ್ಷರತೆ ಹೊಂದಿರುವ ಹೊಸಪೇಟೆ ತಾಲೂಕನ್ನು ಪಶ್ಚಿಮ ಭಾಗದ ಕೂಡ್ಲಿಗಿ ತಾಲೂಕುನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

೨.೨.೧ ಹೊಸಪೇಟೆ ತಾಲೂಕು ಪರಿಚಯ

ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ ಪ್ರಮುಖ ತಾಲೂಕು ಹಾಗೂ ಉಪವಿಭಾಗವಾಗಿದೆ. ತಾಲೂಕಿನಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ ಜಿಲ್ಲೆಯಲ್ಲಿ ಹೆಚ್ಚು ನೀರಾವರಿ ಪ್ರದೇಶವನ್ನು ಹೊಂದಿದ್ದು ಮಧ್ಯಮ ಗಾತ್ರದ ಕಬ್ಬಿಣ ಮತ್ತು ಉಕ್ಕು ಉದ್ಯಮಗಳನ್ನು ಮತ್ತು ಗಣಿಗಾರಿಕೆಯನ್ನು ಹೊಂದಿದೆ. "ತಾಲೂಕಿನ ಪೂರ್ವಭಾಗದ ಗ್ರಾಮಗಳು ಹೆಚ್ಚು ನೀರಾವರಿ ಪ್ರದೇಶಗಳಾಗಿವೆ. ಈ ಭಾಗದಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳು ಅಧಿಕವಾಗಿದೆ. ಇದರಿಂದ ಹೊಸಪೇಟೆ ಮಾರುಕಟ್ಟೆ ವ್ಯವಹಾರವನ್ನು ಹೆಚ್ಚಿಸಿದೆ. ತಾಲೂಕಿನಲ್ಲಿ ನೀರಾವರಿ ಪ್ರದೇಶ ಕೆಲವೇ ಪ್ರದೇಶಕ್ಕೆ ಸೀಮಿತವಾಗಿದೆ. ತಾಲೂಕಿನ ಉತ್ತರ ಭಾಗದಲ್ಲಿರುವ ತುಂಗಾಭದ್ರ ನದಿ ನೀರಾವರಿಯ ಪ್ರಮುಖ ಮೂಲವಾಗಿದೆ. ಹೆಚ್ಚು ವಿಶಾಲವಾಗಿರುವ ಈ ತಾಲೂಕು ಈಶಾನ್ಯದಲ್ಲಿ ಶಿರುಗುಪ್ಪ, ಪೂರ್ವದಲ್ಲಿ ಬಳ್ಳಾರಿ, ದಕ್ಷಿಣದಲ್ಲಿ

ಸಂಡೂರು, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ, ಗಂಗಾವತಿ ತಾಲೂಕುಗಳನ್ನು ಸುತ್ತುವರಿದಿದೆ. ಹೊಸಪೇಟೆ ಉಪವಿಭಾಗವು ನಾಲ್ಕು ತಾಲೂಕುಗಳನ್ನು ಹೊಂದಿದೆ. ತಾಲೂಕು ಒಟ್ಟು ೭೮ (೧,೫೩,೪೯) ಗ್ರಾಮಗಳನ್ನು ಹೊಂದಿದೆ." (ಚಂದ್ರಶೇಖರ್ ಟಿ ಆರ್: ೧೯೯೪:೩೬).ಈ ತಾಲೂಕು ಹೊಸಪೇಟೆ ಸೇರಿದಂತೆ ಮರಿಯಮ್ಮನಹಳ್ಳಿ, ಕಮಲಾಪುರ ಮತ್ತು ಕಂಪ್ಲಿ ಹೋಬಳಿಗಳನ್ನು ಹೊಂದಿದೆ. ಜಿಲ್ಲೆಯ ಪೂರ್ವ ಭಾಗದ ಪ್ರಮುಖ ತಾಲುಕು ಹಾಗೂ ಅಭಿವೃದ್ಧಿ ಪ್ರದೇಶವಾಗಿದೆ. ಕೃಷಿ ಮತ್ತು ಕೈಗಾರಿಕೆ ವಲಯದಲ್ಲಿ ತಾಲೂಕು ಪ್ರಗತಿ ಪಥದಲ್ಲಿದೆ.

ಜನಸಂಖ್ಯೆ ಸಾಕ್ಷರತೆ ಇತ್ಯಾದಿ ವಿವರಗಳು


ಹೊಸಪೇಟೆ ತಾಲೂಕು ೨೦೧೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೩,೭೪,೯೪೯ ರಷ್ಟು ಹೊಂದಿದ್ದು, ಇದರಲ್ಲಿ ಪುರುಷರು ೧,೮೯,೬೭೪ (೫೦.೫೮%) ಮತ್ತು ಮಹಿಳೆಯರು ೧,೮೫,೨೭೫ (೪೯.೪೧%) ರಷ್ಟಿದ್ದಾರೆ. ಜಿಲ್ಲೆಯ ತಾಲೂಕಿನ ಪಾಲು ಶೇ.೧೯.೮ ರಷ್ಟಿದೆ. ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು, ಜಿಲ್ಲೆಯ ಎರಡನೇ ತಾಲೂಕಾಗಿದೆ. ಜಾತಿವಾರು ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ಶೇ ೫.೬ರಷ್ಟು ಹೊಂದಿದ್ದು, ಜಿಲ್ಲೆಯಲ್ಲಿ ೫ನೇ ಸ್ಥಾನದಲ್ಲಿದೆ. ಜಿಲ್ಲೆಯ ಸರಾಸರಿಗಿಂತ ಶೇ ೨.೬ರಷ್ಟು ಹೆಚ್ಚಿದೆ. ತಾಲೂಕಿನ ಸಾಕ್ಷರರ ವಿವರವನ್ನು ನೋಡಿದಾಗ ಜಿಲ್ಲೆಯಲ್ಲಿ ಅತಿ ಹೆಚ್ಚು ಎಂದರೆ ಶೇ.೬೦.೬೧ ರಷ್ಟು ಸಾಕ್ಷರತೆಯನ್ನು ಹೊಂದಿದೆ. ಜಿಲ್ಲೆಯ ಸರಾಸರಿಗಿಂತ ಶೇ.೩ ರಷ್ಟು ಹೆಚ್ಚು ಸಾಕ್ಷರರನ್ನು ಹೊಂದಿದೆ. ಸಾಕ್ಷರತೆಯ ದೃಷ್ಟಿಯಿಂದ ತಾಲೂಕು ಜಿಲ್ಲೆಯ ಸರಾಸರಿಗಿಂತ ಉತ್ತಮ ಸ್ಥಿತಿಯಲ್ಲಿದೆ. ತಾಲೂಕು ವಿಸ್ತೀರ್ಣ ೯೦೪.೧೭ ಚ.ಕಿ.ಮೀ ಗಳಷ್ಟಿದ್ದು ವಿಸ್ತೀರ್ಣದಲ್ಲಿ ಒಟ್ಟು ಜಿಲ್ಲೆಯ ತಾಲೂಕಿನ ಪಾಲು ಶೇ.೧೦.೭೦ ರಷ್ಟು ಪ್ರಮಾಣವನ್ನು ಹೊಂದಿದೆ.ತಾಲೂಕು ಒಟ್ಟು ೭೦.೭೧೯ ಕುಟುಂಬಗಳನ್ನು ಹೊಂದಿದೆ.

ಕೋಷ್ಟಕ ೨.೩ ಹೊಸಪೇಟೆ ತಾಲೂಕಿನ ಪರಿಶಿಷ್ಟ ಪಂಗಡದ ಕೃಷಿ ಕಾರ್ಮಿಕರ ವಿವರ					
೧	**ಕೃಷಿ ಕಾರ್ಮಿಕ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ**		**ಒಟ್ಟು**	**ಗಂಡು**	**ಹೆಣ್ಣು**
		ಗ್ರಾಮೀಣ	೮೧೫೦	೩೭೨೧	೪೪೨೯
		ನಗರ	೩೫೧೧	೨೧೦೬	೧೪೦೫
		ಒಟ್ಟು	**೧೧,೬೬೧**	**೫೮೨೭**	**೫೮೩೪**

(ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್ಸ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು, ಗವರ್ನ್‌ಮೆಂಟ್ ಆಫ್ ಕರ್ನಾಟಕ ೨೦೧೧.)

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಇಲ್ಲಿ ಸ್ಪಷ್ಟವಾಗುವ ಅಂಶವೇನೆಂದರೆ, ಹೊಸಪೇಟೆ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಕೃಷಿ ಕಾರ್ಮಿಕರ ಒಟ್ಟು ಚಿತ್ರಣವನ್ನು ನೀಡುತ್ತದೆ. ಕೃಷಿಯನ್ನು ಅವಲಂಭಿಸಿದ ಗ್ರಾಮೀಣ ಪ್ರದೇಶ ಕೃಷಿ ಕಾರ್ಮಿಕರ ಓಟ್ಟು ೮೧೫೦ ಇದ್ದು, ಅದರಲ್ಲಿ ಗಂಡು

೩೭೨೧, ಅಂದರೆ ಶೇ. ೪೫.೬೫ರಷ್ಟಿದೆ. ಹೆಣ್ಣು ೪೪೨೯, ಅಂದರೆ ಶೇ. ೫೪.೩೪ರಷ್ಟಿರುವುದನ್ನು ಕಾಣಬಹುದು. ಕೃಷಿಯನ್ನು ಅವಲಂಭಿಸಿದ ನಗರ ಪ್ರದೇಶ ಕೃಷಿ ಕಾರ್ಮಿಕರ ಒಟ್ಟು ೩೫೧೧ ಇದ್ದು, ಅದರಲ್ಲಿ ಗಂಡು ೨೧೦೬, ಅಂದರೆ ಶೇ. ೫೯..೯೮ರಷ್ಟಿದೆ. ಹೆಣ್ಣು ೧೪೦೫, ಅಂದರೆ ಶೇ. ೪೦.೦೫ರಷ್ಟಿರುವುದನ್ನು ಕಾಣಬಹುದು. ಒಟ್ಟಾರೆಯಾಗಿ ಹೊಸಪೇಟೆ ಪರಿಶಿಷ್ಟ ಪಂಗಡದ ಕೃಷಿ ಕಾರ್ಮಿಕರ ಪ್ರಮಾಣ ನಗರದಲ್ಲಿ ಪುರುಷರ ಪ್ರಮಾಣ ಹೆಚ್ಚಿದ್ದರೆ, ಗ್ರಾಮೀಣದಲ್ಲಿ ಮಹಿಳೆಯರ ಪ್ರಮಾಣ ಅಧಿಕವಿರುವುದನ್ನು ಗುರುತಿಸಬಹುದು.



೨.೨.೨ ಕೂಡ್ಲಿಗಿ ತಾಲೂಕು ಪರಿಚಯ

ಕರ್ನಾಟಕ ರಾಜ್ಯದಲ್ಲಿನ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು, ಇದು ಕೂಡ್ಲಿಗಿಯು ಜಿಲ್ಲೆಯಿಂದ ಪಶ್ಚಿಮಕ್ಕೆ ೮೦ ಕಿ.ಮೀ ದೂರದಲ್ಲಿದೆ. ೨೦೧೧ರ ಜನಗಣತಿಯ ಪ್ರಕಾರ ಕೂಡ್ಲಿಗಿಯ ಜನಸಂಖ್ಯೆಯನ್ನು ೨,೭೨,೧೮೩ ರಷ್ಟು ಹೊಂದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿಯು ಹಿಂದುಳಿದ ತಾಲೂಕುಗಳಲ್ಲಿ ಒಂದಾಗಿದೆ. ಹೊಸಪೇಟೆ ಉಪವಿಭಾಗಕ್ಕೆ ಸೇರಿದ ಈ ತಾಲೂಕು ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಅವುಗಳಲ್ಲಿ ಕೂಡ್ಲಿಗಿ ಮತ್ತು ಕೊಟ್ಟೂರು ತಾಲೂಕು ಪಟ್ಟಣ ಪಂಚಾಯತಿಯನ್ನು ಹೊಂದಿದ್ದು, ಈ ತಾಲೂಕು ಪೂರ್ತಿ ಒಣಭೂಮಿ ಪ್ರದೇಶವನ್ನು ಒಳಗೊಂಡಿದೆ. ಶೇ.೮೦ಕ್ಕೂ ಹೆಚ್ಚು ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಇನ್ನೂ ಕೃಷಿಯೇತರ ಚಟುವಟಿಕೆಗಳಾದ ಹೈನುಗಾರಿಕೆ, ಕುರಿ ಸಾಕಾಣಿಕೆ ಮತ್ತು ನೇಕಾರಿಕೆ ಕಸುಬುಗಳು ಪ್ರಾಚೀನ ಕಾಲದಿಂದಲೂ ಬೆಳದು ಬಂದಿದೆ. ಇದು ಕೃಷಿಯನ್ನು ಅವಲಂಬಿಸಿರುವ ರಾಜ್ಯದ ೩ನೇ ತಾಲೂಕಾಗಿದೆ. ಮಳೆಯನ್ನೇ ನಂಬಿ ಕೃಷಿಯನ್ನು ಇಲ್ಲಿನ ಜನತೆ ಅವಲಂಬಿತರಾಗಿದ್ದಾರೆ. ತಾಲೂಕಿನಾದ್ಯಂತ ಅಧಿಕ ಕೆರೆಗಳಿದ್ದು ಇದರ ಮೂಲಕ ಸಹ ಕೃಷಿಯನ್ನು ಕೈಗೊಂಡಿದ್ದಾರೆ. ಕೆರೆಗಳು ಅಲ್ಪ-ಸ್ವಲ್ಪ ನೀರಾವರಿ ಕೃಷಿಗೆ ಅನುಕೂಲವಾಗಿದೆ.



ತಾಲೂಕಿನ ಮುಖ್ಯ ಬೆಳೆಗಳೆಂದರೆ ಶೇಂಗಾ, ಹತ್ತಿ, ಜೋಳ ಮತ್ತು ತೊಗರಿ ಇಡೀ ಜಿಲ್ಲೆಯಲ್ಲಿ ಹೆಚ್ಚು ಹುಣಸೆ ಮರಗಳನ್ನು ಹೊಂದಿದ ತಾಲೂಕಾಗಿದೆ. ಜಿಲ್ಲೆಯಲ್ಲಿ ೩೩.೬೬೧ ಹೆಕ್ಟೇರುಗಳಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು, ಜಿಲ್ಲೆಯಲ್ಲೇ ಮೊದಲ ಸ್ಥಾನದಲ್ಲಿದೆ.


ಜನಸಂಖ್ಯೆ ಸಾಕ್ಷರತೆ ಇತ್ಯಾದಿ ವಿವರಗಳು

೨೦೧೧ರ ಜನಗಣತಿಯ ಪ್ರಕಾರ ತಾಲೂಕಿನ ಜನಸಂಖ್ಯೆ ೨,೭೨,೧೮೩ ರಷ್ಟಿದ್ದು, ಇದರಲ್ಲಿ ಪುರುಷರು ೧,೩೯,೧೭೦ (೫೧.೧೩%) ಮತ್ತು ಮಹಿಳೆಯರು ೧,೩೨,೯೮೧ (೪೮.೮೫%) ಇದ್ದಾರೆ. ಜಿಲ್ಲೆಯಲ್ಲಿ ತಾಲೂಕಿನ ಪಾಲು ಶೇ.೨೪ ರಷ್ಟಿದೆ. ಜನಸಂಖ್ಯೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ತಾಲೂಕಿನ ವಿಸ್ತೀರ್ಣ ೧೬೧೮.೮೭. ರಷ್ಟಿದೆ. ಶೇ.೧೯.೧೫ ರಷ್ಟು ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಇದರ ಪ್ರಮಾಣವಾಗಿದೆ. ಜಿಲ್ಲೆಯಲ್ಲಿ ಬಳ್ಳಾರಿ ತಾಲೂಕನ್ನು ಬಿಟ್ಟರೆ ಅತಿ ದೊಡ್ಡ ತಾಲೂಕು ಇದಾಗಿದೆ. ಜಾತಿವಾರು ಜನಸಂಖ್ಯೆಯನ್ನು ನೋಡಿದಾಗ ಪರಿಶಿಷ್ಟ ಜಾತಿಯಲ್ಲಿ ೫೨.೨೧೨ (೧೯.೧೮%) ಇದ್ದು, ಇದರಲ್ಲಿ ೨೬.೫೪೦ (೫೦.೮೩%) ಪುರುಷರನ್ನು, ೨೫,೬೭೨ (೪೯,೧೬%) ಮಹಿಳೆಯರನ್ನು ಹೊಂದಿದೆ. ಒಟ್ಟು ಪರಿಶಿಷ್ಟ ಪಂಗಡ ಜನಸಂಖ್ಯೆ ೭೩,೬೫೦ (೨೭.೦೫%) ಇದ್ದು, ಇದರಲ್ಲಿ ೩೭,೨೯೮ (೫೦,೪೬%) ಪುರುಷರನ್ನು ಮತ್ತು ೩೬,೩೫೨) (೪೯,೩೫%) ಮಹಿಳೆಯರನ್ನು ಹೊಂದಿದೆ. ಈ ತಾಲೂಕು ಪರಿಶಿಷ್ಟ ಜಾತಿ-ಪಂಗಡ ಜನಸಂಖ್ಯೆಯ ಪ್ರಮಾಣ ೧,೨೫,೮೬೨ (೪೬,೨೪%) ರಷ್ಟು ಹೊಂದಿದ್ದು ಜಿಲ್ಲೆಯಲ್ಲಿ ಅತಿ ಹೆಚ್ಚು ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ಹೊಂದಿದ ತಾಲೂಕು ಇದಾಗಿದೆ. ಅಧ್ಯಯನದ ಆಯ್ಕೆಗೆ ಈ ಅಂಶವು ಸಹ ಒಂದು ಕಾರಣವಾಗಿದೆ. ಸಾಕ್ಷರರ ಸಂಖ್ಯೆ ತಾಲೂಕಿನಲ್ಲಿ ೧,೩೫,೬೩೯ ಇದ್ದು, ಜಿಲ್ಲೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಜಿಲ್ಲೆಗಿಂತ ಶೇ.೨.೧ ರಷ್ಟು ಹೆಚ್ಚು ಇದ್ದು ಸಾಕ್ಷರತೆಯ ದೃಷ್ಟಿಯಿಂದ ಜಿಲ್ಲೆಗಿಂತ ಉತ್ತಮ ಸ್ಥಿತಿಯಲ್ಲಿದೆ. ಒಣಭೂಮಿ ಪ್ರದೇಶವಾದರೂ, ಈ ಸಾಕ್ಷರತೆಯ ಪ್ರಮಾಣ ಹೆಚ್ಚಿದೆ. ಹಾಗಾಗಿ ಇದು ಜಿಲ್ಲೆಯಲ್ಲಿನ ತಾಲೂಕಿನಲ್ಲಿ ಮೂರನೆಯ ಸ್ಥಾನವನ್ನು ಹೊಂದಿದೆ.

ಕೋಷ್ಟಕ ೨.೪, ಕೂಡ್ಲಿಗಿ ತಾಲೂಕಿನ ಪರಿಶಿಷ್ಟ ಪಂಗಡದ ಕೃಷಿ ಕಾರ್ಮಿಕರ ವಿವರ

			ಒಟ್ಟು	ಗಂಡು	ಹೆಣ್ಣು
೧	ಕೃಷಿ ಕಾರ್ಮಿಕ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ	ಗ್ರಾಮೀಣ	೧೨,೯೩೨	೫೫೬೬	೭೩೬೬
		ನಗರ	೮೪೩	೩೬೬	೪೭೭
		ಒಟ್ಟು	೧೩,೭೭೫	೫೯೩೨	೭೮೩೪

(ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್ಸ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು, ಗವರ್ನ್‌ಮೆಂಟ್ ಆಫ್ ಕರ್ನಾಟಕ ೨೦೧೧.)



ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಇಲ್ಲಿ ಸ್ಪಷ್ಟವಾಗುವ ಅಂಶವೇನೆಂದರೆ, ಕೂಡ್ಲಿಗಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಕೃಷಿ ಕಾರ್ಮಿಕರ ಒಟ್ಟು ಚಿತ್ರಣವನ್ನು ನೀಡುತ್ತದೆ. ಕೃಷಿಯನ್ನು ಅವಲಂಭಿಸಿದ ಗ್ರಾಮೀಣ ಪ್ರದೇಶ ಕೃಷಿ ಕಾರ್ಮಿಕರ ಒಟ್ಟು ೧೨೯೩೨ ಇದ್ದು, ಅದರಲ್ಲಿ ಗಂಡು ೫೫೬೬, ಅಂದರೆ ಶೇ. ೪೩.೦೪ರಷ್ಟಿದೆ. ಹೆಣ್ಣು ೩೩೬೬, ಅಂದರೆ ಶೇ. ೫೬.೯೫ರಷ್ಟಿರುವುದನ್ನು ಕಾಣಬಹುದು. ಕೃಷಿಯನ್ನು ಅವಲಂಭಿಸಿದ ನಗರ ಪ್ರದೇಶ ಕೃಷಿ ಕಾರ್ಮಿಕರ ಒಟ್ಟು ೮೪೩ ಇದ್ದು, ಅದರಲ್ಲಿ ಗಂಡು ೩೬೬, ಅಂದರೆ ಶೇ. ೪೩.೪೧ರಷ್ಟಿದೆ. ಹೆಣ್ಣು ೪೭೭, ಅಂದರೆ ಶೇ. ೫೬.೫೮ರಷ್ಟಿರುವುದನ್ನು ಕಾಣಬಹುದು.

೨.೪ ಬಳ್ಳಾರಿ ಜಿಲ್ಲೆಯ ಜನಸಂಖ್ಯೆ

"೨೦೧೧ರ ಜನಗಣತಿ ಪ್ರಕಾರ ಕರ್ನಾಟಕವು ಒಟ್ಟು ೧,೩೩,೦೦,೭೮೦ ಕುಟುಂಬಗಳನ್ನು ಹೊಂದಿದೆ. ಒಟ್ಟು ಜನಸಂಖ್ಯೆಯು ೬,೧೦,೯೫,೨೯೭ ಜನಸಂಖ್ಯೆಯನ್ನು ಹೊಂದಿದೆ ಇದರಲ್ಲಿ ಪುರುಷರು ೬,೧೦,೯೫,೨೯೭ ರಷ್ಟಿದ್ದರೆ ಮಹಿಳೆಯರು ೩,೦೧,೨೮,೬೪೦ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರು ಒಟ್ಟು ೧,೦೪,೭೪,೯೯೨ ಜನರಿರುವರು. ಇದರಲ್ಲಿ ೫೨,೬೪,೫೪೫ ಪುರುಷರು ಹಾಗೂ ೫೨,೧೦,೪೪೭ ಮಹಿಳೆಯರಿರುವರು. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೪೨,೪೮,೯೮೭ ಇದೆ. ಇದರಲ್ಲಿ ೨೧,೩೪,೭೫೪ ಪುರುಷರು ಹಾಗೂ ೨೧,೧೪,೨೩೩ ಮಹಿಳೆಯರು ನೆಲೆಸಿರುವರು".(ಜನಗಣತಿವರದಿ:೨೦೧೧) ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ರಾಜ್ಯದ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯಾ ಪ್ರಮಾಣವು ಕೇವಲ ಶೇ. ೬.೯೫ರಷ್ಟಿದೆ. ಜನಸಾಂದ್ರತೆಯು ಪ್ರತಿ ಚದರ ಕಿಲೋಮೀಟರಿಗೆ ೩೧೯ರಷ್ಟಿದೆ. ಲಿಂಗಾನುಪಾತವು ಒಟ್ಟು ೧೦೦೦ ಪುರುಷರಿಗೆ ೯೭೩ ಮಹಿಳೆಯರಿರುವರು.




೨೦೧೧ರ ಜನಗಣತಿ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು ಕುಟುಂಬಗಳು ೩,೭೩,೦೩೪, ಒಟ್ಟು ಜನಸಂಖ್ಯೆಯು ೨೪,೫೨,೫೯೫ರಷ್ಟಿದ್ದು ಇದರಲ್ಲಿ ಪುರುಷರು ೧೨,೩೬,೯೫೪ರಷ್ಟಿದ್ದಾರೆ ಹಾಗೂ ಮಹಿಳೆಯರು ೧೨,೧೫,೬೪೧ರಷ್ಟಿದ್ದಾರೆ. ಪರಿಶಿಷ್ಟ ಜಾತಿಯು ಜನಸಂಖ್ಯೆಯು ಒಟ್ಟು ೫,೧೭,೪೦೯ರಷ್ಟಿದೆ ಇದರಲ್ಲಿ ಪುರುಷರು ೨,೫೮,೫೮೨ ಹಾಗೂ ಮಹಿಳೆಯರು ೨,೫೮,೮೨೭ ರಷ್ಟಿದ್ದಾರೆ.

ಕೋಷ್ಟಕ :೨.೫ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು ಜನಸಂಖ್ಯೆ (೨೦೧೧)					
೧	ನಾಯಕ, ವಾಲ್ಮೀಕಿ, ಬೇಡ		ಒಟ್ಟು	ಗಂಡು	ಹೆಣ್ಣು
		ಗ್ರಾಮೀಣ	೩,೨೧,೮೮೫	೧,೬೧,೫೮೮	೧,೬೦,೨೯೭
		ನಗರ	೧,೦೭,೪೮೭	೫೩,೦೬೩	೫೪,೪೨೪
		ಒಟ್ಟು	೪,೨೯,೩೭೨	೨,೧೪,೬೫೧	೨,೧೪,೭೨೧

ಆಧಾರ: ೨೦೧೧ರ ಜನಗಣತಿ ವರದಿ, ಕರ್ನಾಟಕ ಸರ್ಕಾರ

ಬಳ್ಳಾರಿ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೪,೩೯,೯೬೦, ಇದರಲ್ಲಿ ಪುರುಷರು ೨,೨೦,೦೯೮ ಹಾಗು ಮಹಿಳೆಯರು ೨,೧೯,೮೬೪ರಷ್ಟಿದ್ದಾರೆ. ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೇವಲ ಶೇಕಡ ೧೦.೬೨ರಷ್ಟು ಮಾತ್ರವಿದೆ. ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ಬಹುಸಂಖ್ಯಾತ ಸಮುದಾಯ ಬೇಡ ಸಮುದಾಯವಾಗಿದೆ.



ಬೇಡ ಸಮುದಾಯವು ಶೇಕಡ ೯೬.೫೫ ರಷ್ಟು ಮಾತ್ರವಿದೆ ಎಂದು ದಾಖಲಾಗಿದೆ.

೨.೪ ಬೇಡ ಸಮುದಾಯದ ಪರಿಚಯ

ಬೇಟೆಯೇ ಬದುಕಿನ ಭಾಗವಾಗಿಸಿಕೊಂಡ ಬುಡಕಟ್ಟು ಜನಾಂಗವು "ಬೇಡ" ರೆಂದು ಕರೆಯಿಸಿಕೊಂಡ ನಮ್ಮಲ್ಲಿ ವರ್ಣರಂಜಿತ ಇತಿಹಾಸವೇ ಇದೆ. ಕಾಡು, ಕಣಿವೆ, ಗುಡ್ಡ-ಗವಿಗಳನ್ನೇ ತಮ್ಮ ವಾಸಸ್ಥಳ ಮಾಡಿಕೊಂಡ ಇವರು ಚರ್ಮ ತೊಗಟೆಗಳನ್ನು ಉಡುಪಾಗಿ ಧರಿಸಿದರು. ಆದಿ ಮಾನವನ ಎಲ್ಲಾ ಅವಸ್ಥೆಗಳನ್ನು ಹೊತ್ತುಕೊಂಡ ಇವರು ಕ್ರೂರ ಪ್ರಾಣಿಗಳ ಮಧ್ಯೆ ಬಾಳಿದರು.ಇಂಥ ಬೇಡ ಜನಾಂಗದ ರೋಮಾಂಚನ ಹೆಜ್ಜೆಗಳು ಎಲ್ಲಿಂದ ಆರಂಭವಾಗುತ್ತವೆ ಎಂಬುವುದಕ್ಕೆ ಹಲವಾರು ವಿದ್ವಾಂಸರು ಅನೇಕ ವಾದಗಳನ್ನು ನೀಡಿದ್ದಾರೆ. ಬುಕನಾನ್‌ರವರು ಬೇಡ ಬುಡಕಟ್ಟು ದ್ರಾವಿಡ ಜನಾಂಗಕ್ಕೆ ಸೇರಿದವರಿರಬೇಕು ಎಂದು ಅಭಿಪ್ರಾಯಪಡುತ್ತಾರೆ. ಬೇಡರಲ್ಲಿ ಮುಖ್ಯವಾಗಿ ಊರಬೇಡರು ಮತ್ತು ಮ್ಯಾಸ ಬೇಡರು ಎಂಬ ಪಂಗಡಗಳು ಕಂಡುಬರುತ್ತವೆ. ಇವುಗಳಾಚೆ ಮೊಂಡರು ಸಹ ತಾವು ಬೇಡ ಪಂಗಡಕ್ಕೆ ಸೇರಿದವರು ಎಂದು ಹೇಳಿಕೊಳ್ಳುತ್ತಾರೆ. ಮೈಸೂರು ಪ್ರಾಂತ್ಯದ ಮಹದೇಶ್ವರನ ಬೆಟ್ಟದ ಸುತ್ತಮುತ್ತ ಬೇಡಗಂಪಣರು ಎನ್ನುವ ಸಮುದಾಯವೊಂದಿದ್ದು ತಾವೂ ಮೂಲತಃ ಬೇಡನಾಯಕರು, ತಮ್ಮ ಮೂಲಪುರುಷ ಬೇಡರಕಣ್ಣಪ್ಪ ಎಂದು ಹೇಳಿಕೊಳ್ಳುತ್ತಾರೆ. ಆದರೆ ಈ ಯಾವ ಪಂಗಡಗಳು ಪರಸ್ಪರ ರಕ್ತಸಂಬಂಧವನ್ನು ಬೆಸೆದುಕೊಳ್ಳುವುದಿಲ್ಲ. ಇತ್ತೀಚೆಗೆ ಊರ ನಾಯಕರು ಮತ್ತು ಮ್ಯಾಸ ನಾಯಕರಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುತ್ತಿವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಬೇಡ ನಾಯಕರು ಪಾಳೆಯಗಾರರಾಗಿ, ಚಿಕ್ಕ ಚಿಕ್ಕ ರಾಜ್ಯಗಳ ಅರಸರಾಗಿ, ಸೈನಿಕರಾಗಿ ಕಾರ್ಯನಿರ್ವಹಿಸಿದ ಉದಾಹರಣೆಗಳು ಸಾಕಷ್ಟಿವೆ. ಉದಾಹರಣೆಗೆ ಚಿತ್ರದುರ್ಗದ ಪಾಳೆಯಗಾರರು, ಬಸವಾಪಟ್ಟಣದ ಪಾಳೆಗಾರರು, ಕಂಪಿಲರಾಯ ಮತ್ತು ಅವನ ವಂಶಸ್ಥರು, ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಬುಕ್ಕ, ಹರಪನಹಳ್ಳಿಯ ಪಾಳೆಯಗಾರರು, ಉಚ್ಚಂಗಿ ದುರ್ಗದ ಪಾಳೆಯಗಾರರು ಮುಂತಾದವರನ್ನು ಹೆಸರಿಸಬಹುದು. ಬೇಡ ನಾಯಕರಲ್ಲಿ ಒಳಪಂಗಡಗಳು ಹಲವಾರಿವೆ ಎಂಬುದನ್ನು ಹೆಚ್ ವಿ ನಂಜುಂಡಯ್ಯನವರು ತಿಳಿಸುತ್ತಾರೆ ಅವರ ಪ್ರಕಾರ ಕರ್ನಾಟದಲ್ಲಿನ ಬೇಡ ಬುಡಕಟ್ಟಿಗೆ ನಾಯಕ ಮತ್ತು ವಾಲ್ಮಿಕಿ ಎಂದು ಕರೆಯುತ್ತಾರೆ. ಇವರಲ್ಲಿ ಈ ಕೆಳಗಿನ ಒಳಬಾಂಧವ್ಯದ ಪ್ರಭೇಧಗಳನ್ನು ಹೀಗೆ ತಿಳಿಸುತ್ತಾರೆ. ಊರು ಬೇಡರು (ಚಿನ್ನಬೋಯಿವಾಂಡ್ಲು, ವ್ಯಾಸ ಬೇಡರು (ಪೆದ್ದ ಬೋಯಿವಾಂಡ್ಲು), ಗುಡ್ಲು ಬೇಡರು(ಗುಂತಬೋಯಿವಾಂಡ್ಲು), ಮಾರೆಮ್ಮನ ಬೇಡರು (ಮುತ್ಯಾಲಮ್ಮ ಅಥವಾ ಉರುಮೆ ಬೇಡರು) ಹಾಲು ಬೇಡರು, ಮೊಂಡ ಬೇಡರು ಎಂದು ಗುರುತಿಸಿದ್ದಾರೆ.

ನಾಯ್ಕ್, ನಾಯಕ್, ಬೇಡ, ಬೇಡರ್ ಮತ್ತು ವಾಲ್ಮೀಕಿ ಪದಗಳು ಕರ್ನಾಟಕದಲ್ಲಿ ೧೯೯೧ರಲ್ಲಿ ನಾಯಕ ಬುಡಕಟ್ಟಿನ ಪರ್ಯಾಯ ಪದಗಳೆಂದು ಪರಿಗಣಿಸಲ್ಪಟ್ಟಿದ್ದರೂ ದಿನಾಂಕ ೧೯.೦೪.೧೯೯೩ರಿಂದ ಈ ಪದಗಳು ಮೀಸಲಾತಿ ಅನುಭವಿಸಲು ಅರ್ಹಗೊಂಡವು ಹಾಗೂ ಇತರೆ ನಾಯಕ್ಡ, ನಾಯಕ,

ಚೋಲಿವಾಲ ನಾಯಕ, ಕಪಾಡಿಯಾ ನಾಯಕ, ಮೋಟಾ ನಾಯಕ, ನಾನಾ ನಾಯಕ, ನೈಯ್ಕ, ನಾಯಕ್, ಬೇಡ, ಬೇಡರ್, ಮತ್ತು ವಾಲ್ಮೀಕಿ ನಾಯಕ ಬುಡಕಟ್ಟಿನ ಪರ್ಯಾಯ ನಾಮಗಳು. ೧೯೬೦ರಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿರುವವು. ಆದಿ ಮೂಲವಾದಿ ಭಗವಂತನು ಬೇಡರ ಚಂಚುಲಕ್ಷ್ಮಿಯನ್ನು ಮದುವೆಯಾಗುವ ಮೂಲಕ ಬೇಡರ ವಂಶವನ್ನು ಬೆಳೆಯಿಸಿದನೆಂಬ ಕಥೆಯೊಂದು ನಮ್ಮಲ್ಲಿ ಇಂದಿಗೂ ಪ್ರಚಲಿತವಿದೆ. ಅದರಂತೆ ಮನುವಿನ ಏಳನೆಯ ತಲೆಯವನ್ನಾಗಿ ಚಂದ್ರವಂಶದಲ್ಲಿ ಕಾರ್ತ್ಯವೀರ್ಯಾರ್ಜುನ ಹುಟ್ಟಿದ. ಈತ ಹೇಹಯ ರಾಜ್ಯವನ್ನು ಆಳುತ್ತಿರುವಾಗ ವೈಷ್ಣವಯಾಗಾದಿಗಳನ್ನು ಮಾಡುತ್ತಿದ್ದ.ಇದೇ ಸಂದರ್ಭದಲ್ಲಿ ಜಮದಗ್ನಿ ಈತನಿಂದ ಹತನಾದ.ಇದರಿಂದ ಕುಪಿತನಾದ ಪರಶುರಾಮು ಕಾರ್ತ್ಯಾವೀರ್ಯಾರ್ಜುನ ಹಾಗೂ ಅವನ ಮಕ್ಕಳನ್ನು ಕೊಂದು ಕ್ಷತ್ರಿಯರೆಲ್ಲರನ್ನು ಸದೆಬಡಿಯಲು ೨೧ ಬಾರಿ ಭೂಮಿ ಮೇಲೆ ದಂಡಯಾತ್ರೆ ಕೈಗೊಂಡ.ಬೆದರಿದ ಕ್ಷತ್ರಿಯರೆಲ್ಲ ಕಾಡಿಗೆ ಹೋದರು.ಕಾಡು ವಾಸಿಗಳಾದರು.ಇವರೇ ಮುಂದೆ ಬೇಡರಾದರೆಂದು ಹೇಳುತ್ತ ಕ್ಷತ್ರಿಯರಿಗೂ, ಬೇಡರಿಗೂ ಭಿನ್ನತೆಯಿಲ್ಲವೆಂದು ಕೆಲ ಸಂಶೋಧಕರು ಸಾಧಿಸಿದ್ದಾರೆ. ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ಭಾರತದಲ್ಲಿ ವಾಸವಾಗಿರುವ ಆದಿಯ ಸಮುದಾಯಗಳಲ್ಲಿ ಬೇಡ ಸಮುದಾಯವು ಒಂದು. ನಮ್ಮ ದೇಶದಲ್ಲಿ ಬಹು ಪುರಾತನ ಕಾಲದಿಂದಲೂ ಈ ಸಮುದಾಯ ಅಸ್ತಿತ್ವದಲ್ಲಿದ್ದಿತೆಂಬ ಬಗೆಗೆ ಅನುಮಾನವಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಆಧಾರಗಳು ಲಭಿಸುತ್ತವೆ. ಭಾರತದ ಆದಿಕಾವ್ಯವೆಂದು ಹೆಸರಾದ ರಾಮಾಯಣವನ್ನು ರಚಿಸಿದವನು ಬೇಡನಾದ ವಾಲ್ಮೀಕಿ ಮುನಿ.ಈತ ಪೂರ್ವಾಶ್ರಮದಲ್ಲಿ ದರೋಡೆಗಾರನಾಗಿದ್ದು ಸಪ್ತರ್ಷಿಗಳ ಪ್ರಭಾವದಿಂದಾಗಿ ತನ್ನ ಕ್ರೂರವೃತ್ತಿಯನ್ನು ತ್ಯಾಗ ಮಾಡಿ ಆಮೇಲೆ ರಾಮಾಯಣ ರಚಿಸಿ 'ಆದಿಕವಿ' ಎಂದು ಖ್ಯಾತನಾದನು.ಇದು ಪರಂಪರೆಯ ಹೇಳಿಕೆಯಾದರೂ ರಾಮಾಯಣದ ಕರ್ತೃತ್ವವನ್ನು ಕುರಿತಂತೆ ವಿದ್ವಾಂಸರಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯಗಳಿಲ್ಲವೆಂಬುದು ಗಮನಾರ್ಹವಾಗಿದೆ.ಬೇಡನಾಗಿದ್ದ ವಾಲ್ಮೀಕಿಯು ಆದಿಕವಿಯ ಪಟ್ಟಕ್ಕೇರಿದ್ದರಿಂದ ಆತನ ಚರಿತ್ರೆ ಹೇಳುವಲ್ಲಿ ಹಲವಾರು ಪೌರಾಣಿಕ ಅತಿಶಯೋಕ್ತಿಗಳು ಪ್ರಚಲಿತಗೊಂಡಿರುವುದು ಸ್ವಾಭಾವಿಕ. ವಿಶೇಷವಾಗಿ 'ರಾಮನಾಮ' ಮಹಿಮೆಯನ್ನು ಪ್ರತಿಷ್ಠಾಪಿಸಲೋಸುಗ ವಾಲ್ಮೀಕಿ ತನ್ನ ಪೂರ್ವಾಶ್ರಮದಲ್ಲಿ ದುಷ್ಟನಿದ್ದನೆಂದೂ ರಾಮನಾಮದ ಮಹಿಮೆಯಿಂದ ಋಷಿಯಾದನೆಂದೂ ಹೇಳುವುದು ಅದರ ಮುಖ್ಯ ಆಶಯವೆಂದು ತೋರುತ್ತದೆ.ಇದೇ ರೀತಿಯಲ್ಲಿ ತಮ್ಮ ಮತ ಮಹಿಮೆಯನ್ನು ಹೇಳಲು ಬೌದ್ಧರು ತಮ್ಮ ಗ್ರಂಥಗಳಲ್ಲಿ ಅಶೋಕನು ಬಹು ಕ್ರೂರಿಯಾಗಿದ್ದನೆಂದು ಹೇಳಿದ್ದಾರೆ.ಅವನು ತನ್ನ ಸಹೋದರರನ್ನೆಲ್ಲ ಸಂಹರಿಸಿ ಪಟ್ಟಕ್ಕೆ ಬಂದಿದ್ದನೆಂದೂ ಬೌದ್ಧ ದೀಕ್ಷೆ ಹೊಂದಿದ ಮೇಲೆ ಆತನಲ್ಲಿ ಮಾನವೀಯ ಗುಣಗಳ ಪ್ರಾದುರ್ಭಾವವಾಯಿತೆಂದೂ ಅವುಗಳಲ್ಲಿ ಹೇಳಿದೆ. ವಾಸ್ತವವಾಗಿ ಅಶೋಕನು ಬೌದ್ಧ ಧರ್ಮಾನುಯಾಯಿಯಾದ ಮೇಲು ಅವನ ಸಹೋದರರು ಜೀವಿಸಿದ್ದರೆಂಬುದಕ್ಕೆ ಶಾಸನಗಳೇ ಆಧಾರವಾಗಿವೆ !ಆದ್ದರಿಂದ ವಾಲ್ಮೀಕಿಯು ಬೇಟೆಯೇ ಜೀವನಾಧಾರವಾಗಿರುವ ಪಂಗಡವಾದ ಬೇಡ ಜನಾಂಗಕ್ಕೆ ಸೇರಿದ್ದನೆಂಬುದು ಮಾತ್ರ ಸತ್ಯ.ಉಳಿದುದೆಲ್ಲ ಕಲ್ಪನೆಯಾಗಿ ತೋರುತ್ತದೆ. ಅವನ

ಮೇಲೆ ಹುತ್ತ ಬೆಳೆದಿದ್ದಿತೆಂದೂ ಅವನ ತಂದೆ ಪ್ರಜೋತಸರು ಕಾಡನ್ನು ಕಡಿದು ಬಯಲು ಮಾಡಿದರೆಂದೂ ಪ್ರಜೇತಸರ ಹೆಂಡತಿ ವೃಕ್ಷಕನ್ಯೆಯೆಂದೂ ವಿವರಿಸುವುದು ವಾಲ್ಮೀಕಿಯು ಬೇಡನೇ ಆಗಿದ್ದನೆಂಬ ಸಂಗತಿಯತ್ತ ನಿರ್ದಿಷ್ಟವಾಗಿ ಬೆರಳು ಮಾಡುತ್ತವೆ. ನಮ್ಮ ಸಾಹಿತ್ಯ, ಶಾಸನ ಇತ್ಯಾದಿ ಆಕರಗಳು ಕರ್ನಾಟಕದ ಎಲ್ಲ ರಾಜ ಮನೆತನಗಳನ್ನು ಸೂರ್ಯವಂಶದವರು, ಚಂದ್ರ ವಂಶದವರ ಅಥವಾ ಯಾದವ ವಂಶದವರು ಎಂದು ಮುಂತಾಗಿ ಹೊಗಳುತ್ತವೆ. ಕದಂಬ ಮತ್ತು ಚಾಲುಕ್ಯರನ್ನು ಹೊರತುಪಡಿಸಿ ಕರ್ನಾಟಕದ ಇತರ ರಾಜಮನೆತನಗಳೆಲ್ಲ ಕೆಳವರ್ಗದಿಂದಲೆ ಬಂದಂತಹವುಗಳು. ಆದರೆ ಯಾವ ರಾಜಕುಲವೂ ತಮ್ಮ ಮೂಲವನ್ನು ನೇರವಾಗಿ ಹೇಳಿಕೊಳ್ಳುವುದಿಲ್ಲ. ಹೀಗಾಗಿ ಕೆಳವರ್ಗದ ಸಮುದಾಯಗಳ ಚರಿತ್ರೆಯನ್ನು ಕತ್ತಲೆ ಆವರಿಸಿದೆ. ಬ್ರಿಟೀಷರ ನಿರ್ಗಮನದ ನಂತರ ಭಾರತ ಸ್ವತಂತ್ರವಾದ ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ರಚಿಸಿಕೊಳ್ಳುವಷ್ಟರಲ್ಲಿ ಆಧುನಿಕ ಶಿಕ್ಷಣ, ಉದ್ಯೋಗ ಮತ್ತು ಆಡಳಿತವನ್ನು ರೂಪಿಸಿಕೊಂಡಿತು.ಸಾಮಾಜಿಕ ಸ್ಥಾನ ಮಾನಗಳಿಗೆ ಅನುಗುಣವಾಗಿ ಸಮುದಾಯಗಳಿಗೆ ಸಮಾನತೆಯನ್ನು ಕಲ್ಪಿಸುವಲ್ಲಿ ಪರಿಶಿಷ್ಟ ಜಾತಿ–ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ದೊರಕಿತು.ಇದರಲ್ಲಿ ಕರ್ನಾಟಕದ ಬೇಡ ನಾಯಕರ ಪಂಗಡಗಳು ಉಪಪಂಗಡಗಳನ್ನು ಪರಿಶಿಷ್ಟ ವರ್ಗದ ಮೀಸಲಾತಿಯ ಪಟ್ಟಿಗೆ ಸೇರಿಸಲಾಗಿದೆ.ಇದರಿಂದ ಆಧುನಿಕ ಶಿಕ್ಷಣ ಹಾಗೂ ಕೆಲವು ಉದ್ಯೋಗಾವಕಾಶಗಳು ಅಲ್ಲೊಬ್ಬರಿಗೆ ಇಲ್ಲೊಬ್ಬರಿಗೆ ಎಂಬಂತೆ ಲಭಿಸಿವೆ.

ಕರ್ನಾಟಕದಲ್ಲಿ ಮುಖ್ಯವಾಗಿ ಊರ ಬೇಡರು ಅಥವಾ ಊರ ನಾಯಕರು, ಮ್ಯಾಸ ನಾಯಕರು ಅಥವಾ ಮ್ಯಾಸ ಬೇಡರು ಹಾಗೂ ಕರಕರ ಮೊಂಡ, ಬುಟ್ಟಿ ನಾಯಕರು – ಮುಂತಾದ ಪಂಗಡಗಳು ಕಂಡುಬರುತ್ತವೆ. ಇಂದು ಬುಟ್ಟಿ ನಾಯಕರು ಎಲ್ಲಿದ್ದಾರೆ ಎಂಬುದು ತಿಳಿದುಬರುವುದಿಲ್ಲವಾದರೂ ಊರ ನಾಯಕರ ಹಾಗೂ ಇನ್ನುಳಿದ ಮ್ಯಾಸನಾಯಕ, ಕರಕರ ಮೊಂಡ ಸಮುದಾಯಗಳು ಕಂಡು ಬರುತ್ತವೆ. ಈ ಮೂರು ಪಂಗಡಗಳು ಒಂದೇ ಜಾತಿ ಮೂಲದವರಾದರೂ ಇವುಗಳ ನಡುವೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಬಹುತೇಕ ಭಾರತದ ಬುಡಕಟ್ಟುಗಳು ತುಂಬಾ ಸ್ವಾಭಿಮಾನದ ಬದುಕನ್ನು ಬದುಕಿದವು. ಬೇಡ ಬುಡಕಟ್ಟಿನಲ್ಲಿ ಇದರದೇ ಆದ ಕಟ್ಟೆಮನೆ ಪದ್ಧತಿ, ಜಾತಿ ಪಂಚಾಯ್ತಿಗಳನ್ನು ಇಂದಿಗೂ ಕಾಣಬಹುದು. ಒಂದು ಬುಡಕಟ್ಟು ಸಮುದಾಯ ಮತ್ತೊಂದು ಬುಡಕಟ್ಟು ಸಮುದಾಯದೊಂದಿಗೆ ಅಥವಾ ಬೇರೆ ಜಾತಿಯೊಂದಿಗೆ ಯಾವುದೇ ಕಾರಣಕ್ಕೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಿಲ್ಲ. ಹೀಗಾಗಿ ಊರುಬೇಡ, ಮೇಸಬೇಡ, ಮೊಂಡರಲ್ಲಿ ಪರಸ್ಪರ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಇತ್ತೀಚೆಗೆ ಊರುಬೇಡ ಮತ್ತು ಮೇಸಬೇಡರಲ್ಲಿ ವಿದ್ಯಾವಂತರಾದರಾದವರು ವೈವಾಹಿಕ ಸಂಬಂಧಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಏರ್ಪಡಿಸಿಕೊಳ್ಳುತ್ತಿದ್ದಾರೆ. ಆದರೆ ಮೊಂಡರೊಂದಿಗೆ ಈ ಎರಡೂ ಪಂಗಡಗಳು ವೈವಾಹಿಕ ಸಂಬಂಧ ಏರ್ಪಡಿಸಿಕೊಂಡ ಉದಾಹರಣೆ ಇಲ್ಲ. ಬೇಡ ಬುಡಕಟ್ಟಿನ ಈ ಮೂರೂ ಪಂಗಡಗಳಲ್ಲಿಯೂ ಅವುಗಳದೇ ಆದ ವಿಶಿಷ್ಟ ಬೆಡಗುಗುಳು, ಆರಾಧನಾ ದೈವಗಳು ಇವೆ. ಇವರದೇ ಆದ ಸಾಂಸ್ಕೃತಿಕ

ನಾಯಕರು ಇಂದು ದೈವಗಳಾಗಿ ಪೂಜೆಗೊಳ್ಳುತ್ತವೆ. ಸಚೇತನವಾದಿಯಾದ ಬೇಡ ಬುಡಕಟ್ಟು ವೈವಾಹಿಕ ಸಂಬಂಧಗಳನ್ನು ಬೆಳೆಸಲು ಮುಖ್ಯವಾಗಿ ಬೆಡಗುಗಳನ್ನು ಆಧಾರವಾಗಿ ಇರಿಸಿಕೊಳ್ಳುತ್ತವೆ.

ಬೇಡ ಸಮುದಾಯದ ಬಂಧುತ್ವ (Kinship)

ಬಂಧುತ್ವ ಎಂದರೆ ಒಬ್ಬ ವ್ಯಕ್ತಿಯ ಅಥವಾ ಒಂದು ಸಮಾಜದ ನಿಕಟ ಹಾಗೂ ದೂರದ ಬಂಧುಬಳಗವನ್ನು ತಾತ್ತ್ವಿಕವಾಗಿ ಸೂತ್ರೀಕರಿಸುವ ಮತ್ತು ಅಂತಹ ಬಾಂಧವ್ಯವನ್ನು ರೂಪಿಸಿಕೊಳ್ಳುವ ವಿಧಾನ. ಬಂಧುತ್ವವು ಪ್ರತಿಯೊಂದು ಮಾನವ ಸಮಾಜದ ಸಾಮಾಜಿಕ ವ್ಯವಸ್ಥೆಯ ಅಡಿಪಾಯವಾಗಿದ್ದು, ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯು ಬಂಧುತ್ವವನ್ನು ಆಧರಿಸಿರುತ್ತದೆ. ಪ್ರತಿಯೊಂದು ಸಮಾಜದಲ್ಲಿಯೂ ಪ್ರತಿಯೊಬ್ಬ ವ್ಯಕ್ತಿಯು ಪ್ರತಿಷ್ಠೆ ಹಾಗೂ ಸ್ಥಾನಮಾನಗಳೆಲ್ಲವು ಆತನ ಹುಟ್ಟಿನಿಂದಲೇ ಬಂದಂತಹವಾಗಿರುತ್ತವೆ. ಹೀಗೆ ಆ ವ್ಯಕ್ತಿಯ ಹುಟ್ಟಿನ ಹಿನ್ನೆಲೆಯ ಆಧಾರದಿಂದ ಆತನನ್ನು ಗುರುತಿಸುವಲ್ಲಿ ಮೂಲಾಧಾರವಾದ ವ್ಯವಸ್ಥೆಯೇ ಬಂಧುತ್ವ. ಬಂಧುತ್ವವು ಕೂಡ ಕುಟುಂಬದ ಹಾಗೆಯೇ ಸಾಮಾಜಿಕ ರಚನೆಯ ಮೂಲಭೂತ ಮತ್ತು ಪ್ರಾಚೀನ ತಳಹದಿಗಳಲ್ಲಿ ಒಂದು ಸಾಮಾಜಿಕ ಘಟಕವಾಗಿದೆ. ಇದು ವ್ಯಕ್ತಿಗಳನ್ನು ಒಗ್ಗೂಡಿಸುವ ಪ್ರಾಥಮಿಕ ಬಂಧನವು ಕೂಡ ಆಗಿದೆ. ಬಂಧುತ್ವವು ವಿವಿಧ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಮಾತ್ರವಲ್ಲದೆ; ಬೇರೆ ಬೇರೆ ಕುಟುಂಬಗಳ ಅಥವಾ ಕೌಟುಂಬಿಕ ಘಟಕಗಳ ನಡುವಿನ ಸಂಬಂಧವನ್ನು ಸಹ ಖಚಿತಪಡಿಸುತ್ತದೆ. ಒಟ್ಟಾಗಿ ಬದುಕಲು ಅಥವಾ ಜೀವನ ನಡೆಸಲು ವ್ಯಕ್ತಿ ಮತ್ತು ಕುಟುಂಬಗಳಿಗೆ ಅನುಕೂಲ ಮಾಡಿಕೊಡುವಂತಹ ಒಂದು ವ್ಯವಸ್ಥೆಯನ್ನು ಬಂಧುತ್ವ ಕಲ್ಪಿಸಿಕೊಡುತ್ತದೆ. ತಲೆಮಾರುಗಳ ಅಂತರ ಮತ್ತು ಭೌಗೋಳಿಕ ಅಂತರಗಳು ಬಂಧುತ್ವದ ಮೇಲೆ ನಿರ್ಣಾಯಕ ಪರಿಣಾಮವನ್ನು ಬೀರುತ್ತವೆ. ಬಂಧುತ್ವದ ಅಧ್ಯಯನದ ಸಂದರ್ಭದಲ್ಲಿ ಬೆಡಗುಗಳು/ಕುಲಗಳು/ಬಳ್ಳಿಗಳು ಇತ್ಯಾದಿಗಳ ಬಗ್ಗೆಯು ಪರಿಶೀಲಿಸುವುದು ಮುಖ್ಯವಾಗಿರುತ್ತದೆ. ಒಂದು ಕುಟುಂಬದಲ್ಲಿ ಅಥವಾ ಸಮಾಜದಲ್ಲಿ ಬೆಡಗುಗಳು ಕೂಡ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕುಟುಂಬಗಳು ಅಥವಾ ಸಮುದಾಯಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆಯನ್ನು ಹೊಂದುತ್ತಿದ್ದಾರೆ. ಬೆಡಗು ಅಥವಾ ಕುಲಗಳು ಮಾತ್ರ ಬದಲಾವಣೆಯಾಗುವುದಿಲ್ಲ. ಎಲ್ಲೇ ಹೋದರೂ ಇವುಗಳು ಒಂದೇ ಇರುತ್ತವೆ. ವೈವಾಹಿಕ ಸಂಬಂಧಗಳು ನಡೆಯುವ ಸಂದರ್ಭದಲ್ಲಿ ಬೆಡಗುಗಳು/ ಕುಲಗಳು/ಬಳ್ಳಿಗಳ ತಿಳುವಳಿಕೆಯು ಕೂಡ ಪ್ರಮುಖವಾದುದ್ದು.

ಕೆಲವು ಆದಿವಾಸಿಗಳು ಪಶು, ಪಕ್ಷಿ, ಗಿಡ, ಬಳ್ಳಿ, ಪ್ರಾಣಿ, ಸೂರ್ಯ ಮತ್ತು ಚಂದ್ರ ಮತ್ತು ಇನ್ನೂ ಮುಂತಾದ ಭೂತ ವಸ್ತುಗಳನ್ನು ತಮ್ಮ ಮೂಲ ಪುರುಷರೆಂದು ತಿಳಿದರೆ, ಇನ್ನು ಕೆಲವರು ಕುಲದೇವತೆಗಳೆಂದು ಭಾವಿಸಿ ವಿಶೇಷ ಗೌರವ ಸೂಚಿಸಿ, ಪೂಜ್ಯ ಭಾವದಿಂದ ಅವುಗಳಿಗೆ ಆಗಾಗ್ಗೆ ಪೂಜೆ ಸಲ್ಲಿಸುವುದುಂಟು. ಅಷ್ಟೇ ಅಲ್ಲದೆ ವಿಶೇಷ ಸಂದರ್ಭಗಳಲ್ಲಿ ಹೊರತುಪಡಿಸಿ ಆ ಪ್ರಾಣಿಗಳ ಮಾಂಸವನ್ನಾಗಲಿ, ಆ ತರಕಾರಿಯನ್ನಾಗಲಿ ಸೇವಿಸುವುದಿಲ್ಲ. ಈ ವಿಶೇಷ ಭಾವನೆ ಅನೇಕ ರೀತಿಗಳಲ್ಲಿ ವ್ಯಕ್ತವಾಗುತ್ತದೆ. ತಮ್ಮ ವಂಶಾವಳಿಯನ್ನು ಒಂದು ಪ್ರಾಣಿ, ಸಸ್ಯ ಅಥವಾ ಕಲ್ಲಿನಿಂದ ಸೂಚಿಸಿ ತಾವು

ಆ ಮೂಲದಿಂದ ಅಥವಾ ಆ ಸಂತತಿಯಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಆ ಪ್ರಾಣಿ ಅಥವಾ ಸಸ್ಯವನ್ನು ಕುಲದೇವತೆಯ ಚಿಹ್ನೆಯೆಂದು ಕರೆಯುತ್ತಾರೆ. ಅವರಲ್ಲಿ ಆ ಜಾತಿಗೆ ಸೇರಿದ ಪ್ರಾಣಿ ಮತ್ತು ಸಸ್ಯಗಳನ್ನು ಕೊಲ್ಲಬಾರದು, ನಾಶ ಮಾಡಬಾರದು, ಕೊಂದು ತಿನ್ನಬಾರದು ಎಂಬ ನಂಬಿಕೆ ಇದೆ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ತಿನ್ನಬಹುದು. ಅವರು ಆ ಪ್ರಾಣಿಯ ಸಾವಿಗಾಗಿ ದುಃಖ ಪಡುವುದುಂಟು. ಆದ್ದರಿಂದ ಬಂಧುತ್ವವು ಪ್ರತಿಯೊಂದು ಮಾನವ ಸಮಾಜದ ಸಾಮಾಜಿಕ ವ್ಯವಸ್ಥೆಯ ಅಡಿಪಾಯ.

ಊರಬೇಡರು

ಊರಬೇಡರು ಅಥವಾ ಊರನಾಯಕರು ಮೂಲತಃ ಊರಿನ ಇತರರೊಂದಿಗೆ ಸಹಬಾಳ್ವೆ ಮಾಡುತ್ತಾರೆ. ಮ್ಯಾಸ ಬೇಡರು ಹಾಗೂ ಮೊಂಡ ಸಮುದಾಯಗಳು ತನಗಿಂತ ಕೀಳು ಎಂದು ಭಾವಿಸುತ್ತದೆ. ಕುರಿ, ಕೋಳಿ, ಉಡ ಮುಂತಾದ ಪ್ರಾಣಿಗಳ ಮಾಂಸವನ್ನು ಭಕ್ಷಣೆ ಮಾಡುತ್ತಾರೆ. ಸಾಮಾಜಿಕವಾಗಿ ತಾವು ಮೇಲಿದ್ದೇವೆಯಂದು ತೋರಿಸಿಕೊಳ್ಳಲು ಇಷ್ಟಪಡುವರು. ತೆರ ಪದ್ದತಿ ಇವರಲ್ಲಿ ಹಿಂದೆ ಜಾರಿಗೆ ಇದ್ದರೂ ಈಗ ಇಲ್ಲವಾಗಿದೆ. ತೆರ ಪದ್ದತಿಯ ಬದಲಿಗೆ ವರದಕ್ಷಿಣೆ ಪದ್ಧತಿ ಇವರಲ್ಲಿ ಕಂಡುಬರುತ್ತಿದೆ. ಊರ ನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ. ಕೆಲವೊಮ್ಮೆ ಹೆಣ್ಣಿನ ಮನೆ ಮುಂದೆ ಮದುವೆ ಮಾಡುವುದೂ ಉಂಟು. ಅತ್ತಿಕಂಭ, ಆಲಗಂಭ ತರುವುದು, ಮನೆ ಮುಂದೆ ಚಪ್ಪರ ಹಾಕುವುದು, ಐರಣಿ ಮತ್ತು ಸುರಗಿ ಪದ್ಧತಿಗಳು ಜಾರಿಯಲ್ಲಿವೆ. ತಾಳಿ ಕಟ್ಟಲು ಪುರೋಹಿತರನ್ನು ಕರೆಸುತ್ತಾರೆ. ಇತರ ಮ್ಯಾಸಬೇಡ ಹಾಗೂ ಮೊಂಡರಿಗಿಂತ ಆರ್ಥಿಕವಾಗಿ ಈ ಸಮುದಾಯ ಸಬಲವಾಗಿದೆ. ಹಾಗೇ ಶಿಕ್ಷಣ ಪಡೆದವರ ಪ್ರಮಾಣ ಇತರ ಮ್ಯಾಸಬೇಡರು ಹಾಗೂ ಮೊಂಡರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಸಮುದಾಯದಲ್ಲಿ ಕಂಡುಬರುತ್ತಾರೆ. ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವಾಗ ಮುಖ್ಯವಾಗಿ ಬೆಡಗುಗಳನ್ನು ಪರಿಗಣಿಸುತ್ತಾರೆ. ವಿಜಾತಿ ಬೆಡಗುಗಳಲ್ಲಿ ಮಾತ್ರ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ. ಸಜಾತಿ ಬೆಡಗಿನವರನ್ನು ಸಹೋದರರೆಂದು ಭಾವಿಸುತ್ತಾರೆ. ಅಲ್ಲದೇ ಇವರು ಪೂಜಿಸುವ ಆರಾದ್ಯ ದೈವಗಳೆಂದರೆ, ವೆಂಕಟೇಶ್ವರ, ಆಂಜನೇಯ, ಹುಲಿಗೆಮ್ಮ, ಸವದತ್ತಿ ಯಲ್ಲಮ್ಮ, ಇತ್ಯಾದಿ

ಊರಬೇಡರ ಬೆಡಗುಗಳು			
ಕ್ರ.ಸಂ	ಬೆಡಗುಗಳು		
೧	ಮುಮ್ಮಡ್ಲೋರು, ನಲ್ಲಬೋತುಲು (ಇವೆರಡೂ ಸಹೋದರ ಬೆಡಗುಗಳೆಂದು ಭಾವಿಸುತ್ತಾರೆ.)	೨ ಮೀನಿಗೋರು	೩ ಕಾಶೇರು
೪	ಸಾಕೇಲ್ಲೋರು	೫ ಎನಿಮಲೋರು	೬ ನೆಲ್ಲಬಾಮುಡ್ಲು

೭ ಡೋಣಮಂಡ್ಲು	೮ ಬೋಸುರಲು	೯ ನಶೆನೋರು,
೧೦ ಮುನ್ನೋಲ್ಲೋರು	೧೧ ಗಟ್ಟಿಮತ್ಯೇರು	೧೨ ಕುಂಬ್ರೇಲು
೧೩ ಕಾದುಗಡ್ಲೇರು	೧೪ ಎತ್ತಿನೋರು	೧೫ ದಡ್ಡಿದಾಸರಿಗಳು
೧೬ ಪಾಲಜ್ಜಿಗಳು	೧೭ ಗಾಡವುಲು	೧೮ ಓಬನಾಯಕರು
೧೯ ಪಟ್ಟಪಲ್ಲಾರು	೨೦ ಭಾನೋರ್ ಬೋನಳ್ಳಿಯೋರ್	೨೨ ಚಿನ್ನನಾಯ್ಕಲು,
೨೩ ಪಾಮಲ್ಲೇರು	೨೪ ರಾಯಬೋರ್	೨೫ ಬಡಸಲೋರ್
೨೬ ಪರಮಕುಲರ್		

ಮುಂತಾದ ಬೆಡಗುಗಳು ಕಂಡುಬರುತ್ತವೆ. ಮೇಲಿನ ಎರಡು ಬೆಡಗುಗಳಿಗೆ ಇವು ವಿಜಾತಿ ಬೆಡಗುಗಳಾಗುವುದರಿಂದ ಅವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ.

ಮ್ಯಾಸ ಬೇಡರು

ಮ್ಯಾಸ' ಪದ 'ಮೇಯಿಸುವವರು' ಶಬ್ದದಿಂದ ನಿಷ್ಪನ್ನವಾಯಿತೆಂದು ಲೇಖಕರು ಹೇಳಿದ್ದಾರೆ. ಇವರ ದೇವರುಗಳನ್ನು ಕುರಿತು, "ಒಂದು ಕಡೆ ನೆಲೆ ನಿಲ್ಲದೆ ಬೇಟೆಯಾಡುತ್ತ ಬೇರೆ ಕಡೆಗೆ ಸಾಗುತ್ತ ಅಲೆಮಾರಿ ಜನಾಂಗವಾಗಿದ್ದ ಇವರು ಸಾಗಣೆಗೆ ಅನುಕೂಲವಾಗಲೆಂದು ಪೆಟ್ಟಿಗೆ ದೇವರುಗಳನ್ನು ನಿರ್ಮಾಣ ಮಾಡಿಕೊಂಡಿರಬೇಕು. ಪಾಲೇ ದೇವರು, ಓಬಳ ದೇವರು, ಕಂಪಳ ದೇವರು, ಬೋಸೇ ದೇವರು, ಗಾದರ ದೇವರು ಮುಂತಾದ ಗಂಡು ದೇವತೆಗಳನ್ನು ಇವರು ಪೂಜಿಸುತ್ತಾರೆ..." ಎಂಬುದಾಗಿ ಹೇಳಿರುವ ಲೇಖಕರ ಮಾತುಗಳು ಸಮರ್ಪಕವಾಗಿಯೇ ಇವೆ. ಬೇಡರಲ್ಲಿ ಪ್ರಮುಖವಾಗಿ ಕಂಡು ಬರುವ ನ್ಯಾಯ ತೀರ್ಮಾನದ ಕಟ್ಟೆ ಮನೆಗಳನ್ನು ಹೆಸರಿಸುತ್ತ ದಾವಣಗೆರೆ ತಾಲೂಕಿನ ಕೋಡಿಹಳ್ಳಿ ಚಳ್ಳಕೆರೆ ತಾಲೂಕಿನ ಬುಕ್ಕಾಂಬುದಿ, ಮೊಳಕಾಲ್ಮೂರು ತಾಲೂಕಿನ ಗೌರಸಂದ್ರ ಮತ್ತು ಓಬೇನಹಳ್ಳಿ ಎಂದು ಹೇಳಿದ್ದಾರೆ. ಆದರೆ ಬೇಡ ನಾಯಕರ ಮೂರು ಕಟ್ಟೆ ಮನೆಗಳು, ನಾಯಕರ ಹಟ್ಟಿ, ನನ್ನೀವಾಳ ಮತ್ತು ಚಿತ್ರದುರ್ಗದ ಬಳಿಯ ಗೊನೂರು, ಇದರೊಂದಿಗೆ ಸಣ್ಣ ಪುಟ್ಟ ಪಂಚಾಯ್ತಿಯ ತೀರ್ಮಾನಗಳು ಆಯಾ ಗ್ರಾಮದ ಇಲ್ಲ ಪಕ್ಕದ ಮ್ಯಾಸರಟ್ಟಿಯ ಗುಡಿ ಕಟ್ಟುಗಳಲ್ಲಿ ತೀರ್ಮಾನವಾಗುತ್ತಿದ್ದು ವ್ಯಾಜ್ಯವು ಕೊಂಚ ದೊಡ್ಡದಿದ್ದು ಪರಿಹರಿಸಲಾರದಂತಿದ್ದರೆ ಅವು ಮೇಲೆ ಹೇಳಿದ ಗೊನೂರು, ನಾಯಕನಹಟ್ಟಿ, ನನ್ನಿವಾಳ ಕಟ್ಟೆ ಮನೆಗಳಲ್ಲಿ ತೀರ್ಮಾನವಾಗುತ್ತಿದ್ದವು. ಈ ಮೂರು ಹಟ್ಟಿಗಳೂ ಹಿಂದೆ ಸಣ್ಣ ಸಣ್ಣ ಪಾಳೆಯ ಪಟ್ಟುಗಳಾಗಿದ್ದವು. ಈಗಲೂ ಆಗಾಗ್ಗೆ ಸಣ್ಣ ಪುಟ್ಟ ಕಲಹಗಳು, ಫಿರ್ಯಾದುಗಳೂ ನನ್ನಿವಾಳದ ಕಟ್ಟೆ ಮನೆಗೆ ಬರುತ್ತಲಿವೆ. ಇನ್ನು ಬೇಡ ನಾಯಕರ ಹುಟ್ಟು ಸಾವಿನ ಆಚರಣೆಗಳನ್ನು ಕುರಿತಂತೆ ಲೇಖಕ ಎಂ.ಜಿ.ಈಶ್ವರಪ್ಪನವರು ಸಂಗ್ರಹಿಸಿಕೊಟ್ಟಿರುವ ಮಾಹಿತಿಗಳು

ಸರಿಯಾಗಿಯೇ ಇವೆ. ಎಡ್ಗರ್ ಥರ್‌ಸ್ಟನ್ ಮತ್ತು ಹೆಚ್.ವಿ.ನಂಜುಂಡಯ್ಯನವರ ಇಂಗ್ಲೀಷ್ ಲೇಖನಗಳನ್ನು ಬಿಟ್ಟರೆ ಅಷ್ಟೇ ಮಾಹಿತಿಗಳನ್ನು ಕನ್ನಡದಲ್ಲಿ ಒದಗಿಸುವ ಪುಸ್ತಕ 'ಮ್ಯಾಸ ಬೇಡರು' ಪುಸ್ತಕ ಆಗಿದೆ."(ಕೃಷ್ಣಮೂರ್ತಿ ಹನೂರು:೧೯೯೩:ಪು.೧೬-೧೭).

ಬುಡಕಟ್ಟುಗಳದು ಅರಣ್ಯ ಸಂಸ್ಕೃತಿಯಾದರೆ ಉಳಿದದ್ದು ಗ್ರಾಮ, ನಗರ, ಪಟ್ಟಣಗಳ ಸಂಸ್ಕೃತಿ. ಈ ಗ್ರಾಮ, ನಗರ, ಪಟ್ಟಣಗಳ ಸಂಸ್ಕೃತಿ ಕಾಲಕಾಲಕ್ಕೆ ಅನೇಕಾನೇಕ ಧಾರ್ಮಿಕ ಪ್ರಭಾವಗಳಿಗೆ ಒಳಗಾಗಿ ತಮ್ಮ ಸಂಸ್ಕೃತಿಯ ಸ್ವರೂಪ ರಚನೆಯಲ್ಲಿ ಬದಲಾವಣೆಗೊಳ್ಳುತ್ತ ಹೋದವು. ಆದರೆ ಬುಡಕಟ್ಟುಗಳು ಗ್ರಾಮ, ನಗರ, ಖೇಡ, ಖರ್ವಡಗಳಿಂದ ದೂರ ಉಳಿದು ತಮ್ಮ ಯಾವುದೇ ಸಂಪ್ರದಾಯಗಳನ್ನು ಬಿಟ್ಟು ಕೊಡದೆ, ಬೇರೆಯವರ ಯಾವುದೇ ಬಗೆಯ ನಡವಳಿಕೆಯನ್ನು ಸ್ವೀಕರಿಸದೆ ತಮ್ಮದೇ ವಿಶಿಷ್ಟತೆಯನ್ನು ಉಳಿಸಿಕೊಳ್ಳುತ್ತ ಬಂದವು. ಒಂದು ವೇಳೆ ಬುಡಕಟ್ಟಿನಿಂದ ಒಬ್ಬ ವ್ಯಕ್ತಿ ಹೊರಬಂದು ಊರು ಕೇರಿ ಸೇರಿದರೆ ಅಂಥವನನ್ನು ಬುಡಕಟ್ಟು ಬಹಿಷ್ಕರಿಸಿ ಅವನ ಜತೆಯಲ್ಲಿ ಯಾವುದೇ ಸಂಬಂಧವನ್ನು ಹೊಂದದೇ ತಿರಸ್ಕರಿಸುವಷ್ಟರಮಟ್ಟಿಗೆ ಅದರ ಸಂಸ್ಕೃತಿ ಶುದ್ಧವಾಗಿ ಉಳಿಯಿತು. ಇಷ್ಟಾದರೂ ಅರಣ್ಯಗಳಲ್ಲಿ ಗುಂಪು ಗುಂಪಾಗಿ ಆದಿಮಾನವ ಸಮೂಹ ಕಾಲ ಕಳೆಯುವಲ್ಲಿ ಅವರ ನಡುವೆಯೇ ತುಸು ಬುದ್ಧಿ ಬಲ ಹೆಚ್ಚಿದ್ದವರು ಹೊಸದೊಂದು ಜೀವನಕ್ರಮ ಕಂಡುಕೊಳ್ಳುವ ಬಯಕೆ ಇರುವವರು, ಬುಡಕಟ್ಟಿನಿಂದ ಹೊರಬರುತ್ತ ಅವರದೇ ಒಂದು ಹೊಸ ಗುಂಪು ಆಗತೊಡಗಿ ಗ್ರಾಮ, ನಗರ ಸಂಸ್ಕೃತಿ ಬೆಳೆಯತೊಡಗಿತು ಎನಿಸುತ್ತದೆ. ಈಗಲೂ ಸಹ ಕರ್ನಾಟಕದಲ್ಲಿ ಚಿತ್ರದುರ್ಗ ಪ್ರದೇಶದೊಳಗೆ ವಾಸಿಸುತ್ತಿರುವ ಬೇಡನಾಯಕ ಮತ್ತು ಕಾಡುಗೊಲ್ಲರಲ್ಲಿಯೇ ಇನ್ನೊಂದು ಗುಂಪಾಗಿರಬಹುದಾದ ಊರು ನಾಯಕರು ಊರು ಗೊಲ್ಲರು ಎಂಬ ಪ್ರತ್ಯೇಕ ಗುಂಪು ಇದೆ. ಈ ಊರು ನಾಯಕರು, ಊರು ಗೊಲ್ಲರು ಒಂದು ಕಾಲಕ್ಕೆ ಕಾಡುಬೇಡರು, ಕಾಡುಗೊಲ್ಲರ ಗುಂಪಿನಲ್ಲಿಯೇ ಇದ್ದು ತದನಂತರ ಊರು ಸೇರಿದವರಿರಬೇಕು. ಆದರೆ ಈಗ ಮಾತ್ರ ಎರಡು ಗುಂಪುಗಳಲ್ಲಿ ಯಾವುದೇ ಸಂಬಂಧವಿರುವುದಿಲ್ಲ. ಹಿಗೆಯೇ ಪ್ರಾಚೀನ ಕಾಲಕ್ಕೆ ಬುಡಕಟ್ಟುಗಳನ್ನು, ಅಡವಿಗಳನ್ನು ತೊರೆದು ಬಂದವರು, ಊರೊಳಗೆ ಮತ್ತು ನಗರಗಳಲ್ಲಿ ಜಾತಿ ಮತ ವರ್ಗದವರಾಗಿ ಪರಿವರ್ತಿತರಾದರು. ಆ ಜಾತಿ ಮತಗಳಲ್ಲಿಯೂ ಅವರವರ ಬುದ್ಧಿಶಕ್ತಿ ಮತ್ತು ಶ್ರೀಮಂತಿಕೆಗೆ ತಕ್ಕಂತೆ ಶ್ರೇಣಿಗಳು ರೂಪುಗೊಳ್ಳತೊಡಗಿದವು. ಆದರೆ ಇದ್ಯಾವುದರ ಗೋಜಿಗೂ ಹೋಗದೇ ಜಾತಿ, ವರ್ಗ, ಐಶ್ವರ್ಯ ಜತೆಗೆ ಭೂಮಿಯೂ ಮುಖ್ಯವಾಗದೆ ಬುಡಕಟ್ಟು ಜೀವನವೇ ಮುಖ್ಯವೆಂದು ಅದರ ನಿಯಮಗಳನ್ನು ಮೀರಬಾರದೆಂದು ತಿಳಿದು, ಅರಣ್ಯವನ್ನೇ ಆಸ್ತಿ ಎಂದು ಭಾವಿಸಿ ಇಂದಿಗೂ ಅಲ್ಲಿಯೇ ಬದುಕುತ್ತಿರುವ ಅನೇಕಾನೇಕ ಗುಂಪುಗಳನ್ನು ನಾವು ಇವೊತ್ತಿಗೂ ಕಾಣಬಹುದಾಗಿದೆ. ಬಹಳ ತಡವಾಗಿಯಾದರೂ, ಕಳೆದ ಶತಮಾನದ ಆರಂಭದಿಂದಲೂ ಬುಡಕಟ್ಟುಗಳ ಅಧ್ಯಯನ ಆರಂಭವಾಯಿತು. ಹಾಗೆ ನೋಡಿದರೆ ಅರಣ್ಯ ಜನಾಂಗಗಳ ಅಧ್ಯಯನ ತುಂಬಾ ಪ್ರಯಾಸದ ಕೆಲಸ. ಅವರು ಪಟ್ಟಣ, ಗ್ರಾಮ ಜೀವನದಿಂದಲೇ ದೂರವಾಗಿರುವಾಗ ವಿದ್ವಾಂಸರು, ಮಾನವ ಶಾಸ್ತ್ರಜ್ಞರು ಆ ಗುಂಪನ್ನು ಹೊಕ್ಕು ಅವರ ಆಚಾರ ವಿಚಾರಗಳನ್ನು ಕುರಿತು ವಿಷಯ ಸಂಗ್ರಹಿಸುವುದು,

ಅಧ್ಯಯನ ಮಾಡುವುದು ಅತ್ಯಂತ ಕಠಿಣವಾದುದು. ತಮ್ಮ ಯಾವ ಸಂಗತಿಗಳನ್ನು ಆ ಜನ ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಹೊರಗಿನದೆಲ್ಲವನ್ನು ಅವರು ಸಂಶಯದಿಂದಲೇ ಕಾಣುತ್ತಾರೆ. ಇಂಥ ಅಧ್ಯಯನ ಮಾಡಿದ ವಿದ್ವಾಂಸರು, ಮಾನವ ಶಾಸ್ತ್ರಜ್ಞರು ಇದ್ದಾರೆ. ಗಮನಾರ್ಹ ಸಂಗತಿ ಎಂದರೆ ಭಾರತದ ಬುಡಕಟ್ಟುಗಳ ಬಗ್ಗೆ ಭಾರತಿಯ ವಿದ್ವಾಂಸರು ಅಧ್ಯಯನ ಮಾಡಿದ್ದಕ್ಕಿಂತ ಪಾಶ್ಚಾತ್ಯರು ಅಧ್ಯಯನ ಮಾಡಿದ್ದೇ ಹೆಚ್ಚು. ವೆರಿಯರ್ ಎಲ್ವಿನ್ನರೇ ಆದಿಯಾಗಿ ಜಿ.ಹೆಚ್.ಹಟ್ಟನ್, ಜೆ.ಪಿ. ಮಿಲ್ಸ್, ಸ್ಮಿಥ್, ಹೈಮರ್ ಡಾರ್ಫ್ ಇಂಥವರೆಲ್ಲ ಉತ್ತರ ಭಾರತದ ಬುಡಕಟ್ಟುಗಳಾದ ಅಂಗಾಮಿ, ನಾಗಾ, ಸೆಮಾ ಇವರನ್ನು ಕುರಿತು ಅಧ್ಯಯನ ನಡೆಸಿದ್ದಾರೆ.

"ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿಯವರು ತಮ್ಮ Castes and Tribes of Southdrn India ಎಂಬ ಕೃತಿ ಮಾಲಿಕೆಯ ಒಂದನೇ ಸಂಪುಟದಲ್ಲಿ ಬೇಡರು ಮತ್ತು ಬೋವಿಗಳನ್ನು ಒಂದೇ ಜಾತಿಯವರು ಎಂದು ಕರೆದಿದ್ದಾರೆ. ಆಂಧ್ರದ ಕಡೆ ಬೇಡರನ್ನು ಬೋವಿ ಎಂದು ಕರೆಯುವುದಾಗಿ ಕಪಟರಾಳ ಕೃಷ್ಣರಾವ್ ಹೇಳುತ್ತಾರೆ. ಆದರೆ ಚಿತ್ರದುರ್ಗದ ಬೇಡನಾಯ್ಕರನ್ನು ತಳವಾರ ನಾಯಕರು, ಮ್ಯಾಸರು ಎಂದಷ್ಟೇ ಕರೆಯುವರೇ ಹೊರತು ಬೋವಿಗಳು ಎಂದು ಕರೆಯುವುದಿಲ್ಲ. ಆದರೆ ಬೇಡನಾಯಕರ ಬೆಡಗುಗಳನ್ನು ಹೇಳುವಾಗ ತಮ್ಮಲ್ಲಿ ಬೋವಿಗಳದೂ ಒಂದು ಬೆಡಗು ಉಂಟು ಎಂದು ಹೇಳುವರು. ಥರ್ಸ್ಟನ್ ಅವರು ತಮ್ಮ ಎರಡನೇ ಸಂಪುಟದ ೧೮೪ನೇ ಪುಟದಲ್ಲಿ ". Both telugu speaking Boyers and the Canarese speaking Bedars are spliti into the two main divisions of uru or village men and Mysa or grass land men and each of these division is again subdivided into a number of exogamous Bedags" ಎಂಬುದನ್ನು ಹೇಳಿದ್ದಾರೆ. ಅಲ್ಲದೇ ೧೯೫ನೇ ಪುಟದಲ್ಲಿ — "....according to the Mysore Census report 1901 the chief deity of the Beders is Tirupati Venkataramanasamy worshiped locally under the name of Tirumala Devaru, but offsrings and sacrifices are also made to Mariyamma. Their guru is known as Tirumala Tatacharya who is also a head of the Srivaishnava Brahamins.... The Dewan of Sanduru informs me that in recent times some Mysore Bedas have changed their faith and are now showing special reverence to Mahadeva. They were apparently converted by Jangamas but not to the fullest extent. The guru is the head of the Ujjaini Lingayath Mutt which is in the Kudligi Taluk, Bellary District...".”(ಕೃಷ್ಣಮೂರ್ತಿ ಹನೂರು:೧೯೯೩:ಪು.೧೬-೧೯).

ಥರ್ಸ್ಟನ್ ಅವರು ಬೇಡ ನಾಯಕರನ್ನು ಮೂಲತಃ ವೈಷ್ಣವರೆಂದು ಅವರ ದೇವರು ತಿರುಪತಿ ವೆಂಕಟರಮಣನೆಂದು ಭಾವಿಸಿರುವಂತಿದೆ. ಆದರೆ ಬೇಡರು ಮೂಲತಃ ಶೈವರೇ ಆಗಿದ್ರು. ಅವರ

ಬುಡಕಟ್ಟಿನ ಮೂಲದಂತ ಕಥೆಗಳು, ಅವರು ಇಟ್ಟುಕೊಳ್ಳುವ ಹೆಸರುಗಳು ಶೈವ ಮೂಲವಾದವು. ಆದರೆ ಆ ನಂತರದಲ್ಲಿ ಅವರ ಮೇಲೆ ವೈಷ್ಣವ ಧರ್ಮದ ಪ್ರಭಾವವೂ ಆಗಿದೆ. ಕೆಳವರ್ಗದ ಮೇಲೆ ಯಾವುದೇ ಧರ್ಮಗಳು ಬಹಳ ಸುಲಭವಾಗಿ ಪ್ರಭಾವ ಬೀರಬಲ್ಲವು. ಧಾರ್ಮಿಕ ಭಾವನೆಗಳು ಮೇಲ್ವರ್ಗದವರ ಮನಸ್ಸನ್ನು ಪ್ರವೇಶಿಸುವುದಕ್ಕಿಂತ ಕೆಳವರ್ಗದವರ ಮನಸ್ಸನ್ನು ಬಹುಬೇಗ ಪ್ರವೇಶಿಸುತ್ತವೆ. ಉದಾಹರಣೆಗೆ ಚಿತ್ರದುರ್ಗದ ಇನ್ನೊಂದು ಬುಡಕಟ್ಟು ಗುಂಪಾದ ಕಾಡುಗೊಲ್ಲರು ತಮ್ಮನ್ನು ಯದುವಂಶದವರು ಎಂದು ಕರೆದುಕೊಳ್ಳುತ್ತಾರೆ. ಕೃಷ್ಣ ತಮ್ಮ ಆರಾಧ್ಯ ದೈವ ಎನ್ನುವರು. ಆದರೆ ಅವರ ಬುಡಕಟ್ಟು ಸಂಬಂಧದ ಕಥೆ ಜುಂಜಪ್ಪನ ಪುರಾಣ ಸಂಪೂರ್ಣವಾಗಿ ಶೈವ ಮೂಲವಾದದ್ದು. ಆ ಕಥಾನಕದ ಘಟನೆಗಳೆಲ್ಲವೂ ವೀರಭದ್ರನ ಯಜ್ಞನಾಶದ ಕಥೆಯಂತೆ ಇದ್ದು ಜುಂಜಪ್ಪನನ್ನು ವೀರಭದ್ರನ ಅವತಾರ ಎಂತಲೂ ಹೇಳುವರು. ಅಲ್ಲದೆ ಗೊಲ್ಲರ ಆರಾಧನೆಗಳು ಮತ್ತು ಜಾತ್ರೆಗಳೆಲ್ಲ ಶೈವ ಸಂಪ್ರದಾಯದಲ್ಲೇ ನಡೆಯುತ್ತವೆ. ಅವರು ಪೂಜಿಸುವ ಇನ್ನಿತರ ದೇವತೆಗಳ ಹೆಸರುಗಳು ಕೂಡ ಕೇತೇಲಿಂಗ, ಪಾತೇಲಿಂಗ, ಚಿತ್ರಲಿಂಗ, ಕಾಟಮಲಿಂಗ ಹೀಗೆ ಬರುತ್ತವೆ. ಹಾಗೆ ನೋಡಿದರೆ ಪ್ರಾಚೀನ ಕಾಲಕ್ಕೆ ದಕ್ಷಿಣ ಭಾರತದ ಬಹುಪಾಲು ಬುಡಕಟ್ಟುಗಳೆಲ್ಲ ಶೈವ ಸಂಪ್ರದಾಯವನ್ನೇ ಆರಂಭಕ್ಕೆ ಅನುಸರಿಸಿಕೊಂಡು ಬಂದಿವೆ. ತದನಂತರ ಉತ್ತರದಿಂದ ಬಂದ ಆರ್ಯ ಸಂಪ್ರದಾಯ, ಧರ್ಮಶ್ರದ್ಧೆ, ರಾಮಾಯಣ, ಮಹಾಭಾರತ ಸಂಸ್ಕೃತಿಗೆ ಒಳಪಟ್ಟು ಆ ಕಥೆಯ, ಧರ್ಮದ ಅಂಶಗಳನ್ನೆಲ್ಲಾ ತಮ್ಮ ಬುಡಕಟ್ಟಿಗೆ ಹೊಂದಿಸಿಕೊಂಡದ್ದಲ್ಲದೆ ಆಮೇಲಾಮೇಲೆ ವೈಷ್ಣವ ದೇವತೆಗಳನ್ನೂ ಆರಾಧಿಸತೊಡಗಿದರು. ಅದರಿಂದ ದನಕರು, ಕುರಿ ಪಾಲನೆ ಮಾಡುತ್ತಿದ್ದ ಶೈವ ಸಂಪ್ರದಾಯದ ಕಾಡುಗೊಲ್ಲರು ಅದೇ ಪಶುಪಾಲಕನಾಗಿದ್ದ ಕೃಷ್ಣನನ್ನು ಆರಾಧ್ಯ ದೈವನನ್ನಾಗಿ ಮಾಡಿಕೊಂಡರು. ಅಂತೆಯೇ ಶೈವಾರಾಧಕರಾಗಿದ್ದ ಬೇಡನಾಯಕರೂ ಆಮೇಲೆ ವಿಷ್ಣು ಆರಾಧಕರೂ ಆದರು. ಈ ಕಾರಣಗಳಿಂದಾಗಿಯೇ ಇಂದಿಗೂ ಚಿತ್ರದುರ್ಗದ ಬೆಟ್ಟದ ಮೇಲೆ ವಾಸಿಸಿದ ಪಾಳೆಯಗಾರ ನಾಯಕರು ಒಂದು ಕಡೆ ಗೋಪಾಲಕೃಷ್ಣ ಸ್ವಾಮಿಯ ಆರಾಧಕರಾಗಿ, ಇನ್ನೊಂದು ಕಡೆ ಸಂಪಿಗೆ ಸಿದ್ದೇಶ್ವರನ ಭಕ್ತರೂ ಆಗಿ ಮತ್ತೊಂದು ಕಡೆ ಶಕ್ತಿ ದೇವತೆಯ ಆರಾಧಕರೂ ಆಗಿ ಪಾಳೆಯಗಾರಿಕೆ ನಡೆಸಿದ್ದನ್ನು ಕಾಣಬಹುದು. ಇದೇ ಪ್ರವೃತ್ತಿ, ಗುಣ ಅಡವಿಗಳಲ್ಲಿ ವಾಸಿಸುತ್ತಿದ್ದ ಮ್ಯಾಸಬೇಡರಲ್ಲೂ ಕಂಡು ಬರುತ್ತದೆ. ಕುಲದೇವತೆ ಶ್ರೀಶೈಲ ಮಲ್ಲಿಕಾರ್ಜುನ ವೈಷ್ಣವ ದೇವತೆಯಾಗಿ ಅವರು ಕಂಪಳರಂಗ (ವೆಂಕಟೇಶ್ವರ) ನನ್ನು ಪೂಜಿಸುವರು. ಹಾಗೆಯೇ ಮಾರಮ್ಮನ ಜಾತ್ರೆಯನ್ನೂ ಏರ್ಪಡಿಸುವರು. ಹೀಗಾಗಿ ಬೇಡ ನಾಯಕರನ್ನು ವೈಷ್ಣವರೆನ್ನುವುದಕ್ಕಿಂತ ಮೂಲತಃ ಶೈವ ಭಕ್ತರೆಂದು ಗುರುತಿಸುವುದೇ ಸೂಕ್ತ.

ಕಟ್ಟಿನವರ ಭಾಷೆ, ಅವರ ಜೀವನ ಕ್ರಮ, ದೇವರ ಕಲ್ಪನೆ, ನ್ಯಾಯಪದ್ಧತಿ, ಜೀವನಾವರ್ತುಲದ ವಿವಿಧ ಸಂದರ್ಭದಲ್ಲಿ ಅವರು ಕೈಗೊಳ್ಳುವ ಕೆಲವು ಆಚರಣೆಗಳು, ಹುಟ್ಟು ಸಾವಿನ ಸಂದರ್ಭದ ವಿಧಿಕ್ರಿಯೆಗಳು, ಪ್ರಕೃತಿಯೊಂದಿಗೆ ತಾದಾತ್ಮ್ಯ ಇದನ್ನೆಲ್ಲ ಅಭ್ಯಾಸ ಮಾಡಿದ ನಂತರ, ಅರೆಬೆತ್ತಲೆಯಾಗಿ ಗುಡ್ಡ ಗಾಡು ಅರಣ್ಯಗಳಲ್ಲಿ ಅಲೆದಾಡಿಕೊಂಡು ಜೀವಿಸುವ ಆದಿವಾಸಿಗಳ ಜೀವನದಲ್ಲಿಯೂ ನಾಗರೀಕವಾದ ಉತ್ಕೃಷ್ಟ ಮೌಲ್ಯಗಳು ಪ್ರಚಲಿತದಲ್ಲಿವೆ ಎಂಬುದು ಗೊತ್ತಾಯಿತು. ತಂದೆ ಮಕ್ಕಳ

ಸಂಬಂಧದಲ್ಲಿ, ಪತಿ ಪತ್ನಿಯರ ವಿಚಾರದಲ್ಲಿ ಇರಬೇಕಾದ ಪ್ರೇಮ, ಪ್ರಕೃತಿಯ ಮೇಲಿನ ವಿಶ್ವಾಸ, ಅದನ್ನು ಪ್ರೀತಿಸುವುದು, ಬುಡಕಟ್ಟಿನ ಹಿರಿಯರಲ್ಲಿ ಗೌರವ, ಸಾಹಸ ಪ್ರವೃತ್ತಿ, ದೈವದ ಮೇಲಿನ ಭಕ್ತಿಯಿಂದಾಗಿ ತಪ್ಪು ಮಾಡಲು ಹೆದರುವುದು, ಇವೆಲ್ಲ ಇಂದಿಗೂ ಬುಡಕಟ್ಟಿನ ಪ್ರಮುಖ ಲಕ್ಷಣಗಳಾಗಿವೆ.

ಸಾಮಾನ್ಯವಾಗಿ ಬುಡಕಟ್ಟಿನವರೆಲ್ಲರೂ ತಮ್ಮ ಕುಲದೇವತೆಗಳನ್ನಾಗಿ ಸೂರ್ಯ ಚಂದ್ರರನ್ನು ಸ್ವೀಕರಿಸಿದ್ದಾರೆ. ಇದೇ ಅಭಿಪ್ರಾಯವನ್ನು ನಾವು ಇತಿಹಾಸದ ವಿವರಗಳಲ್ಲೂ ಅನೇಕ ಕಥೆ ಕಾವ್ಯಗಳಲ್ಲೂ ಕಾಣಬಹುದು. ಎಂದರೆ ಎಲ್ಲ ಕಥೆಗಳ ರಾಜವಂಶಗಳ ಮೂಲವೂ ಸೂರ್ಯವಂಶವಾಗಿರುತ್ತದೆ. ಅಥವಾ ಚಂದ್ರ ವಂಶವಾಗಿರುತ್ತದೆ. ಇನ್ನು ಬುಡಕಟ್ಟು ಒಂದೇ ಕಡೆ ಗುಂಪು ಕಟಿಕೊಂಡು ವಾಸಿಸುವುದಾದರೂ ಕುಲಬೇಧಗಳನ್ನು ಮಾಡಿಕೊಂಡು, ಅದರಲ್ಲಿ ಅನೇಕ ಕುಲಗಳನ್ನು ಪರಸ್ಪರ ಅಣ್ಣ ತಮ್ಮಂದಿರು ಎಂದು ಕರೆದು, ಅವರ ನಡುವೆ ವಿವಾಹ ಸಂಬಂಧವನ್ನು ನಿಷೇಧಿಸಿದೆ. ಅರಿತೋ ಅರಿಯದೆಯೋ ಅಂತಹ ಒಂದೇ ರಕ್ತ ಸಂಬಂಧದಲ್ಲಿ ವಿವಾಹ ಸಂಬಂಧ ಏರ್ಪಡಲಾಗದು, ಅದರಿಂದ ವಂಶಾಭಿವೃದ್ಧಿಗೆ ಹಾನಿ ಎಂಬ ವೈಜ್ಞಾನಿಕ ಸತ್ಯವನ್ನು ಬುಡಕಟ್ಟಿನವರು ಕಂಡುಕೊಂಡಂತೆ ಕಾಣಿಸುತ್ತದೆ. ನ್ಯಾಯ ತೀರ್ಮಾನ ವಿಚಾರಗಳಲ್ಲೂ ಅಷ್ಟೆ ಯಾವುದೇ ನ್ಯಾಯಗಳು ದೇವತೆಯ ಮುಂದೆ, ಹಿರಿಯರ ಸಮ್ಮುಖದಲ್ಲಿ ನಡೆಯುತ್ತಿತ್ತು. ತಪ್ಪಿತಸ್ಥ ತಾನು ನಿಂತ ಕಟ್ಟೆ ಮನೆಗೆ ಹೆದರದಿದ್ದರೂ, ಅಲ್ಲಿ ಸೇರಿದ ಹಿರಿಯರಿಗೆ ಅಂಜಬೇಕಾಗುತ್ತಿತ್ತು. ಹಿರಿಯರಿಗೆ ಅಂಜದಿದ್ದರೂ ಅಲ್ಲಿ ನೆಲೆಸಿರುವ ದೇವತೆಗೆ ಅಳುಕಬೇಕಿತ್ತು. ಹೀಗೆ ಪ್ರತಿಯೊಂದು ಹಂತದಲ್ಲಿಯೂ ತಮ್ಮದೇ ಆದ ನೀತಿ ನಿಯಮಗಳನ್ನು ಸೃಷ್ಟಿಸಿಕೊಂಡು ಪ್ರಾಮಾಣಿಕತೆಯಿಂದ ಬದುಕುತ್ತಿದ್ದ ಬುಡಕಟ್ಟುಗಳು ಅನೇಕ ಕಾಲದವರೆಗೆ ಗ್ರಾಮ, ಪಟ್ಟಣಗಳ ನಾಗರೀಕತೆಗೆ ಅನಾಗರೀಕರಂತೆಯೇ ಕಂಡರು. ಮ್ಯಾಸನಾಯಕರು ಕುರಿ, ಮೇಕೆ ಮತ್ತು ಇತರ ಕಾಡುಪ್ರಾಣಿಗಳನ್ನು ತಿನ್ನುವರಾದರೂ ಕೋಳಿ ಮತ್ತು ಕೋಳಿಯ ಮೊಟ್ಟೆ ಇವರಿಗೆ ನಿಷಿದ್ಧವಾಗಿದೆ. ಕಾಡುಗೊಲ್ಲರಂತೆ ಮ್ಯಾಸನಾಯಕರು ಸಹ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸ ಮಾಡುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಮದುವೆ ಕಾರ್ಯಗಳನ್ನು ಕುಲದ ಹಿರಿಯನೇ ಮುಂದೆ ನಿಂತು ಮಾಡುತ್ತಾನೆ. ಸಾಮಾನ್ಯವಾಗಿ ಹೆಣ್ಣಿನ ಮನೆ ಮುಂದೆ ಮದುವೆಗಳು ನಡೆಯುತ್ತವೆ. ಇವರಲ್ಲಿಯೂ ಐರಣಿ, ಸುರಗಿ ಪದ್ಧತಿಗಳಿರುವುದನ್ನು ಕಾಣಬಹುದು. ಮ್ಯಾಸಬೇಡರು ಮತ್ತು ಊರ ಬೇಡರ ನಡುವೆ ಆಚರಣೆಗಳಲ್ಲಿ ವ್ಯತ್ಯಾಸ ಕಂಡುಬರುವುದಾದರೂ ಶೇಕಡ ಎಂಭತ್ತರಷ್ಟು ಆಚರಣೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಮದುವೆಯಲ್ಲಿ ಬಾಸಿಂಗ ದಂಡೆಯನ್ನು ಕಟ್ಟುವುದಿಲ್ಲ. ಗಂಡಿಗೆ ರುಮಾಲನ್ನು ಸುತ್ತಿದರೆ ಹೆಣ್ಣಿಗೆ ಕೇವಲ ಹೂವು ಮುಡಿಸುತ್ತಾರೆ. ಮ್ಯಾಸ ನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ ಹಾಲುಗಂಬ, ಹತ್ತಿಕಂಬದ ಪದ್ಧತಿಯಾಗಲೀ ಸುರಗಿ ಪದ್ಧತಿಯಾಗಲೀ ಇವರಲ್ಲಿರಲಿಲ್ಲ. ಆದರೆ ಇತ್ತೀಚೆಗೆ ಇವರಲ್ಲಿ ಸುರಗಿ ಪದ್ಧತಿ ಪ್ರವೇಶ ಪಡೆದಿದೆ. ಹೆಣ್ಣನ್ನು ನೋಡಲು ಹೋಗುವಾಗ ಐದು ಎಲೆ, ಐದು ಅಡಕೆ, ಐದು ಚಿಪ್ಪು ಬಾಳೆಹಣ್ಣು, ಐದು ಉತ್ತುತ್ತಿ, ಐದು ಕೊಬ್ಬರಿ ಗಿಟುಗ, ಐದು ಅರಿಸಿಣಕೊಂಬು, ಐದು ಸೇರು ಅಕ್ಕಿ ಇಲ್ಲವೆ ಅಕ್ಕಿಯಿಂದ ಮಾಡಿದ ಹಿಟ್ಟು, ಐದು ಸೇರು ಸಜ್ಜೆ ಹಿಟ್ಟಿನ ರೊಟ್ಟಿಗಳನ್ನು ಹೆಣ್ಣಿನ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಹೆಣ್ಣು ಒಪ್ಪಿಗೆಯಾದ

ತರುವಾಯ ಹೆಣ್ಣಿನ ಮನೆಗೆ ತಾವು ಒಯ್ದ ಪದಾರ್ಥಗಳನ್ನೆಲ್ಲ ಕೊಡುತ್ತಾರೆ. ಇದು ನಿಶ್ಚಯ ಕಾರ್ಯವಿದ್ದಂತೆ. ಇದಾದ ತರುವಾಯ ಕಟ್ಟೆಮನೆಯವರ ಒಪ್ಪಿಗೆ ಪಡೆದು ಒಂದು ನಿಶ್ಚಿತ ದಿನದಂದು ಮದುವೆ ಮಾಡುತ್ತಾರೆ. ಕಟ್ಟೆಮನೆಯ ಯಜಮಾನನೇ ಪುರೋಹಿತನಂತೆ ಮದುವೆ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಇವರಲ್ಲಿ ಇಂದಿಗೂ ತೆರ ಪದ್ಧತಿ ಜಾರಿಯಲ್ಲಿದೆ. ಮ್ಯಾಸ ನಾಯಕರಲ್ಲಿ ಮಂಡಲರು ಮತ್ತು ಮಲ್ಲಿನಾಯಕರು ಎಂಬ ಎರಡು ಪಂಗಡಗಳಿವೆ. ಮ್ಯಾಸನಾಯಕರಲ್ಲಿ ಮಲ್ಲಿನಾಯಕರು, ಯರಮಂಚನಾಯಕರು, ಮಂದಾಲರು, ಬುಡಗ್ಲೋರು, ಮಂಡ್ಲೋರು ಮುಂತಾದ ಪ್ರಮುಖ ಬೆಡಗುಗಳಿದ್ದು ಅವುಗಳಲ್ಲಿ ಮತ್ತೆ ಉಪಬೆಡಗುಗಳು ಕಂಡು ಬರುತ್ತವೆ.

ಮ್ಯಾಸ ಬೇಡರ ವಿವಿಧ ಹೆಸರಿನ ಕುಲಗಳು

ಸೂರ್ಯವಂಶದವರು

ಸೂರ್ಯವಂಶದಲ್ಲಿ ಮುಖ್ಯ ಬೆಡಗಾಗಿ ಬರುವವರು ಮಲ್ಲಿ ನಾಯಕರು. ಆ ಮಲ್ಲಿ ನಾಯಕರ ಪಂಗಡದಲ್ಲಿ ಉಪ ಬೆಡಗುಗಳು ಹೀಗೆ ಬರುತ್ತವೆ.

ಮಲ್ಲಿನಾಯಕರು

೧ ವಡೇಲೋರು	೨ ಕಾಟಮಲ್ಲಿನಾಯಕನೋರು	೩ ಪೆದ್ದಾಳನಾಯಕನೋರು
೪ ಬಂಗಾರನೋರು	೫ ಓಬನಾಯಕನೋರು	೬ ಚಿನ್ನಕಾಟನೋರು
೭ ಪೇಯಿಲೋರು	೮ ಈಶ್ವರಲೋರು	೯ ಮೀಸಲೋರು
೧೦ ರಾಯಬಲ್ಲೋರು	೧೧ ಎನುಮಲೋರು	೧೨ ಪಲ್ಲೆವರು

ಈ ಮೇಲಿನ ಹನ್ನೆರಡು ಗುಂಪುಗಳೂ ಅಣ್ಣ ತಮ್ಮಂದಿರಾಗುವುದರಿಂದ ಇವರಲ್ಲಿ ಪರಸ್ಪರ ಕೊಳು ಕೊಡುಗೆ ಇಲ್ಲ.

ಮಲ್ಲಿ ನಾಯಕನ ಗುಂಪಿನಲ್ಲಿಯೇ ಇನ್ನೊಂದು ಗುಂಪು ಯರಮುಂಚಿ ನೋರದು

೧ ಯರಮಂಚಿನಾಯಕನವರು	೨ ಯರಗೋತ್ಲವರು	೩ ಯರಗಂಟ್ನಾಯಕ
೪ ಯರಗಾಟ್ಲವರು	೫ ವಡೇಲರು	೬ ಸುರೇಪಾಕಲವರು
೭ ನಲಗೇತ್ಲವರು	೮ ಕದಿನವರು	೯ ಅಚ್ಚಪಲ್ಲೋರು

ಮೇಲಿನ ಒಂಭತ್ತು ಬೆಡಗಿನವರು ಅಣ್ಣ ತಮ್ಮಂದಿರು, ಕೊಳುಕೊಡುಗೆ ಸಂಬಂಧವಿರುವುದಿಲ್ಲ.

೧ ಎದ್ದಲವರು	೨ ಗುಡ್ಡದ ಎದ್ದಲವರು	೩ ಮೂವಲವರು
೪ ಪಟ್ಟೆಪಲ್ಲಲು		

ಮೇಲಿನ ಎರಡು ಗುಂಪುಗಳು ಪರಸ್ಪರ ಅಣ್ಣ ತಮ್ಮಂದಿರವು. ಸಂಬಂಧವೇರ್ಪಡುವಂತಿಲ್ಲ.

ಚಂದ್ರ ವಂಶದ ಮಂದಲವರು

೧ ಕಾಮಗೇತಲವರು　　೨ ಬುಲ್ಲಡಲು　　೩ ಸಾಕೇಲವರು

೪ ಮಾಸೇಲೋರು　　೫ ದ್ಯಾವರಲೋರು　　೬ ಗಾದಪುಲೋರು

೭ ಬಿದ್ದಲೋರು

ಮೇಲೆ ಹೆಸರಿಸಿದ ಐದು ಬೆಡಗುಗಳು ಅಣ್ಣ ತಮ್ಮಂದಿರವು.

ಮಳೆಲೋರಲ್ಲಿ ಉಪಬೆಡಗುಗಳು

೧ ಕಾಲ್ವುಮಳೇಲೋರು　　೨ ಮಾಕನಡುಕು ಮಳೇಲೋರು　　೩ ಸೋಲುಮಳೇಲು

೪ ಮುದ್ದಾಪುರ ಮಳೇಲು　　೫ ಕವಲುಮಳೇಲು　　೬ ಗುಡೇಕೋಟೆಮಳೇಲು

೭ ಚಿನಕುಮುತ್ತಿನಮಳೇಲು

ಮೇಲಿನ ಏಳು ಬೆಡಗುಗಳು ಅಣ್ಣ ತಮ್ಮಂದಿರವು.

ಬುಟಕಲೋರ ಉಪಬೆಡಗುಗಳು

೧ ಮಾರವ್ವ ಬುಟಕುಲು　　೨ ಬೊಮ್ಮದೇವರ ಬುಟಕಲು　　೩ ಮಾದೇಲಿಂಗನ ಬುಟಕಲು

೪ ನಲ್ಲೇದೌರ ಬುಟಕಲು　　೫ ಸಂಗೆವರ ಬುಟಕಲು　　೬ ಸಿದ್ದಪಲ್ಲಿ ಬುಟಕಲು

೭ ಕುರಿಹಟ್ಟಿ ಬುಟಕಲು

ಪಾಮಡಲೋರ ಬೆಡಗುಗಳು

೧ ನಲ್ಲಪಾಮಡಲೋರು　　೨ ಪೂಜಾರಳ್ಳಿ ಪಾಮಡಲೋರು　　೩ ಯರ ಪಾಮಡಲೋರು

೪ ಜರಕಡಲು

ಪಡ್ಲೆವರ ಬೆಡಗುಗಳು

೧ ತಾಯ್ತೋಣಿ ಪಡ್ಲೆವರು　　೨ ಕೋನಸಾಗರ ಪಡ್ಲೆವರು

ಮೇಲಿನವಲ್ಲದೆ ಚಂದ್ರ ವಂಶಮಂಲವರ ಗುಂಪಿನಲ್ಲಿ ಕಂಡು ಬರುವ ಇನ್ನಿತರ ಉಪಬೆಡಗುಗಳು ಈ ಕೆಳಗಿನಂತಿವೆ.

೧ ಗೊಡಗುದಾಸರು　　೨ ಮುಂಡಾಸುದಾಸರು　　೩ ಬೋಡದಾಸರು

೪ ಗಗ್ರಿದಾಸರು　　೫ ದಡ್ಡಿದಾಸರು　　೬ ಮಚ್ಚಿಲೋರು

೭ ಕರಿನೋರು　　೮ ಸುರೇಪಾಕಲು　　೯ ಬೋಡಿಪಾಲಲು

೧೦ ಬಿದ್ದಲೋರು ೧೧ ಜಾಗನೋರು ೧೨ ಜನ್ನೆನೋರು

೧೩ ಅಜ್ಜಡಲೋರು ೧೪ ಗಜಗಡ್ಲೋರು ೧೫ ಬೋಸೆಲೋರು

೧೬ ಗಟ್ಟಿಮುತ್ತೆಲೋರು ೧೭ ಮಾಸೇಲೋರು ೧೮ ಮುದಿಗೊಡ್ಲವರು

೧೯ ಬಿಜ್ಜಡಲು ೨೦ ಅಲಕೇರು

ಸೂರ್ಯವಂಶದ ಮಲ್ಲಿನಾಯಕನ ಪಂಗಡದಲ್ಲಿ ಪ್ರತ್ಯೇಕವಾದ ಅಂಕೇಲೋರು ಎಂಬ ಬೆಡಗಿನವರು ಬರುವರು. ಇವರು ಯಾವ ಉಪಬೆಡಗಿನಲ್ಲೂ ಸೇರುವವರಲ್ಲ. ಅವರು ಬೇರೆ ಯಾವ ಉಪಬೆಡಗಿನವರೊಂದಿಗೆ ಬೇಕಾದರೂ ಸಂಬಂಧ ಬೆಳೆಸಬಹುದಾಗಿದೆ. ಪ್ರಮುಖ ಬೆಡಗಾದ ಮಂದಲೋರು ಎಂಬ ಹೆಸರು ಎತ್ತುಗಳ ಗುಂಪಿಗೆ ಸಂಬಂಧಪಟ್ಟ ಹೆಸರು. ದನಕರುಗಳನ್ನು ಕಾಯುವವರೆಲ್ಲ ಮಂದಲೋರು ಆಗಿ, ಇವರಲ್ಲಿ ಬೇರೆ ಬೇರೆ ಗುಂಪುಗಳು ಬೆಳೆಯುತ್ತಾ ಹೋದಂತೆಲ್ಲ ಗುಂಪಿಗೆ ಪ್ರಮುಕನಾದ ವ್ಯಕ್ತಿಯ ಮೇಲೋ ಅವರವರು ರೂಢಿಸಿಕೊಂಡ ಸಂಪ್ರದಾಯದ ಮೇಲೋ ಬೆಡಗುಗಳು ಹುಟ್ಟಿಕೊಂಡವು. ದನಕರುಗಳ ಹೆಸರಲ್ಲಿ ಬೆಡಗು ಹುಟ್ಟಿದಂತೆ ಆಡುಕುರಿಗಳ ಮೇಲೂ ಬೆಡಗುಗಳಿವೆ. ಕುರಿ ಹಟ್ಟಿಯವರು ಎಂಬುದೆ ಒಂದು ಬೆಡಗು ಬುಟುಕಲೋರು ಒಂದು ಉಪಪಂಗಡವಾಗಿ ಬರುತ್ತದೆ. ಯರಗಾಟಲು, ಯರಭೂತಲವರು ಎಂದರೆ ಯರಮಂಚನಾಯಕನ ಸಂಬಂಧದವರು. ಕೆಂಪುಹೋತದ ವಾಸಿ ಕೊಯ್ಯುವವರು, ನಲಗೇತ್ಲವರು ಎಂದರೆ ಕಪ್ಪು ಹೋತದ ವಾಸಿಕೊಯ್ಯುವವರು.

ವಾಸಿಕೊಯ್ಯುವುದು ಎಂದರೆ ಕುರಿ ಅಥವಾ ಆಡನ್ನು ದೇವರಿಗೆ ಬಲಿ ಕೊಡುವುದು. ಬಲಿ ಕೊಡುವ ಕ್ರಮ ಕೊಂಚ ಬೇರೆ ರೀತಿಯದು. ಮೊದಲು ಕತ್ತು ಕತ್ತರಿಸುವುದಿಲ್ಲ. ಪ್ರಾಣಿಯ ಹಿಂಗಾಲುಗಳೆರಡನ್ನು ಅರ್ಧ ಕತ್ತರಿಸುವುದು. ಅದು ಕತ್ತರಿಸಿಕೊಂಡ ಕಾಲುಗಳಲ್ಲಿ ಸ್ವಲ್ಪ ಮುಂದಕ್ಕೆ ಹೋಗುತ್ತದೆ. ಅನಂತರ ಬಲಿಯ ಕೊರಳನ್ನು ಕತ್ತರಿಸುವುದಕ್ಕೆ ವಾಸಿಕೊಯ್ಯುವುದು ಎನ್ನುವರು. ಅಂಗ ಊನ ಮಾಡಿ ತದನಂತರ ಕೊಲ್ಲುವ ಈ ಕ್ರಮ ಅವರ ಪ್ರಾಚಿನ ಬೇಟೆಯ ರೀತಿಯಿರಬೇಕು. ಕಾಮಗೇತಲವರೆಂದರೆ ಇವರೆಲ್ಲ ಚಿತ್ರದುರ್ಗದ ಪಾಳೆಯಗಾರರ ಗುಂಪಿಗೆ ಸೇರಿದವರು. ಚಿತ್ರದುರ್ಗದ ಪಾಳೆಯಪಟ್ಟಿನ ಪಾಳೆಯಗಾರರೆಲ್ಲ ಕಾಮಗೇತಿ ಎಂಬ ಬೆಡಗಿನ ಹೆಸರನ್ನು ತಮ್ಮ ಬಿರುದಾವಳಿಗಳಲ್ಲಿ ಸೇರಿಸಿಕೊಂಡಿದ್ದಾರೆ. ಬುಲ್ಲಡಲು ಮತ್ತು ಬಊಟುಕುಲು ಎಂದರೆ ಮಾರಮ್ಮನನ್ನು ಕೂರಿಸಿದ ಪೆಟ್ಟಿಗೆಯನ್ನು ಹೊರುವರು. ಗೊಡಗುದಾಸರೆಂದರೆ ದೇವರು ಮೆರವಣಿಗೆ ಹೋಗುವಾಗ ಛತ್ರಿ ಹಿಡಿಯುವರು. ಗಗ್ಗರಿ ಎಂದರೆ ಗೆಜ್ಜೆ. ಅದನ್ನು ಕಾಲಿಗೆ ಕಟ್ಟಿಕೊಂಡು ದೇವರ ಮುಂದೆ ನರ್ತಿಸುವವರು, ಕುಣಿಯುವವರು ಗಗ್ಗರಿ ದಾಸರು. ಮುಂಡಾಸುದಾಸರು ತಮ್ಮ ತಲೆಗೆ ದಪ್ಪ ಪೇಟ ಸುತ್ತಿರುತ್ತಾರೆ. ಯಾಕೆಂದರೆ ಇವರು ತಮ್ಮ ತಲೆಯ ಕೂದಲನ್ನು ದೇವರಿಗೆ ಹರಕೆ ಬಿಟ್ಟಿರುತ್ತಾರೆ. ಬೆಳೆದ ಕೂದಲನ್ನೆಲ್ಲ ಕತ್ತರಿಸದೆ ಗಂಟು ಸುತ್ತಿ ಅದಕ್ಕೆ ಮುಂಡಾಸು ಸುತ್ತಿಕೊಂಡಿರುವುದರಿಂದ ಅವರು ಮುಂಡಾಸುದಾಸರೆಂದು

ಕರೆಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಮ್ಯಾಸ ಮಂಡಲಿಯೊಳಗೆ ಈ ದಾಸರು ಅನ್ನಿಸಿಕೊಂಡವರು ದೇವರ ಒಂದೊಂದು ಸೇವೆಯನ್ನು ನೆರವೇರಿಸುವ ಹಕ್ಕನ್ನು ಪಡೆದಿರುತ್ತಾರೆ. ಛತ್ರಿ ಚಾಮರಗಳನ್ನು ಹಿಡಿಯುವ ಹಕ್ಕು ಪಡೆದಿದ್ದರೆ ಇನ್ನೊಂದು ಬೆಡಗು ಪಂಜಿನ ಕವಾಯತು ಮಾಡುವುದು, ಮತ್ತೊಂದು ಬೆಡಗಿನ ದಾಸರು ಶಂಖ ಪೂರೈಸಿ ಜಗಟೆ ಬಾರಿಸಿ ಬವನಾಸಿ ಹಿಡಿದಿರುತ್ತಾರೆ. ಎದ್ಲೋರು ಎಂಬುವವರು ಹಿರೇಹಳ್ಳಿ ಕಟ್ಟಿಗೆ ಬರುವವರು, ಇವರಲ್ಲಿ ಗುಡ್ಡದೆದ್ಲವರು ಎನ್ನುವ ಇನ್ನೊಂದು ಪಂಗಡವೂ ಇದೆ. ಕಲ್ಲೆದೇವರ ಪುರದಲ್ಲಿ ಈ ಪಂಗಡದವರ ವಾಸವಿದ್ದು ದಡ್ಡಿಸೂರನಾಯಕ ಇವರ ದೇವರು. ಬೋಸೇಲೋರು ಎಂಬ ಬೆಡಗಿಗೆ ಆ ಹೆಸರು ಬರಲು ಕಾರಣ ಬೊಗಸೆಯಲ್ಲಿ ಹುರುಳಿ ಎತ್ತಿ ದೇವರ ಹಿಂಭಾಗದಲ್ಲಿ ಬಂದು ಸಲ್ಲಿಸುವುದರಿಂದ ಇವರಿಗೆ ಬೋಸೆಲೋರು ಎಂಬ ಹೆಸರು ಬಂದಿತು. ಹಾಲು, ಮೊಸರು, ಬೆಣ್ಣೆಯನ್ನು ದೇವರಿಗೆ ಮೀಸಲಾಗಿ ಬೋಸೆಲೋರವರು ಅರ್ಪಿಸುವರು. ಗಟ್ಟಿಮುತ್ತೆ ನಾಯಕನ ಬೆಡಗಿನವರು ದೇವರಿಗೆ ಧೂಪ, ವಿಭೂತಿ, ಅರಿಷಿಣ, ಕುಂಕುಮವನ್ನು ಸೇವೆಯಾಗಿ ಅರ್ಪಿಸುವರು. ."(ಕೃಷ್ಣಮೂರ್ತಿ ಹನೂರು:೧೯೯೩:ಪು.೧೬-೧೭).

ಮ್ಯಾಸ ಬೇಡರಲ್ಲಿ ಸುಮಾರು ೫೦೦ರಷ್ಟು ಬೆಡಗುಗಳಿವೆಯಂದು ಕೊತ್ತಲಮ್ಮನವರು ತಮ್ಮ ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ ಎನ್ನುವ ಮಹಾಪ್ರಬಂಧದಲ್ಲಿ ತಿಳಿಸಿದ್ದಾರೆ. ಬೇಡರ ಕೃಷಿ ಜಮೀನುಗಳು 'ಇನಾಂತಿ' ಇಲ್ಲವೇ 'ಮಾನ್ಯ'ಗಳಾಗಿ ಬಂದಂತವು. ಮತ್ತೆ ಕೆಲವರು ಪಶುಪಾಲನೆ ಕೈಗೊಂಡರು. ಇನ್ನುಳಿದವರು ಕೂಲಿನಾಲಿ ಮಾಡಿ ಬದುಕನ್ನು ಸಾಗಿಸುತ್ತಿದ್ದಾರೆ. ಆರ್ಥಿಕವಾಗಿ ಬೇಡರ ಸಮುದಾಯಗಳು ತೀರ ಹಿಂದುಳಿದಿವೆ. ಬಡತನ, ದಾರಿದ್ರ್ಯ, ಅನಕ್ಷರತೆ, ನಿರುದ್ಯೋಗ, ಅನಾರೋಗ್ಯ ಮುಂತಾದ ಪಿಡುಗಿಗೆ ಬಲಿಯಾದವರ ಸಾಲಿನಲ್ಲಿ ಬೇಡರ ಕುಟುಂಬಗಳೂ ಸೇರುತ್ತವೆ. ಆಧುನಿಕತೆ ಇಂಡಿಯಾಕ್ಕೆ ಕಾಲಿಡುತ್ತಿರುವಾಗಲೇ ಬೇಡನಾಯಕರು ತಮ್ಮ ಮೂಲ ವೃತ್ತಿಗಳಿಂದ ವಂಚಿತರಾಗುತ್ತಾ ಬಂದರು.ಅರಣ್ಯಕ್ಕೆ ಸಂಬಂಧಿಸಿದ ಕಾನೂನುಗಳು ಪ್ರಾರಂಭವಾದಾಗಿನಿಂದಲೂ ಅವರ ಮೂಲ ವೃತ್ತಿಯಾದ ಬೇಟೆಗಾರಿಕೆಗೆ ತುಂಬಾ ನಷ್ಟವಾಗಿದೆ. ಬೇಟೆಯ ಜೊತೆ ಜೊತೆಗೇನೆ ಅರಣ್ಯಾ ಉತ್ಪನ್ನಗಳಾದ ಜೇನುತುಪ್ಪ, ಆನೆಯ ದಂತಗಳು, ಕಾಡುಕೋಣ ಮುಂತಾದ ಪ್ರಾಣಿಗಳ ಕೋಡುಗಳು, ಬೇರೆ ಬೇರೆ ಪ್ರಾಣಿಗಳ ಚರ್ಮ, ನವಿಲುಗರಿ, ಪುನಗನ ಬೆಕ್ಕು, ಗಿಡದ ಅಂಟು, ಮುಂತಾದವುಗಳನ್ನು ಕವಳೆ, ಬೊರೆ, ನೇರಲ ಮುಂತಾದ ಹಣ್ಣುಗಳನ್ನು ಸಂಗ್ರಹಿಸಿ ಮಾರುವುದು ಮುಂತಾದ ಕೆಲಸ ಮಾಡುತ್ತಾ ಬಂದಿದ್ದಾರೆ. ಕಟ್ಟಿಗೆ ಹಾಗೂ ಪತ್ರಾವಳಿಗಳನ್ನು ತಂದು ಮಾರುವುದು, ಮೊದಲಾದ ಕಾರ್ಯಗಳನ್ನು ಇವರು ಮಾಡುತ್ತಿದ್ದುದೂ ಉಂಟು. ಈಗ ಇದೆಲ್ಲ ಕಡಿಮೆಯಾಗಿದೆ. ಹೆಚ್ಚಿನ ಜನರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅಲ್ಲೊಬ್ಬರು ಇಲ್ಲೊಬ್ಬರು ಸ್ವತಂತ್ರ ಒಕ್ಕಲುತನವನ್ನು ಮಾಡುತ್ತಿದ್ದಾರೆ. ಈಗ ತಳವಾರಿಕೆ ಎಂದರೆ ಬೇರೆಯವರ ಮನೆ, ಹೊಲಗಳಲ್ಲಿ ಕೂಲಿ ಕೆಲಸ ಮಾಡುವುದು, ಕಸ-ಮುಸುರೆ ಮಾಡುವುದು, ಅವರು ಕೊಟ್ಟಿದ್ದನ್ನು ಸ್ವೀಕರಿಸುವುದು, ಇನ್ನಿತರ ಸೇವೆಗಳನ್ನು ಮೇಲುವರ್ಗದವರಿಗಾಗಿ ಮಾಡುವುದು ಎಂದು ರೂಢಿಯಾಗಿದೆ.

ಆಧಾರಗಳು

ಕೃಷ್ಣಮೂರ್ತಿ ಹನೂರು, ೨೦೦೬, ಮ್ಯಾಸ ಬೇಡರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸ ಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಚಂದ್ರಶೇಖರ್ ಟಿ.ಆರ್, ೧೯೯೪, ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಪ್ರಭು ಪ್ರಿಂಟಿಂಗ್ ಪ್ರೆಸ್, ಗದಗ, ಪು-೯

ಚಂದ್ರಶೇಖರ್ ಟಿ.ಆರ್ (ಸಂ) ೧೯೯೪, ಜಿಲ್ಲಾ ಅಭಿವೃದ್ಧಿ ಮಾಹಿತಿಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೬

ಚಂದ್ರಶೇಖರ್ ಟಿ.ಆರ್. ಪೂರ್ವೋಕ್ತ, ೧೯೯೪, ಪು.೧೫

ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್ಸ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು, ಗವರ್ನ್‌ಮೆಂಟ್ ಆಫ್ ಕರ್ನಾಟಕ ೨೦೧೧.

ಭಾರತ ಗೆಜೆಟಿಯರ್, ಮೈಸೂರು, ಬಳ್ಳಾರಿ ಜಿಲ್ಲೆ, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೭೨, ಪು-೫೧೫

ಮುಖ್ಯಾಧಿಕಾರಿಗಳು, ನಗರಸಭೆಯ ಸದಸ್ಯರ ಪಟ್ಟಿ, ಬಳ್ಳಾರಿ ಜಿಲ್ಲಾ ಪಂಚಾಯತ್ ಕಛೇರಿ ೨೦೧೧.

ಮೈಸೂರು ಸ್ಟೇಟ್ ಗ್ರಾಜಿಯೇಟರ್, ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಜಿಟಿಯ್, ಬೆಂಗಲೂರು, ಮೈಸೂರು ಸರಕಾರ, ೧೯೭೨, ಪು-೯೫

ಮೀರಸಾಬಿಹಳ್ಳಿ ಶಿವಣ್ಣ, ೧೯೮೮, ನಾಯಕ ಜನಾಂಗ ಒಂದು ನೋಟ, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಸಂಪುಟ, ೨,೩

ವಾಸುದೇವ ಬಡಿಗೇರ, ೨೦೦೭, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೇಷಾದ್ರಿ ಬಿ, ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ ಹಂಪಿ; ಕನ್ನಡ ವಿಶ್ವವಿದ್ಯಾಲಯ, ೧೯೯೮, ಪು-೧

ಗುಡಿಮುಂದಲ ಗೋಣಿಬಸಪ್ಪ,೨೦೧೯, ಬುಡಕಟ್ಟು ಮಹಿಳಾ ಸಬಲೀಕರಣ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ.

Edger Thurston,1909, Caste and Tribes in Southern India, Oxford University Press, London

ಅಧ್ಯಾಯ : ಮೂರು

ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ ಹಾಗೂ ಸಮಸ್ಯೆಗಳು

ಅಧ್ಯಾಯ : ಮೂರು

ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ ಹಾಗೂ ಸಮಸ್ಯೆಗಳು

೩.೧. ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ

೩.೨. ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳು

೩.೩. ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಮೇಲೆ ಜಾಗತೀಕರಣದ ಪರಿಣಾಮ

೩.೪. ಬೇಡ ಸಮುದಾಯದ ಮಹಿಳೆಯರ ಆರೋಗ್ಯದ ಮೇಲೆ ಗಣಿಗಾರಿಕೆಯ ಪ್ರಭಾವ

ಅಧ್ಯಾಯ : ಮೂರು

ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ ಹಾಗೂ ಸಮಸ್ಯೆಗಳು

ವಿಶ್ವದ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಜನರು ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ ಎಂಬ ವಾಸ್ತವದ ಹೊರತಾಗಿಯೂ, ವಿಶ್ವದ ಒಟ್ಟಾರೆ ಕೃಷಿ ಉತ್ಪನ್ನವು, ಉತ್ಪನ್ನದ ಶೇಕಡ ಐದು ಭಾಗಕ್ಕಿಂತ ಕಡಿಮೆಯಿದೆ. ಭಾರತದಂತಹ ಗ್ರಾಮೀಣ ಪ್ರದೇಶದಲ್ಲಿ ಕೃಷಿಯೇ ಎಲ್ಲಾ, ಭಾರತದ ಬೆನ್ನೆಲುಬು ರೈತ ಅಂತ ಅಂತಾ ಎಲ್ಲಾರಿಗೂ ಗೊತ್ತಿರುವ ಸಂಗತಿ ಆದರೆ ಇಂದು ಅವರ ಸ್ಥಿತಿಗತಿ ಹೇಗಿದೆ ಎಂಬುದನ್ನು ನೋಡಿದಾಗ ನಿಜಕ್ಕೂ ಅವರ ಬದುಕು ತುಂಬಾ ಶೋಚನೀಯವಾಗಿದೆ. ಅದರಲ್ಲೂ ಕೃಷಿಯಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರ ಬದುಕು ಹೇಳತೀರದ್ದು ಏಕೆಂದರೆ ಕೃಷಿಯೇ ಜೀವಾಳು ಎಂದು ಕೃಷಿಯನ್ನೇ ನಂಬಿ ಕೃಷಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವ ಮಹಿಳೆ ಕೃಷಿಯಿಂದ ನೆಮ್ಮದಿಯ ಜೀವನ ನಿರ್ವಹಿಸುತ್ತಿರುವಳೇ ಎಂಬುದೇ ಮುಖ್ಯ ಪ್ರಶ್ನೆಯಾಗಿ ಕಾಡುತ್ತಿದೆ. ಪ್ರಸ್ತುತ ಸನ್ನಿವೇಶದಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರು ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಅದಕ್ಕೆ ಅವರ ದಿನನಿತ್ಯದ ಸಾಮಾಜಿಕ ಬದುಕು ತಿಳಿಸಿಕೊಡುತ್ತದೆ.

೩.೧ ಬೇಡ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ

ನೂರಾರು ವರ್ಷಗಳಿಂದಲೂ ಬಳ್ಳಾರಿ ಜಿಲ್ಲೆಯಲ್ಲಿ ಬೇಡ ಸಮುದಾಯವು ಕಾಡಂಚಿನಲ್ಲಿ ವಾಸಿಸುತ್ತಾ ವ್ಯವಸಾಯದಲ್ಲಿ ತೊಡಗಿರುವುದು. ಆದರೆ ಇವರು ಬಹಳ ಸಾಂಪ್ರದಾಯಕ ವಿಧಾನಗಳಿಂದ ಸಾಗುವಳಿಯನ್ನು ಮಾಡುತ್ತಿರುವರು ಮತ್ತು ಸರಿಯಾದ ಬೆಳೆ ರಚನೆಯನ್ನು ಅನುಸರಿಸುತ್ತಿಲ್ಲ. ನೀರಾವರಿ ಸೌಲಭ್ಯಗಳ ಹಾಗೂ ಕೃಷಿ ಮತ್ತು ಅಲ್ಪ ಉತ್ಪನ್ನಗಳ ಕಾರಣದಿಂದ ಈ ಜನರ ಜೀವನವು ದಾರಿದ್ರಾವಸ್ಥೆಯಲ್ಲಿದೆ. ಬಳ್ಳಾರಿ ಜಿಲ್ಲೆ ಕೂಡ್ಲಿಗಿ ಭಾಗದ ಕೃಷಿಕರಲ್ಲಿ ಅಧಿಕ ಜನ ಮಳೆಯಾಧಾರಿತ ಒಕ್ಕಲುತನ ಮಾಡುತ್ತಿದ್ದಾರೆ. ಬೋರುಗಳನ್ನು ಕೊರೆಸಿದ್ದರೂ ಅಂತರ್ಜಲ ಕುಸಿತದ ಪರಿಣಾಮವಾಗಿ

ಮತ್ತೆ ಮತ್ತೆ ನೀರಿನ ಅಭಾವವನ್ನು ಎದುರಿಸುತ್ತಿದ್ದಾರೆ. ಅಲ್ಲದೆ, ಋತು ಆಧಾರಿತ ಬೆಳೆ ಪದ್ಧತಿಯನ್ನೂ ಅನುಸರಿಸದೆ ಸಾಂಪ್ರದಾಯಿಕ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಇದಕ್ಕೆ ಕಾರಣ ಸಾಂಪ್ರದಾಯಿಕ ಬೆಳೆ ಪದ್ಧತಿಯಾದರೆ ಮಹಿಳೆಯರನ್ನು ಒಳಗೊಳ್ಳುವುದು ಸುಲಭ ಎನ್ನುವ ಅಂಶವೂ ಕಾರಣವಾಗಿರಬಹುದು. ಇದೇ ಕಾರಣಕ್ಕೆ ಹೊಸ ಬೆಳೆಗಳನ್ನು ಅದರಲ್ಲೂ ವಾಣಿಜ್ಯ ಬೆಳೆಗಳನ್ನು ಕೃಷಿ ಮಾಡಲು ಈ ಜನರು ಹಿಂಜರಿಯುತ್ತಿದ್ದಾರೆ. ಬೇಡ ಸಮುದಾಯವು ಈ ಭಾಗದಲ್ಲಿ ಆರ್ಥಿಕವಾಗಿ ಹಿಂದುಳಿದಿರುವುದಕ್ಕೆ ಇದೂ ಕೂಡ ಕಾರಣವಾಗಿದೆ. ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಹೆಚ್ಚಿನ ಮಹಿಳೆಯರು ಅನಕ್ಷರಸ್ಥರು, ಸಂಪ್ರದಾಯಬದ್ಧರಾಗಿದ್ದು, ಬಡತನಕ್ಕೊಳಗಾಗಿರುವವರಾದ್ದರಿಂದ ಹೆಚ್ಚಿನ ತರಬೇತಿ ಮತ್ತು ಕುಶಲತೆಯನ್ನು ಹೊಂದಿಲ್ಲ. ಆದುದರಿಂದ ಅನಿವಾರ್ಯವಾಗಿ ಕೃಷಿಯಲ್ಲೇ ನಿರತರಾಗುವ ಪರಿಸ್ಥಿತಿಯಿದೆ. ಅವರ ವೃತ್ತಿಗೆ ಸಂಬಂದಿಸಿದಂತೆ ಅನೇಕ ಸಮಸ್ಯೆಗಳಿವೆ ಅವುಗಳೆಂದರೆ, ಕಡಿಮೆ ಕೂಲಿ ಪಡೆಯುವುದಲ್ಲದೆ ಹೆಚ್ಚು ಕೆಲಸ ನಿರ್ವಹಿಸುವುದು, ಅಸಂಘಟಿತ ಕಾರ್ಮಿಕರ ವೃತ್ತಿ, ಪರಿಸರ, ಮಾನಸಿಕ ಸ್ಥಿತಿ, ಯಾಂತ್ರಿಕವಾಗಿ ಕೆಲಸ ನಿರ್ವಹಿಸುವಿಕೆಯು ಅವರಲ್ಲಿ ಉತ್ಸಾಹ ಕುಗ್ಗಿಸುತ್ತಿರುವುದು, ದಿನಗೂಲಿಯ ಆಧಾರದ ಮೇಲೆ ಕೆಲಸ ಮಾಡವವರ ಸಂಖ್ಯೆಯು ಅಧಿಕವಾಗಿರುವುದರಿಂದ ಉದ್ಯೋಗದ ಭದ್ರತೆ ಮತ್ತು ಸಾಮಾಜಿಕ ಭದ್ರತಾ ಸವಲತ್ತುಗಳಿಲ್ಲದಿರುವುದು, ಮಹಿಳೆಯರು ಕೃಷಿ ಕೆಲಸ ಮಾಡುವ ಜಾಗದಲ್ಲಿ ಕನಿಷ್ಟ ನಾಗರೀಕ ಸೌಲಭ್ಯಗಳಾದ ಶೌಚಶಾಲಯ, ಕುಡಿಯುವ ನೀರಿನ ವ್ಯವಸ್ಥೆ, ಇಲ್ಲದಿರುವುದು ಹೀಗೆ ಇನ್ನೂ ಅನೇಕ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದಾರೆ.

ಅಸ್ತಿಗತ ಋಣಬಾಧೆಯು ಈ ಭಾಗದ ಬೇಡರು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆಯಾಗಿದೆ. ಶೇಕಡ ೮೨ ರಷ್ಟು ಬೇಡ ಕುಟುಂಬಗಳು ಸಾಲದ ಕೊಪದಲ್ಲಿ ಮುಳಗಿದ್ದಾರೆ. ಈ ಜನರು ತಮ್ಮ ಹಣಕಾಸಿನ ಅವಶ್ಯಕತೆಗಳಿಗಾಗಿ ಹೆಚ್ಚಾಗಿ ಹಣದ ಲೇವಾದೇವಿಗಾರರನ್ನು ಆಶ್ರಯಿಸಿರುವರು. ವಿಪರೀತ ದರದ ಬಡ್ಡಿ ವಿಧಿಸುವ ಮೂಲಕ ಹಣದ ಲೇವಾದೇವಿಗಾರರು ಈ ಜನರನ್ನು ಅವ್ಯಾಹತವಾಗಿ ಶೋಷಿಸುತ್ತಿರುವರು. ಪರಿಣಾಮವಾಗಿ ಬೇಡರು ನಿರಂತರವಾದ ಸಾಲದ ಭಾದೆ ಎದುರಿಸುತ್ತಿದ್ದಾರೆ. ಸಹಕಾರಿ ಬ್ಯಾಂಕುಗಳು ಕಡಿಮೆ ಬಡ್ಡಿ ನೀಡುತ್ತಾರೆ ಹಾಗೂ ಸರಕಾರ ಸಾಲಮನ್ನಾ ಮಾಡುತ್ತದೆಂಬ ನಂಬಿಕೆಯೂ ಈ ಜನರು ಸಾಲಗಾರರಾಗುವಂತೆ ಮಾಡುವಲ್ಲಿ ಒತ್ತಡ ಹೇರಿದೆ. ಸಾಲಗಾರರ ಒತ್ತಡವು ಹೆಚ್ಚಾದಂತೆ ಬೇಡ ಯುವಕರು ಕೃಷಿಯನ್ನು ಬಿಟ್ಟು ಇನ್ನಿತರೆ ದಿನಗೂಲಿ ಕೆಲಸಗಳಿಗೆ ತೆರಳುವುದು ಸಾಮಾನ್ಯವಾಗಿದೆ. ಕಟ್ಟಡ ನಿರ್ಮಾಣ, ಗಣಿಗಾರಿಕೆ ನಡೆಯುವ ಭಾಗಗಳಲ್ಲಿ ಉದ್ಯೋಗವನ್ನರಸಿ ತೆರಳುವುದು, ಕೈಗಾರಿಕೆಗಳಲ್ಲಿ ಕೆಲಸ ಹುಡುಕಿಕೊಂಡು ವಲಸೆ ಹೋಗುವುದು ಕೂಡ್ಲೀಗಿ ಭಾಗದ ಬೇಡರಲ್ಲಿ ಕಂಡುಬರುವ ಸಾಮಾನ್ಯ ಅಂಶವಾಗಿದೆ. ಇದರಿಂದಾಗಿ ಇರುವ ಭೂಮಿಯನ್ನು ನಿರ್ವಹಣೆ ಮಾಡಲು ಬೇಡ ಮಹಿಳೆಯರು ಕೃಷಿ ಚಟುವಟಿಕೆಯಲ್ಲಿ ತೊಡಗುವುದು ಅನಿವಾರ್ಯವಾಗಿದೆ ಮಹಿಳೆಯರು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರೂ ಅವರಲ್ಲಿ

ಬಹುತೇಕರು ಅನಕ್ಷರಸ್ಥರಾಗಿದ್ದಾರೆ. ಅಕ್ಷರ ಜ್ಞಾನವಿದ್ದರೂ ಅದು ಸಹಿ ಮಾಡುವುದಕಷ್ಟೇ ಸೀಮಿತವಾಗಿದೆ. ಬ್ಯಾಂಕ್ ವ್ಯವಹಾರಗಳನ್ನಾಗಲಿ, ಕೃಷಿ ಮಾರುಕಟ್ಟೆಯಲ್ಲಿನ ಚಟುವಟಿಕೆಗಳನ್ನು ಗಮನಿಸುವಷ್ಟು ಜಾಗೃತಿಯನ್ನು ಮೂಡಿಸಿಲ್ಲ. ಇದು ಬರೀ ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಮಹಿಳೆಯರ ಪರಿಸ್ಥಿತಿಯಲ್ಲ, ಇಡೀ ದೇಶದಲ್ಲಿಯೇ ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಯಾಗಿದೆ.

ಇದಲ್ಲದೆ, ಕೃಷಿಯಲ್ಲಿ ಕಡಿಮೆ ಉತ್ಪಾದಕತೆ, ಕಿರು ಅರಣ್ಯುತ್ಪನ್ನಗಳ ಅತ್ಯಲ್ಪ ಸಂಗ್ರಹ, ಅಲ್ಪ ಅದಾಯ ಮತ್ತು ಸಾಲದ ಬಾದೆಯಿಂದೂಡಗೂಡಿದ ವಿಷಚಕ್ರವು ಬೇಡರ ಕುಟಂಬ ವ್ಯವಸ್ಥೆಯನ್ನು ಕಂಗಾಲು ಮಾಡಿದೆ. ಬಳ್ಳಾರಿಯ ಹೊಸಪೇಟೆಯಲ್ಲಿ ಬೇಡ ಕೃಷಿಕರು ಕೈಗಾರಿಕೆಗಳಿಗೆ, ಕೃಷಿಯೇತರ ಚಟುವಟಿಕೆಗಳಿಗೆ ಭೂಮಿಯ ಪರಭಾರೆ ಮಾಡುತ್ತಿರುವುದು ಇವರು ಎದುರಿಸುತ್ತಿರುವ ಮತ್ತೊಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇತ್ತೀಚಿನ ವರ್ಷಗಳಲ್ಲಿ ಫಲವತ್ತಾದ ಅನೇಕ ಜಮೀನುಗಳು ಭೂಮಾಲೀಕರಿಗೆ, ಕೈಗಾರಿಕೆಗಳಿಗೆ ವರ್ಗಾವಣೆಗೊಳ್ಳುತ್ತಿವೆ. ಅದರಲ್ಲೂ ೨೦೦೦ನೇ ಇಸ್ವಿಯಿಂದ ಗಣಿಗಾರಿಕೆ ಜಿಲ್ಲೆಯಲ್ಲಿ ತೀವ್ರವಾಗಿದೆ. ಇದರಿಂದಾಗಿ ಕೈಗಾರಿಕೆಗಳು ನಿರ್ಮಾಣವಾಗಿವೆ. ಅದನ್ನು ನಂಬಿಕೊಂಡು ಸಣ್ಣ ಕೈಗಾರಿಕೆಗಳೂ ರೂಪುಗೊಂಡಿವೆ. ಇವೆಲ್ಲಾ ಕಾರಣಗಳಿಗಾಗಿ ಭೂಮಿಯ ಅವಶ್ಯಕತೆ ಹೆಚ್ಚಾಗಿದೆ. ಇದರಿಂದಾಗಿ ಬೇಡರಲ್ಲದೆ ಎಲ್ಲ ಸಮುದಾಯದ ಕೃಷಿಕರೂ ತಮ್ಮ ಭೂಮಿಯನ್ನು ಕಳೆದುಕೊಳ್ಳುವಂತಾಗಿದೆ. ಭೂಮಿಯನ್ನೇ ನಂಬಿಕೊಂಡಿದ್ದ ಮಹಿಳೆಯರಿಗೂ ಇದರ ಸಂಕಟ ಅನುಭವಿಸುವಂತಾಗಿದೆ. ಪುರುಷರು ಉದ್ಯೋಗವನ್ನರಸಿ ಕೈಗಾರಿಕೆಗಳಿಗೆ, ಗಣಿಗಾರಿಕೆಗೆ ತೆರಳಿದರೆ ಮಹಿಳೆಯರು ಕುಟುಂಬ ನಿರ್ವಹಣೆಗಾಗಿ ಮನೆಯಲ್ಲೇ ಉಳಿಯುತ್ತಿದ್ದು, ಅವರು ಇರುವ ಅಲ್ಪಸ್ವಲ್ಪ ಭೂಮಿಯಲ್ಲಿ ಕೃಷಿ ನಿರ್ವಹಿಸುತ್ತಿದ್ದರು. ಆದರೆ ಭೂಮಿಯೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಅವರು ಕುಟುಂಬ ನಿರ್ವಹಣೆಗೆ ಕುಟುಂಬದ ಯಜಮಾನರನ್ನೇ ನಂಬುವಂತಾಗಿದೆ. ಇಲ್ಲವೇ ಕೂಲಿಯಾಳುಗಳಾಗಿ ಅವರು ಇತರೆ ಕೆಲಸಗಳನ್ನು ನೋಡಿಕೊಳ್ಳುವಂತ ಸ್ಥಿತಿ ನಿರ್ಮಾಣವಾಗಿದೆ.

ಇಷ್ಟೆಲ್ಲಾ ಕೈಗಾರಿಕೆಗಳಿದ್ದರೂ ಬೇಡ ಸಮುದಾಯದ ಪುರುಷರು ಆದಾಯ ಗಳಿಕೆಯು ಮೂಲಗಳಿಗಲ್ಲದೆ ಬಳಲಿದ್ದಾರೆ. ಇವರಲ್ಲಿ ಬಹುತೇಕ ಬೇಡರು ಕೌಶಲ್ಯಾಭಿವೃದ್ದಿಯನ್ನು ರೂಢಿಸಿಕೊಳ್ಳದೇ ಇರುವುದು ಪ್ರಮುಖ ಸಮಸ್ಯೆಯಾಗಿದೆ. ಅದರಲ್ಲೂ ಬೇಡ ಮಹಿಳೆಯರು ನೈಪುಣ್ಯತೆಯಿಲ್ಲದೆ ಕೈಗಾರಿಕೆಗಳಲ್ಲಿ ಬರೀ ದಿನಗೂಲಿಗಾಗಿ ದುಡಿಯುವಂತಾಗಿದೆ. ಭಾರತದ ಕೃಷಿ ಸಮುದಾಯದಲ್ಲಿ ಮಹಿಳೆಯರ ಪ್ರಮಾಣ ಒಂದು ಅಂದಾಜಿನ ಪ್ರಕಾರ ಶೇಕಡಾ ೬೦ ರಷ್ಟಿದೆ. ಶೇಕಡ ೭೦ ರಷ್ಟು ಕೃಷಿ ಕೆಲಸಗಳನ್ನು ಮಾಡುವವರು ಅವರೇ, ಹೆಚ್ಚಿನ ಕೌಶಲ್ಯ ಬೇಕಿಲ್ಲದ ಈ ವಲಯ ಮಹಿಳೆಗೆ ಕೆಲಸವಿಲ್ಲದೆ ಆಹಾರವನ್ನು ನೀಡುತ್ತದೆ. ಹೀಗಾಗಿ ಆಹಾರ ಉತ್ಪಾದನೆಯಲ್ಲಿ ಮಹಿಳೆಯರದೆ ಪ್ರಮುಖ ಪಾತ್ರ, ನಂತರ ಅಡುಗೆ ಮನೆಯಲ್ಲಿ ಆಹಾರ ಬೇಯಿಸುವವಳು ಅವಳೇ ಆದರೂ ಆಕೆಯನ್ನೇ ಅಪೌಷ್ಟಿಕತೆ ತೀವ್ರವಾಗಿ ಕಾಡುತ್ತಿದೆ. ಬಳ್ಳಾರಿ ಜಿಲ್ಲೆಯ ಕೃಷಿಯಲ್ಲಿ ಮಹಿಳೆ ಕೈಗೊಳ್ಳುವ ಕೆಲಸಗಳಲ್ಲಿ

ಹೆಚ್ಚಿನವು ಕಡಿಮೆ ಕೂಲಿಯ ಬಿತ್ತನೆ, ನಾಟಿಮಾಡುವುದು ಕಳೆ ತೆಗೆಯುವುದು, ಹೂ ಬಿಡಿಸುವುದು,ಮುಂತಾದವು. ಆದರೆ ಅವರಿಗೆ ಸಿಗುವುದು ಪುರುಷರ ವೇತನದ ಶೇ ೭೦ರಷ್ಟು ಮಾತ್ರ. ಅಲ್ಲದೆ, ಅವರಿಗೆ ಮನೆಯೊಳಗೂ ವೇತನವಿಲ್ಲದ ಶ್ರಮ ಇದೆ.

ಕೂಡ್ಲಿಗಿ ತಾಲೂಕಿನಲ್ಲಿ ಮಳೆಯಾಧಾರಿತ ಕೃಷಿ ಮಾಡುವುದರಿಂದ ವರ್ಷದ ಬಹುತೇಕ ದಿನಗಳಲ್ಲಿ ಮಳೆಯ ಅಭಾವ ಕಂಡುಬರುವುದರಿಂದ ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುತ್ತವೆ. ಇದು ಮಹಿಳೆಯರನ್ನು ಇನ್ನಷ್ಟು ಸಂಕಟಕ್ಕೀಡು ಮಾಡಿದೆ. ಹೊಸಪೇಟೆ ಭಾಗದಲ್ಲಿ ನದಿ ನೀರು ಮತ್ತು ಬೋರವೆಲ್ ಗಳು ಇದ್ದರೂ ಇತ್ತೀಚಿನ ದಿನಗಳಲ್ಲಿ ನದಿಯಲ್ಲಿ ನೀರಿನ ಸಂಗ್ರಹವೂ ಕಡಿಮೆಯಾಗುತ್ತಿರುವುದರಿಂದ ಅವರದು ಇದಕ್ಕಿಂತ ಭಿನ್ನವಾಗಿಲ್ಲ.

ಈ ನಡುವೆ ಅಲ್ಪ ಸ್ವಲ್ಪ ಬೆಳೆದ ಕೃಷಿ ಉತ್ಪನ್ನಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವುದು ಮತ್ತೊಂದು ದೊಡ್ಡ ಸಮಸ್ಯೆಯಾಗಿದೆ. ಕೃಷಿ ಉತ್ಪನ ಮೊದಲಾದವುಗಳ ಮಾರಾಟದಲ್ಲಿ ಮದ್ಯವರ್ತಿಗಳ ಮತ್ತು ವ್ಯಾಪಾರಿಗಳ ಶೋಷಣೆಗೆ ಈ ಜನರು ತುತ್ತಾಗಿರುತ್ತಾರೆ.ಹಣದ ಲೇವಾದೇವಿಗಾರರೂ ಸಹ ಇವರನ್ನೂ ಶೋಷಣೆಗೆ ಒಳಪಡಿಸಿರುವರು.ಕೃಷಿಯಲ್ಲಿರುವ ಶೇ ೫೦ ರಷ್ಟು ಮಹಿಳೆಯರು ಅನಕ್ಷರಸ್ಥರು. ಅಂದರೆ ವ್ಯವಸ್ಥಿತ ವಲಯದ ಕೌಶಲದ ಉದ್ಯೋಗಗಳಿಗೆ ಸುಲಭವಾಗಿ ಹೋಗುವುದು ಸಾದ್ಯವಿಲ್ಲ. ನಿಜ ಹೇಳಬೇಕೆಂದರೆ ಏನೇನು ಅಭಿವೃದ್ದಿಯಿಲ್ಲದ ಕೃಷಿ ಕ್ಷೇತ್ರವನ್ನು ತೊರೆದು ಬೆಲೆ ಉದ್ಯೋಗಗಳರಸಿ ವಲಸೆ ಹೋಗುವ ಪುರುಷರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಇದರಿಂದ ಕೃಷಿ ಲೋಕ ಹೆಚ್ಚಿ ಮಹಿಳಾಮಯವಾಗುತ್ತಿರುವ ಪ್ರವೃತ್ತಿ ಕಂಡು ಬರುತ್ತಿದೆ.

ಹೀಗಿದ್ದು ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಮಹಿಳಾ ಕೃಷಿಕಾರ್ಮಿಕರ ಬದುಕಿನಲ್ಲಿ ಬಹುತೇಕ ಸಂದರ್ಭಗಳಲ್ಲಿ ಭೂಮಿಯ ಒಡೆತನ ಮಹಿಳೆಯರದ್ದಾಗಿಲ್ಲ. ಭೂಮಿಯ ಮೇಲೆ ಅವರದೇ ವಾಸ್ತವ ನಿಯಂತ್ರಣ ಇದ್ದರೂ ಅದು ಅವರದಾಗಿಲ್ಲ. ಬೆಳೆಯ ಆಯ್ಕೆ, ಮಾರಟ, ಭೂಮಿಯನ್ನು ಅಡವಿಡುವುದು, ಭೂಮಿ ಮಾರಾಟ ಉತ್ಪಾದನೆಯ ಸಲಕರಣೆಗಳನ್ನು ಕುರಿತಂತಹ ನಿರ್ಧಾರಗಳನ್ನು ಮಾಡುವವರು ಮನೆಯೇ ಗಂಡಸರದ್ದೇ ಆಗಿದೆ.

ಕೃಷಿ ಕಾರ್ಮಿಕರು ಅಸಂಘಟಿತ ವಲಯದ ಬಹುದೊಡ್ಡ ಭಾಗವಾಗಿದ್ದಾರೆ, ಇದರಲ್ಲಿ ಬಹುಪಾಲು ಮಂದಿ ಸಣ್ಣ ರೈತರು ಮತ್ತು ಅಂಚಿನಲ್ಲಿರುವ ರೈತರಾಗಿದ್ದಾರೆ ಕೊರತೆಯುಳ್ಳ ಆರ್ಥಿಕವಾಗಿ ಉತ್ತಮವೆನಿಸಿದ ಸಣ್ಣ ಜಮೀನು ಇವರದು ಬೇರೆಯವರ ಜಮೀನಿನಲ್ಲಿ ಬಹಳ ಕಡಿಮೆ ಆದಾಯಕ್ಕೆ ಇವರು ದುಡಿಯುತ್ತಾರೆ. ಇನ್ನು ಪ್ರಾಣಿ ಸಾಕಾಣಿಕೆ, ಅರಣ್ಯ ಉತ್ಪನ್ನಗಳ ಸಂಗ್ರಹ, ಮೀನುಗಾರಿಕೆ, ಹಣ್ಣಿನ ತೋಟ ಮತ್ತು ಇದೇ ರೀತಿಯ ಅನೇಕ ಚಟುವಟಿಕೆಗಳುಲ್ಲಿ ನಿರತರಾಗಿರುವವರು. ತಮ್ಮ ಬಿಡುವಿನ ಸಮಯದಲ್ಲಿ, ಕಟ್ಟಡ ಸಮಯದಲ್ಲಿ, ತಮ್ಮ ಕಡಿಮೆ ಆದಾಯಕ್ಕೆ ಪೂರಕರ್ವಿಲೆಂದು ಕಾರ್ಮಿಕರಾಗಿ ಸಂಖ್ಯಾಬಲದಲ್ಲಿ ಪ್ರಬಲರಾಗಿ ಕಾಣಿಸಿಕೊಂಡರೂ ಕೂಡಾ ಕಡಿಮೆ ಮಟ್ಟದ ಶಿಕ್ಷಣ,

ತಿಳುವಳಿಕೆಯ ಕೊರತೆ, ನಿರಂತರ ಸಾಮಾಜಿಕ ಹಿಂದುಳಿಯುವಿಕೆ ಮತ್ತು ಸಂಘಟನೆ ಹಾಗೂ ಇತರ ವಿಧಗಳ ಕಾರ್ಯಸಾಧ್ಯ ಸಂಸ್ಥೆಯ ಆಸರೆಯ ಕೊರತೆಯಿಂದಾಗಿ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಶೋಷಣೆಗೆ ಬಲಿಯಾಗುತ್ತಾರೆ ಅವರಿಗೆ ಸ್ಥಿರ ಮತ್ತು ತಾಳಿಕೆಯ ಉದ್ಯೋಗವಕಾಶಗಳು ಸೀಮಿತವಾಗಿದೆ ಹೀಗಾಗಿ ಉತ್ತಮ ಉದ್ಯೋಗ ಮತ್ತು ಉತ್ತಮ ಗಳಿಕೆಯನ್ನು ಹುಡುಕುತ್ತಾ ಇವರು ಬೇರೆ ಜಿಲ್ಲೆಗಳಿಗೆ ಮತ್ತು ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಾರೆ. ಇದರಿಂದ ಕೌಟಂಬಿಕ ಬದುಕು ಮತ್ತು ಮಕ್ಕಳ ಶಿಕ್ಷಣದ ಸ್ಥಿರತೆ ಇಲ್ಲದಿರುವುದು ಹಾಗೂ ಅನೇಕ ತೊಂದರೆಗಳನ್ನು ಇವರು ಅನುಭವಿಸಬೇಕಾಗುತ್ತದೆ.

ಮಹಿಳಾ ಕೃಷಿ ಕಾರ್ಮಿಕರೆಂದರೆ ಯಾರು ?

ಕೃಷಿ ಎಂಬುದು ಬೇಸಾಯ ಮತ್ತು ಅರಣ್ಯ ಕಲೆಯ ಮೂಲಕ ಆಹಾರ ಮತ್ತು ಸರಕುಗಳನ್ನು ಉತ್ಪಾದಿಸುವ ಒಂದು ವಿಧಾನ. ಕೃಷಿ ಎಂಬ ಪದದ ಆಂಗ್ಲರೂಪ ಅಗ್ರಿಕಲ್ಚರ್. ಇದು ಲ್ಯಾಟೀನ್ ಭಾಷೆಯ ಅಗ್ರಿಕಲ್ಚುರ ಎಂಬ ಪದದ ಇಂಗ್ಲೀಷ್ ರೂಪಾಂತರ. 'ಅಗರ' ಎಂದರೆ ಒಂದು ಹೊಲ ಮತ್ತು ಕಲ್ಚುರ ಎಂದರೆ 'ಸಾಗುವಳಿ' ಒಟ್ಟಿನಲ್ಲಿ ಕರಾರುವಕ್ಕಾಗಿ ಹೇಳುವುದಾದರೆ, ಅಗ್ರಿಕಲ್ಚುರ ಎಂದರೆ ಭೂಮಿಯ ಉಳುವಿಕೆ ಎಂದರ್ಥ. ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ಮಹಿಳೆಯರು ಕೃಷಿಯಲ್ಲಿ ತಮ್ಮನ್ನು ತಾವು ದುಡಿಮೆಯ ವರ್ಗದ ನೆಲೆಯಲ್ಲಿ ಕಂಡುಬರುವ ಒಂದು ವರ್ಗವನ್ನೇ ಮಹಿಳಾ ಕೃಷಿ ಕಾರ್ಮಿಕೆಂದು ಕರೆಯಲಾಗಿದೆ.

"ಕೃಷಿ ಕ್ಷೇತ್ರದಲ್ಲಿ ಕೂಲಿಗೆ ಸಂಬಂಧಿಸಿದಂತೆ ತೀವ್ರ ರೀತಿಯ ಲಿಂಗ ಸಂಬಂಧಿ ತಾರತಮ್ಯವಿರುವುದನ್ನು ಕಾಣಬಹುದು. ಮಹಿಳೆಯರ ಕೂಲಿಯು ಪುರುಷರ ಕೂಲಿಗಿಂತ ಕಡಿಮೆಯಿರುತ್ತದೆ. ಇದಕ್ಕಿಂತ ಮುಖ್ಯವಾಗಿ ಕೃಷಿ ಕಾರ್ಮಿಕರಲ್ಲಿ ಪರಿಶಿಷ್ಟ ಗುಂಪಿನ ಜನರ ಪ್ರಮಾಣ ಅಧಿಕವಾಗಿರುತ್ತದೆ. ಇಲ್ಲಿ ಪರಿಶಿಷ್ಟ ಗುಂಪಿಗೆ ಸೇರಿದ ಮಹಿಳಾ ಕೃಷಿ ಕಾರ್ಮಿಕರ ಕೂಲಿಯ ಪ್ರಮಾಣವು ಪರಿಶಿಷ್ಟೇತರ ಗುಂಪಿಗೆ ಸೇರಿದ ಮಹಿಳಾ ಕೃಷಿ ಕಾರ್ಮಿಕರ ಕೂಲಿಯ ಪ್ರಮಾಣವು ಪರಿಶಿಷ್ಟೇತರ ಗುಂಪಿಗೆ ಸೇರಿದ ಮಹಿಳಾ ಕೃಷಿ ಕಾರ್ಮಿಕರ ಕೂಲಿಯ ಪ್ರಮಾಣಕ್ಕಿಂತ ಕಡಿಮೆಯಿರುತ್ತದೆ. ಒಟ್ಟಿನಲ್ಲಿ ನಮ್ಮ ಸಮಾಜದ ಸಂದರ್ಭದಲ್ಲಿ ಅತ್ಯಂತ ಕೆಳಮಟ್ಟದ ಜೀವನ ಮಟ್ಟವನ್ನು ಹೊಂದಿರುವ ಮತ್ತು ಎಲ್ಲ ರೀತಿಯ ಅವಕಾಶಗಳಿಂದ ವಂಚಿತವಾಗಿರುವ ವರ್ಗವೆಂದರೆ ಮಹಿಳಾ ಕೃಷಿ ಕಾರ್ಮಿಕ ವರ್ಗ." (ಟಿ ಆರ್ ಚಂದ್ರಶೇಖರ್:೨೦೦೧:೧೦೭). ಪುರುಷ ಕಾರ್ಮಿಕರಿಗೆ ದಿನದ ಕೂಲಿ ರೂ ೨೦೦ ರಿಂದ ೨೫೦ ಮತ್ತು ಮಹಿಳಾ ಕಾರ್ಮಿಕರಿಗೆ ದಿನದ ಕೂಲಿ ೧೦೦ ರಿಂದ ೧೨೫ ಸಿಗುತ್ತದೆ. ಇವರ ಕೆಲಸದ ಸಮಯ ಬೆಳಗ್ಗೆ ೮ ರಿಂದ ೯ ಗಂಟೆಗೆ ಪ್ರಾರಂಭವಾಗಿ ಸಂಜೆ ೪ ರಿಂದ ೪.೩೦ ಗೆ ಕೊನೆಗೊಳ್ಳುತ್ತದೆ ನಡುವೆ ಒಂದು ಗಂಟೆಯಿಂದ ಒಂದೂವರೆ ಗಂಟೆಯ ವಿರಾಮವಿರುತ್ತದೆ. ಅವರು ಬೇಸಿಗೆಯ ಕಡುಬಿಸಿನಲ್ಲಿ, ಮಳೆಗಾಲದಲ್ಲಿ ನೆನೆದು ಕೆಲಸ ಮಾಡಬೇಕಾಗುತ್ತದೆ, ಭತ್ತಗಳಿಗೆ ಹೂವಿನ ಗಿಡಗಳಿಗೆ ನೀರು ಬೀಡುವುದು, ಔಷದಿ ಸಿಂಪಡಿಸುವುದು ಗಿಡಗಳಿಗೆ ಪಾತೆಮಾಡುವುದು

ಪುರುಷ ಕೆಲಸಗಾರರು ಅವರು ಈ ಎಲ್ಲ ಕೆಲಸಗಳಿಗೆ ೨೫೦ ರಿಂದ ೫೦೦ ರ ವರೆಗೆ ನೀಡಲಾಗುತ್ತದೆ. ಮಹಿಳೆಯರು ತೋಟ ಗದ್ದೆಗಳಲ್ಲಿ ಹುಲ್ಲು ಕೀಳುವಿಕೆ, ಸಸಿ ನಾಟಿ ಮಾಡುವುದು, ಭತ್ತದ ಸಸಿ ನೆಡುವಿಕೆ ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ನಿರ್ದಿಷ್ಟವಾಗಿ ಹೇಳುವುದಾದರೆ, ಮಹಿಳಾ ಕೃಷಿ ವಲಯದಲ್ಲಿ ಕೆಲಸ ಮಾಡುವವರು ದೈಹಿಕ ಶ್ರಮಜೀವಿಗಳು ಅಥವಾ ಕೂಲಿಗಳಾಗಿದ್ದಾರೆ. ಮಹಿಳಾ ಕೃಷಿ ಕಾರ್ಮಿಕರು ಇಲ್ಲಿ ದುಡಿಯುವವರು ಅಸಂಘಟಿತ ವಲಯಕ್ಕೆ ಸಂಬಂಧಿಸಿದಂತೆ ಒಂದೇ ಉದ್ಯೋಗದಾತನಲ್ಲಿ ಹಲವು ವರ್ಷಗಳ ಕಾಲ ದುಡಿದರೂ ಯಾವುದೇ ನೌಕರನಿಗೆ ಕೆಲಸದ ಭದ್ರತೆ ಇರುವುದಿಲ್ಲ. ಇವರಿಗೆ ನಿವೃತ್ತಿ ಸೌಲಭ್ಯಗಳಾಗಲೀ, ಅನಾರೋಗ್ಯದ ಸಂದರ್ಭದಲ್ಲಿ, ಆರ್ಥಿಕ ಭದ್ರತೆಯನ್ನು ಒದಗಿಸಲಾಗುತ್ತಿಲ್ಲ. ಲಿಂಗ ತಾರತಮ್ಯದ ಪರಿಣಾಮವಾಗಿ ಮಹಿಳೆಯರ ಕುಟುಂಬದ ಒಳಗಿನ ಕೆಲಸಕ್ಕೆ ಮಾತ್ರ ಸೀಮಿತವೆಂದು ಬಿಂಬಿಸಲಾಗಿತ್ತು. ಇದರ ಪರಿಣಾಮ ಹಿಂದಿನಿಂದಲೂ ಭಾರತೀಯ ಮಹಿಳೆಯರ ಸ್ಥಾನಮಾನದ ಮೇಲೆ ಸಾಕಷ್ಟು ಕೆಟ್ಟ ಪರಿಣಾಮ ಬೀರಿದೆ. ಇದರ ಫಲವಾಗಿ ಸಾಮಾಜಿಕ ಅನಿಷ್ಟ ಪದ್ಧತಿಗಳಾದ ಬಾಲ್ಯ ವಿವಾಹ, ಹೆಣ್ಣು ಶಿಶು ಹತ್ಯೆ, ಭ್ರೂಣಹತ್ಯೆ, ವಿಧವಾ ವಿವಾಹಕ್ಕೆ ಅಡಚಣೆ, ಹೆಣ್ಣು ಮಕ್ಕಳಿಗೆ ಶಿಕ್ಷಣ ನಿರಾಕರಣೆ ಇತ್ಯಾದಿ ಪದ್ಧತಿಗಳು ಆಚರಣೆಗೆ ಬಂದು ಮಹಿಳೆಯರ ಶೋಷಣೆಗೆ ಕಾರಣವಾಗಿದೆ. ಈ ಶೋಷಣೆಯ ಪರಿಣಾಮದಿಂದಾಗಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಅಸಮಾನತೆಗೊಳಗಾಗಿರುವುದು ಕಂಡು ಬರುತ್ತದೆ. ಎಲ್ಲಾ ಅಸಮಾನತೆಗೂ ಮೂಲ ಕಾರಣ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದಿಂದ ವಂಚಿತವಾಗಿರುವುದು ಸಾಮಾಜಿಕ ಶೋಷಣೆ ಮತ್ತು ಆರ್ಥಿಕ ಅಸಮಾನತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದರೆ ತಪ್ಪಾಗಲಾರದು. ಏಕೆಂದರೆ ಒಬ್ಬ ವ್ಯಕ್ತಿಯು ಆರ್ಥಿಕ ಸ್ವಾತಂತ್ರ್ಯ ಕಳೆದಕೊಂಡರೆ ಕುಟುಂಬದಲ್ಲಿ ಪರವಲಂಬಿಯಾಗಿ ಬದುಕಬೇಕಾದ ಅನಿವಾರ್ಯ ಪರಿಸ್ಥಿತಿ ಬರುತ್ತದೆ. ಪ್ರತಿಯೊಬ್ಬ ವ್ಯಕ್ತಿ ದಿನನಿತ್ಯದ ತನ್ನ ಬದುಕಿನಲ್ಲಿ ಮೂಲಭೂತ ಅವಶ್ಯತೆಗಳನ್ನು ಪೂರೈಸಿಕೊಳ್ಳಬೇಕಾದರೆ, ಯಾವುದಾದರೊಂದು ಶ್ರಮದ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ವ್ಯಕ್ತಿಯು ಆರ್ಥಿಕವಾಗಿ ಸ್ವಾತಂತ್ರ್ಯದಿಂದ ಬದುಕಲು ಸಾಧ್ಯವಾಗುತ್ತದೆ. "ಆರ್ಥಿಕ ಸ್ವಾತಂತ್ರ್ಯವೆನ್ನುವುದು ಯಾವುದಾದರೂ ಆದಾಯ ತರುವ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದಾಗಿದೆ. ಪುರುಷ ಆರ್ಥಿಕವಾಗಿ ಸ್ವಾತಂತ್ರನಾದ ಕಾರಣದಿಂದ ಕುಟುಂಬದ ಮೇಲೆ ನಿಯಂತ್ರಣ ಹೊಂದಲು ಸಾಧ್ಯವಾಗಿದೆ. ಇದರಿಂದ ಕುಟುಂಬದ ಪ್ರಮುಖ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಅವಕಾಶ ದೊರೆತಿದೆ. ಹಾಗೆಯೆ ಮಹಿಳೆಯರು ಪರಾವಲಂಬಿಯಾಗಲೂ ಕೂಡ ಕಾರಣವಾದ ಅಂಶವಾಗಿದೆ. ಪುರುಷ ಮಾಡುವ ಕೆಲಸವು ಉತ್ಪಾದಕ ಕೆಲಸವೆಂದು, ಗೌರವ ತರುವ ಮತ್ತು ಸಮಾಜದಿಂದ ಮಾನ್ಯತೆ ದೊರೆತ ಕೆಲಸವಾಗಿದೆ. ಆದರೆ ಮಹಿಳೆ ಮಕ್ಕಳ ಪೋಷಣೆ, ಮನೆಗೆಲಸ, ಅನಾರೋಗ್ಯಕ್ಕೆ ಒಳಗಾದವರ ಸೇವೆ ಮುಂತಾದ ಕುಟುಂಬದ ಒಳಗಿನ ಕೆಲಸಕ್ಕೆ ಸೀಮಿತವಾಗಿರುವುದರಿಂದ ಇವರ ದುಡಿಮೆಯು ಮಾರುಕಟ್ಟೆ ವಂಚಿತವಾಗಿದ್ದು ಅಗೋಚರ ದುಡಿಮೆಗಾರರೆಂದು ಕರೆಯಲ್ಪಡುತ್ತಾರೆ. ಇದರಿಂದ ಮಹಿಳೆಯರ ಕೌಟುಂಬಿಕ ಹಿಂಸೆ ಅನುಭವಿಸುವುದರ ಜೊತೆಗೆ, ಸಾಮಾಜಿಕ ಕಟ್ಟುಪಾಡುಗಳಿಂದ ಹೊರಬರಲು ಸಾಧ್ಯವಾಗಲಿಲ್ಲ.

ಇದು ಮಹಿಳೆಯರ ಆರ್ಥಿಕ ಸ್ವಾತಂತ್ರ್ಯವನ್ನು ಕಸಿದುಕೊಂಡಂತಾಯಿತು. ಈ ಕಾರಣದಿಂದಾಗಿ ಮಹಿಳೆಯರ ಸ್ವಾವಲಂಬಿಗಳಾಗಿ ಜೀವನ ರೂಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಹಿಳೆಯರ ಪರಾವಲಂಬನೆಯನ್ನು ಹೋಗಲಾಡಿಸಲು ಅಂತರಾಷ್ಟ್ರೀಯ ಮಟ್ಟದಲ್ಲೂ ಹಲವಾರು ಪ್ರಯತ್ನಗಳು ನಡೆದಿವೆ. ಇದರಲ್ಲಿ ಮಹಿಳಾ ಚಳುವಳಿಗಳೂ ಕೂಡ ಸಾಕಷ್ಟು ಪ್ರಭಾವ ಬೀರಿವೆ. ಇದರ ಪರಿಣಾಮವಾಗಿ ಇಂದು ವಿಶ್ವದ ಹಲವಾರು ರಾಷ್ಟ್ರಗಳಲ್ಲಿ ಮಹಿಳೆಯರ ಪುರುಷರಿಗೆ ಸರಿಸಮಾನವಾಗಿ ದೇಶದ ಅಭಿವೃದ್ಧಿ ತಮ್ಮ ಕೊಡುಗೆ ನೀಡುತ್ತಿದ್ದಾರೆ."(ನ್ಯಾ//ಹೆಚ್.ಎನ್. ನಾಗಮೋಹನದಾಸ್:೨೦೧೪:೨೦,೨೪). ಹೀಗಾಗಿ ಗ್ರಾಮೀಣ ಮಹಿಳೆಯರು ಸಬಲರಾಗಬೇಕಾದರೆ ಮಹಿಳಾ ಸಂಘಟಿತ ಗುಂಪುಗಳು ಅಗತ್ಯ. ಈ ದಿಕ್ಕಿನಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಮಹಿಳಾ ಆರ್ಥಿಕ ಸಬಲೀಕರಣದಲ್ಲಿ ಹೇಗೆ ಪ್ರಭಾವ ಬೀರತ್ತವೆ ಎಂಬುದನ್ನು ತಿಳಿಯಲು ಅಧ್ಯಯನ ಕೈಗೊಳ್ಳಲಾಗಿದೆ.

ಮಹಿಳಾ ಕೃಷಿ ಕಾರ್ಮಿಕರ ವರ್ಗೀಕರಣ

ಅಸಂಘಟಿತ ವಲಯದ ಬಹುತೇಕ ದುಡಿಮೆದಾರರ ಸ್ವಯಂ ಉದೋಗಿಗಳಾಗಿದ್ದಾರೆ. ಅಸಂಘಟಿತ ವಲಯದ "ದ ನ್ಯಾಶನಲ್ ಕಮಿಶನ್ ಫಾರ್ ಎಂಟರ್ ಪ್ರೈಸಸ್" ಈ ವಲಯದ ಕುರಿತಾಗಿ ಮತ್ತು ಇದರ ಪ್ರಮುಖ ಘಟಕಗಳ ಕುರಿತಾಗಿ ವ್ಯಾಪಕ ವಿವರಗಳನ್ನು ನೀಡುವುದರ ಮಾಲಕ ಉತ್ತಮ ಕಾರ್ಯವನ್ನು ನಿರ್ವಹಿಸಿದೆ. ಕೃಷಿ ಸ್ವಯಂ ಉದ್ಯೋಗಿಗಳಿಗೆ ಲಾಭದಾಯಕ ಉದ್ಯೋಗವನ್ನು ನೀಡುವ ಬಹುದೊಡ್ಡ ಕ್ಷೇತ್ರವಾಗಿದೆ ಆದರೆ ಕೃಷಿಯೇತರ ಕ್ಷೇತ್ರಕ್ಕೆ ಕಂಡಾ ಹೆಚ್ಚಿನ ಪ್ರಾಮುಖ್ಯತೆ ಇದೆ. ಇಲ್ಲಿ ಆಯೋಗ ಕಂಡುಕೊಂಡ ಕುತೂಹಲಕಾರಿ ಲಿಂಗ ಸಂಬಂಧಿ ವಿಚಾರವೆಂದರೆ, ಉತ್ಪಾದನಾ ವಲಯದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದ್ದರೆ, ಸೇವಾ ವಲಯದಲ್ಲಿ ಪುರುಷರು ಹೆಚ್ಚಿರುವುದನ್ನು ವರ್ಗೀಕರಿಸಬಹುದು."(ಮಜುಮ್‌ದಾರ್:೨೦೦೮:೩೧). ಪೂರ್ಣ ರೀತಿಯಲ್ಲಿ ತೊಡಗಿಸಿಕೊಳ್ಳವ ಕಾರ್ಮಿಕರು (ವಾರ್ಷಿಕ ತೋಟ ನೌಕರರು) ಅರೆ ಸಂಬಂಧ ಕಾರ್ಮಿಕರು ಹಂಗಾಮಿ ದಿನಕೂಲಿ ಕಾರ್ಮಿಕರು, ದನಗೂಲಿ ಕಾರ್ಮಿಕರ ಗುಂಪು ಮತ್ತು ಅಂಚಿತ ರೈತರು ಕೃಷಿ ಕಾರ್ಮಿಕರು ಪೂರ್ಣ ರೀತಿಯ ಕಾರ್ಮಿಕರೆಂದರೆ, ಉದ್ಯೋಗದಾತರೊಂದಿಗೆ ಒಂದು ವರ್ಷಕ್ಕಿಂತ ಹೆಚ್ಚು ಕರಾರಿಗೆ ಬದ್ದರಾಗಿರುವ ದುಡಿಮೆದಾರರು ಅರೆ ಸಂಬಂದಿ ಕಾರ್ಮಿಕರೆಂದರೆ, ನಿರ್ದಿಷ್ಟ ಉದ್ಯೋಗದಾತರೊಂದಿಗೆ ಒಂದು ದಿನದ ಅವಧಿಗೆ ಕೆಲಸ ಮಾಡುವ ಕರಾರನ್ನು ಹೊಂದಿರುವವರು ಗುಂಪು. ಕಾರ್ಮಿಕರೆಂದರೆ ಬಿಡಿ ದರವನ್ನು ಆಧರಿಸಿ ಕೆಲಸ ಮಾಡುವ ಸಮಾನ ಕಾರ್ಯ ಚತುರತೆಯನ್ನು ಹೊಂದಿರುವ ಗುಂಪಿನಲ್ಲಿ ಗುರುತಿಸಿಕೊಳ್ಳುವ ಕಾರ್ಮಿಕರು (ಅಂದರೆ ಧಾನ್ಯದ ಕಟಾವಿನಲ್ಲಿ ಇರುವ ಹಾಗೆ ದುಡಿಮೆಗಾರರ ನಿರ್ದಿಷ್ಟ ಹುಟ್ಟುವಳಿಯನ್ನು ಪರಿಮಾಣ ಮತ್ತು ಗುಣಮಟ್ಟದಿಂದ ಅಳೆಯಲಾಗುವುದು) ಬೇರೆ ಕಾರ್ಯಗತಿಯ ಅವಧಿಯ (ಸಮಯದ) ಧರಗಳನ್ನು ಅಂಗೀಕರಿಸಲಾಗುವುದು. ಅಂಚಿನ ರೈತರು/ಕೃಷಿ ಕಾರ್ಮಿಕರೆಂದರೆ, ತಮ್ಮ ಸ್ವಂತ ಕೃಷಿ ಕಾರ್ಯವನ್ನು ಮತ್ತು ಕೂಲಿಗಾಗಿ ಇತರರ ಕೃಷಿ ಅಥವಾ ಸಾದೃಶ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವವರು."(ಪುಮಣಿಕ್ ೨೦೦೮-೨೪-೨೫).

"ಮಹಿಳಾ ದುಡಿಮೆಗಾರರಲ್ಲಿ ಅತ್ಯಂತ ದೊಡ್ಡ ಗುಂಪೆಂದರೆ, ಹಾಗೂ ಕಣ್ಣಿಗೆ ರಾಚುವಂತೆ ಕಾಣುವ ವರ್ಗವೆಂದರೆ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು. ಸಮಾಜದಲ್ಲಿ ಯಾವ ವರ್ಗವನ್ನಾದರೂ 'ಕಡುಬಡವರು', 'ನಿರ್ಗತಿಕರು', 'ವಂಚಿತರು' ಎಂದು ವರ್ಗೀಕರಿಸುವುದಾದರೆ ಆ ವರ್ಗ ಬೇರಾವುದು ಅಲ್ಲ ಭೂರಹಿತ ಮಹಿಳಾ ಕೃಷಿ ಕಾರ್ಮಿಕ ವರ್ಗವಾಗಿರುತ್ತದೆ. ಅನೇಕ ಸ್ತ್ರೀವಾದಿಗಳು (ವಂದನಾಶಿವ, ನೈಲಾಕಬೀರ್) ಅಭಿವೃದ್ಧಿಯನ್ನು ಈ ವರ್ಗದ ನೆಲೆಯಿಂದಲೇ ಪರಿಭಾವಿಸಿಕೊಳ್ಳಬೇಕು ಎಂದು ಪ್ರತಿಪಾದಿಸಿದ್ದಾರೆ. ಈ ವರ್ಗದಲ್ಲಿ ಮುಕ್ಕಾಲು ಮೂರು ಪಾಲು ಪರಿಶಿಷ್ಟ ಗುಂಪಿಗೆ ಸೇರಿದವರಾಗಿರುತ್ತಾರೆ. ಭೂರಹಿತ ಮಹಿಳಾ ಕೃಷಿ ಕಾರ್ಮಿಕರು ಸಾಮಾಜಿಕವಾಗಿ ಅಂಚಿಗೆ ದೂಡಲ್ಪಟ್ಟವರಾಗಿರುತ್ತಾರೆ. ಆರ್ಥಿಕವಾಗಿ ಅಧೀನ ಸ್ಥಿತಿಯಲ್ಲಿರುತ್ತಾರೆ. ಶೈಕ್ಷಣಿಕವಾಗಿ ನಿರಕ್ಷರಸ್ಥರಾಗಿರುತ್ತಾರೆ. ರಾಜಕೀಯವಾಗಿ ಅಧಿಕಾರವಿಲ್ಲದೆ ಅತಂತ್ರರಾಗಿರುತ್ತಾರೆ ಹಾಗೂ ಜಾತಿ ಏಣಿ ಶ್ರೇಣಿಯ ನೆಲೆಯಿಂದ ಪರಿಶಿಷ್ಟ ಗುಂಪಿಗೆ ಸೇರಿದವರಾಗಿರುತ್ತಾರೆ. ಉದಾಹರಣೆಗೆ ಕರ್ನಾಟಕದಲ್ಲಿ ೧೯೯೧ ರಲ್ಲಿದ್ದ ಭೂರಹಿತ ಮಹಿಳಾ ಕೃಷಿ ಕಾರ್ಮಿಕರ ಸಂಖ್ಯೆ ೨೪.೮೮ ಲಕ್ಷ ಇದರಲ್ಲಿ ಪರಿಶಿಷ್ಟರ ಪ್ರಮಾಣ ಶೇ.೩೭.೧೮ ಯಾವ ದೃಷ್ಟಿಯಿಂದ ನೋಡಿದರೂ ಭೂರಿತ ಮಹಿಳಾ ಕೃಷಿ ಕಾರ್ಮಿಕರು ಸಮಾಜದಲ್ಲಿ ಅತ್ಯಂತ ಹೀನಾಯ ಸ್ಥಾನಮಾನ ಹಾಗೂ ಸ್ಥಿತಿಗತಿಯಲ್ಲಿರುವುದು ಕಂಡು ಬರುತ್ತದೆ. ಅನೇಕ ಅಧ್ಯಯನಗಳು ಸ್ಪಷ್ಟಪಡಿಸಿರುವಂತೆ ಕೃಷಿ ಉತ್ಪನ್ನದಲ್ಲಿ ಹಾಗೂ ಕೃಷಿ ಕ್ಷೇತ್ರದಲ್ಲಿನ ದುಡಿಮೆಯಲ್ಲಿ ಮಹಿಳೆಯರ ಪಾಲು, ಅವರ ಪಾತ್ರ ಹಾಗೂ ಕಾಣಿಕೆ ಅಗಾಧವಾದುದಾಗಿದೆ. ಆದರೆ ಇದನ್ನು ಜ್ಞಾನ ಶಿಸ್ತುಗಳಾಗಲಿ, ಸಮಾಜವಾಗಲಿ ಅಥವಾ ಸರ್ಕಾರಗಳಾಗಲಿ ಮನ್ನಿಸುತ್ತಿಲ್ಲ. ಅವರ ಪಾತ್ರ ಹಾಗೂ ಕಾಣಿಕೆಯನ್ನು ಒಂದೂ ಗಣನೆಗೆ ಒಳಪಡಿಸುತ್ತಿಲ್ಲ ಇಲ್ಲವೇ ಉದ್ದೇಶಪೂರ್ವಕವಾಗಿ ಗೌಣವನ್ನಾಗಿ ಮಾಡಲಾಗಿದೆ. ಅವಗಣನೆಗೆ ಒಳಗಾಗಿದ್ದರೂ ಕೂಡ, ಅವರ ಕಾಣಿಕೆಯನ್ನು ಗೌಣವನ್ನಾಗಿ ಮಾಡಿದ್ದರೂ ಸಹ ಬಡ ಕೃಷಿ ಅವಲಂಭಿ ಕುಟುಂಬಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪಾತ್ರ ನಿರ್ಣಾಯಕವಾದುದಾಗಿದೆ. ಮಹಿಳೆಯರು ಮುಖ್ಯಸ್ಥರಾಗಿರುವ ಹಾಗೂ ಭೂಮಿಯಿಲ್ಲದ-ಅಲ್ಪ ಭೂಮಿಯಿರುವ ಕುಟುಂಬಗಳಲ್ಲಿನ ವರಮಾನದಲ್ಲಿ ಪುರುಷರಿಗಿಂತ ಮಹಿಳೆಯರ ಪಾಲು ಅಧಿಕವಾಗಿರುತ್ತದೆ. ಈ ಕುಟುಂಬಗಳಲ್ಲಿ ಮಕ್ಕಳ ಮತ್ತು ವೃದ್ಧರ ಆಹಾರ ರಕ್ಷಣೆ ಹಾಗೂ ಪೌಷ್ಠಿಕ ಆಹಾರದ ದೃಷ್ಠಿಯಿಂದ ಮಹಿಳೆಯರ ದುಡಿಮೆಯು ನಿರ್ಣಾಯಕವಾದುದಾಗಿದೆ. ಏಕೆಂದರೆ ಈ ಕುಟುಂಬಗಳಲ್ಲಿ ಮಹಿಳೆಯರು ಮಾಡುವ ಖರ್ಚು ವೆಚ್ಚಗಳಲ್ಲಿ ಅತಿ ಹೆಚ್ಚು ಭಾಗವು ಕುಟುಂಬದ ಸದಸ್ಯರ ಅಗತ್ಯಗಳನ್ನು ಪೂರೈಸುತ್ತಿದ್ದರೆ ಪುರುಷರು ಮಾಡುವ ಖರ್ಚು-ವೆಚ್ಚಗಳಲ್ಲಿ ೪ ರಿಂದ ೧/೩ ರಷ್ಟು ಭಾಗವು ತನ್ನ ವ್ಯಕ್ತಿಗತ ಅಗತ್ಯಗಳನ್ನು ಪೂರೈಸುತ್ತಿರುತ್ತವೆ."(ಅಂಜನಪ್ಪ ಬಿ ಎಚ್:೨೦೦೯:೧೧೮,೧೩೮,೧೭೧).

೩.೨ ಬೇಡ ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳು

ಜಿಲ್ಲೆಯ ಬಹುತೇಕ ಬೇಡ ಜನರು ಸಾಂಪ್ರದಾಯಿಕ ಜೀವನ ನಡೆಸುತ್ತಿರುವವರಾಗಿದ್ದಾರೆ. ಕಾಲ ಎಷ್ಟೇ ಬದಲಾಗಿದ್ದರೂ ಅವರ ಒಟ್ಟು ಬದುಕಿನ ಮೇಲೆ ಸಾಂಪ್ರದಾಯಿಕ ನಂಬಿಕೆಗಳು, ಜೀವನ

ಪದ್ಧತಿಗಳು ಬಲವಾದ ಹಿಡಿತವನ್ನು ಹೊಂದಿವೆ. ಇದೂ ಕೂಡ ಈ ಭಾಗದ ಮಹಿಳಾ ಕೃಷಿ ಕಾರ್ಮಿಕರ ಮೇಲೆ ಪರಿಣಾಮ ಬೀರಿದೆ. ಸಾಂಪ್ರದಾಯಿಕ ಸಮಾಜಗಳಲ್ಲಿ ಮನೆಗೆಲಸ, ಆಹಾರ ತಯಾರಿಕೆ ಹಾಗೂ ಮಕ್ಕಳ ಸಂಪೂರ್ಣ ಕಾರ್ಯಗಳು "ಸ್ತ್ರೀಯರ ಕಾರ್ಯಗಳು ಎಂದು ತಿಳಿಯಲಾಗಿದೆ. ಹಾಗೆಯೇ ಪ್ರಾಚೀನ ಕಾಲದಿಂದಲೂ ಬೇಟೆಯಾಡುವುದು ಮತ್ತು ಕಾದಾಡುವುದು, ಕುರಿ, ದನ, ಎಮ್ಮೆ ಹಿಂಡುಗಳನ್ನು ಮೇಯಿಸುವುದು ಹೆಚ್ಚು ಶ್ರಮದಾಯಕವಾದ ಹಾಗೂ ದೈಹಿಕ ಶಕ್ತಿಯ ಅವಶ್ಯಕತೆಯಿರುವ ಕೆಲಸಗಳನ್ನು ಪುರುಷರಿಗೆ ವಹಿಸಲಾಗಿದೆ. ಈ ರೀತಿಯ ಶ್ರಮವಿಭಜನೆಗೆ ಮುಖ್ಯ ಕಾರಣ ಹೆಣ್ಣು ಮಕ್ಕಳು ಆ ಕೆಲಸಗಳನ್ನು ಮಾಡಲು ಯೊಗ್ಯರಲ್ಲ ಎಂದು ನಂಬಲಾಗಿತ್ತು ಆದರೆ ಹಿಂದಿನಿಂದ ಈಗಿನವರೆಗೂ ಅದೇ ನಂಬಿಕೆ ಹೊಂದಿದ್ದಾರೆ. ಆದರೆ ಈ ನಂಬಿಕೆಗೆ ಸಾಕ್ಷಾಧಾರಗಳಿಲ್ಲ. ಬೇಡ ಸ್ತ್ರೀಯರು ಅವರು ದೈಹಿಕ ಕಾರಣದಿಂದ ತೀವ್ರವಾದ ಕಠಿಣ ಕೆಲಸಗಳನ್ನು ಮಾಡದೇ ಇರಬಹುದು. ಆದರೆ ಅದೆಷ್ಟೋ ಬೇಡ ಸ್ತ್ರೀಯರು ಇದಕ್ಕೆ ಅಪವಾದವಾಗಿದ್ದಾರೆ. ಪುರುಷರಿಗಿಂತ ಕಠಿಣವಾದ ಕೃಷಿ ಕಾರ್ಯಗಳನ್ನು ಮಾಡುವ ಸ್ತ್ರೀಯರು ಹಲವು ಸಮಾಜಗಳಲ್ಲಿ ಕಾಣುವರು. ಆದರೂ ಸ್ತ್ರೀಯು ಕೆಲಸ ಮಾಡಲು ಅರ್ಹಳಲ್ಲ ಎಂಬ ಆಪಾದನೆಯಿಂದ ಮುಕ್ತಳಾಗಿಲ್ಲ ಆದರೆ; ಪುರುಷರಿಗಿಂತ ಸ್ತ್ರೀಯರೇ ಹೆಚ್ಚು ಗಂಟೆ ದುಡಿಯುತ್ತಾರೆ. ಬಳ್ಳಾರಿಯ ಬೇಡ ಸಮುದಾಯದಲ್ಲಿಗಿಂತ ಭಿನ್ನವಾಗಿಲ್ಲ. ಇಲ್ಲಿಯೂ ಅಷ್ಟೇ ಮಹಿಳೆಯರೇ ಅತಿ ಹೆಚ್ಚು ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿಕೊಳ್ಳುವುದು. ಹಾಗಿದ್ದೂ ಅವರ ಸ್ಥಿತಿ ಶೋಚನೀಯವಾಗಿದೆ. ಇನ್ನು ಕೃಷಿಯಲ್ಲಿ ತೊಡಗಿಕೊಳ್ಳುವ ಮಹಿಳೆಯರಿಗೆ ಮಾನಸಿಕ ಒತ್ತಡ ಸೇರಿದಂತೆ ಲೈಂಗಿಕ ಕಿರುಕುಳ, ರಕ್ಷಣೆ ಕೊರತೆ, ಲಿಂಗತಾರತಮ್ಯ, ಅಸಮಾನ ವೇತನದ ಸಮಸ್ಯೆಗಳೂ ಕಾಡುತ್ತಿವೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಸದ್ಯದ ಪರಿಸ್ಥಿತಿಯನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. ಕೃಷಿ ಕ್ಷೇತ್ರದಲ್ಲಿ ದುಡಿಯುವ ಬೇಡ ಮಹಿಳೆಯರಿಗೆ ವೃತ್ತಿ ಭದ್ರತೆ ಇಲ್ಲ.

೨. ಕೂಲಿ ವ್ಯತಯಗಳಿವೆ ಏಕೆಂದರೆ ಕೃಷಿ ಕ್ಷೇತ್ರದ ಉದ್ಯಮಗಳು ಲಿಂಗ ತಾರತಮ್ಯವನ್ನು ವ್ಯಾಪಕವಾಗಿ ಅನುಸರಿಸುತ್ತವೆ.

೩. ಸರ್ಕಾರದ ಕನಿಷ್ಟ ಕೂಲಿ ಕಾಯ್ದೆ, ಮಾತೃತ್ವ ಸಂರಕ್ಷಣೆ ಕಾಯ್ದೆ, ಈ ಭಾಗದ ಕೃಷಿ ಕ್ಷೇತ್ರದಲ್ಲಿ ಜಾರಿಗೊಳ್ಳತ್ತಿಲ್ಲ.

೪. ವ್ಯವಸಾಯದಲ್ಲಿ ತೊಡಗಿಕೊಂಡ ಮಹಿಳೆಯರಿಗೆ ಈ ಬಗ್ಗೆ ಕಾನೂನಿನ ಅರಿವಿಲ್ಲದಿರುವುದು.

೫. ಈ ಭಾಗದ ಮಹಿಳೆಯರು ಆರ್ಥಿಕ ಶೋಷಣೆಗೆ ಒಳಗಾಗುತ್ತಿದ್ದಾರೆ.

೬. ಬೇಡ ಮಹಿಳೆಯರಲ್ಲಿ ಅನಕ್ಷರತೆ ಅಧಿಕ ಪ್ರಮಾಣದಲ್ಲಿದೆ.

೭. ಈ ಭಾಗದ ಕೃಷಿ ರಂಗದಲ್ಲಿ ಪುರುಷರ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತಿದೆ.

೧೦. ಗಣಿಗಾರಿಕೆ, ಕೈಗಾರಿಕೆ ಮುಂತಾದ ಕಾರಣಗಳಿಗಾಗಿ ಜಮೀನುಗಳು ಕೃಷಿಯೇತರ ಚಟುವಟಿಕೆಗಳಿಗೆ ಮಾರಾಟವಾಗುತ್ತಿವೆ.

೧೧. ಮಳೆಯಾಧಾರಿತ ಕೃಷಿ ಮಾಡುವುದರಿಂದ ಅನಿಶ್ಚತತೆ, ಅಭದ್ರತೆ ಕಾಡುತ್ತಿದೆ.

೧೨. ಇಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡವರಲ್ಲಿ ಸಾಲಗಾರರೇ ಹೆಚ್ಚು.

೧೩. ಕೃಷಿ ಉತ್ಪನ್ನಗಳನ್ನು ಖರೀದಿಸುವಾಗ ದಲ್ಲಾಳಿಗಳ ಮೋಸಕ್ಕೆ ಬಲಿಯಾಗುತ್ತಿದ್ದಾರೆ.

೧೪. ಬಳ್ಳಾರಿ ಜಿಲ್ಲೆಯಲ್ಲಿ ಅಂತರ್ಜಲ ಕುಸಿಯುತ್ತಿರುವುದರಿಂದ ಪುರುಷರು ಬೇರೆ ಉದ್ಯೋಗ ಹುಡುಕುತ್ತಿದ್ದು, ಮಹಿಳೆಯರೇ ಕೃಷಿ ಚಟುವಟಿಕೆಯಲ್ಲಿ ಹೆಚ್ಚು ಹೆಚ್ಚು ತೊಡಗುವಂತ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ.

ದೈಹಿಕ ವ್ಯತ್ಯಾಸಗಳ ಜೊತೆಯಲ್ಲಿ ಭಾವನಾತ್ಮಾಕ, ಮಾನಸಿಕ ಮತ್ತು ವೈಚಾರಿಕವಾಗಿಯೂ ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸವಿದೆ, ವಿಭಿನ್ನತೆಯಿತೆ. ಅವರಿಬ್ಬರ ದೃಷ್ಟಿಕೋನಗಳಲ್ಲೂ, ಪರಿಸರವನ್ನು ಪ್ರಪಂಚವನ್ನು ಅರ್ಥೈಸುವ ರೀತಿಯಲ್ಲೂ ಭಿನ್ನತೆಯಿದೆ. ಇಷ್ಟೆಲ್ಲಾ ವೈವಿಧ್ಯಗಳಿದ್ದರೂ ಗಂಡು ಹೆಣ್ಣು, ಪರಸ್ಪರ ಪೂರಕವಾಗಿರುವಂತ ಎರಡು ಜೀವಗಳು. ಎರಡು ವಿಭಿನ್ನತೆಗಳು ಸೇರಿ ಒಂದು ಸಂಪೂರ್ಣ ಮಾನವ ಸಮಾಜ, ಸಂಸ್ಕೃತಿ ಎನಿಸುತ್ತದೆ. ಆದರೆ ಈ ವ್ಯತ್ಯಾಸಗಳನ್ನು, ವಿಭಿನ್ನತೆಗಳನ್ನು ಅವುಗಳ ವೈಶಿಷ್ಟಗಳಲ್ಲಿ ಸ್ವಂತಿಕೆಗಳಲ್ಲಿ ಗುರುತಿಸುವ ಗೌರವಿಸುವ ಅವುಗಳ ಸಂಪೂರ್ಣ ಅಭಿವ್ಯಕ್ತಿಗೆ ಅವಕಾಶ ಒದಗಿಸುವ ಪ್ರವೃತ್ತಿಯನ್ನು ನಾವು ಪ್ರಸ್ತುತ ಸಮಾಜದಲ್ಲಿ ಕಾಣುವುದಿಲ್ಲ. ಈಗಿನ ನಮ್ಮ ಸಮಾಜ, ಸಮಾಜದ ಎಲ್ಲಾ ಬಗೆಯ ವ್ಯವಸ್ಥೆಗಳು, ನಮ್ಮ ನಾಗರಿಕತೆ, ನಮ್ಮ ವಿಜ್ಞಾನ, ನಮ್ಮ ಸಂಸ್ಕೃತಿ ಎಲ್ಲವೂ ಒಟ್ಟಾರೆಯಗಿ ಪುರುಷ ಲಕ್ಷಣಗಳನ್ನೇ ಪ್ರತಿಪಾದಿಸುವ ರೀತಿಯಲ್ಲಿ ಇವೆ. ಅಷ್ಟೇ ಮಾತ್ರವಲ್ಲ. ಪುರುಷ ಸಂಗತಿಗಳಿಗೆ ಪ್ರಾಧಾನ್ಯತೆ ಇದೆ. ಅವುಗಳಿಗೆ ಹೆಚ್ಚಿನ ಮರ್ಯಾದೆ ಇದೆ. ಸ್ತ್ರೀ ಸಂಗತಿಗಳಿಗೆ ಯಾವುದೇ ಗೌರವ ಇಲ್ಲ. ಅವನ್ನು ತುಚ್ಛವಾಗಿ ಕೀಳಾಗಿ ಪರಿಗಣಿಸಲಾಗುತ್ತದೆ. ಅದರೆ ಜೊತೆಗೆ ಹೆಣ್ಣಿಗೆ ಅಧಿಕಾರವೂ ಇಲ್ಲ, ಸ್ಥಾನಮಾನವೂ ಇಲ್ಲ. ಇವೆಲ್ಲವುದರ ವಾಸ್ತವ ಪರಿಣಾಮಗಳನ್ನು ನಾವು ಮುಂದೆ ವಿವರಿಸಿದ ರೀತಿಯಲ್ಲಿ ಕಾಣಬಹುದು. ವಿಶ್ವ ಸಂಸ್ಥೆಯ ಒಂದು ವರದಿಯಂತೆ, "ಮಹಿಳೆಯರು ಪ್ರಪಂಚದ ಅರ್ಧದಷ್ಟು ಜನಸಂಖ್ಯೆಯನ್ನು ಮತ್ತು ಅದರಲ್ಲಿಯ ಮೂರನೇ ಒಂದರಷ್ಟು ಅಧಿಕೃತ ದುಡಿಯುವ ಪಡೆಯನ್ನು ಹೊಂದಿದ್ದಾರೆ; ಆದರೆ ಅವರು ಮೂರನೇ ಎರಡರಷ್ಟು ದುಡಿಯುವ ಗಂಟೆಗಳಲ್ಲಿ ಶ್ರಮಿಸುತ್ತಾರೆ; ಪ್ರಪಂಚದ ಒಟ್ಟು ಆದಾಯದಲ್ಲಿ ಕೇವಲ ಹತ್ತರಲ್ಲಿ ಒಂದು ಭಾಗದಷ್ಟುನ್ನು ಮಾತ್ರ ಪಡೆಯುತ್ತಾರೆ; ಮತ್ತು ಪ್ರಪಂಚದ ಆಸ್ತಿಯಲ್ಲಿ ನೂರರಲ್ಲಿ ಒಂದು ಭಾಗಕ್ಕೆ ಮಾತ್ರ ಒಡೆಯರಾಗಿದ್ದಾರೆ.

ಮನೆಯ ಹೊರಗೆ ಕೆಲಸ ಮಾಡುವ ಅಗತ್ಯದ ಜೊತೆಗೆ ಮಹಿಳೆಯು ಮನೆ ಒಳಗಿನ ಎಲ್ಲಾ ಕೆಲಸಗಳನ್ನು ಮಡಬೇಕಾಗುತ್ತದೆ – ಅಡಿಗೆ, ಸ್ವಚ್ಛತೆ, ಬಟ್ಟೆ ಮತ್ತು ಪಾತ್ರೆಗಳನ್ನು ತೊಳೆಯುವುದು,

ಮಕ್ಕಳ, ವೃದ್ಧರ, ರೋಗಿಗಳ ಮತ್ತು ಎಲ್ಲಾಗಂಡಸರ ಆರೈಕೆ ಇತ್ಯಾದಿ. ಗ್ರಾಮೀಣ ಮಹಿಳೆಯರ ಕೆಲಸ ಇನ್ನೂ ಕಷ್ಟದಾಯಕ. ಮಕ್ಕಳ ಜೊತೆಗೂಡಿ ಅವರು ಸೌದೆ, ಮೇವು ನೀರು ಮತ್ತು ಅಡಿಗೆಗೆ ಸೊಪ್ಪುಗಳನ್ನು ಆಯಲು ಹಲವಾರು ಗಂಟೆಗಳ ಅಲೆದಾಡಬೇಕಾಗುತ್ತದೆ. ಹೀಗೆ ಮಹಿಳೆಯರು ಒಂದೇ ದಿನದಲ್ಲಿ ಎರಡು ದಿನಗೂಲಿ ಕೆಲಸ ಮಡಿಬೆಕಾಗುತ್ತದೆ, ಎರಡು ಪಾಲು ಹೊರೆ ಹೊರಬೇಕಾಗುತ್ತದೆ. ಎರಡು ಪಾಳಿ ಕೆಲಸ ಮಾಡಿದಂತಾಗುತ್ತದೆ. ಮಕ್ಕಳ ಹೆರುವಿಕೆ ಮತ್ತು ಪಾಲನೆಯನ್ನೂ ಸೇರಿಸಿದರೆ ಮಹಿಳೆಯರು ಮೂರು ಪಾಳಿ ಕೆಲಸ ಮಾಡೆದಂತಾಗುತ್ತದೆ. ಒಟ್ಟಾರೆಯಾಗಿ ಗಂಡಸಿಗಿಂತ ಹೆಂಗಸಿನ ದುಡಿಮಡಯ ದಿನ ಹೆಚ್ಚು ಗಂಟೆಗಳ ಕಾಲದಿಂದ ಕೂಡಿದ್ದು. ಮಹಿಳೆಯ ಕೆಲಸಕ್ಕೆ ಅಂತ್ಯವೇ ಇಲ್ಲಎಂದೂ ಹೇಳಬಹುದು.

ಆರ್ಥಿಕ ಸಮಸ್ಯೆಗಳು: ಸಾಂಸ್ಕೃತಿಕ ಸ್ಥಗಿತತೆಯು ಬುಡುಕಟ್ಟು ಜನರ ಎದುರಿಸುತ್ತಿರುವ ಒಂದು ಪ್ರಮುಖ ಸಮಸ್ಯೆಯಾಗಿದೆ ಇವರ ಜೀವನ ಸ್ಥಿತಿಯು ನಿಶ್ಚಲವಾಗಿದೆ ಇಂದು ಹೇಳಿದರೆ ತಪ್ಪಾಗಲಾರದು. ಆಧುಣೀಕರಣದ ಒತ್ತಡಗಳು ತಮ್ಮೊಡನೆ ಹೊತ್ತು ತರುವ ವ್ಯಾಪಕ ಬದಲಾವಣೆಗಳು ಬುಡಕಟ್ಟು ಜನರ ಮೇಲೆ ಪ್ರಭಾವವನ್ನು ಬಿರಲು ವಿಫಲಗೊಂಡಿವೆ. ಸಾಂಸ್ಕೃತಿಕವಾಗಿ ಹಿಂದುಳಿದಿರುವಿಕೆ ಮತ್ತು ಮೂಲೆ ಗುಂಪಾಗಿರುವಿಕೆ ಬುಡಕಟ್ಟು ಜನರಲ್ಲಿ ಕಣ್ಣು ಕುಕ್ಕುವಂತೆ ಗೋಚರಿಸುತ್ತದೆ.

ಅರೆ ಹೊಟ್ಟೆ, ಅಪೌಷ್ಟಿಕತೆ: ಬುಡಕಟ್ಟು ಜನರು ಶತಮಾನಗಳಿಂದ ಅರೆಹೊಟ್ಟೆಯಿಂದ ಬಳಲುತ್ತಿರುವರು. ಅಪೌಷ್ಟಿಕತೆ ಅನ್ನೈರ್ಮಲ್ಯದಿಂದ ಕೂಡಿದ ಜೀವನ ಸ್ಥಿತಿಗತಿಗಳು ಮತ್ತು ಸಾಂಕ್ರಾಮಿಕ ರೋಗಗಳ ಕಾರಣದಿಂದ ಅವರ ಜೀವನವು ಬರ್ಬರವಾಗಿದೆ.

ಅತ್ಯಲ್ಪ ಆದಾಯ: ಬುಡಕಟ್ಟು ಆರ್ಥಿಕತೆಯು ಬಹುತೇಕವಾಗಿ ಅರಣ್ಯಗಳನ್ನು ಮತ್ತು ಕೃಷಿಯನ್ನು ಅವಲಂಬಿಸಿದೆ. ಬುಡಕಟ್ಟಿನ ಜನರು ಅರಣ್ಯಗಳಲ್ಲಿ ಮತ್ತು ಅರಣ್ಯಗಳಂಚಿನಲ್ಲಿ ವಾಸಿಸುತ್ತಿದ್ದು ತಮ್ಮ ಜೀವನೋಪಾಯಕ್ಕಾಗಿ ಕಿರು ಅರಣ್ಯತ್ಪನ್ನಗಳನ್ನು ಅವಲಂಬಿಸಿರುತ್ತಾರೆ. ಆ ಉತ್ಪನ್ನಗಳ ಮಾರಟ ಮತ್ತು ಸಂಗ್ರಹದಿಂದ ಅವರು ಆದಾಯವನ್ನು ಸಂಪಾದಿಸಿರುತ್ತಾರೆ. ಆದರೆ ಇತ್ತೀಚಿನ ದಶಕಗಳಲ್ಲಿ ಅರಣ್ಯನಾಶದ ಹೆಚ್ಚಳದಿಂದಾಗಿ ಮತ್ತು ಗುಡ್ಡಗಾಡುಗಳಿಂದ ಹೊರದೂಡಲ್ಪಡುತ್ತಿರುವರು. ಕಿರು ಅರಣ್ಯತ್ಪನ್ನಗಳ ಸಂಗ್ರಹಣೆಯು ಇಳಿಮುಖವಾಗುತ್ತಿರುವುದರಿಂದ ಬುಡಕಟ್ಟು ಜನರ ಆದಾಯವು ಅಗಾಧವಾಗಿ ಕುಸಿಯುತ್ತದೆ.

ಸಾಂಪ್ರದಾಯಿಕ ಕೃಷಿ: ಕೆಲವು ಬುಡಕಟ್ಟು ಜನರು ಕಾಡಂಚಿನಲ್ಲಿ ವಾಸಿಸುತ್ತಾ ವ್ಯವಸಾಯದಲ್ಲಿ ತೊಡಗಿರುವರು. ಆದರೆ ಇವರು ಬಹಳ ಸಾಂಪ್ರದಾಯಕ ವಿಧಾನಗಳಿಂದ ಸಾಗುವಳಿಯನ್ನು ಮಾಡುತ್ತಿರುವರು ಮತ್ತು ಸರಿಯಾದ ಬೆಳೆ ರಚನೆಯನ್ನು ಅನುಸರಿಸುತ್ತಿರುವುದಿಲ್ಲ. ನೀರಾವರಿ ಸೌಲಭ್ಯಗಳ ಹಾಗೂ ಕೃಷಿ ಮತ್ತು ಅಲ್ಪ ಉತ್ಪನ್ನಗಳ ಕಾರಣದಿಂದ ಬುಡಕಟ್ಟು ಜನರ ಜೀವನವು ದಾರಿದ್ರಾವಸ್ಥೆಯಲ್ಲಿದೆ. ಅಸ್ತಿಗತ ಋಣಬಾಧೆ: ಅಸ್ತಿಗತ ಋಣಬಾದೆಯು ಬುಡಕಟ್ಟು ಜನರು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆಯಾಗಿದೆ. ಸುಮಾರು ಶೇಕಡ ೮೬ ರಷ್ಟು ಬುಡಕಟ್ಟು

ಜನ ಆಳವಾದ ಸಾಲದ ಕೊಪದಲ್ಲಿ ಮುಳಗಿದ್ದಾರೆ. ಬುಡಕಟ್ಟು ಜನರು ತಮ್ಮ ಹಣಕಾಸಿನ ಅವಶ್ಯಕತೆಗಳಿಗಾಗಿ ಹೆಚ್ಚು ಹಣದ ಲೇವಾದೇವಿಗಾರರನ್ನು ಆಶ್ರಯಿಸಿರುವರು. ವಿಪರೀತ ದರದ ಬಡ್ಡಿಯನ್ನು ವಿಧಿಸುವ ಮೂಲಕ ಹಣದ ಲೇವಾದೇವಿಗಾರರು ಬುಡಕಟ್ಟು ಜನರನ್ನು ಅವ್ಯಾಹತವಾಗಿ ಶೋಷಿಸುತ್ತಿರುವರು. ಪರಿಣಾಮವಾಗಿ ಬುಡಕಟ್ಟು ಆರ್ಥಿಕತೆಯು ನಿರಂತರವಾದ ಸಾಲದ ಭಾದೆಯನ್ನು ಎದುರಿಸುತ್ತಿದೆ.

ಅನಕ್ಷರತೆ: ಅಗಾದ ಪ್ರಮಾಣದ ಅನಕ್ಷರತೆಯು ಬುಡಕಟ್ಟು ಜನರ ಸಮಸ್ಯೆಗಳನ್ನು ಇನ್ನಷ್ಟು ಹೆಚ್ಚಿಸಿದೆ. ಬುಡಕಟ್ಟು ಜನರ ಸಾಕ್ಷರತೆಯು ಪ್ರಮಾಣ ಶೇಕಡ ೨೯.೬ ರಷ್ಟು ಅತ್ಯಲ್ಪ ಪ್ರಮಾಣದ್ದಾಗಿದೆ, ಆದರೆ ಈ ಪ್ರಮಾಣವು ರಾಜ್ಯದಿಂದ ರಾಜ್ಯಕ್ಕೆ ಬೇರೆ ಬೇರೆಯಾಗಿದೆ. ಬುಡಕಟ್ಟು ಜನರಲ್ಲಿ ಅತ್ಯಧಿಕ ದರದ ಸಾಕ್ಷರತೆಯು ಮಿಜೋರಾಂ ರಾಜ್ಯದಲ್ಲಿದ್ದು ಅದು ಶೇಕಡಾ ೮೨.೭೧ ಆಗಿರುತ್ತದೆ. ಶೇಕಡ ೬೦.೫೯ ಪ್ರಮಾಣದ ಸಾಕ್ಷರತೆಯನ್ನು ಹೊಂದಿರುವ ನಾಗಲ್ಯಾಂಡ್ ರಾಜ್ಯವು ಎರಡನೆಯ ಸ್ಥಾನದಲ್ಲಿದೆ. ಅತಿ ಕಡಿಮೆ ಸಾಕ್ಷರತೆಯ ದರವು ಆಂದ್ರ ಪ್ರದೇಶದಲ್ಲಿದ್ದು ಅದು ಶೇಕಡಾ ೧೭.೧೬ ಆಗಿದೆ.

ಬಡತನದ ವಿಷಚಕ್ರ: ಕೃಷಿಯಲ್ಲಿ ಕಡಿಮೆ ಉತ್ಪಾದಕತೆ, ಕಿರು ಅರಣ್ಯುತ್ಪನ್ನಗಳ ಅತ್ಯಲ್ಪ ಸಂಗ್ರಹ, ಅಲ್ಪ ಅದಾಯ ಮತ್ತು ಸಾಲದ ಬಾದೆಯಿಂದೂಡಗೂಡಿದ ವಿಷಚಕ್ರವು ಬುಡಕಟ್ಟು ಅರ್ಥವ್ಯವಸ್ಥೆಯನ್ನು ಕಂಗಾಲು ಮಾಡಿದೆ.

ಭೂಮಿಯ ಪರಭಾರೆ: ಬುಡಕಟ್ಟು ಜನರಿಂದ ಬುಡಕಟ್ಟೇತರ ಜನರಿಗೆ ಭೂಮಿಯ ಪರಭಾರೆಯು ಬುಡಕಟ್ಟು ಜನರು ಎದುರಿಸುತ್ತಿರುವ ಮತ್ತೊಂದು ಸಮಸ್ಯೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಫಲವತ್ತಾದ ಅನೇಕ ಜಮೀನುಗಳ ಬುಡಕಟ್ಟು ಜನರಿಂದ ಭೂಮಾಲೀಕರಿಗೆ ವರ್ಗಾವಣೆಗೊಳ್ಳುತ್ತಿವೆ. ಬುಡಕಟ್ಟು ಕುಟುಂಬವೊಂದರ ಸರಾಸರಿ ಹಿಡುವಳಿ ಗಾತ್ರವು ೦.೬೬ ಎಕರೆಗಳಾಗಿದೆ. ಭೂಮಾಲೀಕರ ಸರಾಸರಿ ಹಿಡುವಳಿಯ ಗಾತ್ರವು ೫ ಎಕರೆಗಳಿಂದ ೯೦ ಎಕರೆಗಳಾಗಿವೆ.

ಭೀಕರ ನಿರುದ್ಯೋಗ: ಸಾಕಷ್ಟು ಆದಾಯ ಗಳಿಕೆಯ ಮೂಲಗಳಿಲ್ಲದೆ ಅವರು ಬಳಲಿದ್ದಾರೆ. ಇವರಲ್ಲಿ ಬಹುತೇಕ ಜನರು ಕಾಡುಗಳಲ್ಲಿ ಮತ್ತು ಕಾಡಂಚಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಕಿರು ಅರಣ್ಯುತ್ಪನ್ನಗಳ ಸಂಗ್ರಹಣೆಯನ್ನು ಮಾಡಿಕೊಂಡಿರುತ್ತಾರೆ. ಆದರೆ ಅದಕ್ಕೆ ಸರಿಯಾದ ವ್ಯವಸ್ಥೆ ಇಲ್ಲದಿರುವಿಕೆ. ನಿರ್ಬಂಧಗಳ ಅಸ್ತಿತ್ವ ಮೊದಲಾದ ಕಾರಣಗಳಿಂದ ಬುಡಕಟ್ಟು ಜನರು ಪೂರ್ಣ ಪ್ರಮಾಣದಲ್ಲಿ ಉದ್ಯೋಗವನ್ನು ಪಡೆಯಲು ಮತ್ತು ಸಾಕಷ್ಟು ಆದಾಯವನ್ನು ಗಳಿಸಲು ಸಾಧ್ಯವಿಲ್ಲದಂತಾಗಿರುತ್ತದೆ. ಕಾಡಿನಿಂದ ಹೊರಗೆ ವಾಸಿಸುವ ಜನರಿಗೂ ಸಹ ಉದ್ಯೋಗದ ಶಾಶ್ವತ ಮೂಲಗಳಾಗಲೀ ಉತ್ತಮ ಜೀವನಕ್ಕೆ ಉದ್ಯೋಗವನ್ನು ಒದಗಿಸುವಂತಹ ಓಡೆತನವಾಗಲೀ ಇರುವುದಿಲ್ಲ.

ಶೋಷಣೆ: ಸಂಗ್ರಹಿಸಲಾದ ಕಿರು ಅರಣ್ಯುತ್ಪನ್ನಗಳ ಲಭ್ಯವಿರಬಹುದಾದ ಹೆಚ್ಚುವರಿ ಕೃಷಿ ಉತ್ಪನ ಮೊದಲಾದವುಗಳ ಮಾರಾಟದಲ್ಲಿ ಬುಡಕಟ್ಟು ಜನರ ಮದ್ಯವರ್ತಿಗಳ ಮತ್ತು ವ್ಯಾಪಾರಿಗಳ ಶೋಷಣೆಗೆ ತುತ್ತಾಗಿರುತ್ತಾರೆ. ಹಣದ ಲೇವಾದೇವಿಗಾರರೂ ಸಹ ಇವರನ್ನೂ ಶೋಷಣೆಗೆ ಒಳಪಡಿಸಿರುವರು.

ಮಹಿಳೆಯರ ಲಿಂಗ ಅಸಮಾನತೆ: ವಿಶ್ವ ಸಂಸ್ಥೆಯ ೧೯೮೦ರ ಒಂದು ವರದಿಯಂತೆ, "ಮಹಿಳೆಯರು ಪ್ರಪಂಚದ ಅರ್ಧದಷ್ಟು ಜನಸಂಖ್ಯೆಯನ್ನು ಮತ್ತು ಅದರಲ್ಲಿಯ ಮೂರನೇ ಒಂದರಷ್ಟು ಅಧಿಕೃತ ದುಡಿಯುವ ಪಡೆಯನ್ನು ಹೊಂದಿದ್ದಾರೆ; ಆದರೆ ಅವರು ಮೂರನೇ ಎರಡರಷ್ಟು ದುಡಿಯುವ ಗಂಟೆಗಳಲ್ಲಿ ಶ್ರಮಿಸುತ್ತಾರೆ; ಪ್ರಪಂಚದ ಒಟ್ಟು ಆದಾಯದಲ್ಲಿ ಕೇವಲ ಹತ್ತರಲ್ಲಿ ಒಂದು ಭಾಗದಷ್ಟನ್ನು ಮಾತ್ರ ಪಡೆಯುತ್ತಾರೆ; ಮತ್ತು ಪ್ರಪಂಚದ ಆಸ್ತಿಯಲ್ಲಿ ನೂರರಲ್ಲಿ ಒಂದು ಭಾಗಕ್ಕೆ ಮಾತ್ರ ಒಡೆಯರಾಗಿದ್ದಾರೆ."

೪೦ ವರ್ಷ ಕೆಳಗಿನ ಎಲ್ಲಾ ವಯೋಮಾನ ಗುಂಪುಗಳಲ್ಲಿ ಗಂಡಸರಿಗಿಂತ ಹೆಂಗಸರ ಮರಣ ಸಂಖ್ಯೆಯು ಹೆಚ್ಚಾಗಿದೆ. UNICEF ಪ್ರಕಾರ, ಭಾರತದಲ್ಲಿ ಪ್ರತಿ ವರ್ಷ ೧೨ ದಶಲಕ್ಷ ಹೆಣ್ಣುಶಿಶುಗಳ ಜನನವಾಗುತ್ತದೆ; ಆಸರೆ ಅವರಲ್ಲಿ ಶೆಕಡಾ ೨೫ ಮಂದಿ ೧೫ ವಯಸ್ಸಿನೊಳಗೆ ಮರಣಹೊಂದುತ್ತಾರೆ. ಪ್ರತಿ ವರ್ಷ ಗಂಡು ಮಕ್ಕಳಿಗಿಂತ ಮೂರು ಲಕ್ಷದಷ್ಟು ಹೆಚ್ಚಿಗೆ ಹೆಣ್ಣು ಮಕ್ಕಳು ಮರಣ ಹೊಂದುತ್ತಾರೆ. ಒಂದು ಹೆಣ್ಣು ಮಗುವನ್ನು ಯಾರೂ ಅಪೇಕ್ಷೆ ಪಡುವುದಿಲ್ಲ. ಅವಳು ಹುಟ್ಟು ದುಃಖಕ್ಕೆ ಕಾರಣ. ವರದಕ್ಷಿಣೆಗೆ ಕೂಡಿಹಾಕಬೇಕಾಗಿರುವುದರಿಂದ ತಂದೆತಾಯಿಗಳಿಗೆ ಅವಳು ಒಂದು ಹೊರೆ. ಆದರೆ ಅವಳೊಂದು ಕೆಲಸದ ಕುದುರೆ. ಗಂಡು ಮಕ್ಕಳಿಗಿಂತ ಅವಳಿಗೆ ಕಡಿಮೆ ತಿನಿಸಬೇಕಾಗುತ್ತದೆ. ಪುರುಷರ ಲೈಂಗಿಕ ಶೋಷಣೆಗೆ ಸುಲಭವಾಗಿ ಅವಳು ಬಲಿಯಾಗುತ್ತಾಳೆ. ಮಹಿಳೆ ಮತ್ತು ಮಕ್ಕಳಿಗೆ ಕಡಿಮೆ ಹಕ್ಕುಗಳನ್ನು ಪ್ರತಿಪಾದಿಸುವ ಸಮಾಜದಲ್ಲಿ, ಅವೆರಡೂ ಆಗಿರುವ ಹೆಣ್ಣು ಮಗುವಿಗೆ ಯಾವುದೇ ಹಕ್ಕಿಲ್ಲ." ೧೯೭೧ ರಿಂದ ಗಂಡು ಮತ್ತು ಹೆಣ್ಣು ಮಕ್ಕಳ ಜೀವಿತಾವಧಿ ನಿರೀಕ್ಷಣೆಯ ಅಂತರ ಕಡಿಮೆಯಾಗುತ್ತಿದ್ದರೂ ಅವುಗಳಲ್ಲಿ ಅಂತರ ಇದ್ದೇ ಇದೆ. ತಾಯಂದಿರ ಮತ್ತು ಶಿಶುಗಳ ಮರಣ ಸಂಖ್ಯೆಯೂ ಅತಿಯಾಗಿದೆ ಮತ್ತು ಅದನ್ನು ಒಪ್ಪಲಿಕ್ಕಾಗದು. ನಮ್ಮ ದೇಶದಲ್ಲಿ ಪ್ರತಿ ವರ್ಷ ಒಂದು ಕಾಲು ಲಕ್ಷದಷ್ಟು ತಾಯಂದಿರು ಮರಣ ಹೊಂದುತ್ತಾರೆ. ಅವುಗಳಲ್ಲಿ ಶೇಕಡಾ ೯೯ ರಷ್ಟನ್ನು ತಡೆಗಟ್ಟಬಹುದು ಎಂದು ಅಂದಾಜು ಮಾಡಲಾಗಿದೆ. ಹೆಣ್ಣು ಶಿಶುಗಳ ಹತ್ಯೆ ಈಗಲೂ ನಡೆಯುತ್ತಿದೆ. ಹೆಣ್ಣು ಭ್ರೂಣ ಹತ್ಯೆಯೂ ಯಾವುದೇ ಅಡೆತಡೆಯಿಲ್ಲದೇ ನಡೆಯುತ್ತಿದೆ. ಆರೋಗ್ಯ ಸೇವೆಯಲ್ಲೂ ಮಹಿಳೆಯರನ್ನು ಕಡೆಗಣಿಸಲಾಗಿದೆ. ಪುರುಷರಿಗಿಂತ ತೀರ ಕಡಿಮೆ ಹಾಸಿಗೆಗಳನ್ನು ಮಹಿಳೆಯರಿಗೆ ಆಸ್ಪತ್ರೆಗಳಲ್ಲಿ ಮೀಸಲಿಡಲಾಗುತ್ತಿದೆ. ಮಹಿಳೆಯರಿಗಿಂತ ಪುರುಷರೇ ಮೂರು ಪಾಲು ಹೆಚ್ಚು ಆರೋಗ್ಯ ಸೇವೆಗಳ ಲಾಭ ಪಡೆಯುತ್ತಾರೆ. ಪುರುಷರು ಮಹಿಳೆಯರಿಗಿಂತ ಹೆಚ್ಚಿನ ಕ್ಯಾಲರಿಗಳನ್ನು ಊಟದಲ್ಲಿ ಸೇವಿಸುತ್ತಾರೆ. ಶಿಕ್ಷಣದಲ್ಲಿಯೂ ಮಹಿಳೆಯರು ಪುರುಷರಿಗಿಂತ ಬಹಳ ಹಿಂದೆ ಇದ್ದಾರೆ. ಮಹಿಳೆಯರು ಮತ್ತು ಹುಡುಗಿಯರ ಸಾಕ್ಷರತೆ ಪ್ರಮಾಣ ಮತ್ತು ಶಾಲೆಯ ದಾಖಾಲಾತಿ ಪುರುಷರು ಮತ್ತು ಹುಡುಗರಿಗಿಂತ ಬಹಳ ಕಡಿಮೆ ಇದೆ. ಅವರಲ್ಲಿಯ ಅಂತರ ಕಡಿಮೆ ಆಗುತ್ತಿದ್ದರೂ ಅಂತರವಂತೂ ಇದ್ದೇ ಇದೆ.

ಬೇಡ ಮಹಿಳೆಯರಿಗೆ ಕೊನೆ ಗಾಣದ ಮನೆಗೆಲಸ: ಮನೆಯ ಹೊರಗೆ ಕೆಲಸ ಮಾಡುವ ಅಗತ್ಯದ ಜೊತೆಗೆ ಮಹಿಳೆಯು ಮನೆ ಒಳಗಿನ ಎಲ್ಲಾ ಕೆಲಸಗಳನ್ನು ಮಾಡಬೇಕಾಗುತ್ತದೆ. ಅಡುಗೆ, ಸ್ವಚ್ಛತೆ,

ಬಟ್ಟೆ ಮತ್ತು ಪಾತ್ರೆಗಳನ್ನು ತೊಳೆಯುವುದು, ಮಕ್ಕಳ, ವೃದ್ಧರ, ರೋಗಿಗಳ ಮತ್ತು ಎಲ್ಲಾ ಗಂಡಸರ ಆರೈಕೆ ಇತ್ಯಾದಿ. ಗ್ರಾಮೀಣ ಮಹಿಳೆಯರ ಕೆಲಸ ಇನ್ನೂ ಕಷ್ಟದಾಯಕ. ಮಕ್ಕಳ ಜೊತೆಗೂಡಿ ಅವರು ಸೌದೆ, ಮೇವು, ನೀರು ಮತ್ತು ಅಡುಗೆಗೆ ಸೊಪ್ಪುಗಳನ್ನು ಆಯಲು ಹಲವಾರು ಗಂಟೆಗಳ ಕಾಲ ಅಲೆದಾಡಬೇಕಾಗುತ್ತದೆ. ಹೀಗೆ ಮಹಿಳೆಯರು ಒಂದೇ ದಿನದಲ್ಲಿ ಎರಡು ದಿನಗೂಲಿ ಕೆಲಸ ಮಾಡಬೇಕಾಗುತ್ತದೆ. ಎರಡು ಪಾಲು ಹೊರೆ ಹೊರಬೇಕಾಗುತ್ತದೆ. ಎರಡು ಪಾಳಿ ಕೆಲಸ ಮಾಡಿದಂತಾಗುತ್ತದೆ. ಮಕ್ಕಳ ಹೆರುವಿಕೆ ಮತ್ತು ಪಾಲನೆಯನ್ನೂ ಸೇರಿಸಿದರೆ ಮಹಿಳೆಯರು ಮೂರು ಪಾಳಿ ಕೆಲಸ ಮಾಡಿದಂತಾಗುತ್ತದೆ. ಒಟ್ಟಾರೆಯಾಗಿ ಗಂಡಸಿಗಿಂತ ಹೆಂಗಸಿನ ದುಡಿಮೆಯ ದಿನ ಹೆಚ್ಚು ಗಂಟೆಗಳ ಕಾಲದಿಂದ ಕೂಡಿದ್ದು, ಮಹಿಳೆಯ ಕೆಲಸಕ್ಕೆ ಅಂತ್ಯವೇ ಇಲ್ಲ ಎಂದೂ ಹೇಳಬಹುದು. ಇಷ್ಟೆಲ್ಲಾ ಕೆಲಸ ಮಾಡುತ್ತಿದ್ದರೂ ಮಹಿಳೆಯರ ಕೊಡುಗೆ ಲೆಕ್ಕಕ್ಕೆ ಬರುವುದಿಲ್ಲ. ಅದು ಅಗೋಚರವೆಂಬ ರೀತಿಯಲ್ಲಿ ಇರುತ್ತದೆ. ಮಹಿಳೆಯರ ಕೆಲಸ ಕೆಲಸವೇ ಅಲ್ಲ ಎಂಬ ರೀತಿಯಲ್ಲಿ ತಿಳಿದುಕೊಳ್ಳಲಾಗಿದೆ. ಅದನ್ನು ಕೆಲಸವೇ ಅಲ್ಲ ಎಂದು ತಿಳಿದುಕೊಳ್ಳಲಾಗಿದೆ. ಏಕೆಂದರೆ ಆ ಕೆಲಸಕ್ಕೆ ಮಜೂರಿ ಇಲ್ಲ. ಮಹಿಳೆಯರಿಗೆ ಕೊಡುವ ಕೆಳಮಟ್ಟದ ಸ್ಥಾನಮಾನಕ್ಕೆ ಕಾರಣ ಸಂಪನ್ಮೂಲ ಅಭಿವೃದ್ಧಿಗೆ ಮಹಿಳೆಯರ ಕೊಡುಗೆಯನ್ನು ಪರಿಗಣಿಸದೇ ಇರುವುದು. ಆದರೆ ಮಹಿಳೆಯರ ಮನೆಗೆಲಸ ನಿಜವಾಗಿಯೂ ಯಾವುದೇ ಉತ್ಪಾದನಾ ಕೆಲಸವನ್ನು ಸಾಕಾರಗೊಳಿಸುತ್ತದೆ. ಮತ್ತು ಅವರಿಂದ ಹುಟ್ಟುವ ಯುವಪೀಳಿಗೆ ಹೊಸ ಕಾರ್ಮಿಕರನ್ನು ಸೃಷ್ಟಿ ಮಾಡುತ್ತದೆ. ನಿಜವಾಗಿಯೂ "ಗಂಡು ಮನೆಗೆ ತಂದು ಹಾಕುತ್ತಾನೆ" "ಗಂಡು ಸಂಪಾದನೆ ಮಾಡುತ್ತಾನೆ-ಹೆಣ್ಣು ಖರ್ಚು ಮಾಡುತ್ತಾಳೆ" ಎಂಬ ಹೇಳಿಕೆಗಳು ಹಾಸ್ಯಾಸ್ಪದವಾಗಿವೆ. ಮನೆಗೆಲಸಗಳನ್ನು ಮಹಿಳೆಯರಿಗೆ ಮೀಸಲಿಡುವುದರಿಂದ ಪುರುಷರಿಗೆ ಹಲವಾರು ಸೌಲಭ್ಯಗಳನ್ನು ಪುಕ್ಕಟೆಯಾಗಿ ಒದಗಿಸಿದಂತಾಗುತ್ತದೆ. ಇದರಿಂದ ಮಹಿಳೆಯರನ್ನು ಗುಲಾಮಗಿರಿಯಲ್ಲಿ ಸಿಲುಕಿಸಿ ಅವರು ಮುಂದೆ ಬರದ ಹಾಗೆ ನೋಡಿಕೊಳ್ಳಲಾಗುತ್ತದೆ ಮತ್ತು ಅವರು ಬೇರೆ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸದ ಹಾಗೆ ಮಾಡಲಾಗುತ್ತದೆ. ಅವರಿಗಿರುವ ಕೌಟುಂಬಿಕ ಹೊರೆಯಿಂದ ಮಹಿಳೆಯರಿಗೆ ಉತ್ತಮ ನೌಕರಿಗಳನ್ನು ಪಡೆಯಲು ಕಷ್ಟಸಾಧ್ಯ. ಇದ್ದ ನೌಕರಿಗಳಲ್ಲಿ ಇನ್ನೂ ಹೆಚ್ಚಿನ ತರಬೇತಿ ಪಡೆದು ವೃತ್ತಿ ಜೀವನದಲ್ಲಿ ಮುನ್ನಡೆ ಸಾಧಿಸಲು ಕಷ್ಟಕರ. ಪಟ್ಟಣದಲ್ಲಿಯ ಮಹಿಳೆಯರು ತಮ್ಮ ಕೌಟುಂಬಿಕ ಜವಾಬ್ದಾರಿಗಳ ದೆಸೆಯಿಂದ ತಮ್ಮ ಕೆಲಸದ ಸಮಯ, ಕೆಲಸಕ್ಕೆ ಹೋಗಲು ತಗಲುವ ಸಮಯಗಳ ಲೆಕ್ಕಾಚಾರ ಮಾಡಿ ಕೊನೆಗೆ ಪಾರ್ಟ್ ಟೈಮ್ ಕೆಲಸದಲ್ಲೇ ತೃಪ್ತಿಪಡೆಯಬೇಕಾದ ಸಾಧ್ಯತೆಗಳು ಜಾಸ್ತಿ. ಗಂಡಸರೂ ಹೆಂಗಸರೂ ಜಾತಿ, ವರ್ಗ, ಜನಾಂಗೀಯ ಮತ್ತಿತರ ಅಸಮಾನತೆಗಳಿಂದ ಉದ್ಭವವಾಗುವ ಶೋಷಣೆಗಳಗೆ ಒಳಗಾಗಿದ್ದಾರೆ. ಆದರೆ ಮಹಿಳೆಯರ ವೈಶಿಷ್ಟ್ಯವೆಂದರೆ ಅವರು ಕುಟುಂಬದಲ್ಲೇ ಶೋಷಣೆ ಮತ್ತು ಕ್ರೌರ್ಯಕ್ಕೆ ಒಳಗಾಗುತ್ತಾರೆ. ಪುರುಷರ ಬಬ್ಬಾಳಿಕೆಯ ತೀವ್ರತೆ ಮತ್ತು ಮುಖಗಳು ಜಾತಿ ಜಾತಿ, ವರ್ಗ ವರ್ಗ, ಧರ್ಮ ಧರ್ಮ, ಪ್ರದೇಶ ಪ್ರದೇಶ ಹಾಗೂ ಹಳ್ಳಿ ಪಟ್ಟಣಗಳಲ್ಲಿ ಬೇರೆ ಬೇರೆಯಾಗಿದ್ದರೂ ಅವು ದೇಶದಲ್ಲೆಲ್ಲಾ ಪ್ರಚಲಿತದಲ್ಲಿವೆ. ಪ್ರತಿಯೊಂದು ಕುಟುಂಬ ವ್ಯವಸ್ಥೆಯಲ್ಲೂ ಕೆಲವೊಂದು ನಿಯಮಗಳು, ಆಚಾರಗಳು, ರೂಢಿಗತಗಳು

ಸರ್ವೇ ಸಾಮಾನ್ಯವಾಗಿವೆ. ಪ್ರತಿಯೊಂದು ಹೆಣ್ಣು ತನ್ನ ಜನನದಿಂದಲೇ ಕೆಲವೊಂದು ಪ್ರಮುಖವಾದ ಆರ್ಥಿಕ, ಕಾನೂನಾತ್ಮಕ ಮತ್ತು ಸಾಮಾಜಿಕ ಹಕ್ಕುಗಳಿಂದ ವಂಚಿತಳಾಗುತ್ತಾಳೆ. ಆದರೆ ಗಂಡು ತನ್ನ ಹುಟ್ಟಿನಿಂದಲೇ ಹೆಚ್ಚಿನ ಹಕ್ಕುಗಳನ್ನು ಪಡೆಯುತ್ತಾನೆ. ಲಿಂಗಾಧಾರಿತ ಹಕ್ಕುಗಳಲ್ಲಿಯ ತಾರತಮ್ಯದ ಈ ವ್ಯವಸ್ಥೆಯು ಸಾಮಾಜಿಕ ನಿಯಮ ಮತ್ತು ಸಂಪ್ರದಾಯಗಳಿಂದಲೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಗಳಿಂದಲೂ ಮುಂದುವರಿಯುತ್ತದೆ. ಮಹಿಳೆಯರನ್ನು ಮಡಿದಿಯರನ್ನಾಗಿ ಮತ್ತು ತಾಯಂದಿರನ್ನಾಗಿ ಗುರುತಿಸಲಾಗುತ್ತದೆ ಹಾಗೂ ಅವರಿಗೆ ಬೆಲೆಕೊಡಲಾಗುತ್ತದೆ. ಆದರೆ ಲೈಂಗಿಕ ವ್ಯಕ್ತಿಗಳಾಗಿ, ಮಕ್ಕಳನ್ನು ಹೇರುವವರಾಗಿ, ಕಾರ್ಮಿಕರಾಗಿ ಹಾಗೂ ನಾಗರಿಕರಾಗಿ ಅವರ ಹಕ್ಕುಗಳ ಉಲ್ಲಂಘನೆ ಮಾಡಲಾಗುತ್ತದೆ. ಈ ಎಲ್ಲಾ ಸಂಗತಿಗಳನ್ನು ಕುಟುಂಬದ ಮೂಲಕ ನಿರ್ಬಂದಿಸಲಾಗುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಗಂಡುಗಳಿಂದ ಮುನ್ನಡೆಸುವುದರಿಂದ ಮಹಿಳೆಯ ಶರೀರ ಮತ್ತು ಅವಳ ಧಾರಣೆ ಶಕ್ತಿಯ ಮೇಲೆ ಹತೋಟಿ ಕಾಪಾಡುವುದು ಬಹಳ ಮುಖ್ಯವೆನಿಸುತ್ತದೆ. ಮಹಿಳೆಯು ಶಿಕ್ಷಣ ಮತ್ತು ವೃತ್ತಿ/ಕೆಲಸ ಮುಂತಾದ ಸಾರ್ವಜನಿಕ ವಲಯದಲ್ಲಿ ಭಾಗವಹಿಸುವುದನ್ನು ಕುಟುಂಬವು ನಿರ್ಬಂಧಿಸುತ್ತದೆ. ಈ ನಿರ್ಬಧಗಳು ಸಾಮಾನ್ಯವಾಗಿ ನೇರವಾಗಿರುತ್ತವೆ ಮತ್ತು ದೌರ್ಜನ್ಯದಿಂದ ಕೂಡಿರುತ್ತವೆ. ಆದರೆ ಮನೆ ಮತ್ತು ಕುಟುಂಬದ ಹೆಸರಿನಲ್ಲಿ ಪರೋಕ್ಷವಾಗಿಯೂ ನಯನಾಜೂಕಿನಿಂದಲೂ ಕಾರ್ಯಗತಗೊಳ್ಳುತ್ತವೆ. ಮಹಿಳೆಯರ ಜೀವಿಸುವ. ಸ್ವಾತಂತ್ರ್ಯದ, ಭಿನ್ನಭಿಪ್ರಾಯ ತೋರುವ ಮತ್ತು ಮಾನವ ಘನತೆಯ ಹಕ್ಕುಗಳ ಉಲ್ಲಂಘನೆಯು ಕುಟುಂಬದಲ್ಲೇ ನಡೆದರೂ ಅವನ್ನು ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ ಪ್ರಶ್ನಿಸಬೇಕಾದ ಅವಶ್ಯಕತೆ ಇದೆ. ನಾಗರಿಕ ಮತ್ತು ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳನ್ನು ಮಹಿಳೆಯರ ಬಂಧನದ ಹಿನ್ನೆಲೆಯಲ್ಲಿ ಅರ್ಥೈಸಬೇಕಾದ ಅವಶ್ಯಕತೆ ಇದೆ. ನಮ್ಮ ಸಂವಿಧಾನದಲ್ಲಿ ಪ್ರಸ್ತಾಪಿಸಲಾದ ಹಲವಾರು ಮೂಲಭತ ಹಕ್ಕುಗಳು ಮಹಿಳೆಯರಿಗೆ ದೊರಕುತ್ತಿಲ್ಲ.

ಮಹಿಳೆಯರ ಮೇಲೆ ಕುಟುಂಬದಲ್ಲಿ ತಲೆದೋರುವ ವಿವಿಧ ಶೋಷಣೆಗಳು: ಮೊದಲಿಗೆ ಕುಟುಂಬದ ಒಳಗಡೆಯೇ ಮಹಿಳೆಯರ ಶೋಷಣೆ ನಡೆಯುತ್ತದೆ ಮತ್ತು ಅವರನ್ನು ಹಲವಾರು ಸೌಲಭ್ಯಗಳಿಂದ ಹಾಗೂ ಹಕ್ಕುಗಳಿಂದ ವಂಚಿಸಲಾಗುತ್ತದೆ. ಮೊಲೆಯುಣಿಸುವಾಗ ಮತ್ತು ಊಟ ಹಂಚುವಾಗ, ಆರೋಗ್ಯ ಸೇವೆಯಲ್ಲಿ, ಶಿಕ್ಷಣದಲ್ಲಿ, ಕೆಲಸದಲ್ಲಿ, ವಿಶ್ರಾಮದಲ್ಲಿ, ಆದಾಯ ಪಡೆಯುವ ಅವಕಾಶಗಳಲ್ಲಿ ಲಿಂಗ ತಾರತಮ್ಯವಿದೆ. ಕುಟುಂಬದೊಳಗಡೆ ಸಂಪನ್ಮೂಲಗಳನ್ನು ಹಂಚುವಾಗ ಹೆಣ್ಣಿನ ಅಗತ್ಯಗಳಿಗೆ ಕಡಿಮೆ ಆದ್ಯತೆ ಕೊಡಲಾಗುತ್ತದೆ. ಕುಟುಂಬದ ಪ್ರತಿಯೊಂದು ಚಟುವಟಿಕೆಯನ್ನು ಗಂಡಿನ ಕೆಲಸ, ವಿರಾಮ ಮತ್ತು ಅಗತ್ಯಗಳಿಗೆ ಹೊಂದಿಕೊಂಡು ರೂಪಿಸಲಾಗುತ್ತದೆ.

ಎರಡನೆಯದಾಗಿ ಮಹಿಳೆಯನ್ನು ಕುಟುಂಬದಲ್ಲಿ ಪ್ರತ್ಯೇಕವಾಗಿ ಇಡಲಾಗುತ್ತದೆ. ಅವಳಿಗೆ ಬಹಳ ಕಡಿಮೆ ಸ್ವಾತಂತ್ರ್ಯವಿರುತ್ತದೆ. ಅವಳ ಮೇಲೆ ಹಲವಾರು ನಿರ್ಬಂಧಗಳನ್ನು ಹೇರಲಾಗುತ್ತದೆ. ಜೊತೆಗೆ ಕುಟುಂಬದಲ್ಲಿ ಸಮುದಾಯದಲ್ಲಿ, ಗ್ರಾಮದಲ್ಲಿ ಹಾಗೂ ಎಲ್ಲಾ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ

ಚಟುವಟಿಕೆಗಳಲ್ಲಿ ಅವಳ ಪಾತ್ರ ತೀರ ಕಡಿಮೆ ಮತ್ತು ಅವಳಿಗೆ ತೀರ ಕಡಿಮೆ ಅಧಿಕಾರ ಇದೆ. ಯಾವುದೇ ರಂಗದಲ್ಲೂ ಮಹಿಳೆಯು ಯಾವುದೇ ತೀರ್ಮಾನ ತೆಗೆದುಕೊಳ್ಳಲಾರಳು.

ಮೂರನೆಯದಾಗಿ ಮಹಿಳೆಯು ಹೆಚ್ಚು ಕೌಟುಂಬಿಕ ದೌರ್ಜನ್ಯಗಳನ್ನು ಎದುರಿಸುತ್ತಾಳೆ. ಮಾತಿನ ಮೂದಲಿಕೆ, ಮಾನಸಿಕ ಹಿಂಸೆ, ಊಟ ಮತ್ತು ಕಾಸನ್ನು ಕೊಡದೇ ಇರುವುದು, ಸ್ನೇಹಿತರು ಮತ್ತು ಸಂಬಂಧಿಕರನ್ನು ಬೇಟಿಯಾಗಲು ಬಿಡಿದಿರುವುದು, ಹೊಡೆಯುವುದು ಮತ್ತು ದೈಹಿಕ ಹಿಂಸೆ ಅವಳಿಗೆ ಸಾಮಾನ್ಯ. ಜೊತೆಗೆ ಸ್ತ್ರೀಗೆ ಮೀಸಲಿರುವ ದೌರ್ಜನ್ಯಗಳನ್ನು ಅವಳು ಅನುಭವಿಸಬೇಕಾಗುತ್ತದೆ. ಅವೆಂದರೆ ಲೈಂಗಿಕ ಅತ್ಯಾಚಾರ ಮತ್ತಿತರ ಲೈಂಗಿಕ ಶೋಷಣೆ, ಹೆಣ್ಣು ಭ್ರೂಣ ಹತ್ಯೆ, ಮಾಟಗಾರ್ತಿಯೆಂದು ಕೊಲೆ, ಸತಿ, ವರದಕ್ಷಿಣೆ, ಕೊಲೆ, ಗಂಡನಿಂದ ಹೊಡೆತ ಇತ್ಯಾದಿ. ಇಂತಹ ದೌರ್ಜನ್ಯಗಳು ಮತ್ತು ಅದರಿಂದ ಉದ್ಭವಿಸುವ ಅಭದ್ರತಾ ಭಾವನೆಗಳು ಮಹಿಳೆಯರನ್ನು ಆರ್ಥಿಕವಾಗಿ ಶೋಷಿಸಿ, ಸಾಮಾಜಿಕವಾಗಿ ಹತ್ತಿಕ್ಕಲ್ಪಟ್ಟು ಅವರನ್ನು ಮನೆಯ ಒತ್ತೆಯಾಳುಗಳನ್ನಾಗಿ ಮಾಡುತ್ತವೆ. ಇವೆಲ್ಲಾ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಒಡಂಬಡಿಕೆ ಮತ್ತು ಭಾರತೀಯ ಸಂವಿಧಾನದಲ್ಲಿ ನಮೂದಿಸಿದ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗಿವೆ.

ನಾಲ್ಕನೇಯದಾಗಿ ಮಹಿಳೆಗೆ ತನ್ನ ದೇಹದ ಮೇಲಿನ ಹಕ್ಕು, ತನ್ನ ಲೈಂಗಿಕತೆ ಮತ್ತು ಫಲವತ್ತತೆ ಮೇಲೆ ಹತೋಟಿ ಇರುವ ಹಕ್ಕು ಮುಖ್ಯವಾದದ್ದು.

ಮಹಿಳೆಯರೆಂದರೆ ಕಡಿಮೆ ಕೂಲಿಯ ಕಾರ್ಮಿಕರು: ಮಹಿಳೆಯರು ಮನೆಗೆಲಸದ ಪೂರ್ತಿ ಜವಾಬ್ದಾರಿ ಹೊತ್ತರೂ ಮನೆ ಹೊರಗೂ ಆದಾಯ ಪಡೆಯುವ ಕೆಲಸದಲ್ಲಿಯೂ ತೊಡಗಿರುತ್ತಾರೆ. ಪ್ರತ್ಯೇಕವಾಗಿ ಬಡವರಲ್ಲಿ ಒಂದು ಕುಟುಂಬದ ಆದಾಯದಲ್ಲಿ ಬಹುಪಾಲನ್ನು ಮಹಿಳೆಯರೇ ಒದಗಿಸುತ್ತಾರೆ ಮತ್ತು ಎಷ್ಟೋ ಕಡೆ ಮಹಿಳೆಯರ ಯಜಮಾನಿಕೆಯಲ್ಲೇ ಎಷ್ಟೋ ಕುಟುಂಬಗಳು ನಡೆಯುತ್ತವೆ. ಎಷ್ಟೋ ಕುಟುಂಬಗಳು ಮಹಿಳೆಯರ ಆದಾಯದಿಂದಲೇ ನಡೆಯುತ್ತವೆ, ಪುರುಷರಿಂದಲ್ಲ. ಆದರೂ ಮಹಿಳೆಯರು ಹಲವಾರು ತೊಂದರೆಗಳನ್ನು ಎದುರುಗೊಳ್ಳುತ್ತಾರೆ. ಮೊದಲನೆಯದಾಗಿ ಮಹಿಳೆಯರಿಗೆ ಸಿಗುವ ಕೂಲಿ, ವೇತನ, ಸಂಬಳ ಗಂಡಸರಿಗಿಂತ ಕಡಿಮೆ. ಅವರು ಒಂದೇ ತೆರನಾದ ಅಥವಾ ಗಂಡಸರಿಗಿಂತ ಮುಖ್ಯವಾದ ಕೆಲಸ ಮಾಡಿದರೂ ಅವರಿಗೆ ಗಂಡಸರಿಗಿಂತ ಕಡಿಮೆ ನಿಗಧಿ ಮಾಡಲಾಗುತ್ತದೆ. ಸಾಮಾನ್ಯವಾಗಿ ಗಂಡಸರ ಕೂಲಿಗಿಂತ ೪೦ ರಿಂದ ೬೦% ರಷ್ಟು ಕಡಿಮೆ ಕೂಲಿಯನ್ನು ಮಹಿಳೆಯರಿಗೆ ಕೊಡಲಾಗುತ್ತದೆ. ಎರಡನೆಯದಾಗಿ ಮನೆ ಹೊರಗೆ ಕೆಲಸ ಮಾಡುವ ಮಹಿಳೆ ಬಗ್ಗೆ ವ್ಯಾಪಕವಾದ ಅಗೌರವ ನಾವು ಕಾಣುತ್ತೇವೆ. ಮೂರನೆಯದಾಗಿ ಮಹಿಳೆಯರನ್ನು ಹೆಚ್ಚು ಸಂಬಳ ಸಿಗುವ ನೌಕರಿಗಳಿಂದ ಹೊರಗಿಡಲಾಗುತ್ತದೆ.

ಲಿಂಗ ಆಧಾರಿತ ತಾರತಮ್ಯ: ನಮ್ಮ ದೇಶದಲ್ಲಿ ಜನರ ಅಭಿವೃದ್ಧಿಗೆ ಕೈಗೊಂಡ ಮಾರ್ಗಗಳು ಲಿಂಗ ಪಕ್ಷಪಾತದಿಂದ ಕೂಡಿವೆ. ಅಭಿವೃದ್ಧಿಯ ಪ್ರಕ್ರಿಯೆಯಿಂದ ಮಹಿಳೆಯರು ಎದುರಿಸವು

ಅನಾನುಕೂಲತೆಗಳು ಇನ್ನೂ ಜಾಸ್ತಿಯಾಗುತ್ತಿವೆ. ನಮ್ಮ ದೇಶ ಅನುಸರಿಸುತ್ತಿರುವ ವ್ಯವಸಾಯದ ಮತ್ತು ಕೈಗಾರೀಕರಣದ ಧೋರಣೆಗಳಿಂದ ಸಾಮಾನ್ಯವಾಗಿ ಮಹಿಳೆಯರ ನಕರಾತ್ಮಕವಾದ ಪರಿಣಾಮಗಳು ಬೀಳುತ್ತವೆ. ನಮ್ಮ ಎಲ್ಲಾ ಯೋಜನಾ ಪ್ರಕ್ರಿಯೆಗಳು ಒಂದು ಕುಟುಂಬವನ್ನು ಅಭಿವೃದ್ಧಿಯ ಒಂದು ಘಟಕವನ್ನಾಗಿ ಪರಿಗಣಿಸುವುದರಿಂದ ಕುಟುಂಬದೊಳಗೆ ಹಾಸುಹೊಕ್ಕಾಗಿರುವ ಮಹಿಳಾ ಅಸಮಾನತೆಯನ್ನು ಲೆಕ್ಕಕ್ಕೆ ತೆಗದುಕೊಳ್ಳುವುದಿಲ್ಲ. ಜೊತೆಗೆ ಗ್ರಾಮೀಣ ಭಾರತದಲ್ಲಿ ಹೆಚ್ಚಿನ ಕುಟುಂಬಗಳು ಮಹಿಳೆಯರ ಯಜಮಾನಿಕೆಯಲ್ಲೇ ನಡೆಯುತ್ತವೆ ಎಂಬುದು ವಾಸ್ತವ ಸತ್ಯವಾದರೂ, ಪುರುಷರನ್ನೇ ಕುಟುಂಬದ ಯಜಮಾನರನ್ನಾಗಿ ಪರಿಗಣಿಸಲಾಗುತ್ತದೆ. ನಮ್ಮ ಪಂಚವಾರ್ಷಿಕ ಯೋಜನೆಗಳು ಸಾಂಪ್ರದಾಯಿಕವಾಗಿ ಒಪ್ಪಿಕೊಂಡಿರುವ ಮಹಿಳೆಯರ ಅವಲಂಭಿತ ಸ್ಥಾನಮಾನವನ್ನೇ ಮುಂದುವರಿಸುತ್ತವೆ ಮತ್ತು ಈಗಿನ ಅಸಮಾನ ಕೌಟುಂಬಿಕ ವ್ಯವಸ್ಥೆಗೆ ಅವು ಹೆಚ್ಚಿನ ಒತ್ತು ಕೊಡುತ್ತವೆ. ಯಾವುದೇ ಅಭಿವೃದ್ಧಿ ಯೋಜನೆಯಲ್ಲಿ ಮಹಿಳೆಯರು ಕೇಂದ್ರಬಿಂದು ಆಗಿರದಿದ್ದರೆ, ಅಭಿವೃದ್ಧಿ ಯೋಜನೆಗಳು ಮಹಿಳೆಯರ ವಿಶಿಷ್ಟ ಆಸಕ್ತಿಗಳ ಮೇಲೆ ಹೆಚ್ಚಿನ ಗಮನ ಹರಿಸಬೇಕು ಮತ್ತು ಅವರ ಸಂಘಟನೆಗಳಿಗೆ ಹೆಚ್ಚು ಉತ್ತೇಜನ ಕೊಟ್ಟು ಅವರು ತಮ್ಮ ಭವಿಷ್ಯವನ್ನು ರೂಪಿಸುವಲ್ಲಿ ತಮಗೆ ಬೇಕಾದ ಸಂಪನ್ಮೂಲಗಳು, ಅಧಿಕಾರಗಳು ಮತ್ತು ಹತೋಟಿಗಳನ್ನು ಪಡೆಯುವಂತೆ ಮಾಡಬೇಕು. ಅವರು ತಮ್ಮ ಅಡೆತಡೆಗಳಿಂದ ಹೊರಬೀಳುವಂತೆ ಅವರಿಗೆ ಬೇಕಾದ ಜ್ಞಾನ, ಅನುಭವ, ಅಧಿಕಾರ ಅವರಿಗೆ ಸಿಗುವಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ಮಹಿಳೆಯರು ವಹಿಸಬೇಕಾದ ಸೂಕ್ತ ಪಾತ್ರಗಳ ಬಗ್ಗೆ ಪುರುಷರು ಮತ್ತು ಹೆಚ್ಚಿನ ಮಹಿಳೆಯರಲ್ಲಿ ಇರುವ ತಪ್ಪು ಅಭಿಪ್ರಾಯಗಳನ್ನು ಕಿತ್ತೊಗೆಯುವ ಕೆಲಸ ಆಗಬೇಕು. ಮಹಿಳೆಯರು ಕೇವಲ ಅವಲಂಭಿತ ವ್ಯಕ್ತಿಗಳು, ಮನೆಗೆಲಸಕ್ಕೆ ಸೀಮಿತರಾಗಿರುವವರು, ಮಕ್ಕಳನ್ನು ಹೆರಲಿಕ್ಕ ಮತ್ತು ಪಾಲನೆ ಮಾಡಲಿಕ್ಕೆ ಮಾತ್ರ ಯೋಗ್ಯರು ಎಂದು ಪರಿಗಣಿಸುವುದರಿಂದ ಉತ್ಪಾದನೆಯಲ್ಲಿ ಅವರ ಪಾತ್ರವನ್ನು ಕಡೆಗಣಿಸಿದಂತಾಗುತ್ತದೆ. ಅವರೂ ಕೂಡಾ ಉತ್ತಮ ಭೂಮಿಯ ಒಡೆಯರಾಗಬಹುದು. ಒಳ್ಳೆಯ ಸಾಲ ಸೌಲಭ್ಯಗಳನ್ನು ಪಡೆಯಲು ಅರ್ಹರು, ಉತ್ತಮ ತಾಂತ್ರಿಕ ಜ್ಞಾನವನ್ನು ಪಡೆಯಲು ಯೋಗ್ಯರು. ಉತ್ತಮ ಶಿಕ್ಷಣ ಮತ್ತು ತರಬೇತಿಗಳನ್ನು ಪಡೆಯಲು ಶಕ್ತರು ಎಂಬ ವಿಚಾರಗಳಿಗೆ ಹಿಂದೇಟು ಹಾಕಿದಂತಾಗುತ್ತದೆ. ಆದರೆ ಇಂತಹ ವಿಚಾರಗಳ ವಿರುದ್ಧ ನಡೆಯುವದರಿಂದ ಮಾತ್ರ ನಾವು ಲಿಂಗ ಅಸಮಾನತೆಯನ್ನು ವಿರೋಧಿಸಿ ಹೆಚ್ಚೆಚ್ಚು ಸಮಾನ ಮತ್ತು ಸಮ ಸಮಾಜವನ್ನು ಕಟ್ಟಲು ಸಾಧ್ಯ.

೩.೩ ಬೇಡ ಮಹಿಳಾ ಕೃಷಿ ಕಾರ್ಮಿಕರ ಮೇಲೆ ಜಾಗತೀಕರಣದ ಪರಿಣಾಮ

ದುಡಿಮೆಯ ಹಿನ್ನೆಲೆಯಲ್ಲಿ ಮಹಿಳೆಯನ್ನಿಟ್ಟು ನೋಡುವುದಾದರೆ, ಜಾಗತೀಕರಣವು ಉಂಟು ಮಾಡಿರುವ ಹಾನಿಯು ಅಷ್ಟಿಷ್ಟಲ್ಲ ! ಮಹಿಳೆಯರ ಅಗ್ಗದ ದುಡಿಮೆ ಹೂಡಿಕೆದಾರರಿಗೆ ವಿಶೇಷ ಆಕರ್ಷಣೆ ಮಹಿಳೆಯರು ಹೆಚ್ಚು ಹೊರಗಿನ ಕೆಲಸಗಳಿಗೆ ಬರುತ್ತಿರುವುದು ನಿಜ. ಆದರೆ ಇದರಿಂದ ಲಾಭ ಗಳಿಸುತ್ತಿರುವವರು ಯಾರು? ಈ ಕೆಲಸಗಳನ್ನು ಮಹಿಳೆಯರ ಒಳಿತಿಗಾಗಿ ಸೃಷ್ಟಿಸಲಾಗಿದೆಯೇ?

ಕಳೆದ ಎರಡು ದಶಕಗಳಲ್ಲಿ ದಕ್ಷಿಣ ಏಷ್ಯಾದ ದೇಶಗಳಾದ ಚೀನಾ, ಭಾರತ, ಬಾಂಗ್ಲಾದೇಶ, ಪಾಕಿಸ್ತಾನಗಳಿಗೆ ಹೆಚ್ಚಿನ ವಿದೇಶೀ ಬಂಡವಾಳ ಹರಿದು ಬಂದಿರುವುದಕ್ಕೆ ಒಂದು ಮುಖ್ಯ ಕಾರಣ ಇಲ್ಲಿನ ಅಗ್ಗದ ದುಡಿಯುವ ವರ್ಗ. ಇದರ ದೊಡ್ಡ ಭಾಗದಲ್ಲಿ ತುಂಬಿರುವವರು ಮಹಿಳೆಯರು. ಜಾಗತೀಕರಣವು ಮಹಿಳೆಯರಿಗೆ ನೀಡಿದ ಬಹುಪಾಲು ಉದ್ಯೋಗಗಳು ಅರೆಕಾಲಿಕ ಉದ್ಯೋಗಗಳು. ಕೆಲಸದ ಭದ್ರತೆಯಿಲ್ಲ, ಯಾವುದೇ ಸವಲತ್ತುಗಳಿಲ್ಲ, ಮನೆಯಿಂದಲೇ ದುಡಿಯಬಹುದೆಂಬ ನೆಪದಲ್ಲಿ ಅತಿ ಕಡಿಮೆ ವೇತನ ನೀಡಲಾಗುತ್ತದೆ. ಕಳೆದೆರಡು ದಶಕಗಳಲ್ಲಿ ವೇಗವಾಗಿ ವಿಸ್ತರಿಸಿರುವ ಸೇವಾ ಕ್ಷೇತ್ರದ ಉದ್ಯೋಗಗಳ ಆಧಾರ ಸ್ತಂಭವೇ ಮಹಿಳೆಯರ ಅಗ್ಗದ ದುಡಿಮೆ ಎಂದು "ಎ ಕಾನಾಮಿಕ್ ಜಸ್ಟೀಸ್ ನ್ಯೂಸ್" ಅಧ್ಯಯನ ಹೇಳುತ್ತದೆ. ಜಾಗತೀಕರಣವು ಮಹಿಳೆಯರ ದುಡಿಮೆಯಲ್ಲಿ ಲಿಂಗ ಸಮಾನತೆಯನ್ನು ತರುತ್ತದೆಂದು ಹೇಳಲಾಗಿತ್ತು. ಆದರೆ, ಇಪ್ಪತ್ತು ವರ್ಷಗಳ ನಂತರ ನೋಡಿದರೂ, ಇಂದಿಗೂ ಅತ್ಯಂತ ಕೆಳದರ್ಜೆಯ ದುಡಿಮೆಗಾರರಾಗಿ ಶೇ.೯೩ ರಷ್ಟು ಮಹಿಳೆಯರು ಇರುವುದನ್ನು ನೋಡುತ್ತೇವೆ. ಒಟ್ಟಾರೆ ದುಡಿಮೆಯ ವಲಯದಲ್ಲಿ ಅಸಂಘಟಿತ ಕ್ಷೇತ್ರದಲ್ಲಿ ಶೇ.೬೭ ರಷ್ಟು ಮಹಿಳೆಯರಿದ್ದಾರೆ. ದೊಡ್ಡ ಸಂಸ್ಥೆಗಳ ಆಡಳಿತಗಾರರಾಗಿ ಮಹಿಳೆಯರು ಕುಳಿತಿರುವ ಸಂಖ್ಯೆ ಏರುತ್ತಿರುವುದು ಬೆರಳೆಣಿಕೆಯ ಪ್ರಮಾಣದಲ್ಲಿ ಉದಾಹರಣೆಗೆ, ಭಾರತದ ಮಾಧ್ಯಮ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯ ಸ್ಥಾನಮಾನದಲ್ಲಿರುವ ಮಹಿಳೆಯರ ಸಂಖ್ಯೆ ಕೇವಲ ೩%. ದುಡಿಮೆಗೆ ಮಹಿಳೆಗೆ ಹೆಚ್ಚಿನ ಅವಕಾಶಗಳು ದೊರೆತಿವೆ ಎಂದ ಕೂಡಲೇ, ಆಕೆಗೆ ಆಯ್ಕೆಯ ಸ್ವಾತಂತ್ರ್ಯ ಈ ವಿಚಾರದಲ್ಲಿ ಸಿಕ್ಕಿದೆ ಎಂದು ಅರ್ಥವೇ? ತನಗೆ ಉದ್ಯೋಗದ ಭದ್ರತೆಯಿರುವ, ಸಮಾನ ಕೆಲಸಕ್ಕೆ ಪುರುಷರಷ್ಟೇ ಸಮಾನ ವೇತನ ದೊರಕುವ, ಉತ್ತಮ ಔದ್ಯೋಗಿಕ ವಾತಾವರಣವಿರುವ ಉದ್ಯೋಗವೇ ಬದುಕು ಎಂದು ಬಹುಸಂಖ್ಯಾತ ಮಹಿಳೆಯರು ಆರಿಸಿಕೊಳ್ಳುವ ಪರಿಸ್ಥಿತಿ ಇದೆಯೇ? ಖಂಡಿತ ಇಲ್ಲ. ಜಾಗತೀಕರಣವು ಸಾಮಾನ್ಯ ಜನರ ಕೈಯಲ್ಲಿದ್ದ ಅಷ್ಟು ಇಷ್ಟು ಸವಲತ್ತುಗಳು ಕಸಿದುಕೊಳ್ಳಲ್ಪಟ್ಟವು. ಬಡತನ, ನಿರುದ್ಯೋಗ, ರೈತರ ಆತ್ಮಹತ್ಯೆಗಳು ಹೆಚ್ಚಾದವು. ಈ ಬಗ್ಗೆ ಜನರು ಪ್ರಶ್ನೆ ಕೇಳಲಾರಂಭಿಸಿದ ಕೂಡಲೇ ಮಾರುಕಟ್ಟೆ ವ್ಯವಸ್ಥೆಯೇ ಸಮಾಜದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ, ಮಾರುಕಟ್ಟೆಯನ್ನು ವಶದಲ್ಲಿಟ್ಟುಕೊಂಡಿರುವ ದೊಡ್ಡ ಕಾರ್ಪೋರೇಟ್ ಬಂಡವಾಳಿಗರು ಎಲ್ಲ ಸಮಸ್ಯೆಗಳನ್ನು ಬಗೆಹರಿಸುವ 'ದೇವದೂತರು' ಎಂಬಂತೆ ಬಿಂಬಿಸುವ ಕೆಲಸವನ್ನು ಸರ್ಕಾರಗಳು ಮತ್ತು ಬಂಡವಾಳದ ದೊರೆಗಳು ಆರಂಭಿಸಿದವು. ಈ ಕಾಲದ ಮಹಿಳೆಯರು ಇಬ್ಬಗೆಯ ಶೋಷಣೆಯನ್ನು ಅನುಭವಿಸುತ್ತಿದ್ದಾರೆ!

ಜಾಗತೀಕರಣ ಮತ್ತು ಸಾಮಾಜಿಕ ಪರಿಣಾಮಗಳು

- ಲಾಭವೇ ಕೇಂದ್ರವೆಂಬ ಆರ್ಥಿಕ ವ್ಯವಸ್ಥೆಯನ್ನು ರೂಪಿಸಲಾಯಿತು.
- ಸಮಾಜವು ಕೊಳ್ಳುಬಾಕ ಸಂಸ್ಕೃತಿಗೆ ಅಡಿಯಾಳಾಗುವಂತೆ ಮಾಡಲಾಯಿತು. ಎಷ್ಟು ಕೊಂಡರೂ ಮುಗಿಯದ ದಾಹವನ್ನು ಜನರಿಗೆ ಅಂಟಿಸಲಾಯಿತು. ಇದರಿಂದಾಗಿ ಸಣ್ಣ ಆದಾಯದಲ್ಲಿ ಬದುಕು ನಡೆಯಲು ಸಾಧ್ಯವಿಲ್ಲದ ಸ್ಥಿತಿ ಬಂತು.

- ಸಾಮಾಜಿಕ ಮೌಲ್ಯಗಳಲ್ಲಿ ಮಾನವೀಯ ಮೌಲ್ಯಗಳ ಬದಲಿಗೆ ಸ್ವಾರ್ಥ ಕೇಂದ್ರಿತವಾದ ಮೌಲ್ಯಗಳನ್ನು ಉದ್ದೇಶ ಪೂರ್ವಕವಾದ ಮೌಲ್ಯಗಳನ್ನು ಉದ್ದೇಶ ಪೂರ್ವಕವಾಗಿ ಉತ್ತೇಜಿಸಲಾಯಿತು.
- ಪ್ರಕೃತಿಯನ್ನೂ, ನೈಸಗಿಕ ಸಂಪನ್ಮೂಲಗಳನ್ನೂ ಲಾಭದ ಗಳಿಕೆಗಾಗಿ ಯದ್ವಾತದ್ವಾ ಬಳಸುವ, ನಾಶಪಡಿಸುವ, ಇಡೀ ಜೀವಜಾಲವನ್ನೇ ಅಸ್ಥಿರಗೊಳಿಸುವ ರೀತಿಯಲ್ಲಿ ಬೆಳವಣಿಗೆ ನಡೆಯಲಾರಂಭಿಸಿತು.
- ಕೃಷಿಯ ಹಾಗೂ ಅದರ ಜೊತೆ ಹೊಂದಿಕೊಂಡಂತೆ ಇದ್ದ ಉಪ ಉದ್ಯೋಗಗಳೆಲ್ಲವೂ ಸೇರಿ ಇಡೀ ವ್ಯವಸಾಯ ಕ್ಷೇತ್ರವೇ ನೆಲಕಚ್ಚುವಂತೆ ಮಾಡಿರುವುದು ಇದೇ ಜಾಗತೀಕರಣದ ನೀತಿಗಳು. ನಮ್ಮ ದೇಶದ ಬೆಳೆಗಳಿಗೆ ಒಳ್ಳೆಯ ಮಾರುಕಟ್ಟೆ ಇಲ್ಲದಂತೆ, ಕೃಷಿ ವಹಿವಾಟು ಮಧ್ಯವರ್ತಿಗಳ ಮುಷ್ಠಿಯಲ್ಲಿರುವಂತೆ, ಹೊರ ದೇಶದ ಅಗ್ಗದ ಮಾಲು ನಮ್ಮ ರೈತರ ಬೆಳೆಗಿಂತ ಕಡಿಮೆ ಬೆಲೆಗೆ ಸಿಗುವಂತೆ ನೀತಿಗಳನ್ನು ತಂದದ್ದು ಜಾಗತೀಕರಣದ ನೇತಾರರೇ.
- ಸರ್ಕಾರದ ಜವಬ್ದಾರಿಯಾಗಿದ್ದ ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರ, ಮೂಲಭೂತ ಸವಲತ್ತುಗಳು ಮೊದಲಾದವುಗಳಿಂದ ಸರ್ಕಾರಗಳು ನುಣುಚಿಕೊಂಡು, ಆ ದೊಡ್ಡ ಪ್ರಮಾಣದ ಹಣವನ್ನು ಖಾಸಗಿ ಬಂಡವಾಳಗಾರರಿಗೆ ಧಾರೆ ಎರೆಯುತ್ತವೆ. ಇದರಿಂದ ಜನಸಾಮಾನ್ಯರಿಗೆ ದೊರೆಯಬೇಕಿದ್ದ ಈ ಎಲ್ಲಾ ಸವಲತ್ತುಗಳ ಗುಣಮಟ್ಟ ಅತ್ಯಂತ ಕಳಪೆ ದರ್ಜೆಗೆ ಇಳಿಯುತ್ತದೆ. ಸರ್ಕಾರಿ ಸವಲತ್ತುಗಳು ಯಾವಾಗ ಕಳಪೆಯಾಗುತ್ತವೋ ಆ ಸ್ಥಳದಲ್ಲಿ ಖಾಸಗಿ ವ್ಯಾಪಾರಿಗಳು ಕಣಕ್ಕೆ ಇಳಿಯುತ್ತಾರೆ ಮತ್ತು ಅದರೊಂದಿಗೆ ಖಾಸಗೀಕರಣ, ದುಬಾರೀಕರಣದ ಯುಗ ಆರಂಭವಾಗುತ್ತದೆ. ಮತ್ತೆ, ಇದರಲ್ಲೂ ಅವಕಾಶಗಳಿಂದ ವಂಚಿತರಾಗುವವರು ಮಹಿಳೆಯರು, ದಲಿತರು ಮೊದಲಾದ ಶೋಷಿತರೇ.
- ಹಳ್ಳಿಗಳ ಆರ್ಥಿಕತೆ ನುಚ್ಚುನೂರಾಗಿ ಬದುಕು ನಡೆಸಲು ದುಡಿಯುವ ಜನರು ನಗರ/ಪಟ್ಟಣಗಳನ್ನೇ ಆಶ್ರಯಿಸಬೇಕಾದ ಸ್ಥಿತಿ ಬಂದಿರುವುದರಿಂದ ದೊಡ್ಡ ಪ್ರಮಾಣದ ವಲಸೆ ನಡೆಯುತ್ತಿದೆ. ಆದರೆ, ಇದಕ್ಕೆ ಅಗತ್ಯವಿರುವ ಸಾಮಾಜಿಕ ರಕ್ಷಣೆಯ ಹೊಣೆಯನ್ನು ಸರ್ಕಾರಗಳು ಹೇಗೂ ಹೊರುವುದಿಲ್ಲ. ಆದ್ದರಿಂದ ವಲಸೆಯಿಂದ ನಗರಕ್ಕೆ ಬಂದ ಮಹಿಳೆಯರು ಮೊದಲಿಗಿಂತ ಅತ್ಯಂತ ಅಸುರಕ್ಷಿತ ಸನ್ನಿವೇಶವನ್ನು ಎದುರಿಸುತ್ತಿದ್ದಾರೆ.
- ಜಾಗತೀಕರಣದಿಂದ ಮಹಿಳೆಯರು ಕುಟುಂಬದ ಆದಾಯದ ಬಹುಮುಖ್ಯ ಭಾಗವನ್ನು ಗಳಿಸಲು ಆರಂಭಿಸಿದ ಮೇಲೆಯೂ, ಕೃಷಿ ಪ್ರಧಾನವಾದ ಭಾರತದಂತಹ ದೇಶಗಳಲ್ಲಿ ಕೌಟುಂಬಿಕ ನಿಯಮಗಳು ದೊಡ್ಡ ಬದಲಾವಣೆಯನ್ನೇನೂ ಕಂಡಿಲ್ಲ. ಇಂದಿಗೂ ಮಹಿಳೆಯ 'ಗೃಹಿಣಿ' ಪಾತ್ರವನ್ನು ಕುಟುಂಬದ ಹೊಣೆ ಹೊರಬೇಕಾದ ಇಬ್ಬರೂ ಸಹಜವಾಗಿ ಹಂಚಿಕೊಳ್ಳುವ ಸ್ಥಿತಿ ಬಂದಿಲ್ಲ. ಅನಿವಾರ್ಯ ಸಂದರ್ಭದಲ್ಲಿ ಮನೆ ಕೆಲಸದಲ್ಲಿ ಗಂಡಸರು ನೆರವಾಗಬೇಕಾಗಿ ಬಂದರೂ, ಅದು ಅವರ ಸಹಜ ಆಯ್ಕೆಯಾಗಿರುವುದಿಲ್ಲ. ಮಾತ್ರವಲ್ಲ ಇಂತಹ ಬೆಳವಣಿಗೆಗಳು ದುಡಿದು ಸ್ವಾವಲಂಬಿಗಳಾಗುತ್ತಿರುವ

ಮಹಿಳೆಯರ ಮೇಲೆ ಅಂತರ್ಗಾಮಿಯಾಗಿ ಆಕ್ರೋಶದ ಮನಸ್ಥಿತಿಯೇ ಸಮಾಜದಲ್ಲಿ ರೂಪುಗೊಂಡಿರುವುದನ್ನು ನೋಡುತ್ತೇವೆ.

- ಹೊರಗೆ ದುಡಿಯುವ ಮಹಿಳೆ ಮನೆಯೊಳಗಿನ ದುಡಿಮೆಯನ್ನೂ ನಿರ್ವಹಿಸುತ್ತಾ ಎರಡು ಪಟ್ಟು ಹೊರೆ ಹೊತ್ತಿರುವುದೇ ಪ್ರಧಾನವಾದ ಚಿತ್ರಣವಾಗಿದೆ.
- ಕೆಲಸದ ಸ್ಥಳದಲ್ಲಿ ಉಂಟಾಗುವ ಲೈಂಗಿಕ, ಮಾನಸಿಕ ಕಿರುಕುಳಗಳು ಈಗಲೂ ಮಹಿಳೆಯರನ್ನು ಕಾಡುತ್ತಲೇ ಇವೆ. ವಾಸ್ತವದಲ್ಲಿ ೮೦ರ ದಶಕದಲ್ಲಿ ಚಳುವಳಿಗಳಿಂದಾಗಿ ರಚನೆಯಾದ ಮಹಿಳಾ ಪರ ಕಾನೂನುಗಳಿಂದ ದೊರೆತಿದ್ದ ಏನೋ ಒಂದಷ್ಟು ನೆಮ್ಮದಿಯೂ ಕೂಡಾ ಜಾಗತೀಕರಣದ ಸರ್ಕಾರಗಳು ಅಂತಹ ಒಳ್ಳೆಯ ಕಾಯ್ದೆಗಳ ಹಲ್ಲುಗಳನ್ನು ಕಿತ್ತು ಹಾಕಿರುವುದರಿಂದಾಗಿ ಮಾಯವಾಗಿದೆ.

೩.೪ ಗಣಿಗಾರಿಕೆಯಲ್ಲಿ ಮಹಿಳೆಯರ ಆರೋಗ್ಯದ ಪ್ರಭಾವ

ನಮ್ಮ ಸಮಾಜದಲ್ಲಿ ಮೇಲ್ವರ್ಗದ ಪುರುಷರೇ ಎಲ್ಲಾ ನಿರ್ಧಾರಗಳನ್ನು ಮಾಡುತ್ತಾರೆ. ಅವರು ನ್ಯಾಯಯುತವಾಗಿ ನಿರ್ಧಾರ ಮಾಡಬೇಕೆಂದುಕೊಂಡರೂ ನಿರ್ಧರಿಸುವ ಕ್ರಿಯೆ ಸಹಭಾಗಿತ್ವದಿಂದ ಕೂಡಿಲ್ಲವಾದ್ದರಿಂದ ಪುರುಷರ ನಿರ್ಧಾರಗಳನ್ನು ಎಲ್ಲರೂ ಒಪ್ಪುತ್ತಾರೆ ಮತ್ತು ಸಮಾಜಕ್ಕೆ ಅದೇ ಸರಿಯಾದುದು ಎಂದು ನಿರ್ಧರಿಸುತ್ತಾರೆ. ಆದರೆ ಅವರು ಹಲವು ಬಾರಿ ನ್ಯಾಯುತ ನಿರ್ಧಾರ ಮಾಡುವುದಿಲ್ಲ ಎಂಬುವುದನ್ನು ತಿಳಿಯಬೇಕಾಗಿದೆ. ವಾಸ್ತವ ಎಂದರೆ, ಸಮಾಜದಲ್ಲಿ ಮಹಿಳೆ ಕಡೆಗಣಿಸಲ್ಪಟ್ಟವಳೂ, ಮೂಲೆಗೆ ತಳ್ಳಲ್ಪಟ್ಟವಳೂ ಆಗಿದ್ದಾಳೆ. ಮಹಿಳೆಯರು ಜಗತ್ತಿನ ಅರ್ಧಭಾಗವಿದ್ದಾರೆ. ಕೆಲಸದಲ್ಲಿ ಮೂರನೆಯ ಎರಡು ಭಾಗ ಮಾಡುತ್ತಾರೆ. ಆದರೆ ಆದಾಯದಲ್ಲಿ ಕೇವಲ ಹತ್ತನೇ ಒಂದು ಭಾಗ ಅವಳಿಗೆ ದೊರೆಯುತ್ತದೆ. ಆಸ್ತಿಯಲ್ಲಿ ಕೇವಲ ನೂರನೇ ಒಂದು ಭಾಗ ದೊರೆಯುತ್ತಿರುವುದು ವಿಷಾದ.

ಮಹಿಳೆಯ ಆರೋಗ್ಯ ಪುರುಷರ ಆರೋಗ್ಯಕ್ಕಿಂತ ಭಿನ್ನವಾದುದು. ಆರೋಗ್ಯ ಕ್ಷೇತ್ರದಲ್ಲಿ ಅವಳ ಅಸ್ತಿತ್ವವನ್ನು ಕಡೆಗಣಿಸಲಾಗುತ್ತಿದೆ. ಮಹಿಳೆಯ ಆರೋಗ್ಯ ಮಟ್ಟವನ್ನು ಪುರುಷರ ಆರೋಗ್ಯ ಮಟ್ಟಕ್ಕೆ ಹೋಲಿಸಿದರೆ ವ್ಯತ್ಯಾಸ ಕಾಣುತ್ತದೆ. ಇದಕ್ಕೆ ಕಾರಣವೇನೆಂದರೆ, ಮಹಿಳೆಯರು ಹೆಚ್ಚು ಸಾವು ಕಾಯಿಲೆಗಳಿಗೆ ತುತ್ತಾಗುತ್ತಿರುವುದು. ಪ್ರತಿ ಸಾವಿರ ಪುರುಷರಿಗೆ ಈಗ ೯೨೯ ಮಹಿಳೆಯರಿದ್ದಾರೆ. ಮಕ್ಕಳನ್ನು ಹೆರುವ ವಯಸ್ಸಿನಲ್ಲಿ ಮಾತ್ರ ಮರಣದ ದರ ಅತಿ ಹೆಚ್ಚು. ಏಕೆಂದರೆ ಮಕ್ಕಳನ್ನು ಹೆರುವ ಸಮಯದಲ್ಲಿ ಸರಿಯಾದ ಚಿಕಿತ್ಸೆ ದೊರೆಯದಿರುವುದು. ಇಂದು ಭಾರತದಲ್ಲಿ ಪ್ರತಿ ಲಕ್ಷ ಹೆರಿಗೆಗೆ ೪೦೦ಕ್ಕೂ ಹೆಚ್ಚು ತಾಯಿಯರು ಮರಣ ಹೊಂದುತ್ತಾರೆ. ಮಹಿಳೆಯರ ಅನಾರೋಗ್ಯದ ಪ್ರಮಾಣ ಪುರುಷರಿಗಿಂತ ಹೆಚ್ಚು. ಈಖಅಊ ಅಧ್ಯಯನದ ಪ್ರಕಾರ ಪ್ರತಿ ಸಾವಿರ ಜನಸಂಖ್ಯೆಯಲ್ಲಿ ಪುರುಷರ ಆರೋಗ್ಯ ಕೆಡುವ ದರ ೫೧೧೩ ಇದ್ದರೆ, ಮಹಿಳೆಯರಲ್ಲಿ ಇದು ೭೮೦ ರಷ್ಟಿರುತ್ತದೆ. ಮಹಿಳೆಯರಲ್ಲಿ ಅಪೌಷ್ಠಿಕತೆ ಅತ್ಯಂತ ಹೆಚ್ಚು. ಬಹುತೇಕ ಎಲ್ಲಾ ಮಹಿಳೆಯರೂ ರಕ್ತಹೀನತೆಯಿಂದ ಬಳಲುತ್ತಿರುತ್ತಾರೆ.

ಆರೆ ಮಹಿಳೆಗೆ ಈ ಪರಿಸ್ಥಿತಿ ಉಂಟಾಗಲು ಪುರುಷ ಪ್ರಧಾನ ಸಮಾಜವೇ ಕಾರಣವಾಗಿರುತ್ತದೆ. ಕೆಲಸದ ಅಧಿಕ ಒತ್ತಡ, ನ್ಯೂನ ಪೋಷಣೆ, ಮೇಲಿಂದ ಮೇಲೆ ಗರ್ಭ ಧರಿಸುತ್ತಿರುವುದರಿಂದ ಮಹಿಳೆಯ ಆರೋಗ್ಯ ಅತಿ ಕಳಪೆ ಮಟ್ಟದಿಂದ ಕೂಡಿದೆ. ಒಂದು ಅಧಿಕೃತ ವರದಿಯ ಪ್ರಕಾರ ಶೇಕಡ ೩೦-೪೦ ಮಹಿಳೆಯರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಸಾಕಷ್ಟು ಜನ ಪುರುಷರೂ ಸಹ ಬಡವರಿದ್ದಾರೆ ನಿಜ. ಆದರೆ ಬಡತನವು ಮಹಿಳೆಯರ ಮೇಲೆಯೇ ಹೆಚ್ಚು ಪರಿಣಾಮ ಬೀರುತ್ತದೆ. ಅದರಲ್ಲೂ ಗೃಹಿಣಿಯರ ಮೇಲೆ. ಗಣಿ ಕೂಲಿ ಕಾರ್ಮಿಕ ಮಹಿಳೆ ಅತ್ಯಂತ ಬಡವಳಾಗಿದ್ದಾಳೆ. ಅವಳಿಗೆ ಗಣಿ ಬಿಟ್ಟರೆ ಎರಡನೇ ಆದ್ಯತೆ ಕೃಷಿ. ಆದರೆ ಕೃಷಿ ರಂಗ ನಾಶವಾಗಿ ಎರಡನೆಯ ಆದ್ಯತೆಯೂ ಇಲ್ಲವಾಗಿದೆ. ಗಣಿ ಕೆಲಸವನ್ನು ಹುಡುಕಿಕೊಂಡು ವಲಸೆ ಹೋಗುವುದು, ತ್ಯಜಿಸಲ್ಪಟ್ಟ ಅಥವಾ ಕುಡಿತದಂತಹ ಸಮಸ್ಯೆಗಳಿಂದಾಗಿ ಮಹಿಳೆಯಲ್ಲಿ ಮನೆಯನ್ನು ನಿಭಾಯಿಸುತ್ತಿದ್ದಾಳೆ. ಹೆಚ್ಚಿನ ಮಟ್ಟಗೆ ಅಥವಾ ಎಷ್ಟೋ ಬಾರಿ ಪೂರ್ಣ ಮಹಿಳೆಯರದೇ ಆದಾಯ ಆಗಿರುತ್ತದೆ. ಇಲ್ಲಿ ಮಹಿಳೆಗೆ ಕೊಡುವ ಕೂಲಿ ಪುರುಷನಿಗಿಂತಲೂ ಕಡಿಮೆಯಾಗಿರುವುದರಿಂದ, ಗಂಡುಮಕ್ಕಳ ಆರೋಗ್ಯ ಆಹಾರದ ಬಗ್ಗೆ ಗಮನಹರಿಸುವುದರಿಂದ ಸ್ವತಃ ಅವರೇ ಅಪೌಷ್ಠಿಕತೆಯಿಂದ/ ಅನಾರೋಗ್ಯದಿಂದ ನರಳುತ್ತಿರುತ್ತಾರೆ. ಗಣಿಯಲ್ಲಿ ಒಂದೇ ಮಟ್ಟದ ಕೆಲಸಕ್ಕೆ ಮಹಿಳೆಯರಿಗೆ ಪುರುಷರಿಗಿಂತ ಕಡಿಮೆ ಕೂಲಿ ಸಿಗುತ್ತದೆ. ಅಲ್ಲದೆ ಸಾಮಾನ್ಯವಾಗಿ ಇಲ್ಲಿ ಮಹಿಳೆಯರು ಕಲ್ಲು ಒಡೆಯುವುದು, ಕಲ್ಲು ಪುಡಿ ಮಾಡುವುದು, ಜರಡಿ ಹಿಡಿಯುವುದು, ಕಲ್ಲು ಗ್ರೇಡ್ ಮಾಡುವುದು, ಕಲ್ಲು ಆರಿಸುವುದು, ಕಲ್ಲು ಹೊರುವುದು, ಭೂಮಿ ಅಗೆಯುವುದು, ಲೋಡಿಂಗ್ ಮಾಡುವುದು, ಕಸ ಗುಡಿಸುವುದು, ಟೀ ಮಾಡುವುದು, ರೆಡ್ ಆಕ್ಸೈಡ್ ಪುಡಿಯನ್ನು ಚೀಲಗಳಿಗೆ ತುಂಬುವುದು ಮತ್ತು ಅತೀ ಸಣ್ಣ ಗುತ್ತಿಗೆದಾರರು ಇವೇ ಕೆಲಸಗಳಲ್ಲಿ ಮಹಿಳಾ ಕೂಲಿಗಳು ದುಡಿಯುತ್ತಿದ್ದಾರೆ. ಆದರೆ ಇವರಿಗೆ ಯಾವುದೇ ಅಕ್ಷರಜ್ಞಾನ ಇಲ್ಲದಿರುವುದರಿಂದ ಇವರ ಶ್ರಮಶಕ್ತಿ ಕೌಶಲ್ಯರಹಿತವಾಗಿ ಅತಿ ಹೆಚ್ಚಿನ ಶ್ರಮದಾಯಕ ಕೆಲಸಗಳನ್ನು ಕಡಿಮೆ ಕೂಲಿಗೆ ಮಾಡುತ್ತಾರೆ. ೨೦೦೧ ಜನಗಣತಿ ಪ್ರಕಾರ ಮಹಿಳೆಯರ ಸಾಕ್ಷರತೆ ೪೬.೪ ರಷ್ಟಿದ್ದರೆ, ಪುರುಷರ ಸಾಕ್ಷರತೆ ೭೧.೮೩ ರಷ್ಟಿದೆ. ಕಡಿಮೆ ಕೂಲಿ ಕೊಡಬಹುದು ಎಂಬ ಕಾರಣಕ್ಕಾಗಿ ಬಂಡವಾಳಿಗಳು ಅಧಿಕವಾಗಿ ಮಕ್ಕಳನ್ನು ದುಡಿಸಿಕೊಳ್ಳುತ್ತಿದ್ದಾರೆ. ಗಣಿಗಾರಿಕೆಯಲ್ಲಿ ಹೆಚ್ಚಾಗಿ ಕೆಳಜಾತಿಯ ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅಲ್ಲಿ ಉನ್ನತ ಕೆಲಸವನ್ನು ಮಹಿಳೆಯರು ಮಾಡುತ್ತಿದ್ದಾರೆ ಎಂದಾದರೆ ಅವರು ಉನ್ನತ ಜಾತಿ/ವರ್ಗದ ಮಹಿಳೆಯರಾಗಿರುತ್ತಾರೆ. ನಮ್ಮಲ್ಲಿ ಗಂಡುಮಕ್ಕಳಲ್ಲಿ ಇದ್ದಂಗೆ ಯಾವುದೇ ತರ ಸಂಘಗಳಿಲ್ಲ. ನಮ್ಮದು ಯಾವಾಗಲೂ ಕೆಲಸ ಇರತ್ತೈತಿ. ದಿನಕ ೩೮ ರೂಪಾಯಿ ಕೊಡ್ತಾರಾ. ಮೊದಲು ೩೬ ರೂಪಾಯಿ ಕೊಡ್ತಾ ಇದ್ರು. ಈಗ ೩೮ ರೂಪಾಯಿ ಕೊಡ್ತಾರ. ವರ್ಷಕ್ಕೆ ಕೂಲಿನ ಎರಡು ರೂಪಾಯಿ ಏರಿಸ್ತಾರೆ. ಬರೆ ಗಣಿಗಳಾಗ ಮಕ್ಳಿಗೆ ಬುಕ್ಸ್, ಬಟ್ಟೆ, ರೊಕ್ಕ ಕೊಡ್ತಾರಂತೆ. ಆದ್ರೆ ಡಾಲ್ಮಿಯ ನಿಂತು ಹೋಗ್ಯೆತಿ. ಅವರು ನಮ್ಮ ಮಕ್ಳಿಗೆ ಏನು ಕೊಡ್ತಾ ಇಲ್ಲ. ಗಂಡುಮಕ್ಳಿಗೆ ೫೦ ರೂಪಾಯಿ ಕೊಡ್ತಾರೆ. ಗಂಡು ಮಕ್ಳಿಗೆ ಯಾಕೆ ಜಾಸ್ತಿ ಕೂಲಿ ಕೊಡ್ತೀರಿ? ನಮಗ್ಯಾಕೆ ಕಡಿಮೆ ಕೂಲಿ? ನಾವು ಅವರಷ್ಟೆ ಕೆಲ್ಸ ಮಾಡ್ತೀವಲ್ಲಾ ಅಂತ ಕೇಳಿದರೆ ಏನು

ಗಂಡು ಮಕ್ಳು ತರ ಕಷ್ಟದ ಕೆಲಸ ಮಾಡ್ತೀರೇನೋ ನೀವು ಹೆಣ್ಣುಮಕ್ಳು ಅಂತಾರೆ. ಇಲ್ಲಿ ಕೆಲಸ ಮಾಡಲು ರೆಡ್ಡಿಗರು, ಕುರುಬರು, ಹರಿಜನರು, ನಾಯಕರು, ಚಲವಾದಿಗಳು ಎಲ್ಲಾ ಮಂದಿನೂ ಬರ್ತಾರೆ. ಇಲ್ಲಿ ಕೆಲ್ಸ ಮಾಡಲು ನಮ್ಮ ಮೈನ್ಸ್‌ನವರೆ ಟ್ರೈನಿಂಗ್ ಕೊಡ್ತಾರೆ. ಕೆಲ್ಸ ಮಾಡುವಾಗ ಏನಾದರೂ ಗಾಯ ಆದ್ರೆ ಮೈನ್ಸ್‌ನವರೇ ತೋರಿಸ್ತಾರೆ. ಮನೆಯಲ್ಲಿದ್ದಾಗ ಏನಾದರೂ ಆದ್ರೆ ನಾವೇ ತೋರಿಸ್ಕೊಂಬೇಕು. ಮೊದಲು ಗಾದಿಗನೂರಿನಲ್ಲಿ ಇದ್ದಿಲು ತುಂಬೋಕ್ಕೋಗ್ತಿದ್ದೆ. ಕೆಲ್ಸಕ್ಕೆ ಹೋಗ್ದೆ ಇದ್ರೆ ಗಣಿನಲ್ಲಿ ಕೂಲಿ ಕಟ್ಟು ಮಾಡ್ತಾರೆ. ಇಲ್ಲಿ ಡಿಲಿವರಿ ರಜಾ ಅಂತದೇನು ಇಲ್ಲ. ಇಲ್ಲಿ ಧೂಳಿನಿಂದ ಬಾಳ ತೊಂದರೆ ಆಗತೈತಿ. ಎದೆನೋವು, ಕೈಕಾಲು ಹರಿತ, ನಡು ನೋವು ಬರ್‍ತೈತಿ. ವಾರಕ್ಕೆ ಒಂದು ದಿನ ರಜಾ ಕೊಡ್ತಾರೆ. ನಾವು ಕೆಲಸ ಮಾಡೋ ಹತ್ರ ಯಾವ ಲೇಬರ್ ಆಫೀಸರ್‌ಗಳು ಬರಲ್ಲ. ಅಲ್ಲಿ ಯಾವುದೇ ಸೌಕರ್ಯ ಇಲ್ಲ. ಅಲ್ಲಿ ದೊಡ್ಡಿಗೋಗಲಿಕ್ಕೆ ಬಹಳ ತೊಂದರೆ. ತುಂಬಾ ದೂರ ಹೋಗ್ಬೇಕು. ಇಲ್ಲಿ ಯಾರು ಮನಿನಾಗ ಇಲ್ಲದಿರೋರು ಸಣ್ಣ ಮಕ್ಳನ್ನ ತಮ್ಮ ಜೊತಿನಾಗೇ ಕರಕಂಬರ್ತಾರೆ. ಅವು ಮಣ್ಣು ಅಂದ್ರೆ ಮಣ್ಣಲ್ಲಿ, ಕಲ್ಲು ಅಂದ್ರೆ ಕಲ್ಲಲ್ಲೇ ಆಡಿಕೆಂತಾ ಮಣ್ಣು ತಿಂದೇ ಬದುಕುತಾವೆ. ಕುಡಿಯೋಕು ಕೂಡ ಇಲ್ಲಿ ನೀರು ಇಲ್ಲ. ತುಂಬಾ ದೂರದಿಂದ ನೀರು ತಗಂಬರಬೇಕು. ಒಟ್ಟಾಗಿ ನೋಡ್ರಿ ಎಲ್ಲಾಕ್ಕೂ ತಾಪತ್ರಾನೇ ಇಲ್ಲಿ. ಏನೂ ಗತಿ ಇಲ್ದೆ, ಇಲ್ಲಿ ಕೆಲ್ಸ ಮಾಡಬೇಕಾಗೈತಿ. ಇಲ್ಲಿ ಬರೋ ಕೂಲಿ ಕೂಡ ಸಾಕಾಗಲ್ಲ. ಹೊಲದ ಕೆಲ್ಸಕ್ಕೆ ತುಂಬಾ ಕಡಿಮೆ ಕೂಲಿ ಕೊಡ್ತಾರೆ. ಅದೂ ಸಾಕಾಗಲ್ಲ. ಅಂತ ಇಲ್ಲ ಬಂದ್ರೆ, ಇಲ್ಲಿ ಕೂಡ ಅದೇ ರೀತಿ ಐತಿ. ಸ್ವಲ್ಪ ಜಾಸ್ತಿ ಕೂಲಿ ಕೊಟ್ಟು ಜಗ್ಗಿ ದುಡಿಸಿಕೆಂತಾರ. ವಾರಕ್ಕೆ ಮನಿಗೆ ಸಾಮಾನು ತರೋಕೆ ಸಾಕಾಗೋದಿಲ್ಲ. ಇನ್ನು ಆಸ್ಪತ್ರೆಗೆ ಏನಾರ ಹೋಗಬೇಕು ಅಂದ್ರೆ ಸಾಲ ಮಾಡಿಕೊಂಡು ಹೋಗಿ ತೋರಿಸಿಕೆಂತೀವಿ. ಏನೂ ಉಳಿತಾಯಾನು ಮಾಡಕಾಗಲ್ಲ. ಬಾರ ಹೊರುತಿವಲ್ಲ. ಜಗ್ಗಿ ಮೈಕೈ ನೋವು ಬರತೈತಿ. ಸಾಯಂಕಾಲ ಕುಡಿಯಲೇಬೇಕು. ಇಲ್ಲಂದ್ರೆ ನಿದ್ದಿ ಬರಂಗಿಲ್ಲ. ಒಂದು ಪಾಕೆಟ್‌ಗೆ ೧೪ ರೂಪಾಯಿ ಹೊರಟೋಗ್ತಾದೆ. ಇನ್ನು ಉಳಿಸೋದು ಎಲ್ಲಿಂದ ಬಂತು. ಇನ್ನೂ ಕೆಲ್ಸ ಮಾಡೋ ಹತ್ರ ಗಂಡುಮಕ್ಳ ಕಾಟ ಬ್ಯಾಡ. ಅವರು ಹೇಳಿದಂಗ ಕೇಳ್ಬೇಕು. ಇಲ್ಲಾಂದ್ರೆ ಬಾಳ ಕೆಲ್ಸ ಕೊಡ್ತಾರೆ. ಬಾರ ತಲಿಮ್ಯಾಲ ಎತ್ತೋವಾಗ ಜೋರಾಗಿ ಕುಕ್ಕುತ್ತಾರೆ. ಕೈ ಎಳೆಯೋದು, ಕಾಲನ್ನು ತಗಲ್ಸೋದು, ಚಿವುಟೋದು, ಕಣ್ಣೊಡೆಯುವುದು ಮಾಡ್ತಾರೆ. ಕೆಲವರು ಅವರಿಗೆ ತಕ್ಕಂಗೆ ನಡಕಾತಾರ. ನಮಗ ಆಗಂಗಿಲ್ಲ ನೋಡ್ರಿ. ಅಂಗೇ ಸಿಟ್ಟ ಬರತೈತಿ ಅವರ ಮ್ಯಾಲ. ಆದ್ರ ಏನೂ ಮಾಡ್ಬೇಕು ಬಿಡ್ರಿ. ಏನೂ ಮಾಡಿದ್ರೂ ಅವರು ಚಟ ಅವರು ಬಿಡಂಗಿಲ್ಲ. ಹೊಟ್ಟೆಪಾಡು ಎಂಗೋ ಕೆಲ್ಸ ಮಾಡ್ಬೇಕು ಅಷ್ಟೇ" ಎಂದು ಹೇಳುತ್ತಾರೆ. ಗಣಿ ಮಹಿಳಾ ಕೂಲಿಗಳ ಕೆಲಸ ಅಸಂಘಟಿತ ವಿಭಾಗವಾಗಿರುವುದರಿಂದ ಅವರು ಕಂಟ್ರಾಕ್ಟರ್‌ಗಳ ವಿರುದ್ಧ, ತನಗೆ ಹಿಂಸೆ ಕೊಡುವವರ ವಿರುದ್ಧ, ಮಾಲಿಕರ ವಿರುದ್ಧ ಹೋರಾಡಲು ಆಗದಿರುವುದರಿಂದ ಈ ವಿಭಾಗದಲ್ಲಿಯೂ ಅವಳಿಗೆ ಕೆಲಸ ಸಿಗದೆ ಹೋಗುತ್ತಿದೆ. ಬಡತನದೊಂದಿಗೆ ಹೆಚ್ಚು ಮಕ್ಕಳು ಆಗುವುದರಿಂದ ಮಕ್ಕಳು ಕಡಿಮೆ ತೂಕದ/ಹುಟ್ಟಿ ಸಾಯುವ/ಸತ್ತು ಹುಟ್ಟುವ ಮಕ್ಕಳಾಗುತ್ತವೆ. ಪದೇ ಪದೇ ಹೇರುವುದು, ಬೇಗ ಹೇರುವುದು, ಮಾರನೇ ದಿನವೇ ಗಣಿ ಕೆಲಸಕ್ಕೆ ಹೋಗುವುದು, ಗರ್ಭಿಣಿ ಇದ್ದಾಗಲೂ ಕಷ್ಟದ ಕೆಲಸದಲ್ಲಿ ತೊಡಗುವುದು

ಹಾಗೂ ಮಕ್ಕಳನ್ನು ಹೇರುವುದು ಇದೂ ಬಡ ಗಣಿ ಕೂಲಿ ಮಹಿಳೆಯ ಅನಾರೋಗ್ಯದಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ಇವರಿಗೆ ಮಕ್ಕಳೇ ಭವಿಷ್ಯ ನಿಧಿ. ಮಕ್ಕಳು ಹೆಚ್ಚಾದಷ್ಟು ಅಧಿಕ ಆದಾಯ ಬರುವುದೆಂದು ಇವರು ನಂಬುತ್ತಾರೆ. ಆದರೆ ತನಗೆ ಆಗುವ ಅನಾರೋಗ್ಯದ ಬಗ್ಗೆ ಯೋಚಿಸುವುದಿಲ್ಲ. ಕ್ಷಯ ಮಹಿಳೆಯ ಸಾವಿಗೆ ಅತೀಮುಖ್ಯ ಕಾರಣ ಗರ್ಭಿಣಿಯಿರುವಾಗ ಮರಣ ಹೊಂದುವ ಮಹಿಳೆಯರಲ್ಲಿ ನಾಲ್ಕು ಮಂದಿ ಕ್ಷಯ ರೋಗದಿಂದ ಸಾಯುತ್ತಾರೆ. ಆರೋಗ್ಯಪೂರ್ಣ ವ್ಯಕ್ತಿಗಿಂತ ದುರ್ಬಲ, ರಕ್ತಹೀನತೆಯಿಂದ ಕೂಡಿದ ಗಣಿಕೂಲಿ ಮಹಿಳೆಯರ ದೇಹಕ್ಕೆ ಕ್ಷಯ ಬರುವುದು ಹೆಚ್ಚು. ಮೂತ್ರನಾಳದ ಸೋಂಕು ಕೂಡ ಮಹಿಳೆಯರಿಗೆ ಹೆಚ್ಚು. ಮನೆಯಲ್ಲಿ ಗಂಡನ ಪೋಷಣೆ, ಮಕ್ಕಳ ಪೋಷಣೆ, ಗಣಿಯಲ್ಲಿ ಸುಸ್ತಾಗುವ ಕೆಲಸ, ಧೂಳು ಶಬ್ದದಿಂದ ಕೂಡಿದ ಕೆಲಸ ಎಂದೂ ಅವಳದೇ ಆಗಿರುತ್ತದೆ. ಆ ಕೆಲಸಕ್ಕೆ ಅವಳಿಗೆ ಪ್ರತಿಫಲವೂ, ವಿಶ್ರಾಂತಿಯೂ ಇರುವುದಿಲ್ಲ. ಈ ಕಾರಣಕ್ಕಾಗಿ ಅವಳ ಪಾಲಿಗೆ ದಿನ ಮುಗಿಯುವುದೇ ಇಲ್ಲ. ಗಣಿಯಲ್ಲಿ ಮಹಿಳಾ ಕೂಲಿಗಳಿಗೆ ವಾರಾಂತ್ಯ ರಜಾ ದಿನಗಳೂ ಇಲ್ಲ. ರಜಾ ಹಾಕಿದರೆ ಒಂದು ದಿನದ ಕೂಲಿ ಹೋಗುತ್ತದೆ. ಆ ದಿನದ ಊಟದ ಸ್ಥಿತಿಯನ್ನು ನೆನೆದು ಅತಿಯಾಗಿ ದುಡಿಯುವುದರಿಂದ, ಇದರೊಂದಿಗೆ ಬಡತನ, ಅಷ್ಟೇ ಸಾಕು ಮಹಿಳೆಯರಿಗೆ ಆರೋಗ್ಯ ಸಮಸ್ಯೆ ಉಂಟಾಗಲು. ಗಣಿ ಪ್ರದೇಶದಲ್ಲಿ ಚಿಕ್ಕ ಡೇರೆಗಳು, ಅಡಿಗೆ ಕೆಲಸ, ಕೂಲಿ ಕೆಲಸ, ಸಂಡಾಸು ವ್ಯವಸ್ಥೆ ಇಲ್ಲದಿರುವುದ, ಖಾಸಗಿತನಕ್ಕಂತೂ ಅವಕಾಶ ಇಲ್ಲದಿರುವುದು, ನೀರಿನ ಸಮಸ್ಯೆ ಇವೆಲ್ಲವೂ ಅವಳನ್ನು ಮಾನಸಿಕ ಒತ್ತಡಕ್ಕೆ ಸಿಲುಕಿಸದೆ. ಅತಿಯಾದ ಬಡತನ, ಮಾಹಿತಿಯ ಕೊರತೆಯಿಂದ ಅವಳು ವೈದ್ಯಕೀಯ ಚಿಕಿತ್ಸೆಗೆ ಒಳಗಾಗಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ವೈದ್ಯಕೀಯ ಸೌಲಭ್ಯದ ಕೊರತೆ ಜಿಲ್ಲೆಯಲ್ಲಿ ತುಂಬಾ ಇದೆ.

ಒಟ್ಟಿನಲ್ಲಿ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ ಹಾಗೂ ಸಮಸ್ಯೆಗಳನ್ನು ಪರಿಶೀಲಿಸಿದಾಗ ಅನೇಕ ಸಮಸ್ಯೆಗಳು ಅಧ್ಯಯನದಿಂದ ತಿಳಿದುಕೊಳ್ಳಲಾಯಿತು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶಗಳೆಂದರೆ, ಬೇಡ ಸಮುದಾಯದ ಮಹಿಳೆ ಇಂದಿಗೂ ಸಮಸ್ಯೆಗಳಿಂದ ಮುಕ್ತವಾಗಿಲ್ಲದಿರುವುದನ್ನು ಗುರುತಿಸಬಹುದು.

ಆಧಾರಗಳು

ಅಂಜನಪ್ಪ. ಬಿ. ಎಚ್, ೨೦೦೯, ಮಹಿಳೆ ಮತ್ತು ದುಡಿಮೆ, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು

ಕ್ಯಾನ್ಯುಟ್ ಬರ್ಬೋಜ, ೨೦೧೨, ಕಾರ್ಮಿಕ ಕಲ್ಯಾಣ–ದಕ್ಷಿಣ ಕನ್ನಡ ಜಿಲ್ಲೆಯ ಸಂಘಟಿತ ಮತ್ತು ಅಸಂಘಟಿತ ದುಡಿಮೆಯ ತೌಲನಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ

ಕಿರಣ ಕಮಲ ಪ್ರಸಾದ್, ೨೦೧೮, ಜೀತ ಪದ್ಧತಿ ಒಂದು ಪುನರ್ ವ್ಯಾಖ್ಯಾನ, ಕನ್ನಡ ವಿಶ್ವ ವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂದ

ಚಂದ್ರಶೇಖರ್ ಟಿ.ಆರ್, ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಿದ್ಧಗಂಗಮ್ಮ, ೨೦೧೩, ಮಹಿಳಾ ಶ್ರಮ ಘನತೆ, ಗಾನೆ ಪಬ್ಲಿಕೇಷನ್ಸ್, ಬೆಂಗಳೂರು

ಸುಮಂಗಲ ಅತ್ತಿಗೇರಿ, ೨೦೦೭, ಕೃಷಿ ಜಾನಪದ ಮತ್ತು ಮಹಿಳೆ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ

ಹುಲುಗಪ್ಪ ಎಚ್, ೨೦೦೭, ಅಸಂಘಟಿತ ವಲಯದಲ್ಲಿ ಮಹಿಳೆಯ ದುಡಿಮೆ ಮತ್ತು ಆರ್ಥಿಕತೆಯ ಸ್ವರೂಪ, (ಕೊಪ್ಪಳ ಜಿಲ್ಲೆಯ ಮಹಿಳಾ ಕೃಷಿ ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಅನುಲಕ್ಷಿಸಿ) ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ ಪು.ಸಂ.೭೦-೭೭

ಅಧ್ಯಾಯ : ನಾಲ್ಕು
ಮಹಿಳಾ ಕೃಷಿ ಕಾರ್ಮಿಕರು ಮತ್ತು ಸರಕಾರದ ಯೋಜನೆಗಳು

ಅಧ್ಯಾಯ : ನಾಲ್ಕು

ಮಹಿಳಾ ಕೃಷಿ ಕಾರ್ಮಿಕರು ಮತ್ತು ಸರಕಾರದ ಯೋಜನೆಗಳು

ಕಾಲದಿಂದ ಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಮಹಿಳಾ ಕೃಷಿ ಕಾರ್ಮಿಕರ ಯೋಜನೆಗಳಿಗೆ ಸಂಬಂಧಿಸಿದಂತೆ ಹತ್ತು ಹಲವಾರು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಕೃಷಿಯ ಚಟುವಟಿಕೆಗಳನ್ನು ಸುಧಾರಿಸುವ ಪ್ರಯತ್ನ ಮಾಡಲಾಗುತ್ತದೆ. ಅದರಲ್ಲೂ ಗ್ರಾಮೀಣ ಮಹಿಳಾ ಕೃಷಿ ಕಾರ್ಮಿಕರ ಅಭಿವೃದ್ಧಿಗೆ ವಿವಿಧ ಇಲಾಖೆಗಳ ಮುಖೇನ ಜಾರಿಗೊಳಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿಶ್ಲೇಷಿಸುವುದಾಗಿದೆ. ಕೃಷಿಯಲ್ಲಿ ತೊಡಗಿರುವ ಮಹಿಳೆಯರು ಹಾಗೂ ಕೃಷಿ ಚಟುವಟಿಕೆಗಳನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುವ ಒಂದು ಪ್ರಕ್ರಿಯೆಯಾಗಿದೆ. ಆರ್ಥಿಕ ಸಬಲೀಕರಣ ಇದರ ನಿರ್ಣಾಯಕ ಆಯಾಮವಾಗಿದೆ. ಇಂದು ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆ ಭಾಗವಹಿಸುವಿಕೆ ಮತ್ತು ಕೊಳ್ಳುವ ಸಾಮರ್ಥ್ಯದ ಮೇಲೆ ಆಕೆಯ ನಿಯಂತ್ರಣವನ್ನು ಅವಲಂಬಿಸಿದೆ. ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯ ಸಹಭಾಗಿತ್ವ ಪ್ರಮುಖ ಸೂಚಿ ದುಡಿಮೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ. ಮಹಿಳೆಯ ಆರ್ಥಿಕ ಸ್ಥಿತಿಗತಿಗಳು, ಆಕೆಯ ಪಾತ್ರ ಇವೆಲ್ಲವೂ ಸಮಾಜದಲ್ಲಿ ಮಹಿಳಾ ಸಬಲೀಕರಣವನ್ನು ತೋರಿಸುತ್ತದೆ. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯಗಳ ಜೀವನ ಸ್ಥಿತಿಗತಿಯನ್ನು ಉತ್ತಮಪಡಿಸುವಲ್ಲಿ ಈ ಕಾರ್ಯಕ್ರಮಗಳು ಸಹಕಾರಿಯಾಗಿವೆ. ಬಹುತೇಕ ಕಾರ್ಯಕ್ರಮಗಳು ಪರಿಶಿಷ್ಟ ಜಾತಿ ಸಮುದಾಯವನ್ನೊಳಗೊಂಡಂತೆ ಇತರ ಎಲ್ಲಾ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಅನುಕೂಲವಾಗಿರುವುದಲ್ಲದೆ ಪರಿಶಿಷ್ಟ ವರ್ಗಗಳ ಮಹಿಳಾ ಕೃಷಿ ಕಾರ್ಮಿಕರ ಅಭಿವೃದ್ಧಿಗೆ ಸಹಕಾರಿಯಾಗಿವೆ. ದೇಶದ ಅಭಿವೃದ್ಧಿಗೆ ಗ್ರಾಮೀಣ ಅಭಿವೃದ್ಧಿಯು ಪ್ರಮುಖವಾದುದಾಗಿದೆ. ಏಕೆಂದರೆ ದೇಶದ ಶೇ.೭೦ ಕ್ಕೂ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವುದರಿಂದ ಅವರ ಜೀವನ ಮಟ್ಟವನ್ನು ಉತ್ತಮೀಕರಿಸಿದರೆ ರಾಷ್ಟ್ರದ ಅಭಿವೃದ್ಧಿ ತಾನಾಗಿಯೇ ಆಗುತ್ತದೆ.

ಸ್ವಾತಂತ್ರ್ಯದ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ವಿವಿಧ ರೀತಿಯ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ದೇಶದಲ್ಲಿ ಅನುಷ್ಠಾನಗೊಳಿಸುತ್ತಿದೆ. ಸರ್ಕಾರ ಹಲವಾರು ಉದ್ಯೋಗ ಹಾಗೂ ಸ್ವ-ಉದ್ಯೋಗ ಕಾರ್ಯಕ್ರಮಗಳು, ಜನರಿಗೆ ಕೂಲಿ ದೊರೆಯುವಂತ ಉದ್ಯೋಗಗಳು ವಸತಿ ಯೋಜನೆ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿವೆ. ಈ ಎಲ್ಲಾ ಕಾರ್ಯಕ್ರಮಗಳು ಕೃಷಿ ಕಾರ್ಮಿಕರು, ಭೂರಹಿತ ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತಿ ಸಣ್ಣ ರೈತರು, ಅಲ್ಪಾವಧಿ ದುಡಿಮೆಗಾರರು, ಕುಶಲ ಕರ್ಮಿಗಳು ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವವರಿಗೆ ಉದ್ಯೋಗ ಒದಗಿಸುವಲ್ಲಿ ಸಹಕಾರಿಯಾಗಿವೆ. ಹಾಗೂ ಈ ಎಲ್ಲಾ ಕಾರ್ಯಕ್ರಮಗಳು ಮಹಿಳಾ ಅಭಿವೃದ್ಧಿಗೆ ವಿಶೇಷ ಗಮನವನ್ನು ಕೊಡುತ್ತಿವೆ. ಸ್ವಾತಂತ್ರ್ಯ ಕಾಲದಲ್ಲಿ ಭಾರತದ ಆರ್ಥಿಕ ಸ್ಥಿತಿ ಶೋಚನೀಯವಾಗಿತ್ತು. ದುಡಿಯುವ ಮತ್ತು ಉತ್ಪಾದನಾ ಸಾಮರ್ಥ್ಯ ತುಂಬಾ ಕಡಿಮೆಯಿತ್ತು. ಆ ಸಮಯದಲ್ಲಿ ಕೃಷಿ ಆರ್ಥಿಕತೆಯೂ ಕೂಡ ಪ್ರತಿಕೂಲವಾಗಿತ್ತು. ಇದರಿಂದಾಗಿ ೧೯೫೦-೫೧ರ ಮೊದಲ ಪಂಚವಾರ್ಷಿಕ ಯೋಜನೆಯಿಂದ ಇಲ್ಲಿಯವರೆಗೂ (ಪ್ರಸ್ತುತ ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿದ್ದೇವೆ) ಕೃಷಿ ಕ್ಷೇತ್ರವನ್ನೊಳಗೊಂಡಂತೆ ಉತ್ತಮೀಕಲರಿಸಲು ಯೋಜನೆಗಳನ್ನು ರೂಪಿಸಿದೆ. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು ೧,೯೬೦ ಕೋಟಿ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಈ ಯೋಜನೆಯಲ್ಲಿ ಅತ್ಯಂತ ಹೆಚ್ಚು ಅಂದರೆ ಶೇ.೩೧ ರಷ್ಟು ಹಣವನ್ನು ಕೃಷಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಮೀಸಲಿಡಲಾಗಿತ್ತು. ಇದರ ಮುಖಾಂತರ ಕೃಷಿ ಕಾರ್ಮಿಕರ ಉದ್ಯೋಗ ಪ್ರಮಾಣವೂ ಕೂಡ ಅಧಿಕವಾಯಿತು. ವಿವಿಧ ಪಂಚವಾರ್ಷಿಕ ಯೋಜನೆಗಳ ಪರಿಣಾಮದಿಂದಾಗಿ ರಾಷ್ಟ್ರದಲ್ಲಿ ಆಹಾರ ಉತ್ಪಾದನೆ, ಕೈಗಾರಿಕೆಗಳ ಅಭಿವೃದ್ಧಿ, ಮೂಲ ಸೌಕರ್ಯಗಳ ಅಭಿವೃದ್ಧಿ, ಸಾರ್ವಜನಿಕ ರಂಗದ ಬೆಳವಣಿಗೆ, ಸಾಮಾಜಿಕ ಸೇವೆಗಳ ವೃದ್ಧಿ ಮತ್ತು ಶಿಕ್ಷಣ ಕ್ಷೇತ್ರವನ್ನೊಳಗೊಂಡಂತೆ ಪ್ರಮುಖವಾಗಿ ಕೃಷಿ ಕ್ಷೇತ್ರದಲ್ಲಿ ಸುಧಾರಣೆಯಾಗಿದೆ.

ವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟು ಅಭಿವೃದ್ಧಿ

೧ನೇ ಪಂಚ ವಾರ್ಷಿಕ ಯೋಜನೆ ಮತ್ತು ಬುಡಕಟ್ಟು ಅಭಿವೃದ್ಧಿ

ಭಾರತದ ಮೊದಲನೇ ಪಂಚವಾರ್ಷಿಕ ಯೋಜನೆಯು ಸಮಾಜವಾದಕ್ಕೆ ಅಡಿಗಲ್ಲು ಹಾಕಿದೆ. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶದಲ್ಲಿ ಸರ್ವತೋಮುಖ ಬದಲಾವಣೆಯನ್ನು ಸಮೂಹ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತರಲು ಪ್ರಯತ್ನಿಸಲಾಗಿದೆ. ರಾಜ್ಯಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

೧. ಶಿಕ್ಷಣ ಮತ್ತು ಸಂಸ್ಕೃತಿ. ೨) ಬುಡಕಟ್ಟುಗಳ ಆರ್ಥಿಕ ಅಭಿವೃದ್ಧಿ ೩) ಸಾರಿಗೆ ಮತ್ತು ಸಂವಹನ ೪) ಸಮಾಜ ಕಲ್ಯಾಣ (ಆರೋಗ್ಯ ನೈರ್ಮಲಿಕರಣ ಮತ್ತು ವಸತಿ) ಇತ್ಯಾದಿ ವಿನೂತನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ಪಂಚವಾರ್ಚಿಕ ಯೋಜನೆಯಲ್ಲಿ ಕೈಗೊಳ್ಳಲಾಗಿವೆ. ಈ ಯೋಜನಾವಧಿಯಲ್ಲಿಯ ಅಭಿವೃದ್ಧಿ ಕಾರ್ಯಗಳು ಹೀಗಿವೆ.

ಅ. ೪೦೦೦ ಶಾಲೆಗಳ ಸ್ಥಾಪನೆ, ಇದರಲ್ಲಿ ೧೦೦೦ ಆಶ್ರಮ ಶಾಲೆ ಮತ್ತು ಸೇವಾಶ್ರಮ ಶಾಲೆಗಳು ಸೇರಿರುತ್ತವೆ. ೪೫೦೦೦೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದರು. ೮೫೦೦ ಬುಡಕಟ್ಟು ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡಿರುತ್ತಾರೆ.

ಆ. ೨೪೦೦ ಮೈಲಿ ಉದ್ದದ ರಸ್ತೆ ಮತ್ತು ಸೇತುವೆಗಳು ಹಾಗೂ ಬೆಟ್ಟಗಳಲ್ಲಿ ಕಾಲು ದಾರಿಗಳ ನಿರ್ಮಾಣ.

ಇ. ಹೊಸದಾದ ಬೇಸಾಯ ಪದ್ಧತಿಯನ್ನು ಅಳವಡಿಸಲು ೫೦ ಕೃಷಿ ಫಾರಂಗಳ ಸ್ಥಾಪನೆ.

ಈ. ೮೦೦೦ ಬುಡಕಟ್ಟು ಕುಟುಂಬಗಳ ಶಾಶ್ವತ ನೆಲೆ. ಇವರಿಗಾಗಿ ೩೫೦ ಆಹಾರ ಬ್ಯಾಂಕುಗಳ ಸಂಘಟನೆ.

ಉ. ೩೧೦ ವಿವಿದೋದ್ದೇಶ ಸಹಕಾರಿ ಸಂಘಗಳ ಸ್ಥಾಪನೆ

ಊ.೮೦೦ ಬುಡಕಟ್ಟು ಜನರಿಗೆ ನೇಯ್ಗೆ, ರೇಷ್ಮೆ, ಧಾನ್ಯ ಸಂರಕ್ಷಣೆಯ ತರಬೇತಿ.

ಋ. ೭೫೦ ಬುಡಕಟ್ಟು ಕುಟುಂಬಗಳಿಗೆ ಸಣ್ಣ ವ್ಯಾಪಾರ ವೃದ್ಧಿಗೋಸ್ಕರ ಸಹಾಯಧನ

ಎ. ೧೧೦ ಗೃಹ ಕೈಗಾರಿಕೆ, ೩೨೦೦ ವೈದ್ಯಕೀಯ, ೨೫ ಮಲೇರಿಯಾ ನಿಯಂತ್ರಣ, ೨೬ ಹೆರಿಗೆ ಆಸ್ಪತ್ರೆ, ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳ ಸ್ಥಾಪನೆ.

ಏ. ಬುಡಕಟ್ಟು ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಜವಾಗಿಯೇ ಶಿಕ್ಷಣ, ಆರ್ಥಿಕ ಅಭಿವೃದ್ಧಿ, ಸಾರಿಗೆ ಮತ್ತು ಸಂವಹನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ರೂ.೪೦೦ ರಿಂದ ೫೦೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ತದನಂತರ ಆರೋಗ್ಯ ಕ್ಷೇತ್ರಕ್ಕೆ ಪ್ರಾಮುಖ್ಯತೆ ನೀಡಿ ನಂತರ ಆಡಳಿತಕ್ಕೆ ಹೆಚ್ಚಿನ ಗಮನ ನೀಡಿರುವುದು ವ್ಯಕ್ತವಾಗುತ್ತದೆ. ಸ್ವಾತಂತ್ರ್ಯ ಪೂರ್ವದ ಕಾಲಕ್ಕೆ ಹೋಲಿಸಿದಲ್ಲಿ ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಆಯವ್ಯಯ ತೃಪ್ತಿಕರವಾಗಿದೆ.

೨ನೇ ಪಂಚವಾರ್ಷಿಕ ಯೋಜನೆ : (೧೯೫೬–೫೭ ರಿಂದ ೧೯೬೦–೬೧)

ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಬೃಹತ್ ಪ್ರಮಾಣದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನಗೊಂಡವು. ಸರಾಸರಿ ೨೫೦೦೦ ಬುಡಕಟ್ಟು

ಜನರನ್ನು ಹೊಂದಿರುವ ಬುಡಕಟ್ಟು ಪ್ರದೇಶಗಳಲ್ಲಿ ಎನ್.ಇ.ಎಸ್ ಬ್ಲಾಕ್‌ಗಳನ್ನು ಗುರ್ತಿಸಲಾದವು. ಕೇಂದ್ರ ಸರ್ಕಾರವು ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶ ಅಭಿವೃದ್ಧಿಗಾಗಿ ಕೆಲವು ವಿಶೇಷ ಯೋಜನೆಗಳನ್ನು ಜಾರಿಗೊಳಿಸಿತು. ಇವುಗಳಲ್ಲಿ ಅತಿ ಮುಖ್ಯವಾದದ್ದು ವಿಶೇಷ ವಿವಿದೋದ್ದೇಶ ಬುಡಕಟ್ಟುಗಳ ಗುಂಪು (Special Multipurpose Tribal Blocks) ಈ ಗುಂಪುಗಳ ಮುಖ್ಯ ಉದ್ದೇಶ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮತ್ತಷ್ಟು ಹೆಚ್ಚಿನ ಗಮನ ಹರಿಸುವುದಾಗಿತ್ತು. ಈ ವಿಶೇಷ ವಿವಿದೋದ್ದೇಶ ಬುಡಕಟ್ಟು ಗುಂಪುಗಳ ಪ್ರಗತಿಯನ್ನು ಪರಿಶೀಲಿಸಲು ವೆರಿಯರ್ ಎಲ್ವಿನ್‌ರವರ ನೇತೃತ್ವದಲ್ಲಿ ಅನೇಕ ತಂಡಗಳನ್ನು (CompositvbeTeam) ರಚಿಸಲಾಗಿತ್ತು. ಈ ತಂಡಗಳು ಬುಡಕಟ್ಟು ಜನರ ಸಮಸ್ಯೆಗಳನ್ನು ಬಗೆಹರಿಸಲು ಬಹು ಹೆಚ್ಚು ಫಲಕಾರಿಯಾಗುವ ಶಿಫಾರಸ್ಸುಗಳನ್ನು ಮಾಡಿದವು. ಕಾಲಾನುಕ್ರಮ ಈ ಎಸ್.ಎಂ.ಪಿ.ಟಿ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್ (Tribal Development Blocks) ಗಳೆಂದು ಕರೆಯಲ್ಪಟ್ಟವು. ಪ್ರತಿ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳು ೨೫೦೦೦ ಬುಡಕಟ್ಟುಗಳನ್ನು ಹೊಂದಿದ್ದವು.

ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಯನ್ನು ಎರಡು ಪ್ರತ್ಯೇಕ ಯೋಜನೆಯಲ್ಲಿ ಕೈಗೊಳ್ಳಲಾಗಿತ್ತು. ಅವುಗಳೆಂದರೆ ರಾಜ್ಯ ಯೋಜನೆ ಮತ್ತು ಕೇಂದ್ರ ಯೋಜನೆ. ರಾಜ್ಯ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಅನುದಾನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ೫೦:೫೦ ಅನುಪಾತದಲ್ಲಿ ಭರಿಸಿದವು. ಈ ಯೋಜನೆಯ ಅಡಿಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಪೂರ್ಣ ಅನುದಾನವನ್ನು ಭಾರತ ಸರ್ಕಾರ ಭರಿಸಿತು. ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೪೨.೯೨ ಕೋಟಿ ಖರ್ಚು ಮಾಡಲಾಯಿತು.

ಈ ಯೋಜನೆಯ ಅವಧಿಯಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಮುಖ್ಯತೆ ನೀಡಿ ರೂ.೧೬.೮೬ ಕೋಟಿ ಖರ್ಚು ಮಾಡಲಾಯಿತು. ೪೩ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳನ್ನು ತೆರೆಯಲಾಯಿತು. ಬುಡಕಟ್ಟು ಜನರಿಗೆ ಪುನರ್ವಸತಿಯನ್ನು ಕಲ್ಪಿಸಲು ಲಕ್ಷ ಲಕ್ಷ ಖರ್ಚು ಮಾಡಿ ೨೨೧೭ ಮನೆಗಳನ್ನು ನಿರ್ಮಿಸಲಾಯತು. ರಾಜ್ಯ ಯೋಜನೆಯ ಅಡಿಯಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ಶಾಲೆಗಳು, ೩೯೮ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಹಾಗೂ ೩ ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲು ರೂ.೮೨೧.೫೧ ಲಕ್ಷ ಖರ್ಚು ಮಾಡಲು ಯೋಜನೆಗಳನ್ನು ಕೈಗೊಳ್ಳಲಾಗಿತ್ತು. ಸಾರಿಗೆ ಸಂವಹನ ಕ್ಷೇತ್ರದಲ್ಲಿ ಮೊದಲನೇ ವಾರ್ಷಿಕ ಯೋಜನೆಯ ಅವಧಿಯಲ್ಲಿ ಖರ್ಚು ಮಾಡಿದ ಅನುದಾನಕ್ಕಿಂತ ಎರಡರಷ್ಟು ಹೆಚ್ಚು ಖರ್ಚು ಮಾಡಲಾಯಿತು. ಬುಡಕಟ್ಟು ಜನರ ವಸತಿ ಪರಿಸ್ಥಿತಿ ಸಂಪೂರ್ಣ ಅತೃಪ್ತಿದಾಯಕವಾಗಿದ್ದರಿಂದ ರೂ.೬೦ ಲಕ್ಷ ಖರ್ಚು ಮಾಡಿ ೧೮ ಸಾವಿರ ಮನೆಗಳನ್ನು ನಿರ್ಮಿಸಲಾಯಿತು.

೩ನೇ ಪಂಚವಾರ್ಷಿಕ ಯೋಜನೆ (೧೯೬೧-೬೨ ರಿಂದ ೧೯೬೫-೧೯೬೬)

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತಂದಿದ್ದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಹಿಂದುಳಿದ ಪರಿಶಿಷ್ಟ ವರ್ಗಗಳ ಜನರ ಸಮಸ್ಯೆಗಳನ್ನು ಕಿಂಚಿತ್ತೂ ಬಗೆಹರಿಸದ ಕಾರಣ ಬುಡಕಟ್ಟು ಜನರ ಅತೃಪ್ತಿಗೆ ಕಾರಣವಾಯಿತು. ಇದರಿಂದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗದ ಕಲ್ಯಾಣ ಅಧ್ಯಯನ ಸಮಿತಿಗಳು, ಬುಡಕಟ್ಟು ಜನರ ಅಭಿವೃದ್ಧಿಗಾಗಿ ಇರುವ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಿ ಬುಡಕಟ್ಟು ಜನರನ್ನು ಅಭಿವೃದ್ಧಿ ಪಡಿಸಲು ಕೆಲವು ಜಾಗರೂಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆಗಳನ್ನು ನೀಡುವವು. ಬುಡಕಟ್ಟು ಕೃಷಿ ಕಾರ್ಮಿಕ ಹಾಘೂ ಕುಶಲಕರ್ಮಿಗಳಿಗೆ ಬೇಕಾಗಿರುವ ಸಾಲ ಹಾಗೂ ಇನ್ನಿತರೆ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ವಿವಿದೋದ್ದೇಶ ಸಹಕಾರ ಸಂಘಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿದ ಹಿನ್ನೆಲೆಯಲ್ಲಿ ಈ ಯೋಜನೆಯ ಅವಧಿಯಲ್ಲಿ ಭೂ ಅಭಿವೃದ್ಧಿ, ಸಂರಕ್ಷಣೆ, ಸಣ್ಣ ನೀರಾವರಿ ಇತ್ಯಾದಿಗಳಿಗೆ ಹೆಚ್ಚು ಒತ್ತು ಕೊಡಲಾಯಿತು. ಶೈಕ್ಷಣಿಕ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಿ ಪ್ರಾಥಮಿಕ ಜೊತೆಗೆ ಫ್ರಿಶಿಪ್, ವಿದ್ಯಾರ್ಥಿ ವೇತನ ಮಾಧ್ಯಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಸೌಲಭ್ಯ ಜೊತೆಗೆ ತಾಂತ್ರಿಕ ತರಬೇತಿ ವಿದ್ಯಾರ್ಥಿಗಳಿಗೆ ಫ್ರಿಸಿಪ್ ಹಾಗೂ ವಿದ್ಯಾರ್ಥಿ ವೇತನವನ್ನು ನೀಡಲಾದವು.

ಈ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಆದ್ಯತೆ ನೀಡಿದ್ದು, ಅದೇ ಶಿಕ್ಷಣ, ಆರೋಗ್ಯ, ವಸತಿ, ಸಾರಿಗೆ ಮತ್ತು ಸಂವಹನಕ್ಕೆ ಆದ್ಯತೆ ನೀಡಲಾಯಿತು. ೨ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣವನ್ನು ಲೆಕ್ಕಾಚಾರ ಮಾಡಿ ನೋಡಿದಾಗ ೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೨೧.೫೬ ರಷ್ಟು ಹೆಚ್ಚಾಗಿದ್ದು, ದಾಖಲೆಗಳಿಂದ ದೃಢಪಟ್ಟಿದೆ.

ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ. ೮.೫೭೭ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ.೫೦.೫೩ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು. ಬುಡಕಟ್ಟು ಅಭಿವೃದ್ಧಿ ಬ್ಲಾಕ್ ಕಡೆಗೆ ಹೆಚ್ಚಿನ ಗಮನ ನೀಡಿ, ೨ನೇ ಪಂಚಾವಾರ್ಷಿಕ ಯೋಜನೆಯಲ್ಲಿದ್ದ ೪೩ ಬ್ಲಾಕ್‌ಗಳನ್ನು ೪೫೮ ಬ್ಲಾಕ್‌ಗಳಿಗೆ ಹೆಚ್ಚಿಸಲಾಯಿತು. ೨ನೇ ಆದ್ಯತೆಯನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಲಾಗಿದು, ಇದರಿಂದ ಬುಡಕಟ್ಟು ಜನರ ಸಾಕ್ಷರತಾ ಪ್ರಮಾಣ ೯.೧೬ ಕ್ಕೆ ಏರಿತು.

ವಾರ್ಷಿಕ ಯೋಜನೆ (೧೯೬೬-೧೯೬೭)

ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೬೭೫೬ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ.೩೨.೩೨ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು.

೪ನೇ ಪಂಚವಾರ್ಷಿಕ ಯೋಜನೆ (೧೯೬೯-೧೯೭೪)

ಕಳೆದ ಮೂರು ಪಂಚವಾರ್ಷಿಕ ಮತ್ತು ಒಂದು ವಾರ್ಷಿಕ ಯೋಜನೆ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಜಾರಿಗೆ ಬಂದಿದ್ದ ಯೋಜನೆಗಳು ಕೇವಲ ತುಣಕಾಗಿದ್ದು, ಯಾವುದೇ

ಪರಿಪೂರ್ಣ ಯೋಜನೆಗಳಾಗಿರಲಿಲ್ಲ. ಬುಡಕಟ್ಟು ಜನರ ಮತ್ತು ಪ್ರದೇಶದ ಸಮಸ್ಯೆಗಳನ್ನು ಬಗೆಹರಿಸಲು ಯಾವುದೇ ಪ್ರಮಾಣಿಕ ಪ್ರಯತ್ನ ನಡೆಯದ ಕಾರಣ ಈ ಯೋಜನೆಯ ಅವಧಿಯಲ್ಲಿ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಸಾಧ್ಯವಾಯಿತು. ೧೯೬೧ ರಲ್ಲಿ ಯಾವುದೇ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಶೇ.೫ ರಷ್ಟು ಸಮಸ್ಯೆಗಳನ್ನು ಬಗೆಹರಿಸಲು ಪ್ರಮಾಣಿಕ ಪ್ರಯತ್ನ ನಡೆಯದ ಕಾರಣ ಈ ಯೋಜನೆಯ ಅವಧಿಯಲ್ಲಿ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಸಾಧ್ಯವಾಯಿತು. ೧೯೬೧ ರಲ್ಲಿ ಯಾವುದೇ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಶೇ.೫ ರಷ್ಟು ಬುಡಕಟ್ಟುಗಲಿದ್ದಲ್ಲಿ ಅಂತಹ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಅರ್ಹತೆ ಹೊಂದಿದ್ದವು. ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಲ್ಲಿ ಜಾರಿಗೆ ತಂದಿದ್ದ ಹಿಂದುಳಿದ ವರ್ಗದ ಕಲ್ಯಾಣ ಯೋಜನೆಗಳು ಮತ್ತು ತುಣುಕುಗಳು ಸಾಕಷ್ಟು ಪ್ರಮಾಣದಲ್ಲಿ ಫಲಕಾರಿಯಾಗಲಿಲ್ಲ. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮತ್ತು ಪೈಲೆಟ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಿತು. ಈ ಪೈಲೆಟ್ ಪ್ರಾಜೆಕ್ಟ್‌ಗಳನ್ನೇ ಆನಂತರದಲ್ಲಿ ಬುಡಕಟ್ಟು ಅಭಿವೃದ್ಧಿ ಏಜೆನ್ಸಿಗಳೆಂದು ಕರೆಯಲಾಯಿತು.

ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೧೫೫೦.೨ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ.೭೫ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು. ಆರ್ಥಿಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೃಷಿ ಸಹಕಾರ, ನೀರಾವರಿ (ಸಣ್ಣ) ಕೈಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಯಿತು. ಬುಡಕಟ್ಟು ಜನರಿಗೆ ಸುಧಾರಿತ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಯಿತು. ಗೃಹ ಕೈಗಾರಿಕೆ ಯೋಜನೆಯ ಅಡಿಯಲ್ಲಿ ಬುಡಕಟ್ಟು ಕುಶಲಕರ್ಮಿಗಳಿಗೆ ತಮ್ಮ ವೃತ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಧನಸಹಾಯವನ್ನು ನೀಡಲಾಯಿತು. ಇದರ ಜೊತೆಗೆ ಅವರು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆಯ ವ್ಯವಸ್ಥೆಯನ್ನು ಒದಗಿಸಲಾಯಿತು. ಸ್ಟೈಫೆಂಡ್ ಸಹಿತ ತರಬೇತಿ ಜೊತೆಗೆ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ರೀತಿ ತರಬೇತಿ ಪಡೆದ ಬುಡಕಟ್ಟು ಜನರಿಗೆ ಬಡ್ಡಿರಿತ ಸಾಲಸೌಲಭ್ಯ ಕಲ್ಪಿಸಲಾಯಿತು.

ಆರೋಗ್ಯ ಮತ್ತು ವಸತಿ ಕ್ಷೇತ್ರದಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಬುಡಕಟ್ಟು ಜನರಿಗೆ ವಸತಿಗಾಗಿ ಸಹಾಯಧನ ಹಾಗೂ ಅವರ ಗ್ರಾಮಗಳಿಗೆ ಅಥವಾ ಪ್ರದೇಶಗಳಿಗೆ ವಿದ್ಯುತೀಕರಣ, ಕುಡಿಯುವ ನೀರಿನ ಪೂರೈಕೆ, ಪೌಷ್ಠಿಕ ಆಹಾರ ಮತ್ತು ಕಾನೂನು ಸಲಹೆಗಳನ್ನು ಒದಗಿಸಲಾಯಿತು. ಈ ಯೋಜನೆಯ ಅವಧಿಯಲ್ಲಿ ಪ್ರಾರಂಭವಾದ ಆರು ಪೈಲೆಟ್ ಪ್ರಾಜೆಕ್ಟರ್‌ಗಳಿಗೆ ರೂ.೪೪೦ ಕೋಟಿಗಳನ್ನು ನೀಡಲಾಯಿತು. ಈ ಪೈಲೆಟ್ ಪ್ರಾಜೆಕ್ಟ್‌ಗಳು ಆರ್ಥಿಕ ಅಭಿವೃದ್ಧಿ , ರಸ್ತೆಗಳ ನಿರ್ಮಾಣ ಕಾರ್ಯಗಳನ್ನು ಒಳಗೊಂಡಿರುವ ಈ ಯೋಜನೆಯ ಅವಧಿಯಲ್ಲಿ ೬ ಪೈಲೆಟ್ ಪ್ರಾಜೆಕ್ಟ್‌ಗಳಿಗೆ ರೂ.೪೪೦ ಲಕ್ಷ

ಅನುದಾನಿತ ಸಹಾಯಧನವನ್ನು ನೀಡಲಾಯಿತು. ಇವು ೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೂ ಮುಂದುವರೆದವು.

೫ನೇ ಪಂಚವಾರ್ಷಿಕ ಯೋಜನೆ (೧೯೭೪-೧೯೭೯)

ಈ ಯೋಜನೆ ಬುಡಕಟ್ಟು ಜನರ ಅಭಿವೃದ್ಧಿ ದಿಸೆಯಲ್ಲಿ ಒಂದು ಮುಖ್ಯ ಮೈಲುಗಲ್ಲಾಗಿದ್ದು, ರಾಜ್ಯದ ಆದಾಯವನ್ನು ದ್ವಿಗುಣಗೊಳಿಸಿ, ಜೀವನ ಮಟ್ಟವನ್ನು ಸುಧಾರಿಸಿ ಪ್ರಾಂತೀಯ ಅಸಮತೋಲನವನ್ನು ಹೋಗಲಾಡಿಸುವುದು ಉದ್ದೇಶವಾಗಿತ್ತು. ಯೋಜನೆಯಲ್ಲಿ ಬಡತನ ನಿರ್ಮೂಲನೆ ಮತ್ತು ಸ್ವಾವಲಂಬನೆ ಸಹ ಅತಿಮುಖ್ಯ ಉದ್ದೇಶವಾಗಿತ್ತು. ಕಳೆದ ೪ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗೊಂಡ ಯೋಜನೆಗಳಿಂದ ಬುಡಕಟ್ಟು ಜನರ ಜೀವನ ಮಟ್ಟ ಪರಿಣಾಮಕಾರಿಯಾಗಿ ಸುಧಾರಿಸಿರಲಿಲ್ಲ. ಈ ಯೋಜನೆಯ ಅವಧಿಯಲ್ಲಿ ಕೇಂದ್ರ ಸರ್ಕಾರ ಬುಡಕಟ್ಟುಗಳ ಸಮಸ್ಯೆಗಳನ್ನು ಹೋಗಲಾಡಿಸಲು ಒಂದು ಹೊಸ ಯೋಜನೆಯ ಹುಟ್ಟಿಗೆ ದಾರಿ ಮಾಡಿಕೊಟ್ಟಿತ್ತು. ಅದನ್ನೇ 'ಉಪ-ಯೋಜನೆ' ಎನ್ನುವರು. ಈ ಯೋಜನೆಯು ಬುಡಕಟ್ಟು ಜನರ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದೆ. ಹಾಗೆಯೇ ಈ ಉಪ ಯೋಜನೆಯ ಪ್ರದೇಶ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದೆ. ಗಿರಿಜನ ಉಪಯೋಜನೆಯ ಪರಿಕಲ್ಪನೆ ಅಂದರೆ ಲಭ್ಯವಿರುವ ಎಲ್ಲಾ ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಒಂದೆಡೆ ಕಲೆ ಹಾಕಿ ಅದನ್ನು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳುವುದಾಗಿರುವುದು.

ಪರಿಶಿಷ್ಟ ಜಾತಿಯ ಜನರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಕೇವಲ ರಾಜ್ಯ ಸರ್ಕಾರಗಳು ಆಯಾ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಸಾಕಾಗದ ಕಾರಣ ಇದಕ್ಕೆ ಹೆಚ್ಚು ಒತ್ತು ಕೊಡಲು ಕೇಂದ್ರ ಸರ್ಕಾರ "ವಿಶೇಷ ಘಟಕ ಯೋಜನೆ" ಎಂಬ ಹೊಸ ಹೆಸರಿನ, ಹೊಸ ಯೋಜನೆಯನ್ನು ರೂಪಿಸಿ, ಪರಿಶಿಷ್ಟ ಜಾತಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ರೀತಿಯಲ್ಲಿಯೇ ಬುಡಕಟ್ಟು ಜನರ ಅಭಿವೃದ್ಧಿಗಾಗಿಯೂ ಸಹ ೧೯೭೪-೭೫ನೇ ಸಾಲಿನಲ್ಲಿ "ಗಿರಿಜನ ಉಪಯೋಜನೆ" ಎಂಬ ಹೊಸ ಯೋಜನೆಯನ್ನು ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಅವರ ಜೀವನ ಮಟ್ಟವನ್ನು ಸುಧಾರಿಸಲು, ಹಲವಾರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಂಡವು. ಯೋಜನೆಯ ಅವಧಿಯಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಯಲ್ಲಿ ಅನಿರೀಕ್ಷಿತ ಪ್ರಗತಿಯಾಗಿರುವುದು ಗಮನಾರ್ಹ.

ಸಾಕಷ್ಟು ಬುಡಕಟ್ಟು ಜನರ ಮುಖ್ಯ ವೃತ್ತಿ ವ್ಯವಸಾಯವಾಗಿದ್ದು, ಅದು ಅವರ ಆದಾಯದ ಮೂಲವಾಗಿರುವುದು. ಬುಡಕಟ್ಟು ಜನರ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ

ಅವರ ವ್ಯವಸಾಯದ ಅಭಿವೃದ್ಧಿಗಾಗಿ ಹೆಚ್ಚಿನ ಬಂಡವಾಳವನ್ನು ನೀಡಲಾಯಿತು. ಕಾರಣ ಬುಡಕಟ್ಟು ಪ್ರದೇಶದ ಕೃಷಿ ಕ್ಷೇತ್ರದಲ್ಲಿ ಬರುತ್ತಿದ್ದ ಆದಾಯ ಈ ಕೆಳಕಂಡ ಕಾರಣಗಳಿಂದ ಬಹಳ ಕಡಿಮೆಯಾಗಿತ್ತು.

೧. ಬೆಟ್ಟ ಗುಡ್ಡಗಳಿಂದ ಕುಡಿದ ಕಡಿಮೆ ಫಲವತ್ತತೆಯ ತುಂಡು ಭೂಮಿ

೨. ಪ್ರಾಚೀನ ವ್ಯವಸಾಯ ಪದ್ಧತಿ

೩. ಮಳೆ ಆಧಾರಿತ ವ್ಯವಸಾಯ ಹಾಗೂ ನೀರಾವರಿ ಸೌಕರ್ಯಗಳ ಕೊರತೆ.

ಈ ಕಾರಣದಿಂದ ೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಪ್ರದೇಶದಲ್ಲಿ ವ್ಯವಸಾಯ ಅಭಿವೃದ್ಧಿಗೋಸ್ಕರ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವ್ಯವಸಾಯದಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಲಾಯಿತು. ನೀರಾವರಿ ಸೌಕರ್ಯಗಳನ್ನು ಒದಗಿಸುವುದಕ್ಕೋಸ್ಕರ ಹೆಚ್ಚಿನ ಬಂಡವಾಳವನ್ನು ಹೂಡಲಾಯಿತು. ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಹಳೆಯ ಉಪಕರಣಗಳನ್ನು ಬದಲಾಯಿಸಿ, ಹೊಸ ವೈಜ್ಞಾನಿಕ ಉಪಕರಣಗಳ ಬಳಕೆಗೆ ಪ್ರೋತ್ಸಾಹಿಸಲಾಯಿತು. ವ್ಯವಸಾಯ ಕ್ಷೇತ್ರದಲ್ಲಿ ಬುಡಕಟ್ಟು ಮಹಿಳೆಯರು ಪ್ರಮುಖ ಪಾತ್ರ ವಹಿಸಿದ್ದರು.

೬ನೇ ಪಂಚವಾರ್ಷಿಕ ಯೋಜನೆ (೧೯೮೦-೧೯೮೫)

೬ನೇ ಪಂಚವಾರ್ಷಿಕ ಯೋಜನೆಯ ಹೊತ್ತಿಗೆ ಕೇವಲ ಶೇ.೪೦ ರಷ್ಟು ದೇಶದ ಬುಡಕಟ್ಟು ಜನರು ಮಾತ್ರ ಪ್ರಯೋಜನ ಪಡೆದಿದ್ದು, ಹಲವಾರು ವಿಶೇಷ ಉಪಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರಿಂದ ೫ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಶೇ.೫ ರಷ್ಟು ಬುಡಕಟ್ಟಿನವರು ಪ್ರಯೋಜನ ಪಡೆದಿರುತ್ತಾರೆ. ದೇಶದ ಉಳಿದ ಶೇ.೩೫ ರಷ್ಟು ಹರಿದು ಹಂಚಿ ಹೋಗಿರುವ ಬುಡಕಟ್ಟು ಸಮಸ್ಯೆಗಳಿಗೆ ಯಾವುದೇ ವಿಶೇಷ ಆಸಕ್ತಿಯನ್ನು ನೀಡಿರುವುದಿಲ್ಲ.

೬ನೇ ಪಂಚವಾರ್ಷಿಕ ಯೋಜನೆಯ ಕಾಲದಲಿ ಶೇಕಡ ೫೦ ಕ್ಕಿಂತ ಹೆಚ್ಚು ಬುಡಕಟ್ಟು ಜನರು ಬಡತನ ರೇಖೆಯನ್ನು ದಾಟಿ ಉತ್ತಮ ಜೀವನ ನಡೆಸುವ ವ್ಯವಸ್ಥೆಯನ್ನು ಕಲ್ಪಿಸುವ ಗುರಿಯನ್ನು ಹೊಂದಿತ್ತು. ಆ ಕಾರಣಕ್ಕಾಗಿ ದೇಶಾದ್ಯಂತ ಬುಡಕಟ್ಟು ಪ್ರದೇಶಗಳಲ್ಲಿ ಹೆಚ್ಚಿನ ಉಪಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸುಮಾರು ೧೮೦ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ (ಐ.ಟಿ.ಡಿ.ಪಿ) ಕೇಂದ್ರಗಳನ್ನು ಸ್ಥಾಪಿಸಲಾದವು.

ಈ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರ ಮೇಲೆ ಆಗುತ್ತಿದ್ದ ಎಲ್ಲಾ ರೀತಿಯ ಶೋಷಣೆಯನ್ನು ನಿಲ್ಲಿಸುವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಇದರ ಜೊತೆಯಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಸಣ್ಣ ನೀರಾವರಿ, ಸಹಕಾರ, ಮಾರುಕಟ್ಟೆ ಮತ್ತು ಇತರೆ ಸಾಮಾಜಿಕ ಸೇವೆಗಳಿಗೂ ಆದ್ಯತೆ ನೀಡಲಾಯಿತು.

೫ನೇ ಪಂಚವಾರ್ಷಿಕ ಯೋಜನೆಯಲ್ಲಿ ದೇಶದ ೧೬ ರಾಜ್ಯಗಳು ಮತ್ತು ೨ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಂಡಿದ್ದವು.

೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಿಕ್ಕಿಂ ರಾಜ್ಯವನ್ನು ಸೇರಿಸಿದ್ದಲ್ಲದೇ ಈ ಅವಧಿಯಲ್ಲಿ ೨೪೫ ಎಂ.ಎ.ಡಿ.ಎ ಪಾಕೆಟ್‌ಗಳು ಮತ್ತು ೭೨ ಆದಿವಾಸಿ ಪಂಗಡಗಳ ವಿಶೇಷ ಯೋಜನೆಗಳು ದೇಶಾದ್ಯಂತ ಕಾರ್ಯಗತವಾದವು.

೭ನೇ ಪಂಚವಾರ್ಷಿಕ ಯೋಜನೆ (೧೯೮೫-೧೯೯೦)

೧ ರಿಂದ ೭ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೧೭ ರಾಜ್ಯಗಳಲ್ಲಿ ೨ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು ಶೇ. ೭೫ ರಷ್ಟು ಬುಡಕಟ್ಟು ಜನರು ಗಿರಿಜನ ಉಪಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಉಳಿದ ಶೇ. ೨೫ ರಷ್ಟು ಬುಡಕಟ್ಟು ಜನರು ಈ ಗಿರಿಜನ ಉಪಯೋಜನೆಯಿಂದ ಹೊರಗೆ ಉಳಿದಿದ್ದು ಅವರ ಸ್ಥಿತಿಗತಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿವೆ. ಆ ಪ್ರಕಾರ ಉತ್ತರ ಪ್ರದೇಶದಲ್ಲಿರುವ ಬಹುಸಂಖ್ಯಾತ ಬುಡಕಟ್ಟು ಜನರು ಈ ಗಿರಿಜನ ಉಪಯೋಜನೆಯಿಂದ ಹೊರಗೆ ಉಳಿದಿರುತ್ತಾರ. (ಶೇ.೮೭.೯೪) ಸಿಕ್ಕಿಂ (ಶೇ.೮೬.೯೨) ಕೇರಳ (ಶೇ.೮೨.೪೯) ಪಶ್ಚಿಮ ಬಂಗಾಳ (ಶೇ.೬೧.೧೯) ಇನ್ನುಳಿದ ರಾಜ್ಯಗಳಲ್ಲಿ ಶೇ.೨೫ ಕ್ಕಿಂತ ಹೆಚ್ಚು ಬುಡಕಟ್ಟು ಜನರು ಗಿರಿಜನ ಉಪ ಯೋಜನೆಯಿಂದ ಪ್ರಯೋಜನ ಪಡೆಯದೆ ಹೊರಗೆ ಉಳಿದಿರುತ್ತಾರೆ.

೮ನೇ ಪಂಚವಾರ್ಷಿಕ ಯೋಜನೆ (೧೯೯೨-೧೯೯೭)

ಈ ಅವಧಿಗಾಗಿ ಗಿರಿಜನ ಉಪ ಯೋಜನೆ ಅಡಿಯಲ್ಲಿ ರೂ.೪೦೦ ಕೋಟಿಗಳನ್ನು ಖರ್ಚು ಮಾಡಲು ಪ್ರಸ್ತಾಪಿಸಲಾಯಿತು.

೯ನೇ ಪಂಚವಾರ್ಷಿಕ ಯೋಜನೆ (೧೯೯೭-೯೮ ರಿಂದ ೨೦೦೧-೦೨)

ಈ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಟ್ಟು ೩,೩೮೭.೪೧ ಕೋಟಿಗಳನ್ನು ಬುಡಕಟ್ಟು ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು.

೧೦ನೇ ಪಂಚವಾರ್ಷಿಕ ಯೋಜನೆ (೨೦೦೨-೦೩ ರಿಂದ ೨೦೦೬-೦೭)

ಈ ಯೋಜನಾವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಈ ಕೆಳಗಿನಂತೆ ಖರ್ಚು ಮಾಡಲಾಗಿದೆ.

ಹಣಕಾಸು ವರ್ಷ	ಖರ್ಚು ಮಾಡಿದ ಮೊತ್ತ ಕೋಟಿಗಳಲ್ಲಿ
೨೦೦೨-೦೩	೧೦೦೫.೧೦೩೪
೨೦೦೩-೦೪	೮೯೩.೯೦೪೫
೨೦೦೪-೦೫	೧೦೫೩.೦೬೪೦
೨೦೦೫-೦೬	೧೨೯೯.೦೭ ದಿನಾಂಕ: ೨೦-೦೩-೨೦೦೬ ರವರೆಗೆ

ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ವಹಿಸಲಾಗಿದೆ. ಶೇಕಡ ೫೦ ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಹೊಂದಿರುವ ಬುಡಕಟ್ಟು ಜನರ ಪ್ರದೇಶವನ್ನು ಗುರುತಿಸಿ, ಅವರ ಅಭಿವೃದ್ಧಿಗಾಗಿ ಗಿರಿಜನರ ಉಪ ಯೋಜನೆ ಎಲ್ಲೆಡೆ ವಿಸ್ತರಿಸಲಾಗಿದೆ. ಈ ಯೋಜನೆಯಿಂದ ದೇಶದ ೨/೩ ಭಾಗದ ಬುಡಕಟ್ಟು ಜನರು ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯವಾಗುವುದು. ಉಲಿದ ೧/೩ ಭಾಗದ ಬುಡಕಟ್ಟಿನವರು ಈ ಯೋಜನೆಯ ಹೊರಗೆ ಉಳಿದಿರುವುದು ದಾಖಲಾತಿಗಳಿಂದ ದೃಢಪಟ್ಟಿದೆ. ಭಾರತ ಸ್ವತಂತ್ರ ಹೊಂದಿ ಐದು ದಶಕಗಳು ಕಳೆದರೂ ಬುಡಕಟ್ಟುಗಳ ಅಭಿವೃದ್ಧಿಯ ಕಾರ್ಯ ಕುಂಟುತ್ತಾ ಸಾಗಿರುವುದನ್ನು ಮನಗಂಡು ಭಾರತ ಸರ್ಕಾರ ಬುಡಕಟ್ಟುಗಳ ಅಭಿವೃದ್ಧಿಗೆಂದೇ ಪ್ರತ್ಯೇಕ ಬುಡಕಟ್ಟು ವ್ಯವಹಾರಗಳ ಸಚಿವಾಲಯ (Ministry of Tribal Affairs) ಒಂದನ್ನು ೧೯೯೯ನೇ ಅಕ್ಟೋಬರ್ ತಿಂಗಳಲ್ಲಿ ಹೊಸದಾಗಿ ರಚಿಸಿತು. ಈ ಹಿಂದೆ ಈ ಖಾತೆಯನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ (Ministry of Social justice and Empowerment) ನೋಡಿಕೊಳ್ಳುತ್ತಿತ್ತು. ಈ ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಸಚಿವಾಲಯ ಮತ್ತು ನಿರ್ದೇಶನಾಲಯಗಳಿದ್ದು, ಇವುಗಳು ಇತ್ತೀಚಿನ ದಿನಗಳಲ್ಲಿ ಬುಡಕಟ್ಟುಗಳ ಸಮಸ್ಯೆಗಳನ್ನು ಬಗೆಹರಿಸಲು ಅವರ ಜೀವನಮಟ್ಟವನ್ನು ಸುಧಾರಿಸಲು ಹಲವಾರು ವಿನೂತನ ಯೋಜನೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ತರಹದ ಪ್ರತ್ಯೇಕ ಬುಡಕಟ್ಟುಗಳ ವ್ಯವಹಾರಗಳ ಖಾತೆಯನ್ನು ನೋಡಿಕೊಳ್ಳಲು ಬುಡಕಟ್ಟುಗಳಿರುವ ಪ್ರತಿ ರಾಜ್ಯಗಳಲ್ಲಿಯೂ ಸಚಿವಾಲಯ ರಚಿಸುವುದು ಅವಶ್ಯಕ. ೧೯೯೦ ರಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗವನ್ನು ಪರಿಶಿಷ್ಟರ ಅಭಿವೃದ್ಧಿಗಾಗಿ ನವದೆಹಲಿಯಲ್ಲಿ ಸ್ಥಾಪಿಸಲಾಗಿದೆ. ಆದರೂ, ಗಣನೀಯ ಪ್ರಮಾಣದಲ್ಲಿ ಬುಡಕಟ್ಟು ಅಭಿವೃದ್ಧಿ ಸಾಧಿಸದೇ ಇರುವುದು ದಾಖಲೆಗಳಿಂದ ದೃಢಪಟ್ಟಿರುವುದರಿಂಧ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹೆಚ್ಚು ಒತ್ತು ಕೊಡಲು ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗವನ್ನು ಬೇರ್ಪಡಿಸಿ ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿಯೇ ಪ್ರತ್ಯೇಕ ರಾಷ್ಟ್ರೀಯ ಆಯೋಗ ಸ್ಥಾಪನೆಯಾಗಿರುವುದು ಸ್ವಾಗತಾರ್ಹ."(ಬೋರಲಿಂಗಯ್ಯ ಹಿ.ಚಿ(ಸಂ), ಕೆ ಎಂ ಮೇತ್ರಿ, (ಲೇ) :೨೦೦೭:ಪು.ಸಂ:೮೧೩–೮೧೯:ಕರ್ನಾಟಕ ಗ್ಯಾಸೇಟಿಯರ್).

ಕೃಷಿ ಸುಧಾರಣೆ ಮತ್ತು ಹಸಿರು ಕ್ರಾಂತಿ ಆರ್ಥಿಕ ಯೋಜನೆಗಳ ಬಹುಮುಖ್ಯ ಸಾಧನೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ವ್ಯಾಪಕ ಸುಧಾರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಭೂ ಸುಧಾರಣೆ, ನೀರಾವರಿ ಸೌಲಭ್ಯಗಳ ಪೂರೈಕೆ, ಕೃಷಿಯ ಆಧುನಿಕರಣ, ಯಾಂತ್ರಿಕ ಬೇಸಾಯ, ವೈಜ್ಞಾನಿಕ ಕೃಷಿ ಉತ್ಪಾದನೆ ಮುಂತಾದವುಗಳು ಭಾರತದಲ್ಲಿ ಆರ್ಥಿಕ ಯೋಜನೆಗಳ ಅಮೂಲ್ಯ ಸಾಧನೆಗಳಾಗಿವೆ. ೧೯೬೬ ರಲ್ಲಿ ಜಾರಿಗೆ ಬಂದ ಹಸಿರು ಕ್ರಾಂತಿ ಮತ್ತು ವೈವಿದ್ಯಮಯ ಅಧಿಕ ಇಳುವರಿ ಕಾರ್ಯಕ್ರಮಗಳು ದೇಶದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದವು. ಯೋಜನೆಗಳ ಫಲವಾಗಿ ಕೃಷಿ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಸಂಭವಿಸಿತು. ಇದರ ಮುಖಾಂತರ ಕೃಷಿ ಕ್ಷೇತ್ರವನ್ನು

ಅವಲಂಬಿಸಿಕೊಂಡಿರುವ ವ್ಯವಸಾಯಗಾರರು ಮತ್ತು ಕೃಷಿ ಕಾರ್ಮಿಕರ ಬದುಕು ಸುಧಾರಣೆಯಡೆಗೆ ಸಾಗಿದೆ. ಆದರೆ ದುರದೃಷ್ಟವಶಾತ್ ಯೋಜನಾವಧಿಯಲ್ಲಿ ಸಾಧಿಸಲಾದ ಪ್ರಗತಿಯ ಪ್ರತಿಫಲ ಎಲ್ಲರ ನಡುವೆ ಸಮಾನವಾಗಿ ಹಂಚಿಕೆಯಾಗಿಲ್ಲ. ಕೇವಲ ಮೇಲ್ವರ್ಗದ ಜನರು ಪ್ರಗತಿ ಫಲವನ್ನು ಅನುಭವಿಸಿದ್ದರೆ ಕೆಳವರ್ಗದ ಜನರು ಮೂಕ ಪ್ರೇಕ್ಷಕರಾಗಿದ್ದಾರೆ. ಇದರಿಂದಾಗಿ ಭಾರತದಲ್ಲಿ ಸಾಮಾಜಿಕ ನ್ಯಾಯದ ಸ್ಥಾಪನೆಯಾಗಿಲ್ಲ ಎಂಬುದಾಗಿ ಅನೇಕ ಸಾಮಾಜಿಕ ವಿಜ್ಞಾನಿಗಳು ಹಾಗೂ ಆರ್ಥಿಕ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ನ್ಯಾಯ ಸ್ಥಾಪನೆಯಾದಲ್ಲಿ ಆದಾಯ ಅಸಮಾನತೆ ನಿವಾರಣೆಯಾಗುತ್ತದೆ. ಈ ನೆಲೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಅನೇಕ ಯೋಜನೆಗಳು ಕಾರ್ಯರೂಪಗೊಂಡಿದ್ದು ಅವುಗಳಲ್ಲಿ ಪ್ರಮುಖವಾಗಿ ಗಿರಿಜನ ಉಪಯೋಗದಡಿಯಿಂದಿಡಿದು ಅನೇಕ ಯೋಜನೆಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಗಿರಿಜನ ಉಪಯೋಜನೆ

ಗಿರಿಜನ ಉಪಯೋಜನೆಯ ಅನುಷ್ಠಾನಕ್ಕಾಗಿ ಭಾರತದ ಬುಡಕಟ್ಟುಗಳನ್ನು ೩ ಹಂತಗಳಲ್ಲಿ ಈ ಕೆಳಗಿನಂತೆ ವಿಂಗಡಿಸಲಾಯಿತು.

೧ ಅಧಿಕ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು.

೨ ಮಧ್ಯಮ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು. ಆದರೆ, ಹಲವು ಜಿಲ್ಲೆ ಅಥವಾ ತಾಲೂಕುಗಳಲ್ಲಿ ಅಧಿಕ ಜನರಿರಬಹುದು.

೩ ವಿರಳ ಅಥವಾ ಚದುರಿದ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು.

೪ ಅಧಿಕ ಬುಡಕಟ್ಟು ಜನಸಂಖ್ಯೆಯುಳ್ಳ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ರಾಜ್ಯಗಳಲ್ಲಿ ಮತ್ತು ಲಕ್ಷದ್ವೀಪ, ದಾದ್ರಾ ಮತ್ತು ನಗರ ಹವೇಲಿ ಕೇಂದ್ರಾಡಳಿತ ಪ್ರದೇಶಗಳಲ್ಲಿ ಗಿರಿಜನ ಉಪಯೋಜನೆಯ ಅಗತ್ಯವನ್ನು ತಳ್ಳಿ ಹಾಕಲಾಯಿತು. ಕಾರಣ ಅಲ್ಲಿ ಆಯಾ ರಾಜ್ಯಗಳ ಮುಖ್ಯ ಯೋಜನೆಗಳೆಲ್ಲವೂ ಬುಡಕಟ್ಟು ಅಭಿವೃದ್ಧಿ ಪರವಾಗಿಯೇ ರಚನೆಗೊಂಡು ಅನುಷ್ಠಾನಗೊಳ್ಳುವವು. ಮಧ್ಯಮ ಹಾಗೂ ವಿರಳ ಬುಡಕಟ್ಟು ಜನಸಂಖ್ಯೆಯುಳ್ಳ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಗಿರಿಜನ ಯೋಜನೆ ಜಾರಿಗೊಳಿಸಲಾಯಿತು. ೭೫ ಆದಿಮ ಬುಡಕಟ್ಟುಗಳಿಗೆ ಪ್ರತ್ಯೇಕ ವಿಶೇಷ ಯೋಜನೆಗಳನ್ನು ಅವರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿವೆ.

೫ ಕರ್ನಾಟಕ ಸರ್ಕಾರವು ಬುಡಕಟ್ಟುಗಳ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯನ್ನು ೧೯೭೬-೭೭ ರಿಂದ ಪ್ರಾರಂಭಿಸಿತು. ರಾಜ್ಯದಲ್ಲಿ ಬುಡಕಟ್ಟು ಜನರು ಹೆಚ್ಚಿಗೆ ವಾಸಿಸುತ್ತಿದ್ದ ಪ್ರದೇಶಗಳಾದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಡಗು ಜಿಲ್ಲೆಯ

ಪೊನ್ನಂಪೇಟೆ, ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮತ್ತು ಹಿಂದೆ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಉಡುಪಿಗಳಲ್ಲಿ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ (ಖಖಿಆಕ) ಕೇಂದ್ರಗಳು ಆರಂಭವಾದವು. ಆದರೆ ಈ ಜಿಲ್ಲೆಗಳಲ್ಲಿ ರಾಜ್ಯದ ಒಟ್ಟು ಗಿರಿಜನರ ಸಂಖ್ಯೆಯ ಶೇ.೧೪ ರಷ್ಟು ಬುಡಕಟ್ಟು ಜನರು ಮಾತ್ರ ಇದ್ದು ಉಳಿದ ಶೇ.೮೬ ರಷ್ಟು ಬುಡಕಟ್ಟು ಜನರು ಈ ಜಿಲ್ಲೆಗಳ ಹೊರಗೆ ಇದ್ದುದರಿಂದ ಈ ಯೋಜನೆಯ ಉಪಯೋಗವನ್ನು ಎಲ್ಲಾ ಬುಡಕಟ್ಟು ಜನರಿಗೆ ದೊರೆಯುವಂತೆ ಮಾಡಲು ಇದನ್ನು ೧೯೯೨ ರಿಂದ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಯಿತು.

ಗಿರಿಜನ ಉಪಯೋಜನೆಯ ಧ್ಯೇಯೋದ್ದೇಶಗಳು

೧ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಪ್ರದೇಶಗಳು ಹಾಗೂ ಇತರೆ ಪ್ರದೇಶಗಳಲ್ಲಿರುವ ಪರಿಶಿಷ್ಟ ವರ್ಗದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಒದಗಿಸುವುದು.

೨ ಪರಿಶಿಷ್ಟ ವರ್ಗದವರ ಕಲೆ ಮತ್ತು ಸಂಸ್ಕೃತಿಗಳನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ, ನಿಯಮಗಳನ್ನು ಜಾರಿಗೊಳಿಸುವುದು.

೩ ಪರಿಶಿಷ್ಟ ವರ್ಗದ ಕಾಲೋನಿ, ಹಾಡಿಗಳಿಗೆ ಕನಿಷ್ಠ ಮೂಲಭೂತ ಸೌಲಭ್ಯ ಒದಗಿಸುವುದು.

೪ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು ಮತ್ತು ಆ ದಿಸೆಯಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸುವುದು.

೫ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ, ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.

೬ ಬುಡಕಟ್ಟು ಜನರ ಹಿತಾಸಕ್ತಿಗಳನ್ನು ರಕ್ಷಿಸಲು ಕಾನೂನು ಕಾಯ್ದೆಯ ಬೆಂಬಲ ಒದಗಿಸುವುದು.

೭ ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಅಲ್ಲದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಇರುವ ಅಂತರವನ್ನು ಕಡಿಮೆ ಮಾಡುವುದು.

ಗಿರಿಜನ ಉಪಯೋಜನೆಯ ವಿವರ ಕೆಳಗಿನಂತಿದೆ.

ಕೃಷಿ

ಕೃಷಿ ಇಲಾಖೆಯ ವತಿಯಿಂದ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

೧. ಕೃಷಿ ಪರಿಕರಗಳು (ಶೇ.೧೦೦ ರ ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.೨,೮೦೦)

೨. ಮಾನ್ಯ ಸಂಗ್ರಹಣಾ ಕಣಜಗಳು (ಶೇ.೭೫ರ ಸಹಾಯಧನ, ಗರಿಷ್ಠ ಮಿತಿ ರೂ.೧೦೦೦)

೩. ಆಧುನಿಕ ಕೃಷಿ ಉಪಕರಣಗಳು (ಶೇ.೭೫ರ ಸಹಾಯಧನ, ಗರಿಷ್ಠ ಮಿತಿ ರೂ.೫,೦೦೦)

೪. ಡಿಸೇಲ್ ಅಥವಾ ಸಿಮೆ ಎಣ್ಣೆಯ ಪಂಪ್‌ಸೆಟ್‌ಗಳು (ಶೇ.೭೫ರ ಸಹಾಯಧನ, ಗರಿಷ್ಠ ಮಿತಿ ರೂ.೧೦,೦೦೦)

೫. ಫ್ಲವರ್ ಟಿಲ್ಲರ್‌ಗಳು (ಶೇ.೭೫ರ ಸಹಾಯಧನ, ಗರಿಷ್ಠ ಮಿತಿ ರೂ.೫೦,೦೦೦)

೬. ಜಲಂತರ್ಗ ಪಂಪ್‌ಸೆಟ್‌ಗಳು (ಶೇ.೭೫ರ ಸಹಾಯಧನ, ಗರಿಷ್ಠ ಮಿತಿ ರೂ.೨೫೦೦೦) ಅಲ್ಲದೆ ಎತ್ತಿನ ಗಾಡಿ ಮತ್ತು ಹನಿ ನೀರಾವರಿ ಘಟಕಗಳಿಗೂ ಧನಸಹಾಯ ಒದಗಿಸಲಾಗುತ್ತಿದೆ. ಭೂ ಸಾರ ಮತ್ತು ಜಲ ಸಂರಕ್ಷಣೆಗಾಗಿ ಬುಡಕಟ್ಟು ಸಮುದಾಯಗಳಲ್ಲಿ ನೀರು ಸಂಗ್ರಹಣೆ ಮಾಡಲು ನೀರು ತಡೆಯ ವಿನ್ಯಾಸಗಳನ್ನು ರಚಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವಂತೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಪಶು ಸಂಗೋಪನೆ

ಹೈನುಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಬುಡಕಟ್ಟು ಫಲಾನುಭವಿಗಳಿಗೆ ಪಶು ಸಂಗೋಪನಾ ಇಲಾಖಾ ವತಿಯಿಂದ, ಹಾಲುಣಿಸುವ ಹಸು ಅಥವಾ ಎಮ್ಮೆ ಘಟಕ, ಕುರಿ ಘಟಕ, ಹಂದಿ ಘಟಕಗಳನ್ನು ಶೇ.೭೫ ರ ಸಹಾಯಧನ ಮತ್ತು ಶೇ.೨೫ ರ ಸಾಲದ ನೆರವಿನಿಂದ ವಿತರಿಸಲಾಗುತ್ತಿದೆ. ಈ ಘಟಕದ ವೆಚ್ಚಗಳು ಕಾಲಕಾಲಕ್ಕೆ ಬದಲಾಗುತ್ತಿದ್ದು ನಬಾರ್ಡ್ ದರದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ ಇರುವ ಬುಡಕಟ್ಟು ನಿರುದ್ಯೋಗಿ ಯುವಕ-ಯುವತಿಯರಿಗೆ ಗ್ರಾಮೀಣ ಮತ್ತು ಕೈಗಾರಿಕೆ ಇಲಾಖೆ ವತಿಯಿಂದ ಜೇನು ಕೃಷಿ, ಬಡಗಿತನ, ಬಿದಿರು, ಬೆತ್ತದ ವೃತ್ತಿಗಳಲ್ಲಿ ಶಿಷ್ಯವೇತನದೊಂದಿಗೆ ತರಬೇತಿ ನೀಡಲಾಗುತ್ತಿದೆ. ತರಬೇತಿಯ ನಂತರ ರೂ.೨೦೦೦.೦೦ ಬೆಲೆ ಬಾಳುವ ವಿದ್ಯುತ್ ರಿಪೇರಿ ಮಾಡುವ ಸಾಧನ ಸಲಕರಣೆಗಳು, ಕಲ್ಲು ಒಡೆಯುವ ಉಪಕರಣಗಳು, ಸೈಕಲ್ ರಿಪೇರಿ, ಹೊಲಿಗೆ ಯಂತ್ರ, ಗಾರೆ ಕೆಲಸದ ಉಪಕರಣಗಳು, ಕಮ್ಮಾರಿಕೆ ಇನ್ನಿತರೆ ಉಪಕರಣಗಳನ್ನು ಉಚಿತವಾಗಿ ನೀಡಿ ಸ್ವತಂತ್ರವಾಗಿ ವ್ಯಕ್ತಿ ಕೈಗೊಳ್ಳಲು ನೆರವು ನೀಡಲಾಗುತ್ತಿದೆ. ಗಿರಿಜನರಿಗೆ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಲಿವಿಂಗ್ ವರ್ಕ್ ಶೆಡ್‌ಗಳನ್ನು ನಿರ್ಮಿಸಲು ಇಲಾಖಾ ವತಿಯಿಂದ ರೂ.೨೫,೦೦೦.೦೦ ಗಳ ಸಹಾಯಧನ ನೀಡಲಾಗುತ್ತಿದೆ.

ರೇಷ್ಮೆ ಕೃಷಿ

ರೇಷ್ಮೆ ಕೃಷಿಯು ಲಾಭದಾಯಕ ಆರ್ಥಿಕ ಚಟುವಟಿಕೆಯಾಗಿರುವುದರಿಂದ ಈ ವೃತ್ತಿಯನ್ನು ಅವಲಂಬಿಸಿರುವ ಗಿರಿಜನ ಫಲಾನುಭವಿಗಳಿಗೆ ವಿವಿಧ ಸೌಲತ್ತುಗಳನ್ನು ನೀಡಲಾಗುತ್ತಿದೆ. ಹುಳು

ಹಾಕಾಣಿಕೆಯ ಮನೆ ನಿರ್ಮಾಣಕ್ಕೆ ಶೇಕಡ ೬೦ ರ ಸಹಾಯಧನ ಗರಿಷ್ಠ ರೂ.೨೫,೦೦೦.೦೦ ಗಳಿಗೆ ಒಳಪೆಟ್ಟು ನೀಡಲಾಗುವುದು. ಹಿಪ್ಪುನೇರಳೆ ಬೇಸಾಯಕ್ಕೆ ೨೦೦೦.೦೦ ಗಳವರೆಗೂ ಪ್ರೋತ್ಸಾಹಧನ ಹುಳು ಸಾಕಾಣಿಕೆ ಉಪಕರಣಗಳ ಸರಬರಾಜು ಮತ್ತು ಐಪಿ ಸೆಟ್‌ಗಳ ಸರಬರಾಜು ಇತ್ಯಾದಿಗಳಿಗೆ ಸಹಾಯಧನ ನೀಡಲಾಗುತ್ತದೆ.

ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ

ಈ ನಿಗಮದ ವತಿಯಿಂದ ಬುಡಕಟ್ಟು ವರ್ಗದ ಕಾಲೋನಿಗಳಿಗೆ ವಿದ್ಯುದೀಕರಣ, ಬುಡಕಟ್ಟು ಪಂಗಡದವರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು. ಕುಟೀರ ಜ್ಯೋತಿ ಯೋಜನೆ ಅಡಿ ಬುಡಕಟ್ಟು ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಇಷ್ಟೇ ಅಲ್ಲದೇ ಈ ಕೆಳಗಿನಂತೆ ಸೂಚಿಸಿರುವ ಯೋಜನೆಗಳನ್ನು ಸಹ ವಿವರಿಸಲಾಗಿದೆ.

ಕೃಷಿ ಇಲಾಖೆಯ ಪ್ರಮುಖ ಯೋಜನೆಗಳು

- ಕೃಷಿ ಭಾಗ್ಯ ಯೋಜನೆ
- ಮಣ್ಣು ಆರೋಗ್ಯ ಅಭಿಯಾನ
- ರಾಷ್ಟ್ರೀಯ ಕೃಷಿ ವಿಮಾ ಯೋಜನೆ
- ಮಣ್ಣಿನ ಸತ್ವ ಹೆಚ್ಚಿಸುವಿಕೆ ಕಾರ್ಯಕ್ರಮ
- ರಿಯಾಯಿತಿ ಧರದಲ್ಲಿ ಬಿತ್ತನೆ ಬೀಜಗಳ ಪೂರೈಕೆ
- ಭೂಚೇತನ ಮತ್ತು ಭೂ ಅಭಿವೃದ್ಧಿ ಯೋಜನೆ
- ಸಾವಯವ ಗೊಬ್ಬರಗಳ ಯೋಜನೆ
- ರಾಗಿ ಮತ್ತು ಜೋಳದ ಧಾನ್ಯಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ವಿಶೇಷ ಪ್ರೋತ್ಸಾಹ ಧನ ಯೋಜನೆ
- ಸಸ್ಯ ಸಂರಕ್ಷಣಾ ಕಾರ್ಯಕ್ರಮಗಳು
- ಸಾವಯವ ಭಾಗ್ಯ ಯೋಜನೆ
- ಪರಂಪರಾಗತ ಕೃಷಿ ವಿಕಾಸ ಯೋಜನೆ
- ಬೆಳೆ ಸಾಲಕ್ಕೆ ಸಹಾಯಧನ
- ಆತ್ಮಹತ್ಯೆಗೊಳಗಾದ ರೈತ ಕುಟುಂಬಗಲಿಗೆ ಪರಿಹಾರ ಧನ
- ಕೃಷಿ ಯಂತ್ರೋಪಕರಣಗಳ ಯೋಜನೆ

- ಲಘು ನೀರಾವರಿ ಯೋಜನೆ
- ಕೃಷಿ ಯಂತ್ರಧಾರೆ
- ಕೃಷಿ ಪಂಡಿತ ಪ್ರಶಸ್ತಿ ಮತ್ತು ಕೃಷಿ ಪ್ರಶಸ್ತಿ
- ರಾಷ್ಟ್ರಿಯ ಕೃಷಿ ವಿಕಾಸ ಯೋಜನೆ
- ಕೃಷಿ ಅಭಿಯಾನ
- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ
- ರಾಷ್ಟ್ರಿಯ ಆಹಾರ ಭದ್ರತಾ ಅಭಿಯಾನ
- ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ಂಖಿಒಂ)
- ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ ಮತ್ತು ಡಿಜಿಟಲ್ ಕೃಷಿ.

ಕೃಷಿ ಭಾಗ್ಯ ಯೋಜನೆ

ಅಕಾಲದಲ್ಲಿ ಬಿದ್ದು ಹರಿದು ಹೋಗುವ ಮಳೆ ನೀರನ್ನು ಸಂಗ್ರಹಿಸಿ, ತೇವಾಂಶದ ಕೊರತೆಯಿಂದ ಬಳಲುವ ಬೆಳೆಗೆ ಅಂತಹ ನೀರನ್ನು ಉಪಯೋಗಿಸಿ ತೀವ್ರ ಬೆಳೆ ಹಾನಿಯನ್ನು ನಿವಾರಿಸುವುದು ಈ ಯೋಜನೆಯ ಉದ್ದೇಶ. ಮಳೆ ನೀರಿನ ಸಂರಕ್ಷಣೆ, ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ, ಲಾಭದಾಯಕ ಬೆಳೆ ಪದ್ಧತಿಗಳ ಅಳವಡಿಕೆ, ಉತ್ತಮ ಆದಾಯ ತರುವ ತೋಟಗಾರಿಕೆ ಬೆಳೆಗಳು, ಪಶು ಸಂಗೋಪನಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಕೃಷಿಯಲ್ಲಿ ಸುಸ್ಥಿರ ಅಭಿವೃದ್ಧಿಯ ಆಶಯ ಹೊಂದಲಾಗಿದೆ.

ರೈತರಿಗೆ ದೊರೆಯುವ ಸೌಲಭ್ಯಗಳು

ಈ ಯೋಜನೆಯಡಿಯಲ್ಲಿ ಮಳೆ ನೀರಿನ ಸಮರ್ಥ ಬಳಕೆ ಮತ್ತು ಸಂರಕ್ಷಿತ ಕೃಷಿಗೆ ಹೆಚ್ಚು ಆದ್ಯತೆ ನೀಡಿದ್ದು ಸದರಿ ಘಟಕದಡಿಯಲ್ಲಿ ಜಮೀನಿನಲ್ಲಿ ನೀರಿನ ಕೊಯ್ಲು, ನೀರಿನ ಸಂಗ್ರಹಣೆ, ನೀರು ಎತ್ತುವಿಕೆ, ಲಘು ನೀರಾವರಿ ಮತ್ತು ಸುಧಾರಿತ ಬೆಳೆ ಪದ್ಧತಿ ಘಟಕಗಳು ಈ ನೀತಿಯ ಪ್ರಮುಖ ಅಂಶಗಳಾಗಿರುತ್ತವೆ.

ಮಣ್ಣು ಆರೋಗ್ಯ ಅಭಿಯಾನ

- ಮಣ್ಣು ಆರೋಗ್ಯ ನಿರ್ವಹಣೆ ಉತ್ತೇಜಿಸಲು, ಪ್ರತಿ ೩ ವರ್ಷಗಳಿಗೊಮ್ಮೆ ಎಲ್ಲಾ ರೈತರಿಗೂ ಮಣ್ಣು ಆರೋಗ್ಯ ಚೀಟಿ ವಿತರಣೆ ಮಾಡುವುದು.
- ಸಸ್ಯ ಪೋಷಕಾಂಶ ಸಮತೋಲನ ಮತ್ತು ವಿವೇಚನಾಯುಕ್ತ ಬಳಕೆ ಬಗ್ಗೆ ಪ್ರಚಾರ.

- ಮಣ್ಣು ಆರೋಗ್ಯ ಚೀಟಿಗಳಲ್ಲಿನ ಶಿಫಾರಸ್ಸುಗಳನ್ವಯ ಮಣ್ಣಿನಲ್ಲಿ ಪೋಷಕಾಂಶಗಳ ಕೊರತೆಯನ್ನು ನೀಗಿಸಲು ರೈತರಿಗೆ ತಮ್ಮ ಬೆಳೆ ಪದ್ಧತಿಗೆ ಅವಶ್ಯವಿರುವ ಪರಿಕರಗಳು, ಸಮತೋಲನ ಹಾಗೂ ಸಮಗ್ರ ಪೋಷಕಾಂಶ ನಿರ್ವಹಣಾ ಪದ್ಧತಿಗಳನ್ನು ಜನಪ್ರಿಯಗೊಳಿಸಲು ಅವಶ್ಯವಿರುವ ಆರ್ಥಿಕ ಸಹಾಯವನ್ನು ಶೇ.೫೦ ರ ರಿಯಾಯಿತಿ ದರದಲ್ಲಿ ಪ್ರತಿ ಹೆಕ್ಟೇರ್‌ಗೆ ರೂ.೨೫೦೦ ಮೀರದಂತೆ ಒದಗಿಸುವುದು.
- ಮಣ್ಣು ಆರೋಗ್ಯ ಚೀಟಿಯ ಬಗ್ಗೆ ತಾಂತ್ರಿಕ ಮತ್ತು ಸಂಬಂಧಿತ ಸಿಬ್ಬಂದಿಗೆ ಕೃಷಿ ವಿಶ್ವವಿದ್ಯಾಲಯ/ ICAR ಸಂಸ್ಥೆಗಳ ಮೂಲಕ ರೈತರಿಗೆ ಅರಿವು ಮೂಡಿಸುವುದು, ಮಣ್ಣು ಪರೀಕ್ಷೆಯ ಮಹತ್ವ ಮತ್ತು ಮಣ್ಣು ಪರೀಕ್ಷೆ ಆಧಾರಿತ ಮಣ್ಣು ಚೀಟಿಯ ಉಪಯುಕ್ತತೆಯ ಬಗ್ಗೆ ರೈತರಿಗೆ ಅರಿವು ಮೂಡಿಸಲು ಮತ್ತು ಪೋಷಕಾಂಶ ನಿರ್ವಹಣಾ ಪದ್ಧತಿಯನ್ನು ಪ್ರೋತ್ಸಾಹಿಸಲು ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದ ಪ್ರಗತಿಪರ ರೈತರಿಗೆ ೨ ದಿನಗಳ ತರಬೇತಿಗಳನ್ನು ಆಯೋಜಿಸುವುದು.
- ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದಡಿ ಮಣ್ಣು ಆರೋಗ್ಯ ಚೀಟಿಗಳ ಉಪಯುಕ್ತತರೆಯನ್ನು ರೈತರಿಗೆ ಮನವರಿಕೆ ಮಾಡಲು ಪ್ರತಿ ೧೦,೦೦೦ ಮಣ್ಣು ಮಾದರಿಗಳಿಗೆ ಒಂದು ೧೦.೦೦ ಗ್ರಿಡ್‌ನಲ್ಲಿ ಪ್ರಾತ್ಯಕ್ಷಿಕೆಗಳನ್ನು ಇಲಾಖೆ ವತಿಯಿಂದ ಕೈಗೊಳ್ಳುವುದು.

ಬೆಳೆ ವಿಮಾ ಯೋಜನೆ

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆ

ಅತಿವೃಷ್ಟಿ, ಅನಾವೃಷ್ಟಿ, ಅಕಾಲಿಕ ಮಳೆ, ಮುಂತಾದ ಪ್ರಕೃತಿ ವಿಕೋಪಗಳು ಸೇರಿದಂತೆ ಹಲವಾರು ಕಾರಣಗಳಿಂದ ಬೆಳೆ ನಷ್ಟ ಉಂಟಾದಾಗ ರೈತನ ನೆರವಿಗೆ ಬರಲು ಕರ್ನಾಟಕ ರೈತ ಸುರಕಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು ೨೦೧೭-೧೮ನೇ ಸಾಲಿನಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಸ್ಥಳ ನಿರ್ಧಿಷ್ಟ ಪ್ರಕೃತಿ ವಿಕೋಪಗಳಾದ ಪ್ರವಾಹ, ಆಲೀಕಲ್ಲು ಮಳೆ, ಭೂ ಕುಸಿತ, ಇವುಗಳಿಂದ ಬೆಳೆ ನಷ್ಟವಾದರೆ ವೈಯಕ್ತಿಕವಾಗಿ ಬೆಳೆ ನಷ್ಟ ನಿರ್ಧರಣೆ ಮಾಡುವುದು ಹಾಗೂ ಇತರೆ ಹವಾಮಾನ ವೈಪರೀತ್ಯಗಳಾದ ಅತಿವೃಷ್ಟಿ, ಅನಾವೃಷ್ಟಿ, ಕೀಟರೋಗ ಬಾಧೆ ಮುಂತಾದವುಗಳಿಂದ ಬೆಳೆ ನಷ್ಟ ಸಂಭವಿಸಿ, ಗ್ರಾಮ ಪಂಚಾಯತಿ / ಹೋಬಳಿ ಮಟ್ಟದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹಾಗೂ ಗ್ರಾಮ ಪಂಚಾಯತಿ/ ಹೋಬಳಿ ಮಟ್ಟದಲ್ಲಿ ಬ್ಎಳೆ ವಿಮೆ ಮಾಡಿಸಿದ ಎಲ್ಲಾ ರೈತರಿಗೂ ಬೆಳೆ ವಿಮಾ ನಷ್ಟ ಪರಿಹಾರ ನೀಡುವ ಮೂಲಕ ಭದ್ರತೆ ಒದಗಿಸುವುದು ಈ ವಿಮೆ ಯೋಜನೆಯ ಉದ್ದೇಶವಾಗಿದೆ.

ರೈತರಿಗೆ ದೊರೆಯುವ ಸೌಲಭ್ಯಗಳು

ಈ ಯೋಜನೆಯು ಬೆಳೆ ಸಾಲ ಪಡೆದ ರೈತರಿಗೆ ಕಡ್ಡಾಯವಾಗಿರುತ್ತದೆ. ಬೆಳೆ ಸಾಲ ಪಡೆಯದಂತಹ ರೈತರಿಗೆ ಐಚ್ಛಿಕವಾಗಿರುತ್ತದೆ. ೨೦೧೭ ರ ಮುಂಗಾರು ಹಂಗಾಮಿನಲ್ಲಿ ೨೭ ವಿವಿಧ ಆಹಾರ ಮತ್ತು

ಎಣ್ಣೆ ಕಾಳು ಬೆಳೆಗಳು ಹಾಗೂ ೧೪ ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಅಧಿಸೂಚಿಸಲಾಗುತ್ತಿದೆ.

ರೈತರು ಕಟ್ಟುವ ವಿಮಾ ಕಂತಿನ ದರಗಳು ಈ ಕೆಳಗಿನಂತಿವೆ

ಹಂಗಾಮು	ಆಹಾರ ಮತ್ತು ಎಣ್ಣೆ ಕಾಳು ಬೆಳೆಗಳು	ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳು
ಮುಂಗಾರು	ವಿಮಾ ಮೊತ್ತದ ಶೇ.೨.೦೦	ವಿಮಾ ಮೊತ್ತದ ಶೇ.೫.೦೦
ಹಿಂಗಾರು & ಬೇಸಿಗೆ	ವಿಮಾ ಮೊತ್ತದ ಶೇ.೧.೫೦	ವಿಮಾ ಮೊತ್ತದ ಶೇ.೫.೦೦

ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ

ಹವಾಮಾನ ವೈಪರೀತ್ಯಗಳಾದ ಅತಿವೃಷ್ಟಿ, ಅನಾವೃಷ್ಟಿ, ಆರ್ದ್ರತೆ, ಗಾಳಿಯ ವೇಗ ಹಾಗೂ ತಾಪಮಾನಗಳಿಂದ ಬೆಳೆ ನಷ್ಟ ಸಂಭವಿಸಿದರೆ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ನೀಡುವ ಮೂಲಕ ಭದ್ರತೆ ಒದಗಿಸುವುದು. ೨೦೧೬ರ ಮುಂಗಾರು ಹಂಗಾಮಿನಲ್ಲಿ ೧೭ ತೋಟಗಾರಿಕೆ ಬೆಳೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಅಧಿಸೂಚಿಸಲಾಗುವುದು. ಈ ಯೋಜನೆಯಡಿ ರೈತರು ವಿಮಾ ಮೊತ್ತದ ಶೇ.೫.೦೦ ರಷ್ಟು ವಿಮಾ ಕಂತನ್ನು ಕಟ್ಟಬೇಕು. ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬೆಳೆ ವಿಮಾ ಯೋಜನೆಯಡಿ ಭಾಗವಹಿಸಿ ಮೇಲೆ ತಿಳಿಸಿದ ಕಾರಣಗಳಿಂದ ಬೆಳೆ ನಷ್ಟವಾದರೆ ಭದ್ರತೆ ಪಡೆಯುವುದು.

ಕೃಷಿ ಯಂತ್ರಧಾರೆ – ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ

ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಸಾಧ್ಯವಾಗದ ರೈತರಿಗೆ ಬೇಕಾಗುವ ಎಲ್ಲಾ ಉಪಕರಣಗಳು ಮತ್ತು ವಿನೂತನ ಉಪಕರಣಗಳನ್ನು ಸಕಾಲದಲ್ಲಿ ಮತ್ತು ಕಡಿಮೆ ಬಾಡಿಗೆ ದರದಲ್ಲಿ ಕೃಷಿಗೆ ಬೇಕಾಗುವ ಎಲ್ಲಾ ಉಪಕರಣಗಳನ್ನು ಒದಗಿಸಲು ಹೋಬಳಿಗಳಲ್ಲಿ ಚಾರಿಟಬಲ್ ಟ್ರಸ್ಟ್/ ಸರ್ಕಾರೇತರ ಸಂಸ್ಥೆಗಳ, ಕೃಷಿ ಯಂತ್ರೋಪಕರಣ ತಯಾರಕ ಸಂಸ್ಥೆಗಳ ಮೂಲಕ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಡಿಜಿಟಲ್ ಕೃಷಿ ಯೋಜನೆ

ಇಂಡಿಯನ್ ಇನ್ಸ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು (II M-B) ಇವರ ಮಾರ್ಗದರ್ಶನದಲ್ಲಿ ವಿನೂತನ ಮಾದರಿಯ ವಿಸ್ತರಣಾ ವ್ಯವಸ್ಥೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (PPP) ಅಭಿವೃದ್ಧಿಪಡಿಸಿ, ಕೃಷಿ ವಿಶ್ವವಿದ್ಯಾಲಯಗಳ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.

ಕೃಷಿ ಯಾಂತ್ರೀಕರಣ

ಕೃಷಿ ಕಾರ್ಮಿಕರ ಕೊರತೆ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ, ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶದಿಂದ ಕೃಷಿಯಲ್ಲಿ

ಯಾಂತ್ರೀಕರಣವನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸುವುದು. ಪವರ್ ಟಿಲ್ಲರ್, ಭೂಮಿ ಸಿದ್ಧತೆಯಿಂದ, ಬಿತ್ತನೆ ಮತ್ತು ಅಂತರ ಬೇಸಾಯಕ್ಕೆ ಕೃಷಿ ಯಂತ್ರೋಪಕರಣಗಳು, ಡೀಸೆಲ್ ಪಂಪ್‌ಸೆಟ್ಟುಗಳು, ಟ್ರ್ಯಾಕ್ಟರ್/ಟಿಲ್ಲರ್/ಎಂಜಿನ್ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು ಹಾಗೂ ಕೃಷಿ ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಲ್ಲಿ ವಿತರಿಸಲಾಗುವುದು.

ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆ (PMKSY)

ರೈತರಲ್ಲಿ ನೀರಿನ ಮಿತ ಬಳಕೆ ಮಾಡುವಂತೆ ಪ್ರೋತ್ಸಾಹಿಸುವುದು. ಈ ಕಾರ್ಯಕ್ರಮದಡಿ ಲಭ್ಯವಿರುವ ನೀರನ್ನು ಸಮರ್ಥ ಬಳಕೆ ಮಾಡುವಲ್ಲಿ ಅನುವಾಗುವಂತೆ ಸೂಕ್ಷ್ಮ ನೀರಾವರಿ ಘಟಕಗಳಾದ ತುಂತುರು ನೀರಾವರಿ ಘಟಕ ಮತ್ತು ಹನಿ ನೀರಾವರಿ ಘಟಕಗಳನ್ನು ರೈತರು ಅಳವಡಿಸಿಕೊಳ್ಳಲು ಶೇ.೯೦ ರಷ್ಟು ಸಹಾಯಧನ ಒದಗಿಸಲಾಗುತ್ತಿದೆ.

ಕೃಷಿ ಅಭಿಯಾನ ಕಾರ್ಯಕ್ರಮ

ಕೃಷಿ ವಲಯದ ಪ್ರಸ್ತುತ ಪರಿಸ್ಥಿತಿಯನ್ನು ಮನಗಂಡು, ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವಶ್ಯವಿರುವ ತಂತ್ರಜ್ಞಾನವನ್ನು ತಲುಪಿಸಲು, ಏಕಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸಲು, ವಿವಿಧ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಸಮೂಹ ಜಾಗೃತಿ ಕಾರ್ಯಕ್ರಮಗಳಾದ 'ಕೃಷಿ ಅಭಿಯಾನ' ವನ್ನು ರೂಪಿಸಲಾಗಿದೆ.

ರಾಗಿ ಮತ್ತು ಜೋಳದ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ವಿಶೇಷ ಪ್ರೋತ್ಸಾಹಧನ ಯೋಜನೆ

ರಾಗಿ ಮತ್ತು ಜೋಳ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸಲು ಸುಧಾರಿತ ತಳಿಗಳ ಬಳಕೆ ಮಾಡಿಸಿಕೊಂಡು, ನೂತನ ತಾಂತ್ರಿಕತೆಗಳನ್ನು ಅಳವಡಿಸಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ಒತ್ತು ನೀಡುವುದರ ಜೊತೆಗೆ ಸುಧಾರಿತ ಎತ್ತು ಚಾಲಿತ ಯಂತ್ರೋಪಕರಣಗಳ ಬಳಕೆಗೆ ಪ್ರೋತ್ಸಾಹವನ್ನು ನೀಡಲಾಗುವುದು.

ಪರಂಪರಾಗತ ಕೃಷಿ ವಿಕಾಸ ಯೋಜನೆ (ಕೇಂದ್ರ ಪುರಸ್ಕೃತ)

PKVY ಯೋಜನಾ ಪ್ರದೇಶವನ್ನು ಬೆಳೆ ನಿರ್ದಿಷ್ಟ ಸಾವಯವ ಕ್ಲಸ್ಟರ್ (Crop Specific Organic Cluster) ನ್ನಾಗಿ ಅಭಿವೃದ್ಧಿಪಡಿಸಲು ಆಯಾ ಜಿಲ್ಲೆಯ/ ತಾಲೂಕಿನ ಭೌತಿಕ ಗುರುತು (Geopgraphical Indication) ಮಾನ್ಯತೆ ದೊರೆತಿರುವ ಬೆಳೆಗಳನ್ನು (ಉದಾ: ಬೆಂಗಳೂರು ಬ್ಲ್ಯೂ ದ್ರಾಕ್ಷಿ, ದೇವನಹಳ್ಳಿ ಚಕ್ಕೋತ್ತ, ಬ್ಯಾಡಗಿ ಮೆಣಸಿನಕಾಯಿ, ಕಮಲಾಪುರ ಕೆಂಪು ಬಾಳೆ, ಮಾನ್‌ಸೂನ್ ಮಲಬಾರ್ ಕಾಫಿ, ಕೂರ್ಗ ಗ್ರೀನ್ ಕಾರ್ಡಮಮ್, ಮೈಸೂರು ಬೀಟಲ್ ಲೀಫ್, ನಂಜನಗೂಡು ರಸಬಾಳೆ, ಅಪ್ಪೆ ಮಿಡಿ ಮ್ಯಾಂಗೊ, ಗುಳ್ಳ ಬದನೆ ಇತ್ಯಾದಿ) ಅಥವಾ ಹೆಚ್ಚಿನ ಕ್ಷೇತ್ರದಲ್ಲಿ ಬೆಳೆಯುವ ಬೆಳೆಗಳನ್ನು ಆಯ್ಕೆ ಮಾಡುವುದು.

ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಶೇ.೯೦ ರ ಸಹಾಯಧನದಲ್ಲಿ ಆಧುನಿಕ ಕೃಷಿ ಉಪಕರಣಗಳು ಹಾಗೂ ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ಪೂರೈಕೆ ಮಾಡಲಾಗುವುದು.

ಬೆಳೆ ಸಾಲಕ್ಕೆ ಸಹಾಯಧನ

ರಾಜ್ಯದ ರೈತರಿಗೆ ನೀಡಿದ ಬೆಳೆ ಸಾಲ/ ಅಲ್ಪಾವಧಿ ಸಾಲಕ್ಕೆ ಶೇ.೧ ರ ಬಡ್ಡಿ ರಿಯಾಯಿತಿ ನೀಡುವುದು. ೨೦೦೯-೧೦ನೇ ಸಾಲಿನಿಂದ ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ರೈತರು ಪಡೆದ ರೂ.೧,೦೦,೦೦೦ ಮಿತಿಯೊಳಗಿನ ಬೆಳೆ ಸಾಲವನ್ನು ಬ್ಯಾಂಕುಗಳು ನಿಗಧಿಪಡಿಸಿದ ಅವಧಿಯೊಳಗೆ ಮರುಪಾವತಿ ಮಾಡಿದ ರೈತರಿಗೆ ರಾಜ್ಯ ಸರ್ಕಾರದ ವತಿಯಿಂದ ಶೇ.೧ ರ ಬಡ್ಡಿ ರಿಯಾಯಿತಿಯನ್ನು ನೀಡಲಾಗುವುದು.

ರೈತರ ಆಕಸ್ಮಿಕ ಮರಣ ಹಾಗೂ ಬಣವೆಗಳ ನಷ್ಟ ಪರಿಹಾರ ಯೋಜನೆ

ರೈತರು ಹಾಗೂ ಕೃಷಿ ಕಾರ್ಮಿಕರು ಹಾವು ಕಡಿತದಿಂದ, ಮರಗಳಿಂದ ಬಿದ್ದು ಅಥವಾ ಇತರೆ ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದ ಸಂದರ್ಭದಲ್ಲಿ ಅವರ ಕುಟುಂಬಗಳಿಗೆ ಪರಿಹಾರ ಒದಗಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ.

೧. ಹಾವು ಕಡಿತದಿಂದ, ಮರಗಳಿಂದ ಬಿದ್ದು, ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಹಾಗೂ ಕೃಷಿ ಕಾರ್ಮಿಕರ ಪ್ರತಿ ಅರ್ಹ ಕುಟುಂಬಗಳಿಗೆ ೧ ಲಕ್ಷ ರೂ. ಪರಿಹಾರವನ್ನು ಈ ಯೋಜನೆಯಡಿ ನೀಡಲಾಗುವುದು.

೨. ಬೆಂಕಿ ಆಕಸ್ಮಿಕಗಳಿಂದ ಹುಲ್ಲು ಮೆದೆ/ಬಣವೆಗಳು ನಷ್ಟವಾದ ಪ್ರಕರಣದಲ್ಲಿ ರೂ.೧೦,೦೦೦/- ಗಳವರೆಗೆ ಈ ಯೋಜನೆಯಡಿ ಪರಿಹಾರ ನೀಡಲಾಗುವುದು.

ಭೂಚೇತನ ಕಾರ್ಯಕ್ರಮ

ಕೃಷಿ ಇಲಾಖೆಯು ಇಕ್ರಿಸ್ಯಾಟ್ ಸಂಸ್ಥೆ, ಹೈದ್ರಾಬಾದ್ ಹಾಗೂ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಬೇಸಾಯ ತಾಂತ್ರಿಕತೆ ಅಳವಡಿಕೆ ಹಾಗೂ ಉತ್ಪಾದನೆ ವರ್ಧಿಸುವ ಭೂಚೇತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮಣ್ಣು ಪರೀಕ್ಷೆ ಆಧರಿಸಿ, ಪೋಷಕಾಂಶಗಳ ಸಮಗ್ರ ನಿರ್ವಹಣೆಯ ಮೂಲಕ ಶೇ. ೨೦ ರಷ್ಟು ಹೆಚ್ಚಿನ ಇಳುವರಿ ಪಡೆಯುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆ

ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ – ಜಲಾನಯನ ಅಭಿವೃದ್ಧಿ

(ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ)

ಉದ್ದೇಶಗಳು:- ಹರಿಯುವ ನೀರಿನ ಪರಿಣಾಮಕಾರಿ ನಿರ್ವಹಣೆ, ಸುಧಾರಿತ ಮಣ್ಣು ಹಾಗೂ ತೇವಾಂಶ ಸಂರಕ್ಷಣೆ ಕಾರ್ಯಕ್ರಮಗಳಾದ ಮೇಲ್‌ಸ್ಥರ, ಮಧ್ಯಸ್ಥರ ಮತ್ತು ಕೆಳಸ್ಥರಗಳಲ್ಲಿ ಜಲಾನಯನ

ಉಪಚಾರಗಳನ್ನು ಕೈಗೊಳ್ಳುವುದು, ಮಳೆ ನೀರು ಕೊಯ್ಲಿನ ಮುಖೇನ ಮೂಲ ತೇವಾಂಶ ಸಂರಕ್ಷಣೆ ಮತ್ತು ಇತರೆ ಜಲಾನಯನ ಆಧಾರಿತ ಚಟುವಟಿಕೆಗಳ ಅನುಷ್ಠಾನ ಮಾಡುವುದು, ಮಳೆಯಾಶ್ರಿತ ಪ್ರದೇಶಗಳಲ್ಲಿ ಸಾಂಪ್ರದಾಯಿಕ ನೀರಿನ ಮೂಲಗಳ ನವೀಕರಣ ಸೇರಿದಂತೆ, ನೀರಿನ ಮೂಲಗಳ ಸೃಷ್ಟಿಗೆ ಸದರಿ ಕಾರ್ಯಕ್ರಮಗಳನ್ನು ನರೇಗಾ ಕಾರ್ಯಕ್ರಮದ ಜೊತೆ ಒಗ್ಗಝುಡಿಸಿ ಅನುಷ್ಠಾನ ಮಾಡುವುದು.

ರೈತರಿಗೆ ದೊರೆಯುವ ಸೌಲಭ್ಯಗಳು

- ಅರಣ್ಯ ಮತ್ತು ಸಮುದಾಯ ಭೂಮಿಯಲ್ಲಿ ಸಸ್ಯವರ್ಗದ ಪುನರುಜ್ಜೀವನ ಮಾಡಲು ಅರಣ್ಯೀಕರಣ.
- ಪರ್ಯಾಯಸಮಪಾತಳಿ ಕಂದಕಗಳ ನಿರ್ಮಾಣ ಮಾಡುವುದು.
- ಸಮಪಾತಳಿ, ವಾರಡಿ, ಕಂದಕ ಬದುಗಳ ನಿರ್ಮಾಣ ಮಾಡುವುದು.
- ಇಳಿಜಾರು ಪ್ರದೇಶದಲ್ಲಿ ಜಗತಿಕಟ್ಟೆ/ಮಟ್ಟ ಹಾಳೆಗಳ ನಿರ್ಮಾಣ ಮಾಡುವುದು.
- ಮಣ್ಣಿನ ತಡೆಗಳು, ಬ್ರಷ್‌ವುಡ್‌ನ ತಡೆಗಳು, ಸಡಿಲ ಕಲ್ಲು ತಡೆಗಳ–ಗೇಬಿಯಾನ್ ರಚನೆಗಳ ನಿರ್ಮಾಣ ಮಾಡುವುದು.
- ಮಳೆ ನೀರು ಸಂಗ್ರಹಿಸಲು ಕೃಷಿ ಹೊಂಡಗಳು, ನಾಲಾ ಬದುಗಳು, ತಡೆ ಆಣೆಗಳು, ಜಿನುಗು ಕೆರೆಗಳು
- ಮಳೆ ನಿರು ಸಂಗ್ರಹಿಸಲು ಕೃಷಿ ಹೊಂಡಗಳು, ನಾಲಾ ಬದುಗಳು, ತಡೆ ಆಣೆಗಳು, ಜಿನುಗು ಕೆರೆಗಳು ಮುಂತಾದ ನೀರು ಸಂಗ್ರಹಣಾ ವಿನ್ಯಾಸಗಳ ಅಭಿವೃದ್ಧಿ ಬಾವಿಗಳು, ಕೊಳವೆ ಬಾವಿಗಳು ಮತ್ತು ಇತರೆ ರಚನೆಗಳ ಮೂಲಕ ಅಂತರ್ಜಲ ಮರುಪೂರಣ ಮಾಡಲು ಉತ್ತೇಜನ ನೀಡುವುದು.
- ಮೇವು, ಇಂಧನ, ಅರಣ್ಯ ಮತ್ತು ತೋಟಗಾರಿಕಾ ಸಸ್ಯ ಪ್ರಬೇಧಗಳ ಸಸಿಗಳನ್ನು ವಿತರಿಸುವುದು.
- ಹೊಸ ಬೆಳೆಗಳು/ ವಿವಿಧ ತಳಿಗಳನ್ನು ಜನಪ್ರಿಯಗೊಳಿಸುವುದಕ್ಕೆ ಬೆಳೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು. ಹನಿ ನೀರಾವರಿ ಅಥವಾ ನವೀನ ರಿತಿಯ ನಿರ್ವಹಣಾ ಪದ್ಧತಿಗಳಂತಹ ನೀರು ಮಿತವ್ಯಯ ತಂತ್ರಜ್ಞಾನಗಳನ್ನು ಅಳವಡಿಸುವುದು, ಹುಲ್ಲುಗಾವಲು ಅಭಿವೃದ್ಧಿ, ಸುಧಾರಿತ ಮೇವು ಉತ್ಪಾದನೆ ಮತ್ತು ಇತರ ಕಿರು ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವುದು, ಜಾನುವಾರುಗಳಿಗೆ ಪಶು ವೈದ್ಯಕೀಯ ಸೇವೆಗಳು ಮತ್ತು ಇತರ ಜಾನುವಾರು ಸುಧಾರಣಾ ಕ್ರಮಗಳನ್ನು ಅಳವಡಿಸುವುದು, ಹಳ್ಳಿಗಳಲ್ಲಿನ ಕೊಳಗಳು / ಕಟ್ಟೆಗಳು, ಕೆರೆಗಳು, ಕೃಷಿ ಹೊಂಡಗಳು ಇತ್ಯಾದಿಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಒತ್ತು ನೀಡುವುದು."(ಜಂಟಿ ಕೃಷಿ ನಿರ್ದೇಶಕರು:ಕೃಷಿ ಇಲಾಖೆ ಕೈಪಿಡಿ:೨೦೧೭–೧೮).

ಭೂ ಒಡೆತನ ಯೋಜನೆ

ಭೂ ಒಡೆತನ ಯೋಜನೆಯಡಿ ಯೋಜನೆಯನ್ನು ೧೯೯೦-೯೧ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು, ಈ ಯೋಜನೆಯಡಿ ೨ ಎಕರೆ ಖುಷ್ಕಿ ಅಥವಾ ೧ ಎಕರೆ ತರಿ/ಭಾಗಾಯ್ತು ಜಮೀನನ್ನು ಪರಿಶಿಷ್ಟ ಜಾತಿ ಭೂರಹಿತ ಕೃಷಿ ಕಾರ್ಮಿಕರಿಗೆ ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರಿಲ್ಲದ ಭೂ ಮಾಲೀಕರಿಂದ ಖರೀದಿಸಲಾಗುತ್ತಿದೆ. ಈ ಘಟಕ ವೆಚ್ಚದಲ್ಲಿ ಅರ್ಧಭಾಗ ಸಹಾಯಧನವಾಗಿಯೂ, ಉಳಿದರ್ಧ ಸಾಲದ ರೂಪದಲ್ಲೂ ಇರುತ್ತದೆ. ಈ ಸಾಲವನ್ನು ೧೦ ವರ್ಷಗಳಲ್ಲಿ ವಾರ್ಷಿಕ ಸಮಕಂತುಗಳಲ್ಲಿ ಶೇಕಡ ೬ರ ಬಡ್ಡಿದರದಲ್ಲಿ ಮರುಪಾವತಿ ಮಾಡಿಸಬೇಕಿರುತ್ತದೆ. ಜಮಿನನ್ನು ಕುಟುಂಬದ ಗೃಹಿಣಿಯ ಹೆಸರಿನಲ್ಲಿ ನೋಂದಣಿ ಮಾಡಿಸಲಾಗುವುದು. ಈ ಯೋಜನೆಯಡಿ ೨೦೧೨-೧೩ ರಲ್ಲಿ ೬೪೭ ಫಲಾನುಭವಿಗಳಿಗೆ ೯೫೫ ಎಕರೆಗಳನ್ನು ಹಾಗೂ ೨೦೧೩-೧೪ ರಲ್ಲಿ ೭೩೩ ಫಲಾನುಭವಿಗಳಿಗೆ ೯೭೮ ಎಕರೆ ಜಮಿನುಗಳನ್ನು ವಿತರಿಸಲಾಗಿದೆ. ೨೦೧೪-೧೫ ರ ಡಿಸೆಂಬರ್ ಅಂತ್ಯಕ್ಕೆ ३೫ ಫಲಾನುಭವಿಗಳಿಗೆ ೪೦ ಎಕರೆ ಜಮೀನನ್ನು ವಿತರಿಸಲಾಗಿದೆ.

ಗಂಗಾ ಕಲ್ಯಾಣ ಯೋಜನೆ

ಸಾಮೂಹಿಕ ನೀರಾವರಿ/ ಏತ ನೀರಾವರಿ ಯೋಜನೆ : ನದಿ ಮತ್ತು ನೈಸರ್ಗಿಕ ಹಳ್ಳಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ವರ್ಗಕ್ಕೆ ಸೇರಿದ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳನ್ನು ಗುರುತಿಸಿ ೮ ರಿಂದ ೧೫ ಎಕರೆ ಹೊಂದಿರುವ ಗುಂಪು ಜಮೀನಿಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಕ್ರಮವಾಗಿ ರೂ.೨.೫೩ ಲಕ್ಷ ಮತ್ತು ರೂ.೩.೫೯ ಲಕ್ಷಗಳನ್ನು ಪೂರ್ಣ ಸಹಾಯಧನದೊಂದಿಗೆ ಈ ಯೋಜನೆಯಡಿ ಸಾಮೂಹಿಕ ನೀರಾವರಿ ಯೋಜನೆಯನ್ನು ಒದಗಿಸಲಾಗುತ್ತಿದೆ.

ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

ಈ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ರೈತರ ಜಮಿನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ಪಂಪ್ ಮೋಟಾರನ್ನು ಅಳವಡಿಸಲಾಗುವುದು. ಈ ಕಾರ್ಯಕ್ರಮದಡಿ ಘಟಕ ವೆಚ್ಚ ೨.೦೦ ಲಕ್ಷ ರೂ. ಇದ್ದು, ಅದರಲ್ಲಿ ೧,೫೦,೦೦೦ ರೂ. ಸಹಾಯಧನವಾಗಿದ್ದು, ಉಳಿದ ಮೊತ್ತ ೫೦,೦೦೦ ರೂ. ಅವಧಿ ಸಾಲವಾಗಿರುತ್ತದೆ. ಅವಧಿ ಸಾಲವನ್ನು ಎನ್.ಎಸ್.ಸಿ.ಎಫ್.ಡಿ.ಸಿ. ಯಿಂದ ಭರಿಸಲಾಗುವುದು. ಈ ಯೋಜನೆಯಡಿ ೨೦೧೨-೧೩ನೇ ಸಾಲಿನಲ್ಲಿ ೫೯೦೦ ಫಲಾನುಭವಿಗಳಿಗೆ ಹಾಗೂ ೨೦೧೩-೧೪ ರಲ್ಲಿ ೧೯೨೪ ಜನರಿಗೂ ಈ ಯೋಜನೆಯಡಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಕೊಳವೆಬಾವಿಗಳ ವಿದ್ಯುದ್ದೀಕರಣ

ಕೊರೆದಿರುವ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಕ್ಕಾಗಿ ಹಿಂದುಳಿದ ತಾಲೂಕುಗಳಿಗೆ ಒದಗಿಸಿದ ಎಸ್‌ಸಿಎಸ್‌ಪಿ (SCSP) ಕ್ರೋಢೀಕೃತ ಹಣ ರೂ.೫೦,೦೦೦/- ಗಳನ್ನು ಎಸ್ಕಾಂಗಳಿಗೆ ನೀಡಲಾಗುವುದು. ಈ ಯೋಜನೆಯಡಿ ೨೦೧೨-೧೩ನೇ ಸಾಲಿನಲ್ಲಿ ೮೯೨, ೨೦೧೩-೧೪ರಲ್ಲಿ

೮೩೫೩ ಹಾಗೂ ೨೦೧೪-೧೫ ರ ಡಿಸೆಂಬರ್ ಅಂತ್ಯಕ್ಕೆ ೨೯೨೦ ಕೊಳವೆ ಬಾವಿಗಳಿಗೆ ವಿದ್ಯುದ್ದೀಕರಣ ಸೌಲಭ್ಯ ಕಲ್ಪಿಸಲಾಗಿದೆ.

ಮಹಿಳಾ ತರಬೇತಿ ಯೋಜನೆ

ಈ ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದ, ಅಸಹಾಯಕ ಹಾಗೂ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಉದ್ಯೋಗ ಅಥವಾ ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಕೌಶಲ್ಯ ಅಭಿವೃದ್ಧಿ, ವೃತ್ತಿ ತರಬೇತಿ (ವಸತಿ ಸಹಿತ/ರಹಿತ) ಕಾರ್ಯಕ್ರಮಗಳನ್ನು ರಾಜ್ಯ/ ಕೇಂದ್ರ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ. ೨೦೧೪-೧೫ನೇ ಸಾಲಿನಲ್ಲಿ ರೂ.೩೬೦.೦೦ ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ೭೨೦೦ ಮಹಿಳೆಯರಿಗೆ ಪ್ರಯೋಜನ ಕಲ್ಪಿಸಲು ಉದ್ದೇಶಿಸಿದೆ. ಈ ಯೋಜನೆಯಿಂದ ಕೃಷಿ ಇಲ್ಲದ ಸಂದರ್ಭದಲ್ಲಿ ಕೃಷಿಕೂಲಿ ಕಾರ್ಮಿಕರು ಈ ಯೋಜನೆಯನ್ನು ಸದುಪಯೋಗಪಡಿಸಿಕೊಂಡರೆ ಕೂಲಿ ಸಿಗದ ಸಂದರ್ಭದಲ್ಲಿ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬಹುದಾಗಿದೆ.

ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ

ಭಾರತ ಸರ್ಕಾರವು ಸಮಗ್ರ ಗ್ರಾಮಿಣಾಭಿವೃದ್ಧಿ ಯೋಜನೆಯನ್ನು ೧೯೭೮ನೇ ಆರ್ಥಿಕ ವರ್ಷದಲ್ಲಿ ಜಾರಿಗೆ ತರಲಾಗಿದ್ದು, ೧೯೮೦-೮೧ ರಲ್ಲಿ ರಾಷ್ಟ್ರದ್ಯಾಂತ ಜಾರಿಗೊಳಿಸಲಾಯಿತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ಸಮುದಾಯಗಳಿಗೆ ಪ್ರಮುಖವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಕೃಷಿ ಕಾರ್ಮಿಕರಿಗೆ ಮತ್ತು ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಕರಕುಶಲಗಾರರಿಗೆ ಸ್ವ-ಉದ್ಯೋಗವನ್ನು ಕಲ್ಪಿಸಿ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಿ ಗ್ರಾಮೀಣ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತು. ಈ ಹಿಂದೆ ಬಡತನ ಮತ್ತು ನಿರುದ್ಯೋಗ ನಿವಾರಣೆಗಾಗಿ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆ, ಅತಿ ಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಅಭಿವೃದ್ಧಿ ಸಂಸ್ಥೆ, ಗ್ರಾಮೀಣ ಉದ್ಯೋಗ ಶೀಘ್ರ ಯೋಜನೆ, ಬರಪೀಡಿತ ಪ್ರದೇಶ ಕಾರ್ಯಕ್ರಮ ಮುಂತಾದ ಯೋಜನೆಗಳು ನಿರೀಕ್ಷಿತ ಯಶಸ್ಸನ್ನು ಸಾಧಿಸದ ಕಾರಣ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯಡಿ ಸಣ್ಣ ರೈತರಿಗೆ ಶೇ.೨೫ ರಷ್ಟು ಹಾಗೂ ಅತಿ ಸಣ್ಣ ರೈತರಿಗೆ, ಕೃಷಿ ಕಾರ್ಮಿಕರಿಗೆ ಮತ್ತು ಗ್ರಾಮೀಣ ಕರಕುಶಲಗಾರರಿಗೆ ಶೇ.೩೩.೬೫ ರಷ್ಟು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.೫೦ ರಷ್ಟು ಸಬ್ಸಿಡಿಯೊಂದಿಗೆ ಸಹಾಯಧನವನ್ನು ನೀಡಲಾಗುತ್ತಿತ್ತು. ಒಟ್ಟು ಫಲಾನುಭವಿಗಳಲ್ಲಿ ಶೇ.೫೦ ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿಗೆ, ಶೇ.೪೦ ರಷ್ಟು ಮಹಿಳೆಯರಿಗೆ ಹಾಗೂ ಶೇ.೩೦ ರಷ್ಟು ವಿಕಲಚೇತನರಿಗೆ ಮೀಸಲಿಡಲಾಗುತ್ತಿತ್ತು. ಈ ಯೋಜನೆಯ ಪ್ರಮುಖ ಗುರಿ ಸ್ವ-ಉದ್ಯೋಗವನ್ನು ಕಲ್ಪಿಸುವುದರ ಮುಖಾಂತರ ಬಡತನವನ್ನು ನಿವಾರಿಸಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವವವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದೇ ಆಗಿತ್ತು. ಈ ಯೋಜನೆಯಿಂದ

ಪರಿಶಿಷ್ಟ ವರ್ಗದ ಸಮುದಾಯದ ಕೃಷಿ ಕಾರ್ಮಿಕರಿಗೆ ಅನುಕೂಲವಾಗಿತ್ತು. ಫಲಾನುಭವಿಗಳಿಗೆ ಅಗತ್ಯ ಕಚ್ಚಾ ಸಾಮಾಗ್ರಿಗಳು ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ನೀಡಲಾಗುತ್ತಿತ್ತು.

ಆರನೇ ಯೋಜನೆಯ ಅವಧಿಯಲ್ಲಿ ಈ ಕಾರ್ಯಕ್ರಮದಡಿ ೧೫ ದಶಲಕ್ಷ ಕುಟುಂಬಗಳನ್ನು ಸೇರಿಸಿಕೊಳ್ಳುವ ಗುರಿ ಹೊಂದಲಾಗಿತ್ತು. ಆದರೆ ೧೯೮೧ ರಲ್ಲಿ ಶೇ.೨.೨, ೧೯೮೫-೮೬ ರಲ್ಲಿ ಶೇ.೩.೧, ೧೯೯೧-೯೨ ರಲ್ಲಿ ೨.೯ ಮತ್ತು ೧೯೯೨-೯೩ ರಲ್ಲಿ ಶೇ.೨.೧ ದಶಲಕ್ಷ ಕುಟುಂಬಗಳು ಮಾತ್ರ ಈ ಯೋಜನೆಯನ್ನು ಪಡೆದುಕೊಂಡವು. ಈ ಕುಟುಂಬಗಳಲ್ಲಿ ೧೯೮೦-೮೧ ರಲ್ಲಿ ೦.೮, ೧೯೮೫-೮೬ ರಲ್ಲಿ ಶೇ.೧.೩, ೧೯೯೦-೯೧ ರಲ್ಲಿ ೧.೪ ಮತ್ತು ೧೯೯೨ ಮತ್ತು ೯೩ ರಲ್ಲಿ ಶೇ.೧.೧ ದಶಲಕ್ಷ ಕುಟುಂಬಗಳಿಗೆ ಈ ಯೋಜನೆಯು ದೊರಕಿದೆ. ಈ ಯೋಜನೆಯು ಸಾಕಷ್ಟು ಯಶಸ್ವಿಯಾದರೂ ಕೂಡ ಹಲವಾರು ಲೋಪದೋಷಗಳನ್ನು ಹೊಂದಿತ್ತು. ನಿರೀಕ್ಷಿತ ಸಾಧನೆಯಾಗಲಿಲ್ಲ. ಹಾಗೂ ಕಾರ್ಯಕ್ರಮದ ಅನುಷ್ಠಾನದಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಉಳ್ಳವರಿಗೆ ಯೋಜನೆಗಳ ಲಾಭ ಮತ್ತು ಪಶು ಸಂಗೋಪನೆಗೆ ಮಿತಿ ಮೀರಿದ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಸ್ವರ್ಣಜಯಂತಿ ಗ್ರಾಮ ಸ್ವ-ಉದ್ಯೋಗ ಯೋಜನೆ ಜಾರಿಗೊಂಡ ತರುವಾಯ ಈ ಯೋಜನೆಯನ್ನು ರದ್ದುಗೊಳಿಸಲಾಯಿತು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ MGNREGA)

ಈ ಯೋಜನೆಯ ಭಾರತದ ಉದ್ಯೋಗ ಖಾತರಿ ಯೋಜನಾ ಕಾಯ್ದೆಯು ೨೦೦೫ ರಿಂದ ಶಾಸನಾತ್ಮಕವಾಗಿ ಅನುಮೋದನೆಗೊಂಡು ಅನುಷ್ಠಾನಗೊಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಕುಟುಂಬದ ವಯಸ್ಕ ಸದಸ್ಯರುಗಳ ಸ್ವಯಂ ಪ್ರೇರಿತರಾಗಿ ಅಕುಶಲ ಕೆಲಸಕ್ಕೆ ಅರ್ಜಿ ಸಲ್ಲಿಸಿದರೆ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ ಕನಿಷ್ಠ ನೂರು ದಿನಗಳ ಕೂಲಿ ಸಹಿತ ಉದ್ಯೋಗವನ್ನು ಒದಗಿಸುವುದು ಈ ಕಾಯ್ದೆಯ ಉದ್ದೇಶವಾಗಿದೆ. ಈ ಯೋಜನೆಯು ಇತರ ಎಲ್ಲಾ ಯೋಜನೆಗಳಿಗಿಂತ ಹೆಚ್ಚು ಪರಿಣಾಮಕಾರಿ ಯೋಜನೆಯಾಗಿದ್ದು, ಪರಿಶಿಷ್ಟ ವರ್ಗಗಳ ಕೃಷಿ ಕಾರ್ಮಿಕರನ್ನೊಳಗೊಂಡಂತೆ ಎಲ್ಲಾ ವರ್ಗಗಳ ಕೃಷಿ ಕಾರ್ಮಿಕರ ಜೀವನದಲ್ಲಿ ಮಹತ್ತರವಾದ ಬದಲಾವಣೆಯನ್ನು ತರಬಹುದಾದ ಕಾಯ್ದೆಯಾಗಿರುವುದರಿಂದ ಈ ಯೋಜನೆಯನ್ನು ಇತರ ಯೋಜನೆಗಳಿಗಿಂತ ಸ್ವಲ್ಪ ವಿಸ್ತಾರವಾಗಿ ವಿವರಿಸಲಾಗಿದೆ.

ಗೃಹ ಕಲ್ಯಾಣ

ಗೃಹ ಕಲ್ಯಾಣ ಯೋಜನೆ ಎಂಬ ಯೋಜನೆಯನ್ನು ಇದೇ ವೇಳೆಯಲ್ಲಿ ಪ್ರಾರಂಭಿಸಿ, ದುರ್ಬಲ ವರ್ಗಗಳಿಗೆ ಸೇರಿದ ಮಹಿಳೆಯರ ಗೃಹ ಕೈಗಾರಿಕೆ ಮತ್ತು ಆದಾಯೋತ್ಪನ್ನ ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು. ತಂತಮ್ಮ ಕುಟುಂಬಗಳ ಆದಾಯಕ್ಕೆ ಮಹಿಳೆಯರು ಸಹ ಅಸಂಘಟಿತವಾಗಿ

ಕೊಡು ಮಾಡುವಂತಾಯಿತು. ಅರ್ಹ ಮತ್ತು ಅವಶ್ಯಕತೆಗನುಸಾರವಾಗಿ ಅವರಿಗೆ ಮಾಸಿಕ ರೂ.೫೦೦ ರಂತೆ ಸಹಾಯಧನ, ಮಕ್ಕಳ ಲಾಲನೆ, ಪಾಲನೆಗೆ ದುಡಿಯುವ ತಾಯಂದಿರಿಗೆ ಕೆಲಸದ ವೇಳೆಯಲ್ಲಿ ಕ್ರೆಶ್‌ಗಳ ಸ್ಥಾಪನೆ, ದಿಕ್ಕೆಟ್ಟ ಬಡ ವಿಧವೆಯರಿಗೆ ಮಾಸಿಕ ಪಿಂಚನಿ ಸೌಲಭ್ಯ, ಭೂರಹಿತ ಕೃಷಿ ಕಾರ್ಮಿಕರಿಗೆ ಹೆರಿಗೆ ಭತ್ಯೆ, ಸಾಮಾಜಿಕ ರಕ್ಷಣಾ ವ್ಯವಸ್ಥೆಗಳು ಮುಂತಾದವು ಇಲ್ಲಿ ಪ್ರಸ್ತುತಪಡಿಸುವುದಕ್ಕೆ ಯೋಗ್ಯ ಯೋಜನೆಗಳು. ಇವುಗಳ ಜೊತೆಗೆ ತಾಳಿಯ ಭಾಗ್ಯ, ದುಡಿಯುವ ಮಹಿಳೆಯರಿಗೆ ಹಾಸ್ಟೆಲ್ ವ್ಯವಸ್ಥೆ, ಜಿಲ್ಲಾ ಸಂತ್ರಸ್ತ / ಪುನರ್ವಸತಿ ಕೇಂದ್ರಗಳು ಸಹ ಸೇರಲ್ಪಡುತ್ತವೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಮಹಿಳೆಯರ ಹಿತರಕ್ಷಣೆಗಾಗಿ ಹಾಗೂ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿದೆ. ಇದನ್ನು ರಾಜ್ಯ ಸರ್ಕಾರವು ೧೯೯೫ ರಲ್ಲಿ ಸ್ಥಾಪಿಸಿತು. ಅದರ ಮುಖ್ಯ ಉದ್ದೇಶಗಳೆಂದರೆ,

- ಸಂವಿಧಾನದಲ್ಲಿ ಮತ್ತು ಇತರೆ ಕಾನೂನಿನಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳ ಪರಿಶೀಲನೆ, ಕಾರ್ಯ ರೀತಿಯ ಬಗ್ಗೆ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.
- ಸುದಾರಣಾ ಕ್ರಮಗಳನ್ನು ಶಿಫಾರಸ್ಸು ಮಾಡುವುದು.
- ಮಹಿಳಾ ಹಕ್ಕುಗಳ ವಿಷಯದಲ್ಲಿ ರಕ್ಷಣೆ ಮತ್ತು ಸಮಾನತೆ ಸಾಧಿಸಲು ಕಾನೂನುಗಳನ್ನು ಕಾರ್ಯಗತಗೊಳಿಸುವುದು.
- ತೊಂದರೆ ನಿವಾರಣೆಗಾಗಿ ಮಾರ್ಗದರ್ಶಕ ಸೂತ್ರಗಳನ್ನು ಒದಗಿಸುವುದು.
- ತಾರತಮ್ಯ ನಿವಾರಣೆ.
- ದೌರ್ಜನ್ಯಗಳ ಬಗ್ಗೆ ಅಧ್ಯಯನ ಮತ್ತು ವಿಚಾರಣೆ.
- ಮಹಿಳಾ ಪ್ರಾತಿನಿಧ್ಯಕ್ಕಾಗಿ ಸಂಶೋಧನೆ, ಅವರಿಗೆ ಮೂಲಭೂತ ಸೌಕರ್ಯಗಳ ದೊರಕುವಿಕೆಯ ಕಡೆ ಪ್ರಯತ್ನ.
- ದುಡಿಮೆಯಿಂದಾಗುವ ಶ್ರಮ ನಿವಾರಣೆ.
- ಭಕ್ತಿಪರ ಉತ್ಪಾದಕತೆಯ ಹೆಚ್ಚಳ
- ಮಹಿಳಾ ಅಭಿವೃದ್ಧಿಯ ಮೌಲ್ಯಮಾಪನ
- ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸರ್ಕಾರ ಹಾಗೂ ಸ್ವಯಂ ಸೇವಾ ಸಂಸ್ಥೆಗಳ (ಎನ್.ಜಿ.ಒ) ನಡುವೆ ಸಹಭಾಗಿತ್ವ ಏರ್ಪಡಿಸುವುದು.
- ಕೌಟುಂಬಿಕ ನ್ಯಾಯಾಲಯಗಳ ಮುಂದೆ ಇರುವ ಮಹಿಳೆಯರ ವೈವಾಹಿಕ ವಿವಾದಗಳ ಕುರಿತಂತೆ ಸಮಾನವಾದ, ನಿಷ್ಪಕ್ಷಪಾತವಾದ ನ್ಯಾಯವನ್ನು ನೀಡುವಲ್ಲಿ ನೆರವಾಗುವುದು, ಮುಂತಾದವು.

ಮಹಿಳಾ ಸಾಮಖ್ಯ

ಮಹಿಳಾ ಸಾಮುಖ್ಯವು ಮೂಲವಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ವಿಭಾಗದ ಒಂದು ಯೋಜನೆ. ಇದರ ಮುಖ್ಯ ಉದ್ದೇಶ ಶಿಕ್ಷಣದ ಮೂಲಕ ಮಹಿಳಾ ಸಶಕ್ತತೆ ಮತ್ತು ಮಹಿಳಾ ಸಂಘಟನೆಗಳ ಮೂಲಕ ಗುರಿ ಸಾಧನೆ. ಕಳೆದ ೧೫ ವರ್ಷಗಳಲ್ಲಿ ಇದು ಬಡ ಮಹಿಳೆಯರಿಗೆ ಹತ್ತಿರವಾಗಿ ದುಡಿದು, ಲಿಂಗಬೇದದಿಂದುಂಟಾಗುವ ಮಹಿಳೆಯರ ಹೀನ ಸ್ಥಿತಿಯ ಬಗ್ಗೆ ಅವರಲ್ಲಿ ಅರಿವು ಮೂಡಿಸಿ ಸೇವಾದರಗಳಿಂದ ಬದುಕಬಹುದೆಂದು ತಿಳಿಸುತ್ತಾ ಬಂದಿದೆ. ಮಹಿಳಾ ಸಂಘಗಳ ಸ್ಥಾಪನೆಯೇ ಇದರ ಮೂಲ ತಂತ್ರ. ಇವುಗಳ ಮೂಲಕ ಮಹಿಳೆಯರನ್ನು ಸಶಕ್ತೀಕರಣಗೊಳಿಸಿ, ಅವರು ಸಾಮಾನ್ಯವಾಗಿ ಎದುರಿಸುವ ತೊಂದರೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅವರ ಹಲವಾರು ಅನುಭವಗಳ ಸಮೃದ್ಧ ಜ್ಞಾನವನ್ನು ದಾಖಲಿಸಿ, ಸಬಲೀಕರಣ ಪ್ರಕ್ರಿಯೆಯನ್ನು ಪ್ರಬಲಗೊಳಿಸುವಲ್ಲಿ ಇದು ತನ್ನ ಪ್ರಯತ್ನವನ್ನು ಮುಂದುವರೆಸಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಶಿಕ್ಷಣ ವಿಭಾಗದ ಒಂದು ಕಾರ್ಯಕ್ರಮವಾಗಿ ಇದನ್ನು ೧೯೮೬ ರಲ್ಲಿ ಹೊಸ ಶಿಕ್ಷಣ ನೀತಿಗೆ ಅನುಗುಣವಾಗಿ ಪ್ರಾರಂಭ ಮಾಡಲಾಯಿತು.

ಈ ದಿಕ್ಕಿನಲ್ಲಿ ಉಂಟಾದ ಇನ್ನಿತರ ಕಾರ್ಯಕ್ರಮಗಳೆಂದರೆ

- ಸೂಕ್ತ ನಿರ್ಧಾರಗಳ ಮೂಲಕ ಮಹಿಳೆಯರು ತಮ್ಮದೇ ಆದ ಗುರಿಯನ್ನು ಸಾಧಿಸಲು ಸಹಾಯಕವಾಗುವ ವಾತಾವರಣದ ಸೃಷ್ಟಿ.
- ಲಿಂಗ ಸಮಾನತೆಯ ದೃಷ್ಟಿಕೋನದಿಂದ ಪ್ರಕ್ರಿಯೆಗಳನ್ನು ಪ್ರಾರಂಭಿಸಿ ಅವುಗಳ ಅನುಭವದ ಆಧಾರದ ಮೇಲೆ ಸಾಮಾಜಿಕ ಪರಿವರ್ತನೆ ತರುವುದು.
- ಸಮುದಾಯದ ಸಂಪನ್ಮೂಲಗಳು ಮಹಿಳೆಗೂ ದೊರಕುವಂತೆ ಮರುಹೊಂದಾಣಿಕೆ ಮಾಡುವುದು.
- ಕುಟುಂಬ ಮತ್ತು ಸಮಾಜದಲ್ಲಿರುವ ಸಂಪನ್ಮೂಲ ಮತು ಸವಲತ್ತುಗಳನ್ನು ಮಹಿಳೆಯರಿಗೂ ದೊರಕುವಂತೆ ಮಾಡುವ ಸಲುವಾಗಿ ಅವರ ಸಾಂಖ್ಯಿಕ ಶಕ್ತಿಯನ್ನು ಹೆಚ್ಚಿಸುವದುಉ.

೨೦೦೨ ರ ಮಾಹಿತಿಯಂತೆ ಮಹಿಳಾ ಸಾಮುಖ್ಯವು ರಾಜ್ಯದ ೭೫ ಜಿಲ್ಲೆಗಳ ೩೧ ತಾಲೂಕುಗಳ ೧೧೦೦ ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಸ್ಥಾಪಿಸಿದ ಗ್ರಾಮ ಮತ್ತು ತಾಲೂಕು ಮಟ್ಟದಲ್ಲಿನ ಸಂಘಗಳು, ಒಕ್ಕೂಟಗಳು ತಂತಮ್ಮ ಕ್ಷೇತ್ರಗಳಲ್ಲಿ ಶಿಕ್ಷಣ, ಸಾಕ್ಷರತೆ, ಆರೋಗ್ಯ ಸ್ವಯಂ ಉದ್ಯೋಗ, ಕಾನೂನು ಜಾಗೃತಿ ಶಿಬಿರ ಇತ್ಯಾದಿಗಳ ಮೂಲಕ ಶಾಲೆಗಳ ಮೇಲೆ ನಿಗಾ ಇಟ್ಟು, ಎಸ್.ಡಿ.ಎಂ.ಸಿ ಗಳಲ್ಲಿ ಜನರು ಭಾಗವಹಿಸುವಂತೆ ಮಾಡುವುದು, ಗ್ರಾಮ ಪಂಚಾಯತಿಗಳಲ್ಲಿ, ಗ್ರಾಮ ಸಭೆಗಳಲ್ಲಿ ಮಹಿಳೆಯರು ಸಕ್ರಿಯ ಪಾತ್ರವನ್ನು ವಹಿಸುವಂತೆ ಅವರನ್ನು ಬೆಂಬಲಿಸುವುದು, ಶ್ರಮದಾನದಿಂದ ಕಟ್ಟಡ ಕೆಲಸ, ಸ್ವಚ್ಛತಾ ಆಂದೋಲನ, ಶೌಚಾಲಯಗಳ ಬಗ್ಗೆ ಅರಿವು, ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿಯೆತ್ತಿ ಹೋರಾಟ (ವರದಕ್ಷಿಣೆ, ಕುಡಿತ) ಇತ್ಯಾದಿ.

ಕಾರ್ಮಿಕ ಕಲ್ಯಾಣ

ಕಾರ್ಮಿಕ ಕಲ್ಯಾಣ ಇಲಾಖೆಯು ಕಾರ್ಮಿಕರಿಗಾಗಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಆಯೋಜಿಸಿ ವಿನ್ಯಾಸಗೊಳಿಸುತ್ತದೆ. ಇತ್ತೀಚಿನ ದಶಕಗಳಲ್ಲಿ ಈ ಇಲಾಖೆಯು ತನ್ನ ರಚನೆಯಲ್ಲಿಯೂ, ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಮುಂದಾಗುವ ಅಧಿಕಾರಿಗಳ ಮೂಲಕ, ಆಯಾ ಪಂಚಾಯತಿಗಳ, ಆರಕ್ಷಕ ಸಿಬ್ಬಂದಿಯ, ಇತರ ಸರ್ಕಾರಿ ಇಲಾಖೆಗಳ ಅಧಿಕಾರಿಗಲು ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಅನೇಕ ನವೀನ ಕಾರ್ಯಕ್ರಮಗಳನ್ನು ಕಾರ್ಮಿಕರ ಉದ್ಧಾರಕ್ಕಾಗಿ ಅನುಷ್ಠಾನಗೊಳಿಸುತ್ತಿದೆ.

ಇಲಾಖೆಯ ಮುಖ್ಯ ಕಾರ್ಯಕ್ಷೇತ್ರಗಳೆಂದರೆ

- ಮುಷ್ಕರಗಳು ಮತ್ತು ಕೈಗಾರಿಕಾ ವಿವಾದ ಮೊದಲಾದವುಗಳನ್ನು ತಡೆಗಟ್ಟುವುದು ಮತ್ತು ಶಾಂತಿ ಸೌಹಾರ್ದತೆಯನ್ನುಂಟು ಮಾಡುವುದು.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ಕಾಯ್ದೆ ಕಾನೂನುಗಳನ್ನು ಅನುಷ್ಠಾನಗೊಳಿಸುವುದು.
- ಕನಿಷ್ಠ ವೇತನ ಕಾಯ್ದೆ ಅನ್ವಯ ವಿವಿಧ ಉದ್ಯೋಗಗಳಿಗೆ ವೇತನವನ್ನು ಪರಿಷ್ಕರಿಸುವುದು.
- ಕಾರ್ಮಿಕ ಶಿಕ್ಷಣ ಯೋಜನೆಯನ್ನು ಪ್ರಚಲಿತಗೊಳಿಸಿ ಕಲ್ಯಾಣ ಕೇಂದ್ರಗಳ ಮೂಲಕ ಕಾರ್ಮಿಕರಿಗೆ ಮನೋರಂಜನಾ ಚಟುವಟಿಕೆಗಳನ್ನು ಒದಗಿಸುವುದು.

ಕಾರ್ಮಿಕ ರಾಜ್ಯ ವಿಮಾ ಯೋಜನೆ

ಕರ್ನಾಟಕದ ಕಾರ್ಮಿಕ ಕಾಯಿದೆಯು ಕಾರ್ಮಿಕರಿಗೆ ಅನಾರೋಗ್ಯ, ಹೆರಿಗೆ, ವಿಕಲಾಂಗತೆ, ಮರಣೋತ್ತರ ಕಾಯಿಲೆಗಳು ಮುಂತಾದ ಕಠಿಣವಾದವುಗಳಲ್ಲಿ ಧನ ಸಹಾಯವನ್ನು ನೀಡುತ್ತದೆ. ಕರ್ನಾಟಕ ರಾಜ್ಯವು ದೇಶದಲ್ಲಿಯೇ ಬಾಲ ಕಾರ್ಮಿಕ ಪದ್ಧತಿಯ ವಿರುದ್ಧ ಪ್ರಬಲವಾಗಿ ಸಿಡಿದೆದ್ದಿರುವ ಒಂದು ರಾಜ್ಯವಾಗಿದೆ. ಒಂದು ಕಾರ್ಯಕ್ರಮದ ಪ್ರಕಾರ (ಎ.ಪಿ.ಸಿ.ಎಲ್.ಕೆ. ಎಂದರೆ, ಆಕ್ಷನ್ ಪ್ಲಾನ್ ಫಾರ್ ದ ಯೆಲಿಮಿನೇಶನ್ ಆರ್ಫ ಚೈಲ್ಡ್ ಕರ್ನಾಟಕ) ೨೦೦೭ ರ ಜೂನ್ ವೇಳೆಗೆ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಷಿದ್ಧಗೊಳಿಸಲಾಗಿದೆ. ಇದಕ್ಕಾಗಿ ಅನೇಕ ಸರ್ಕಾರೇತರ ಒಳಗೂಡಿ ಚೈಲ್ಡ್ ರಿಲೀಫ್ ಅಂಡ್ ಯೂ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್, ಮಾಯಾ, ಇತ್ಯಾದಿ ಅಂತರಾಷ್ಟ್ರೀಯ (ಐ.ಎಲ್.ಒ) ವಿಶ್ವಸಂಸ್ಥೆ ಮುಂತಾದವುಗಳ ನೆರವಿನೊಂದಿಗೆ ಬಾಲ ಕಾರ್ಮಿಕತೆಯ ಪ್ರಮಾಣ, ಅಗಾಧತೆ, ಕ್ಷೇತ್ರಗಳು ನಿವಾರಿಸುವಲ್ಲಿನ ಸಮಸ್ಯೆಗಳು ಇವುಗಳ ಬಗ್ಗೆ ಅನೇಕ ಯೋಜನೆಗಳನ್ನು ಚಾಲ್ತಿಯಲ್ಲಿ ತಂದಿವೆ. ಉದ್ಯೋಗದಿಂದ ಇಂತಹ ಗುರುತಿಸಿ ಅವರನ್ನು ಕೆಲಸದಿಂದ ಹೊರಬರಲು ಬೇಕಾಗುವ ಅರಿವನ್ನು ತಂದೆ ತಾಯಿಗಳಿಗೆ ಕೊಟ್ಟು, ಕೆಲಸದಿಂದ ಬಿಡಿಸಿ ಅವರ ಕಡೆಗೂ ಕೂಡ ಗಮನಯಹರಿಸಿ ಅನೇಕ ಸೇತುವೆ ಶಾಲೆಗಳ (ಬ್ರಿಡ್ಜ್ ಸ್ಕೂಲ್ಸ್) ನ್ನು ಸ್ಥಾಪಿಸಿ (ಎನ್.ಜಿ.ಓ.ಗಳ

ನೆರವಿನಿಂದ) ಮುಂದೆ ಈ ಮಕ್ಕಳನ್ನು ಮುಖ್ಯವಾಹಿನಿ ಶಾಲೆಗೆ ಸೇರಿಸುವ ತನಕ, ಯೋಜನೆಗಳನ್ನು ಹಾಕಿಕೊಂಡಿದೆ.

ಮಹಿಳಾ ಪರ ಕಾನೂನುಗಳು

೧ ಸಮಾನ ಕೆಲಸಕ್ಕೆ ಸಮಾನ ವೇತನ ಕಾಯ್ದೆ ೧೯೭೬

೨ ಹಿಂದೂ ವಿವಾಹ ಕಾಯ್ದೆ ೧೯೫೫

೩ ಅನೈತಿಕ ಸಂಬಂಧ ನಿಷೇಧ ಕಾಯ್ದೆ ೧೯೫೬

೪ ವರದಕ್ಷಿಣೆ ನಿಷೇಧ ಕಾಯ್ದೆ ೧೯೬೧, ಇದು ೧೯೮೪ ಮತ್ತು ೧೯೮೬ ರಲ್ಲಿ ಪುನರ್ ಪರಿಶಿಲನಗೊಂಡು ಅತ್ತೆ ಮತ್ತು ನಾದಿನಿಯನ್ನು ಸಹ ತಪ್ಪಿತಸ್ಥರೆಂದು ಕರೆಯುವ ಕಾನೂನು ಜಾರಿಗೆ ಬಂದಿತು.

೫ ಕಾರ್ಖಾನೆಗಳ ಕಾಯ್ದೆ, ೧೯೪೮ ಕಡ್ಡಾಯವಾಗಿ ಪ್ರತಿ ಕಾರ್ಖಾನೆಯಲ್ಲೂ ಮಗುವಿನ ತೊಟ್ಟಿಲು ವ್ಯವಸ್ಥೆ ಮಾಡುವುದು (ಪ್ರತಿ ೩೦ ಮಹಿಳಾ ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ)

೬ ವೈದ್ಯಕೀಯ ಗರ್ಭಪಾತ ನಿರ್ವಹಣೆಯ ಕಾಯ್ದೆ ೧೯೭೧

೭ ಅಪರಾಧ ಕಾಯ್ದೆ ೧೯೮೩ (ಹೆಣ್ಣಿನ ಮೇಲಿನ ಬಲಾತ್ಕಾರಕ್ಕಾಗಿ)

೮ ಮಹಿಳೆಯರ ಮೇಲೆ ಅವಹೇಳ ನರಕರ ಕೃತ್ಯ ತಡೆ ಕಾಯ್ದೆ ೧೯೮೬

೯ ಸತಿಪದ್ಧತಿ ನಿಷೇಧ ಕಾಯ್ದೆ ೧೮೮೭

ಇಷ್ಟೇ ಅಲ್ಲದೇ ಭಾರತದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ/ಪಂಗಡದವರೆಗೆ ಸಂವಿಧಾನ ಬದ್ದವಾದ ಸೌಲಭ್ಯಗಳು ದೊರೆಯುವಂತೆ ಮಾಡುವ ಸಲುವಾಗಿ, ಅವರ ಅಭಿವೃದ್ದಿಗಾಗಿ ಶಾಸನಬದ್ದ ಹಕ್ಕಗಳನ್ನು ಪಡೆಯಲು ಅನೇಕ ವಿದಿಗಳು ಹಾಗೂ ಪರಚ್ಛೇದಗಳನ್ನು ನೀಡಲಾಗಿದೆ. ಅವುಗಳೆಂದರೆ,

೧೫ ಕಲಂ ಭಾರತ ಸಂವಿಧಾನದ ಕಲಂ ೧೫ ರಂತೆ ಕೆಲವು ಭಿನ್ನತೆಯ ಮೇಲೆ ನಿಷೇಧಕ್ಕೆ ನಿಬಂಧನೆಗಳನ್ನು ನೀಡುತ್ತದೆ. ಅವು ಧರ್ಮ, ಜನಾಂಗ, ಜನಾಂಗೀಯತೆ, ಜಾತಿ, ಲಿಂಗ, ಬಣ್ಣ, ಜನನ ಇತ್ಯಾದಿ ಕಲಂ ೧೫ ರ ಪರಿಚ್ಛೇದಗಳ ಪ್ರಕಾರ ಎಸ್ಸಿಗಳೊಂದಿಗೆ ಯಾವುದೇ ರೀತಿಯ ವ್ಯತ್ಯಾಸವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಪರಿಚ್ಛೇದ (೪) ಕಲಂ ೧೫ ರ ಪ್ರಕಾರ ಎಸ್ಸಿ ಎಸ್ಸಿ ಮತ್ತು ಸಾಮಾಜಿಕ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ವಿಶೇಷ ನಿಬಂಧನೆಗಳನ್ನು ಹೊಂದಿದೆ. ಈ ನಿಬಂಧನೆಯು ನಮ್ಮ ಸಂವಿಧಾನದ ೪೬ನೇ ಅಧ್ಯಾಯದಲ್ಲಿ ಅಳವಡಿಸಿಕೊಂಡ ನೀತಿಗಳಿಗೆ ಅನುಗುಣವಾಗಿರುತ್ತದೆ. ಇದು ಶಿಕ್ಷಣ ಮತ್ತು ಆರ್ಥಿಕ ಹಿತಾಸಕ್ತಿಗಳಿಗಾಗಿ ದುರ್ಬಲ ವರ್ಗಗಳ ಸಾಮಾಜಿಕ ನ್ಯಾಯಕ್ಕಾಗಿ ರಾಜ್ಯಗಳಿಂದ ವಿಶೇಷ ಗಮನವನ್ನು ಒತ್ತು ನೀಡುತ್ತದೆ.

ಕಲಂ ೧೫ ಪರಿಚ್ಛೇದ (೪) ಮತ್ತು ಕಲಂ ೨೯ರ ಪರಿಚ್ಛೇದ (೨) ರ ಪ್ರಕಾರ ಎಸ್ಟಿಗಳು ಎಸ್ಸಿಗಳು ಮತ್ತು ದುರ್ಬಲ ವರ್ಗಗಳ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಹೆಚ್ಚಿಸಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವ ರಾಜ್ಯಗಳನ್ನು ಯಾರು ನಿಷೇಧಿಸಬಾರದು.

ಕಲಂ ೧೫ ನಮ್ಮ ಸಂವಿಧಾನದ ಈ ಕಲಂ ಸರ್ಕಾರಿ ಉದ್ಯೋಗಗಳಲ್ಲಿ ಎಲ್ಲರಿಗೂ ಸಮಾನದಿಂದ ಅವಕಾಶವನ್ನು ನೀಡುವ ಬಗ್ಗೆ ವ್ಯವಹರಿಸುತ್ತದೆ.

ನಮ್ಮ ಸಂವಿಧಾನದ ಕಲಂ ೧೬ ಪರಿಚ್ಛೇದ (೪) ರ ಪ್ರಕಾರ ಸರ್ಕಾರಿ ಉದ್ಯೋಗಗಳಲ್ಲಿ ಎಸ್ಟಿ ಮತ್ತು ಎಸ್ಸಿ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಲ್ಲಿ ಯಾವ ರಾಜ್ಯಗಳು ನಿಷೇಧಿಸಬಾರದು.

ಕಲಂ ೧೯ ನಮ್ಮ ಸಂವಿಧಾನದ ಈ ಕಲಂ ಭಾರತ ಪ್ರಾಂತ್ಯದಲ್ಲಿ ಯಾವುದೇ ಭಾರತೀಯ ನಾಗರೀಕರಿಂದ ಆಸ್ತಿಯನ್ನು ಪಡೆದುಕೊಳ್ಳುವ ನಿಬಂಧನೆಘಳ ಬಗ್ಗೆ ವ್ಯವಹರಿಸುತ್ತದೆ. ಈ ಕಲಂ ಪ್ರಕಾರ ಸ್ವಾಧೀನಪಡಿಸಿಕೊಂಡಿರುವ ಆಸ್ತಿಯನ್ನು ಮಾರಲು ಆಸ್ತಿಯನ್ನು ಪಡೆಯಲು ಕೆಲಸ ಮಾಡಲು ಎಸ್ಟಿಗಳಿಗೆ ಭಾರತದಲ್ಲಿ ಯಾವುದೇ ಭಾಗಗಳಲ್ಲಿ ಭೇಟಿ ನೀಡಲು ಹಕ್ಕುಗಳನ್ನು ಒದಗಿಸಲಾಗಿದೆ.

ಕಲಂ ೧೯ ರ ಪರಿಚ್ಛೇದ (೪) ರ ಪ್ರಕಾರ ಬುಡಕಟ್ಟು ಭೂಮಿಯನ್ನು ಮತ್ತು ಪ್ರದೇಶಗಳನ್ನು ರಕ್ಷಿಸುವ ನಿಬಂಧನೆಗಳ ಬಗ್ಗೆ ವ್ಯವಹರಿಸುತ್ತದೆ.

ಕಲಂ ೪೬ ರ ಪ್ರಕಾರ ನಮ್ಮ ಸಂವಿಧಾನದ ಕಲಂ ಭಿಕ್ಷುಕರ ಪ್ರಥಾ ಮತ್ತು ಬಲವಂತದ ಕಾರ್ಮಿಕರನ್ನು ನಿಷೇಧಿಸಲಾಗಿದೆ. ೧೯೭೬ ರಲ್ಲಿ ಬಂಧಿತ ಕಾರ್ಮಿಕರ ನಿರ್ಮೂನೆ (ಕಾಯಿದೆ) ಯನ್ನು ಅಂಗೀಕರಿಸಿತ್ತು. ಈ ಕಾಯಿದೆ ಬುಡಕಟ್ಟು ಪ್ರದೇಶಗಳಲ್ಲಿ ಬಂಧಿತ ಕಾರ್ಮಿಕ ವ್ಯವಸ್ಥೆ ಕಾರ್ಯಚರಣೆಯ ಮೇಲೆ ನಿಷೇದ ಹೇರುತ್ತದೆ.

ಕಲಂ ೨೯ ನಮ್ಮ ಸಂವಿಧಾನದ ಈ ಕಲಾ ನಿಬಂಧನೆಯ ಪ್ರಕಾರ ಎಸ್ಟಿಗಳಿಗೆ ಯಾವುದೇ ರಾಜವು ಯಾವುದೇ ಸಂಸ್ಕೃತಿ ಮತ್ತು ಭಾಷೆಗಳನ್ನು ಹೇರುವುದಿಲ್ಲ.

ಕಲಂ ೪೬ ನಮ್ಮ ಸಂವಿಧಾನದ ಈ ಕಲಂ ಎಸ್ಟಿ ಎಸ್ಸಿಗಳು ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ನಿಬಂಧಗಳನ್ನು ಹೊಂದಿದೆ.

ಕಲಂ ೧೪೬ ಜಾರ್ಖಂಡ ಒರಿಸ್ಸಾ ಮತ್ತು ಮಧ್ಯಾಯ ಪ್ರದೇಶ ರಾಜ್ಯಗಳಲಿ ಎಸ್ಟಿಗಳ ಹಿತಾಸಕ್ತಿಯನ್ನು ರಕ್ಷಿಸಲು ಬುಡಕಟ್ಟು ಕಲ್ಯಾಣಮಂತ್ರಿಯ ನೇಮಕಾತಿಗಾಗಿ ಈ ಕಲಂ ಪ್ರಸ್ತಾಪಿಸಿದೆ.

ಕಲಂ ೩೨೫ ನಮ್ಮ ಸಂವಿಧಾನದ ಈ ಕಲಂನ ಬುಡಕಟ್ಟು ಧರ್ಮ ಜನಾಂಗೀಯ ಜಾತಿ, ಲಿಂಗ, ಬಣ್ಣದ ನಂಬಿಕೆ ಮತ್ತು ಜನ್ಮಸ್ಥಳ ಭಾಷೆಯ ಆಧಾರದ ಮೇಲೆ ಮತದಾನದಲ್ಲಿ ಯಾವುದೇ ವ್ಯತ್ಯಾಸವನ್ನು ಒದಗಿಸುವುದಿಲ್ಲ ಎಂಬ ವಿಚಾರವನ್ನು ಹೊಂದಿದೆ.

ಕಲಂ ೩೪೨ ಗೌರವಾನ್ವಿತ ಅಧ್ಯಕ್ಷ ಅಡಿಯಲ್ಲಿರುವ ನಿಬಂಧನೆಗಳ ಪ್ರಕರ ನಮ್ಮ ದೇಶದ ಗೌರವಾನ್ವಿತ ಅಧ್ಯಕ್ಷರಿಂದ ಎಸ್ಟಿಗಳ ಪಟ್ಟಿಯನ್ನು ತಯಾರಿಸುವ ನಿಬಂಧನೆಗಳನ್ನು ನಮ್ಮ ಸಂವಿಧಾನದ ಈ ಕಲಂ ವ್ಯವಹರಿಸುತ್ತದೆ. ಮತ್ತು ಪಟ್ಟಿ ಮಾಡುವ ಮೂಲಕ ಕೆಲವು ಬುಡಕಟ್ಟು ಜನಾಂಗದವರು ಎಸ್ಟಿಗಳ ಸ್ಥಾನಮಾನವನ್ನು ಒದಗಿಸಿದೆ.

ಒಟ್ಟಿನಲ್ಲಿ ಪರಿಶಿಷ್ಟ ವರ್ಗಗಳ ಮಹಿಳಾ ಕೃಷಿ ಕಾರ್ಮಿಕರ ಅಭಿವೃದ್ಧಿಗೆ ಸರ್ಕಾರದಿಂದ ಇಷ್ಟೆಲ್ಲಾ ಸವಲತ್ತುಗಳಿದ್ದರೂ ಕೂಡ ಅವರ ಜೀವನಮಟ್ಟ ಸುಧಾರಣೆಯಾಗಿಲ್ಲ. ಇಂದಿಗೂ ಕೂಡ ಕೃಷಿ ಕಾರ್ಮಿಕರು ಅಸಂಘಟಿತರಾಗಿದ್ದು, ಕಡಿಮೆ ವೇತನ, ಬಡತನ, ಅನಕ್ಷರತೆ, ಅಕುಶಲತೆ, ಋಣಭಾರ (Indebtendness) ಹೆಚ್ಚಿನ ಅವಧಿಯ ದುಡಿಮೆ ಮುಂತಾದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇದಲ್ಲದೆ ಸಾಮಾಜಿಕ ಭದ್ರತಾ ಸೌಲಭ್ಯಗಳಾದ ಅಪಘಾತ ವಿಮೆ, ನಿರುದ್ಯೋಗ ಭತ್ಯೆ, ವೈದ್ಯಕೀಯ ಸವಲತ್ತುಗಳು ಮರೀಚಿಕೆಯಾಗಿವೆ. ಇಷ್ಟೆಲ್ಲಾ ಸಮಸ್ಯೆಗಳ ನಡುವೆಯೂ ಕೂಡ ಅವರ ಜೀವನಮಟ್ಟದಲ್ಲಿ ಹಲವಾರು ಸುಧಾರಣೆಗಳಾಗಿವೆ. ಆದರೆ ನಿರೀಕ್ಷಿಸಿದ ಪ್ರಮಾಣದಲ್ಲಿ ಅವರ ಅಭಿವೃದ್ಧಿ ಸಾಧ್ಯವಾಗಿಲ್ಲ. ಏಕೆಂದರೆ ಸರ್ಕಾರದ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಅಲ್ಲದೇ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳ ಕೊರತೆಯಿದೆ. ನಮ್ಮ ಭಾರತ ಬಹುತೇಕ ಯೋಜನೆಗಳು ಕೇವಲ ಅಂಕಿ ಅಂಶಗಳ ಮುದ್ದೆಯಾಗಿದೆ. ಅಭಿವೃದ್ಧಿ ಕೇವಲ ಸರ್ಕಾರಿ ದಾಖಲೆಗಳಲ್ಲಿವೆಯೇ ಹೊರತು ನಿಜವಾಗಿಯೂ ಸಾಧ್ಯವಾಗಿಲ್ಲ. ಇದಕ್ಕೆ ಪ್ರಮುಖ ಕಾರಣ ಯಾವುದೇ ಯೋಜನೆಗಳು ಆಯಾಯ ಸಮುದಾಯಗಳ ಸಮಾಜ ಮತ್ತು ಸಂಸ್ಕೃತಿಗೆ ಅನುಗುಣವಾಗಿಲ್ಲ. ನೀತಿ ನಿರೂಪಕರಿಗ ಸಮುದಾಯದ ಸಮಸ್ಯೆಗಳ ಬಗ್ಗೆ ಅರಿವಿಲ್ಲ. ಅವರ ಆಚಾರ, ವಿಚಾರ ಸಂಸ್ಕೃತಿಗಳ ಬಗ್ಗೆ ಆಳವಾದ ಜ್ಞಾನವಿರುವುದಿಲ್ಲ. ಆದ್ದರಿಂದಾಗಿ ಸರ್ಕಾರದ ಕಾರ್ಯಕ್ರಮಗಳು ಪರಿಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ ಮತ್ತು ತಲುಪುತ್ತಿಲ್ಲ. ಇದಕ್ಕೆಲ್ಲ ಪರಿಹಾರವೆಂದರೆ ಆಯಾಯ ಸಮುದಾಯಗಳಿಗೆ ಸಮಾಜ ಮತ್ತು ಸಂಸ್ಕೃತಿಗನುಗುಣವಾಗಿ ಅಗತ್ಯವಿರುವ ಸವಲತ್ತುಗಳನ್ನು ಕಲ್ಪಿಸಲು ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ ಅನುಕೂಲವಾಗುತ್ತದೆ ಎಂಬುದನ್ನು ಮಾನವಶಾಸ್ತ್ರಜ್ಞರಿಂದ ಅಧ್ಯಯನ ಮಾಡಿಸಿ ಅವರ ಸಲಹೆಯನ್ನು ಪಡೆದುಕೊಂಡು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರೆ ಪರಿಣಾಮಕಾರಿ ಬದಲಾವಣೆಯನ್ನು ತರಬಹುದಾಗಿದೆ.

ಆಧಾರಗಳು

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು. ೨೦೧೯

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ಯೋಜನೆಗಳ ಪರಿಚಯದ ಕೈಪಿಡಿ

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ಕ್ರಿಯಾ ಯೋಜನೆ ೨೦೧೭-೨೦೧೮

ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆಯಿಂದ ರೈತರಿಗೆ ದೊರೆಯುವ ಸೌಲಭ್ಯಗಳು, ಸಮಗ್ರ ಕೃಷಿ ಅಭಿಯಾನ, ಜಲಜಾಗೃತಿ ವರ್ಷ, ಬಳ್ಳಾರಿ, ೨೦೧೭-೧೮

ಪರಿಶಿಷ್ಟ ಪಂಗಡದ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳ ಕೈಪಿಡಿ

ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಕೈಪಿಡಿ

ಬೋರಲಿಂಗಯ್ಯ ಹಿ.ಚಿ., ಸುರ್ವಣಕರ್ನಾಟಕ, ಅಭಿವೃದ್ಧಿ ಪಥ ಸಂಪುಟ(೧) ಕ ವಿ ವಿ, ಹಂಪಿ

ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಮಾಹಿತಿಯ ಕೈಪಿಡಿ, ೨೦೧೬, ಲೇಖನ ಸಾಮಾಗ್ರಿ ಮತ್ತು ಪ್ರಕಟನೆಗಳ ಇಲಾಖೆ, ಬೆಂಗಳೂರು

ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ ೨೦೧೭-೨೦೧೮

ಶೈಲಜಾ ಕೆ, ೨೦೧೬, ಪರಿಶಿಷ್ಟ ಜಾತಿ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳು, ಒಂದು ಮಾನವಶಾಸ್ತ್ರೀಯ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್ ಡಿ ಅಪ್ರಕಟಿತ ಮಹಾಪ್ರಬಂಧ

ಬೋರಲಿಂಗಯ್ಯ ಹಿ ಚಿ,೨೦೦೭, ೫೦ ಸುವರ್ಣ ಕರ್ನಾಟಕ ಅಭಿವೃದ್ಧಿ ಪಥ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ ಗ್ಯಾಸೇಟಿಯರ್, ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು.

ಅಧ್ಯಾಯ : ಐದು

ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿ

ಅಧ್ಯಾಯ : ಐದು

ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿ

೪.೧. ಬೇಡ ಸಮುದಾಯದ ಕೃಷಿ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿ

೪.೨. ಬೇಡ ಸಮುದಾಯದ ಕೃಷಿ ಕಾರ್ಮಿಕರ ಶೈಕ್ಷಣಿಕ ಸ್ಥಿತಿಗತಿ

೪.೩. ಬೇಡ ಸಮುದಾಯದ ಕೃಷಿ ಕಾರ್ಮಿಕರ ಆರ್ಥಿಕ ಸ್ಥಿತಿಗತಿ

೪.೪. ಬೇಡ ಸಮುದಾಯದ ಕೃಷಿ ಕಾರ್ಮಿಕರ ಆರೋಗ್ಯದ ಸ್ಥಿತಿಗತಿ

೪.೫. ಬೇಡ ಸಮುದಾಯದ ಕೃಷಿ ಕಾರ್ಮಿಕರ ಸರ್ಕಾರದ ಸೌಲಭ್ಯಗಳ ಸ್ಥಿತಿಗತಿ

ಅಧ್ಯಾಯ: ಐದು

ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳು

ಕೃಷಿಯಲ್ಲಿ ಮಹಿಳೆಗೆ ಮಹತ್ವವಾದಂತಹ ಸ್ಥಾನವಿದೆ. ಕೃಷಿಯಲ್ಲಿನ ಹಲವಾರು ಆಚರಣೆಗಳು–ಪದ್ಧತಿ, ವಿಧಾನ ಪ್ರಾರಂಭವಾಗುವುದು ಮಹಿಳೆಯಿಂದ. ಬೀಜ ಸಂಗ್ರಹಣೆಯಿಂದ ಹಿಡಿದು ಬಿತ್ತಿ ಫಲ ನೀಡುವವರೆಗೂ ಮಹಿಳೆಯರ ಪಾತ್ರ ಹೆಚ್ಚು. ಬಹುಪಾಲು ಬದುಕು ಅವಲಂಬಿತವಾದದ್ದೇ ಕೃಷಿಯ ಮೇಲೆ. ಇದರ ಆಧಾರದಲ್ಲಿಯೇ ಸಮುದಾಯದ ಸಂಪ್ರದಾಯ ಆಚರಣೆಗಳು ಪ್ರಾರಂಭವಾಗುತ್ತವೆ. ಅನ್ನ ನೀಡುವ ಭೂಮಿ ತಾಯಿಯನ್ನು ನೆಚ್ಚಿಕೊಂಡೆ ಕೃಷಿಕ, ಆಯಾಗಾರ, ಕೂಲಿಕಾರ ಎಲ್ಲರೂ ಒಕ್ಕಲುತನಕ್ಕೆ ಸಂಬಂಧಿಸಿದಂತೆ ಹಲವಾರು ಆಚರಣೆಗಳನ್ನು, ರೀತಿ–ನೀತಿಗಳನ್ನು ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದಿದ್ದಾರೆ; ಬರುತ್ತಲಿದ್ದಾರೆ. ಇವು ಕಂದಚಾರದ ಆಚರಣೆಗಳಲ್ಲ. ಇವುಗಳಲ್ಲಿ ಮುಗ್ಧತೆ ಭಕ್ತಿ, ಗೌರವ, ಸಹಬಾಳ್ವೆ ಇದೆ.

೫.೧ ಬೇಡ ಕೃಷಿ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿ

ಈ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡು ಹೆಣ್ಣು ಎಂಬ ಬೇದಗಳಿವೆ. ಬೇಡ ಮಹಿಳಾ ಕೃಷಿ ಕಾರ್ಮಿಕರು ತಮ್ಮದೇ ಜೀವನ ಶೈಲಿಯೊಂದಿಗೆ ಬದುಕುತ್ತಿರುವ ಹಾಗೂ ಶ್ರಮ ಜೀವಿಗಳಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಕೃಷಿಯಲ್ಲಿ ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರೇ ಹೆಚ್ಚು ಕೆಲಸ ನಿಭಾಯಿಸುತ್ತಾಳೆ. ಹೊಸಪೇಟೆ ಮತ್ತು ಕೂಡ್ಲಿಗಿ ಭಾಗದಲ್ಲಿನ ಬೇಡ ಮಹಿಳೆಯರಿಗೆ ಕೃಷಿ ಭೂಮಿ ಕಡಿಮೆ. ಇದಕ್ಕೆ ಮೂಲ ಕಾರಣ ಹಿಂದೆ ಧಣಿ, ಸ್ವಾಮಿ, ಬ್ರಾಹ್ಮಣರು ಇವರ ಕೃಷಿ ಭೂಮಿಯನ್ನು ಒತ್ತೆ ಇಟ್ಟುಕೊಂಡು ಇವರನ್ನು ಗುಲಾಮರಂತೆ ಇಂದಿನವರೆಗೂ ದುಡಿಸಿಕೊಂಡು ಬರುತ್ತಿರುವುದನ್ನು ನಾವು ನೋಡಬಹುದು. ಬೇಡ ಮಹಿಳೆಯರು ಹೆಚ್ಚಾಗಿ ಕೃಷಿಯ ಜೊತೆಗೆ ಬೇರೆ ಬೇರೆ ಕೆಲಸಗಳನ್ನು ಮಾಡಿದರೂ ಸಹ ಅವರ ಸ್ಥಿತಿ ಶೋಚನೀಯವಾಗಿದೆ. ಬೀಜ ಬಿತ್ತನೆಯಿಂದ

ಹಿಡಿದು ಬೆಳೆ ಕಟಾವು ಮಾಡುವವರೆಗೂ ನಿರಂತರವಾದ ಕಾರ್ಯ ಮಾಡಿದರೂ ಬಂದಂತಹ ಆದಾಯದ ಒಂದು ಭಾಗವನ್ನೂ ಸಹ ಮಹಿಳೆ ಕೇಳುವಂತಿಲ್ಲ. ಅದು ಪುರುಷನ ಪಾಲಾಗುವಂತಹ ಸಾಮಾಜಿಕ ವ್ಯವಸ್ಥೆಯ ಪರಿಸ್ಥಿತಿಯನ್ನು ಕಾಣಬಹುದು. ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಬೇಕಾದರೆ ಅಲ್ಲಿನ ಮಾನವ ಸಂಪನ್ಮೂಲ ಅತಿ ಮುಖ್ಯವಾಗುತ್ತದೆ. ಆರೋಗ್ಯವಂತ ವ್ಯಕ್ತಿಗಳು ದೇಶದ ನಿಜವಾದ ಸಂಪತ್ತು. ಕೃಷಿ ಕ್ಷೇತ್ರದಲ್ಲಿ ಯಥೇಚ್ಚವಾಗಿ ದೊರೆಯುವ ಸಂಪನ್ಮೂಲವೆಂದರೆ ಈ ಕ್ಷೇತ್ರದಲ್ಲಿ ದೊರೆಯುವ ಮಹಿಳೆಯರು. "ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರಲ್ಲಿ ಶೇಕಡಾ ೭೪ ರಷ್ಟು ಮಹಿಳೆಯರು ಕೃಷಿ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ. ಶೇಕಡಾ ೨೮ರಷ್ಟು ಮಹಿಳೆಯರು ಸಾಗುವಳಿದಾರರಾಗಿದ್ದಾರೆ. ಶೇಕಡಾ ೪೬ರಷ್ಟು ಕೃಷಿ ಕಾರ್ಮಿಕ ಮಹಿಳೆಯರಿದ್ದಾರೆ. ಕರ್ನಾಟಕದ ಅರ್ಥ ವ್ಯವಸ್ಥೆಯ ಕೃಷಿ ಕ್ಷೇತ್ರದಲ್ಲಿ ಮಹಿಳೆಯರದ್ದೇ ಸಿಂಹಪಾಲು. ವ್ಯವಸಾಯದ ಕೆಲಸಗಳಲ್ಲಿ ನಿರತರಾಗಿರುವ ಒಟ್ಟು ಜನರಲ್ಲಿ ಶೇಕಡಾ ೫೧.೨ ರಷ್ಟು ಮಹಿಳೆಯರಿದ್ದಾರೆ. ಪುರುಷರ ಸಂಖ್ಯೆ ೪೮.೮ ರಷ್ಟಿದೆ. ಅಂದರೆ ಪುರುಷರಿಗಿಂತ ೬ ಲಕ್ಷ ಮಹಿಳೆಯರು ಅಧಿಕವಾಗಿದ್ದಾರೆ. ಸಾಗುವಳಿಯಲ್ಲಿ ಶೇಕಡಾ ೧೬.೪ರಷ್ಟಿದ್ದಾರೆ. ಕೃಷಿ ಕಾರ್ಮಿಕ ಮಹಿಳೆಯರು ೪೬.೯ರಷ್ಟಿದ್ದಾರೆ. ಇಲ್ಲಿ ಮಹಿಳಾ ಸಾಗುವಳಿದಾರರು ಕಡಿಮೆಯಿದ್ದು, ಕೃಷಿ ಕಾರ್ಮಿಕ ಮಹಿಳೆಯರು ಅಧಿಕವಾಗಿದ್ದಾರೆ. ಪುರುಷರು ಹೆಚ್ಚಿನ ಕೂಲಿಗಾಗಿ ದೂರದ ಊರುಗಳಿಗೆ ಹೋಗುತ್ತಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಪ್ರಧಾನ ಕುಟುಂಬಗಳ ಸಂಖ್ಯೆ ಹೆಚ್ಚುತ್ತಲಿದೆ." (ಪು–ಮಹಿಳಾ ಶ್ರಮಘನತೆ, ಲೇ–ಡಾ. ಸಿದ್ಧಗಂಗಮ್ಮ, ಪು.೧೫) ಈ ಮೇಲಿನ ಅಂಶಗಳು ಒಟ್ಟು ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ಹೊಂದಿರುವ ಪಾಲನ್ನು ಸ್ಪಷ್ಟಪಡಿಸುತ್ತವೆ. ಬೇಡ ಕುಲದ ಮಹಿಳಾ ಕೃಷಿ ಕಾರ್ಮಿಕರ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಅದರಲ್ಲೂ ಬೇಡ ಸಮುದಾಯವು ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನವಾದದ್ದು. ಈ ಕುಲವು ಪ್ರಾಚೀನ ಕಾಲದಲ್ಲಿ ಸಮರಶೀಲ ಸಮುದಾಯ ವಾಗಿರುವುದರಿಂದ ಪುರುಷರಿಗೆ ಇನ್ನಿಲ್ಲದ ಆದ್ಯತೆ. ಬೇಡ ಮಹಿಳೆಯರು ಕೂಡ ಸಮರದಲ್ಲಿ ತೊಡಗಿಕೊಂಡ ಉದಾಹರಣೆಗಳಿದ್ದರೂ ಅವುಗಳು ಅತ್ಯಲ್ಪ. ಅಧಿಕವಾಗಿ ಮಹಿಳೆಯರು ಕೌಟುಂಬಿಕ ವ್ಯವಹಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇತ್ತೀಚೆಗೆ ಕೃಷಿ ಚಟುವಟಿಕೆಯಿಂದ ಕಳೆದ ೩–೪ ದಶಕಗಳಲ್ಲಿ ಪುರುಷರು ದೂರಾಗಿ ಉದ್ಯೋಗ ಹುಡುಕಿಕೊಳ್ಳುವಲ್ಲಿ ಹೆಚ್ಚು ಆಸಕ್ತಿ ಹೊಂದುತ್ತಿದ್ದಾರೆ. ಇದರಿಂದಾಗಿ ಮಹಿಳೆಯರು ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯು ಬೃಹತ್ ಕೈಗಾರಿಕೆಗಳಿಗೆ ಹಾಗೂ ಗಣಿಗಾರಿಕೆಗೆ ಪ್ರಸಿದ್ಧಿಯಾಗಿದೆ. ಗಣಿಗಾರಿಕೆಯ ಕೇಂದ್ರವಾದ ಸಂಡೂರು ತಾಲೂಕಿನ ಗಡಿ ರೇಖೆಗೆ ಹೊಂದಿಕೊಂಡು ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಿವೆ. ಹಾಗಾಗಿ ಇಲ್ಲಿನ ಗಣಿಗಾರಿಕೆಯಲ್ಲಿ ಕೆಲಸ ಮಾಡಲು ನಿರುದ್ಯೋಗಿ ಯುವಕರು ತೆರಳುವುದು ಹೆಚ್ಚು. ಅದರಲ್ಲೂ ಕೂಡ್ಲಿಗಿ ಮತ್ತು ಹೊಸಪೇಟೆಯಲ್ಲಿ ಬೇಡ ಕುಲದವರು ಹೆಚ್ಚಾಗಿ ವಾಸಿಸುತ್ತಿದ್ದು, ಈ ಯುವಕರು ಗಣಿಗಾರಿಕೆಯಲ್ಲಿ ನಾನ ಉದ್ಯೋಗಗಳನ್ನು ಅರಸಿಕೊಂಡು ತೆರಳುತ್ತಿದ್ದಾರೆ. ಇದರಿಂದಾಗಿ


ಮಹಿಳೆಯರು ಕೃಷಿಯನ್ನು ಸಾಗುವಳಿ ಮಾಡುವುದು, ಇಲ್ಲವೆ ಇನ್ನಿತರರ ಹೊಲಗಳಲ್ಲಿ ದುಡಿಯುವುದಕ್ಕಾಗಿ ತೆರಳುವುದು ಸಾಮಾನ್ಯವಾಗಿದೆ. ಕೃಷಿ ಕ್ಷೇತ್ರದಲ್ಲೂ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಕೆಲಸಗಳು ಮತ್ತು ಕೂಲಿಗಳು ಹಂಚಿಕೆಯಾಗಿವೆ. ಈ ರೀತಿಯ ಲಿಂಗ ಸಂಬಂಧ ಕೂಲಿಯಿಂದಾಗಿ ಬೇಡ ಪುರುಷರಿಗೆ ಹೆಚ್ಚಿನ ಅಧಿಕಾರವನ್ನು, ಸಂಪನ್ಮೂಲಗಳ ಮೇಲೆ ಅಂಕುಶವನ್ನೂ ಒದಗಿಸುತ್ತಿವೆ. ಹಾಗೆಯೇ ಎಷ್ಟೇ ದುಡಿದರೂ ಮಹಿಳೆಯರನ್ನು ಪುರುಷರ ಅಧೀನ ಸ್ಥಿತಿಯಲ್ಲಿರುವಂತೆ ಮಾಡಿವೆ. ಇದರಿಂದಾಗಿ ಬೇಡ ಕುಲದ ಮಹಿಳೆಯರಲ್ಲಿ ಅಧೀನತೆಯ ಭಾವ ಮೂಡುವಂತಾಗಿದೆ. ಪುರುಷರು ಪ್ರಧಾನರು, ತಾವು ಅಪ್ರಧಾನರು ಎಂಬ ಭಾವನೆ ಈ ಮಹಿಳೆಯರಲ್ಲಿ ಸಾಮಾನ್ಯವಾಗಿದೆ. ಇನ್ನು ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರು ಮೂಲತಃ ಅಸಂಘಟಿತರು. ಆ ಕಾರಣಕ್ಕಾಗಿ ದುಡಿಯುವ ಸಂದರ್ಭದಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ವಿಫಲರಾಗುತ್ತಿದ್ದಾರೆ. "ಶೇಕಡಾ ೯೬ ರಷ್ಟು ಮಹಿಳಾ ಕಾರ್ಮಿಕರು ಕೆಲಸದ ಸ್ಥಳಗಳಲ್ಲಿ ತಮ್ಮ ಮಾಲೀಕರಿಂದ ಮತ್ತು ಸಹೋದ್ಯೋಗಿಗಳಿಂದ ಒಂದಲ್ಲಾ ಒಂದು ರೀತಿಯ ಲೈಂಗಿಕ ಕಿರುಕುಳವನ್ನು ಅನುಭವಿಸುತ್ತಿದ್ದಾರೆ." (ಪು–ಮಹಿಳಾ ಅಸಮಾನತೆ– ಲೇ.ನ್ಯಾ// ಹೆಚ್ ಎನ್. ನಾಗಮೋಹನದಾಸ್. ಪು–೧೦೨)

ಕರ್ನಾಟಕದ ಐವತ್ತು ಅನುಸೂಚಿತ ಬುಡಕಟ್ಟುಗಳಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಬೇಡ ಸಮುದಾಯವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕೋಷ್ಟಕ: ೫.೧ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರನ್ನು ಆಯ್ಕೆ ಮಾಡಿಕೊಂಡ ಕುಟುಂಬಗಳ ವಿವರ

ಕ್ರ. ಸಂ.	ತಾಲೂಕುಗಳು	ಒಟ್ಟು ಕುಟುಂಬಗಳು	ಒಟ್ಟು ಜನಸಂಖ್ಯೆ	ಕೃಷಿ ಕಾರ್ಮಿಕರು		ಆಯ್ಕೆ ಮಾಡಿಕೊಂಡ ಕುಟುಂಬಗಳು
				ಪುರುಷ	ಮಹಿಳೆ	
೧	ಹೊಸಪೇಟೆ	೧೮,೭೬೮	೭೫,೦೬೯	೨೩,೮೩೪	೨೪,೩೫೨	೨೫೦
೨	ಕೂಡ್ಲಿಗಿ	೨೧,೫೨೦	೮೬,೦೭೭	೧೮,೬೭೧	೨೨,೮೫೧	೨೦೦
	ಒಟ್ಟು	೪೦,೨೮೮	೧,೬೧,೧೪೬	೪೨,೫೦೫	೪೭,೨೦೩	೪೫೦


ಕೋಷ್ಟಕ: ೫.೧ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರನ್ನು ಆಯ್ಕೆ ಮಾಡಿಕೊಂಡ ಕುಟುಂಬಗಳ ವಿವರ



ಬಳ್ಳಾರಿ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಬೇಡ ಕುಟುಂಬಗಳು ಕಂಡು ಬರುತ್ತವೆ. ಅದರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಅಧಿಕ ಸಂಖ್ಯೆಯ ಕುಟುಂಬಗಳು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡು ಬಂದಿತು.. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹೊಸಪೇಟೆ ಬೇಡ ಸಮುದಾಯದ ೧೮,೭೬೮ ಒಟ್ಟು ಕುಟುಂಬಗಳಲ್ಲಿ ೭೫,೦೬೯ ಜನಸಂಖ್ಯೆ ಇದೆ. ಅದರಲ್ಲಿ ಬೇಡ ಕೃಷಿ ಕಾರ್ಮಿಕ ಪುರುಷರ ಸಂಖ್ಯೆ ೨೩,೮೩೪ ಇದ್ದು, ಬೇಡ ಕೃಷಿ ಮಹಿಳೆಯರ ಸಂಖ್ಯೆ ೨೪,೩೫೨ ಕಂಡು ಬರುತ್ತದೆ. ಅದೇ ರೀತಿಯಾಗಿ ಕೂಡ್ಲಿಗಿಯ ಬೇಡ ಸಮುದಾಯದ ಒಟ್ಟು ೨೧,೫೨೦ ಕುಟುಂಬಗಳಲ್ಲಿ ೮೬,೦೭೭ ಜನಸಂಖ್ಯೆ ಕಂಡು ಬರುತ್ತದೆ. ಅದರಲ್ಲಿ ೧೮,೬೭೧ ಬೇಡ ಕೃಷಿ ಕಾರ್ಮಿಕ ಪುರುಷರ ಸಂಖ್ಯೆ ಇದ್ದು, ೨೨,೮೫೧ ಬೇಡ ಕೃಷಿ ಮಹಿಳೆಯರ ಸಂಖ್ಯೆ ಕಂಡು ಬರುತ್ತದೆ. ಕೃಷಿ ಮಹಿಳೆಯರನ್ನು ಒಟ್ಟು ಅಧ್ಯಯನಕ್ಕೆ ಹೊಸಪೇಟೆ ತಾಲೂಕಿನಿಂದ ೨೫೦ ಕುಟುಂಬಗಳು, ಕೂಡ್ಲಿಗಿ ತಾಲೂಕಿನಿಂದ ೨೦೦ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಕೋಷ್ಟಕ: ೫.೨ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಕುಟುಂಬದ ವಿವರ						
ಕ್ರ. ಸಂ.	ತಾಲೂಕುಗಳು	ವಿಭಕ್ತ ಕುಟುಂಬ	ಪ್ರತಿಶತ	ಅವಿಭಕ್ತ ಕುಟುಂಬ	ಪ್ರತಿಶತ	ಒಟ್ಟು
೧	ಹೊಸಪೇಟೆ	೧೮೭	೭೪.೮	೬೩	೨೫.೨	೧೦೦%
೨	ಕೂಡ್ಲಿಗಿ	೧೪೦	೭೦	೬೦	೩೦	೧೦೦%
	ಒಟ್ಟು	೩೨೭	೭೨.೬೬	೧೨೩	೨೭.೩೨	೧೦೦%


ಲಂಬ ಚಿತ್ರ : ೫.೨ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಕುಟುಂಬದ ವಿವರದ ಹಂಚಿಕೆ



ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಕುಟುಂಬವು ಸಾಮಾಜಿಕ ಸಂಸ್ಥೆಗಳಲ್ಲಿ ಪ್ರಮುಖ ಪರಿಕಲ್ಪನೆಯಾಗಿದೆ. ಅದರಲ್ಲೂ ಬೇಡ ಸಮುದಾಯದಲ್ಲಿ ಕುಟುಂಬಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಕುಟುಂಬ ಸಮಾಜದ ಆಧಾರ ಸ್ತಂಭವಾಗಿದೆ. ಬೇಡ ಮಹಿಳೆ ಕುಟುಂಬದೊಂದಿಗೆ ಬೆರೆತು ಹೋಗಿದ್ದಾಳೆ. ಈ ನೆಲೆಯಲ್ಲಿ ಬೇಡ ಸಮುದಾಯದಲ್ಲಿಯೂ ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳು ಕಂಡುಬರುತ್ತವೆ. ಅದರಲ್ಲೂ ಹೊಸಪೇಟೆ ಭಾಗದ ಬೇಡ ಕುಟುಂಬಗಳಲ್ಲಿ ೧೮೭ ವಿಭಕ್ತ ಕುಟುಂಬಗಳು, ೬೩ ಅವಿಭಕ್ತ ಕುಟುಂಬಗಳು ಕಂಡು ಬರುತ್ತವೆ, ಅದೇ ರೀತಿಯಾಗಿ ಕೂಡ್ಲಿಗಿ ಭಾಗದ ಬೇಡ ಕುಟುಂಬಗಳಲ್ಲಿ ೧೪೦ ವಿಭಕ್ತ ಕುಟುಂಬಗಳು ಕಂಡು ಬಂದರೆ, ೬೦ ಅವಿಭಕ್ತ ಕುಟುಂಬಗಳು ಕಂಡು ಬರುತ್ತವೆ. ಇಲ್ಲಿ ಮುಖ್ಯವಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿಭಕ್ತ ಕುಟುಂಬಗಳು ಕಂಡು ಬರುತ್ತವೆ. ಇದಕ್ಕೆ ಮೂಲ ಕಾರಣ ಇಂದು ಅವಿಭಕ್ತ ಕುಟುಂಬಗಳಲ್ಲಿ ಮಹಿಳೆಗೆ ಸ್ವಾಂತ್ರ್ಯವಿಲ್ಲದಿರುವುದು. ಅವಿಭಕ್ತ ಕುಟುಂಬಗಳಲ್ಲಿ ಮಹಿಳೆ ಮತ್ತು ಪುರುಷ ಇಬ್ಬರೂ ಕೂಡ ಕೃಷಿ ಕೂಲಿ ಮಾಡುವುದರಿಂದ ಅತಿ ಹೆಚ್ಚಿನ ಹೊರೆ ಮಹಿಳೆಗೆ ಬೀಳುವುದರಿಂದ ವಿಭಕ್ತ ಕುಟುಂಬಗಳ ಸಂಖ್ಯೆ ಪ್ರಸ್ತುತ ದಿನಗಳಲ್ಲಿ ಹೆಚ್ಚಾಗಿರುವ ಅಂಶಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡು ಬಂದಿದೆ.

ಕೋಷ್ಟಕ: ೫.೩ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ವಯಸ್ಸಿನ ವಿವರ					
ಕ್ರ. ಸಂ.	ವಯಸ್ಸಿನ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	೧೫ ರಿಂದ ೧೯	೦೬	೨.೪	೦೪	೨
೨	೨೦ ರಿಂದ ೨೯	೬೪	೨೫.೬	೪೪	೨೨
೩	೩೦ ರಿಂದ ೩೯	೮೭	೩೪.೮	೬೩	೩೧.೫
೪	೪೦ ರಿಂದ ೪೯	೭೮	೩೧.೨	೭೮	೩೯
೫	೫೦ ರಿಂದ ೫೯	೧೨	೪.೮	೦೯	೪.೫
೬	೬೦ ವರ್ಷಕ್ಕಿಂತ ಮೇಲ್ಪಟ್ಟು	೦೩	೦.೮	೦೨	೧
	ಒಟ್ಟು ಕುಟುಂಬಗಳು	೨೫೦	೧೦೦%	೨೦೦	೧೦೦%

ಲಂಬ ಚಿತ್ರ : ೫.೩ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ವಯಸ್ಸಿನ ವಿವರದ ಹಂಚಿಕೆ



ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ವಯೋಮಾನವನ್ನು ತಿಳಿಸುತ್ತದೆ. ಇದರಲ್ಲಿ ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರ ವಯೋಮಾನವನ್ನು ನೋಡಿದಾಗ ೩೦ರಿಂದ ೩೯ರ ವಯೋಮಾನದವರು ೩೪.೮% ಅತಿ ಹೆಚ್ಚು ಕಂಡು ಬಂದರೆ ೪೦ರಿಂದ ೪೯ ರ ವಯೋಮಾನದವರು ೩೧.೨% ಕಂಡು ಬಂದರೆ, ೨೦ರಿಂದ ೨೯ರ ವಯೋಮಾನದವರು ಶೇ. ೨೫.೬% ಇದೆ. ೧೫ರಿಂದ ೧೯ರ ವಯೋಮಾನದವರು ಶೇ. ೨.೪% ಇದೆ. ೫೦ರಿಮದ ೫೯ರ ವಯಸ್ಸಿನವರು ಶೇ ೪.೮% ಇದ್ದು, ೬೦ವರ್ಷಕ್ಕಿಂತ ಮೇಲ್ಪಟ್ಟ



ಕೃಷಿ ಮಹಿಳೆಯರ ಪ್ರತಿಶತ ೦.೮% ಕಂಡು ಬರುತ್ತದೆ. ಅದೇ ರೀತಿಯಾಗಿ, ಕೂಡ್ಲಿಗಿ ತಾಲೂಕಿನ ಬೇಡ ಮಹಿಳಾ ಕೃಷಿ ಕಾರ್ಮಿಕರ ವಯಸ್ಸನ್ನು ನೋಡಿದಾಗ, ೪೦ರಿಂದ ೪೯ ರ ವಯೋಮಾನದವರು ಶೇ ೩೯% ಇದ್ದು, ಅತಿ ಕಡಿಮೆ ಅಂದರೆ, ೬೦ವರ್ಷ ಮೇಲ್ಪಟ್ಟವರು ಶೇ. ೧% ಇದೆ. ೧೫ರಿಂದ ೧೯ರ ವಯೋಮಾನದವರು ಶೇ ೨% ಇದ್ದರೆ, ೨೦ರಿಂದ ೨೯ರ ವಯೋಮಾನದವರು ಶೇ ೨೨% ಕಂಡು ಬರುತ್ತದೆ. ೩೦ರಿಂದ ೩೯ರ ವಯೋಮಾನದವರು ಶೇ. ೩೧.೫% ಇದೆ. ೫೦ರಿಂದ ೫೯ರ ವಯೋಮಾನದವರು ಶೇ. ೪.೫% ಇರುವುದನ್ನು ಕಾಣಬಹುದು.

ಈ ಎರಡು ತಾಲೂಕಗಳನ್ನು ಗಮನಿಸಬೇಕಾದ ಹೊಸಪೇಟೆ ತಾಲೂಕಿನ ಬೇಡ ಮಹಿಳಾ ಕೃಷಿ ಕಾರ್ಮಿಕರು ೩೦ರಿಂದ ೩೯ ಹಾಗೂ ೪೦ರಿಂದ ೪೯ರ ವಯೋಮಾನದವರು ಕೃಷಿಯ ಚಟುವಟಿಕೆಯಲ್ಲಿ ಅತಿ ಹೆಚ್ಚು ಪಾಲ್ಗೊಳ್ಳುವಿಕೆಯನ್ನು ಕ್ಷೇತ್ರಾಧ್ಯಯನದಿಂದ ಕಂಡು ಕೊಳ್ಳಲಾಗಿದೆ. ಕೂಡ್ಲಿಗಿ ತಾಲೂಕಿನ ಬೇಡ ಮಹಿಳಾ ಕೃಷಿ ಕಾರ್ಮಿಕರು ೪೦ರಿಂದ ೪೯ರ ವಯೋಮಾನದವರೇ ಆ ಭಾಗದಲ್ಲಿ ಕೃಷಿಯಲ್ಲಿ ಪಾಲ್ಗೊಳ್ಳುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.


ಈ ಎರಡು ತಾಲೂಕುಗಳಲ್ಲಿ ಕೃಷಿಯ ಚಟುವಟಿಕೆಯಲ್ಲಿ ಮಧ್ಯ ವಯಸ್ಸಿನ ಹಾಗೂ ಯುವ ವಯಸ್ಸಿನ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುವುದನ್ನು ಕ್ಷೇತ್ರಾಧ್ಯಯನದಿಂದ ಕಂಡು ಕೊಳ್ಳಲಾಗಿದೆ.

ಕೋಷ್ಟಕ: ೫.೪ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ವೈವಾಹಿಕತೆಯ ವಿವರ

ಕ್ರ. ಸಂ.	ವೈವಾಹಿಕ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ವಿವಾಹಿತರು	೧೯೬	೭೮.೮೪	೧೬೨	೮೧
೨	ಅವಿವಾಹಿತರು	೨೪	೯.೬	೧೮	೯
೩	ವಿಧವೆಯರು	೧೬	೬.೪	೦೮	೪
೪	ದೇವದಾಸಿ	೧೪	೫.೬	೧೨	೬
	ಒಟ್ಟು ಕುಟುಂಬಗಳು	**೨೫೦**	**೧೦೦**	**೨೦೦**	**೧೦೦**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಹುಡುಗಿಗೆ ೧೮ವರ್ಷ ಪೂರ್ಣಗೊಳ್ಳುವ ಪೂರ್ವದಲ್ಲಿ ಹಾಗೂ ಹುಡುಗನಿಗೆ ೨೧ ವರ್ಷವಾಗುವರೆಗೆ ವಿವಾಹ ಮಾಡುವುದು ಭಾರತೀಯ ಕಾನೂನಿನ ಪ್ರಕಾರ ಅಪರಾಧವೆಂದು ಪರಿಗಣಿಸಲಾಗಿದೆ. ಆದರೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬೇಡ ಸಮುದಾಯದಲ್ಲಿ ೧೮ ವರ್ಷ ಪೂರ್ಣಗೊಳ್ಳುವುದಕ್ಕಿಂತ ಮುಂಚೆ ವಿವಾಹ ಮಾಡುತ್ತಿಲ್ಲ. ಇದು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿರುವುದನ್ನು ಕಾಣಬಹುದು. ಮಹಿಳೆಯರು ವಿವಾಹದ ನಂತರ ಕೆಲವು ಜವಬ್ದಾರಿಗಳನ್ನು ಹೊರಬೇಕಾಗುತ್ತದೆ ಅಂದರೆ ಮಕ್ಕಳ ಲಾಲನೆ, ಪಾಲನೆಯಿಂದ ಹಿಡಿದು ಕೃಷಿ ಚಟುವಟಿಕೆಗಳವರೆಗೆ ತನ್ನ ಜವಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಈ ನೆಲೆಯಲ್ಲಿ ಈ ಮೇಲಿನ ಕೋಷ್ಟಕವು ಬೇಡ ಮಹಿಳಾ ಕೃಷಿ ಕಾರ್ಮಿಕರ ವೈವಾಹಿಕ ಸ್ಥಾನಮಾನದ ವಿವರವನ್ನು ನೀಡುತ್ತದೆ.

ಲಂಬ ಚಿತ್ರ : ೫.೪ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ವೈವಾಹಿಕತೆಯ ವಿವರದ ಹಂಚಿಕೆ



ಹೊಸಪೇಟೆ ತಾಲೂಕಿನಲ್ಲಿ ಅತ್ಯಂತ ಹೆಚ್ಚು ಬೇಡ ಮಹಿಳಾ ಕೃಷಿ ಕಾರ್ಮಿಕರು ವಿವಾಹಿತರಾಗಿದ್ದು, ಶೇ ೭೮.೮೪ ರಷ್ಟು ಇದ್ದು, ಅವಿವಾಹಿತರು ಶೇ ೯.೬ ರಷ್ಟು ಇದ್ದಾರೆ. ಶೇ ೬.೪ರಷ್ಟು ಮಹಿಳೆಯರು ತಮ್ಮ ಪತಿಯನ್ನು ಕಳೆದುಕೊಂಡು ವಿಧವೆಯರಾಗಿದ್ದಾರೆ. ಇನ್ನುಳಿದಂತೆ ಶೇ ೫.೬ ದೇವದಾಸಿಯರು ಇರುವವರು. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನ ಬೇಡ ಮಹಿಳಾ ಕೃಷಿ ಕಾರ್ಮಿಕರನ್ನು ನೋಡಿದಾಗ, ವಿವಾಹಿತರ ಪ್ರಮಾಣ ಶೇ ೮೧ರಷ್ಟು ಇದ್ದರೆ, ಅವಿವಾಹಿತರು ಶೇ ೯ರಷ್ಟು, ವಿಧವೆಯರು ಶೇ ೪ರಷ್ಟು ಇದೆ. ಇನ್ನುಳಿದಂತೆ ದೇವದಾಸಿಯರು ಶೇ ೬ ರಷ್ಟು ಕಂಡು ಬರುತ್ತದೆ.


ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡವರಲ್ಲಿ ಅತಿ ಹೆಚ್ಚಿನವರು ವಿವಾಹಿತರೇ ಇರುವುದನ್ನು ಕ್ಷೇತ್ರಾಧ್ಯಯನದ ಮೂಲಕ ಕಂಡು ಕೊಳ್ಳಲಾಗಿದೆ.

ಕೋಷ್ಟಕ: ೫.೫ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಕುಟುಂಬಗಳ ಮನೆಯ ಮಾದರಿಯ ವಿವರ

ಕ್ರ. ಸಂ.	ಮನೆಯ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಆರ್ ಸಿ. ಸಿ	೧೦೨	೪೦.೮	೩೦	೧೫
೨	ಶೀಟಿನ ಮನೆ	೫೭	೨೨.೮	೮೫	೪೨.೫
೩	ಗುಡಿಸಲು	೩೬	೧೪.೪	೨೦	೧೦
೪	ಇತರೆ	೫೫	೨೨	೬೫	೩೨.೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಮನೆಯು ಮಾನವನ ವಾಸಕ್ಕೆ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಲಭ್ಯಗಳಲ್ಲಿ ಒಂದು. ಮನೆಯನ್ನು ಅವರ ಅಗತ್ಯಕ್ಕೆ ತಕ್ಕಂತೆ ನಿರ್ಮಿಸಿಕೊಂಡಿರುತ್ತಾರೆ. ಅದು ಅವರ ಆರ್ಥಿಕ ಮಟ್ಟಕ್ಕೆ ಅನುಗುಣವಾಗಿ ನಿರ್ಮಿಸಿಕೊಂಡಿರುತ್ತಾರೆ. ಅದೇನೆ ಇರಲಿ ಸಮಾಜದಲ್ಲಿ ಬದುಕಲು ವಾಸಿಸಲು ಒಂದು ನೆಲೆ ಬೇಕು. ಅವುಗಳು ಮಾನವನ ದೈಹಿಕ, ಮಾನಸಿಕ ಆರೋಗ್ಯಕ್ಕೆ ಪೂರಕವಾಗಿರಬೇಕು ಆದರೆ ಪ್ರಸ್ತುತ ದಿನಮಾನಗಳಲ್ಲಿ ಮನೆಗಳ ಮಾದರಿ, ನಿರ್ಮಾಣಗಳಲ್ಲಿ ದೈಹಿಕ, ಮಾನಸಿಕ ನೆಮ್ಮದಿಯನ್ನು ಕಾಣಲು ಸಾಧ್ಯವೇ. ಈ ಹಿಂದೆ ಈಗಲೂ ಬೇಡ ಬುಡಕಟ್ಟುಗಳು ಬಹುತೇಕ ಶಿಥಿಲಗೊಂಡ ಹಾಗೂ ಜೋಪಡಿಗಳಲ್ಲಿ ವಾಸಿಸುತ್ತಿದ್ದಾರೆ. ಕೆಲವರು ಮನೆಯಿಲ್ಲದೇ ಬೀದಿಗಳಲ್ಲಿ ವಾಸವಾಗಿರುವುದು ಇದೆ. ಹಾಗಾಗಿ ಇಂತವರಿಗೆ ಮನೆಯನ್ನು ಒದಗಿಸುವ ಅವಶ್ಯಕತೆಯು ಇದೆ. ಈ ನೆಲೆಯಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರ ಕುಟುಂಬಗಳು ಹೊಂದಿರುವ ಮನೆಯ ಮಾದರಿಯನ್ನು ಈ ಮೇಲಿನ ಕೋಷ್ಟಕವು ತಿಳಿಸಿಕೊಡುತ್ತದೆ.

ಲಂಬ ಚಿತ್ರ : ೫.೫ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಮನೆಯ ಮಾದರಿ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರ ಮನೆಯನ್ನು ನೋಡಿದಾಗ ಬಹುತೇಕ ಮನೆಗಳು ಶೇ ೪೦.೮ರಷ್ಟು ಆರ್ ಸಿ ಸಿ ಯಿಂದ ನಿರ್ಮಾಣ ಗೊಂಡಂತಹ ಮನೆಗಳಾಗಿವೆ. ಶೀಟಿನ ಮನೆಗಳು ಶೇ ೨೨.೮ರಷ್ಟು, ಗುಡಿಸಲು ೧೪.೪, ಇತರೆ ಅಂದರೆ ಮನೆಯ ಮೇಲೆ ಮಣ್ಣಿನಿಂದ ಕೂಡಿರುವ ಮನೆಗಳು ಹಾಗೂ ಕರೆಬಂಡೆ ಆಂಗ್ಲರ್‌ಗಳಿಂದ ನಿರ್ಮಾಣಗೊಂಡ ಮನೆಗಳು ಶೇ ೨೨ ಕಂಡು ಬಂದಿವೆ. ಅದೇ ರೀತಿಯಗಿ ಕೂಡ್ಲಿಗಿ ತಾಲೂಕಿನ ಬಹುತೇಕ ಬೇಡ ಮಹಿಳಾ ಕೃಷಿ ಕಾರ್ಮಿಕರ

ಮನೆಗಳು ಸರಕಾರ ನೀಡಿರುವ ಹಾಗೂ ತಾವೇ ಆರ್ಥಿಕ ಪರಿಸ್ಥಿತಗೆ ಅನುಗುಣವಾಗಿ ನಿರ್ಮಿಸಿಕೊಂಡಂತಹ ಶೀಟಿನಿಂದ ಕೂಡಿದ ಮನೆಗಳು ಶೇ ೪೨.೫ರಷ್ಟು ಇದ್ದು, ಆರ್ ಸಿ ಸಿ ಮನೆಯ ಪ್ರಮಾಣ ಶೇ ೧೫ರಷ್ಟು ಇದೆ. ಗುಡಿಸಲುಗಳು ಶೇ ೧೦ರಷ್ಟು, ಇತರೆ ಅಂದರೆ ಮನೆಯ ಮೇಲೆ ಮಣ್ಣಿನಿಂದ ಕೂಡಿರುವ ಮನೆಗಳು ಹಾಗೂ ಕರೆಬಂಡೆ ಆಂಗ್ಲರ್‌ಗಳಿಂದ ನಿರ್ಮಾಣಗೊಂಡ ಮನೆಗಳು ಶೇ ೩೨. ೫ ರಷ್ಟು ಕಂಡು ಬಂದಿವೆ.

ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರ ಮನೆಗಳಲ್ಲಿ ಅತಿ ಹೆಚ್ಚು ಮನೆಗಳು ಅದರಲ್ಲೂ ಹೊಸಪೇಟೆಯಲ್ಲಿ ಆರ್ ಸಿ ಸಿ ಮನೆಗಳು ಹೆಚ್ಚು ಕಂಡು ಬಂದರೆ, ಕೂಡ್ಲಿಗಿ ಭಾಗದಲ್ಲಿ ಅತಿ ಹೆಚ್ಚು ಶೀಟಿನ ಮನೆಗಳು ಕಂಡು ಬಂದಿವೆ. ಇದಕ್ಕೆ ಕಾರಣ ನೀರಾವರಿಯಿಂದ ಆದಾಯದ ಪ್ರಮಾಣ ಹೆಚ್ಚಿರುವುದು. ಇತ್ತೀಚೆಗೆ ಎರಡು ತಾಲೂಗಳಲ್ಲಿ ಗುಡಿಸಲುಗಳ ಪ್ರಮಾಣ ಸಂಪೂರ್ಣವಾಗಿ ಕಡಿಮೆಯಾಗಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.


ಕೋಷ್ಟಕ: ೫.೬ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಕೂಲಿ ಮಾಡುವ ಸ್ಥಳದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ವಿವರ

ಕ್ರ. ಸಂ.	ಕೂಲಿ ಮಾಡುವ ಸ್ಥಳದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೦೧	ಅಧಿಕ ಅವಧಿಯ ದುಡಿಮೆ	೧೧೭	೪೬.೮	೯೬	೪೮
೦೨	ಕಡಿಮೆ ಕೂಲಿ	೯೪	೩೭.೬	೪೮	೨೪
೦೩	ವಿಳಂಬ ಕೂಲಿ	೧೭	೬.೮	೩೫	೧೭.೫
೦೪	ಜಾತಿತಾರತಮ್ಯ	೧೨	೪.೮	೧೪	೭
೦೫	ಮಾಲೀಕರ ನಿಂದನೆ	೧೦	೪	೭	೩.೫
	ಒಟ್ಟು ಕುಟುಂಬಗಳು	**೨೫೦**	**೧೦೦**	**೨೦೦**	**೧೦೦**

ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಕೂಲಿ ಮಾಡುತ್ತಿರುವ ಸ್ಥಳದಲ್ಲಿ ವಿವಿದ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ನಾವು ಇಂದು ನೋಡಬಹುದು. ಮಹಿಳಾ ಕೃಷಿ ಕಾಮಿಕರು ಸಾಮಾನ್ಯವಾಗಿ ಕುಟುಂಬದ ಕೆಲಸವನ್ನೆಲ್ಲ ಮುಗಿಸಿ ಕೂಲಿಗೆ ಹೋಗುವಷ್ಟರಲ್ಲಿ ತಡವಾದರೆ, ಕೆಲಸದ ನಡುವೆ ವಿಶ್ರಾಂತಿ ತೆಗೆದುಕೊಂಡರೆ, ಅಥವಾ ಕೆಲಸ ಮಾಡುವುದು ತಡವಾದರೆ ಮಲಿಕರ ನಿಂದನೆ ಸಾಮಾನ್ಯವಾಗಿರುತ್ತದೆ. ಬೇಡ ಮಹಿಳಾ ಕೃಷಿ ಕಾರ್ಮಿಕರು ಕುಟುಂಬದೊಳಗೆ ಮಾತ್ರವಲ್ಲದೆ ಕುಟುಂಬದ ವರಗೂ ಸಮಸ್ಯೆಗಳನ್ನು

ಎದುರಿಸುತ್ತಿರುವುದು ಸಾಮಾನ್ಯವಾಗಿದೆ. ಈ ರೀತಿಯ ಸಮಸ್ಯೆಗಳನ್ನು ಈ ಮೇಲಿನ ಕೋಷ್ಟಕ ಸ್ಪಷ್ಟಪಡಿಸುತ್ತದೆ

ಗೋಪುರಾಕೃತಿ ಚಿತ್ರ : ೫.೬ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಮಾಡುವ ಕೆಲಸದ ಸ್ಥಳದಲ್ಲಿ ಅಧಿಕ ಅವಧಿಯ ದುಡಿಮೆ ಮಾಡಿಸಿಕೊಳ್ಳುತ್ತಿರುವವರ ಪ್ರಮಾಣ ಶೇ ೪೬.೮ರಷ್ಟು ಇದ್ದರೆ, ಕಡಿಮೆ ಕೂಲಿ ನೀಡುವವರ ಪ್ರಮಾಣ ಶೇ ೩೭.೬ರಷ್ಟು, ವಿಳಂಬ ಕೂಲಿ ನೀಡುವವರ ಪ್ರಮಾಣ ಶೇ ೬.೮ರಷ್ಟು ಕಂಡು ಬಂದರೆ, ಕೆಲಸದ ಸ್ಥಳದಲ್ಲಿ ಜಾತಿ ಆಧಾರಿತ ತಾರತಮ್ಯದ ಪ್ರಮಾಣ ಶೇ ೮.೮ರಷ್ಟು, ಕಂಡುಬಂದಿದ್ದು ಇನ್ನುಳಿದಂತೆ ಮಾಲಿಕರ ನಿಂದನೆಯು ಕೃಷಿ ಕೂಲಿ ಮಹಿಳೆಯರ ಮೇಲೆ ಪ್ರಮಾಣ ಶೇ ೪ರಷ್ಟು, ಕಂಡುಬಂದಿದೆ. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಮಾಡುವ ಕೆಲಸದ ಸ್ಥಳದಲ್ಲಿ ಅಧಿಕ ಅವಧಿಯ ದುಡಿಮೆ ಮಾಡಿಸಿಕೊಳ್ಳುತ್ತಿರುವವರ ಪ್ರಮಾಣ ಶೇ ೪೮ರಷ್ಟು ಇದ್ದರೆ, ಕಡಿಮೆ ಕೂಲಿ ನೀಡುವವರ ಪ್ರಮಾಣ ಶೇ ೨೪ರಷ್ಟು, ವಿಳಂಬ ಕೂಲಿ ನೀಡುವವರ ಪ್ರಮಾಣ ಶೇ ೧೭.೫ರಷ್ಟು ಕಂಡು ಬಂದರೆ, ಕೆಲಸದ ಸ್ಥಳದಲ್ಲಿ ಜಾತಿ ಆಧಾರಿತ ತಾರತಮ್ಯದ ಪ್ರಮಾಣ ಶೇ ೭ರಷ್ಟು, ಕಂಡುಬಂದಿದ್ದು ಇನ್ನುಳಿದಂತೆ ಮಾಲಿಕರ ನಿಂದನೆಯು ಕೃಷಿ ಕೂಲಿ ಮಹಿಳೆಯರ ಮೇಲೆ ಪ್ರಮಾಣ ಶೇ ೩.೫ರಷ್ಟು ಕ್ಷೇತ್ರಾಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಈ ಎರಡು ತಾಲೂಕುಗಳಲ್ಲಿ ಹೊಸಪೇಟೆಯ ಬೇಡ ಕೃಷಿ ಮಹಿಳಾ ಕೂಲಿ ಕಾರ್ಮಿಕರು ತಾವು ಮಾಡುವ ಕೆಲಸದ ಸ್ಥಳದಲ್ಲಿ ಅಧಿಕ ಅವಧಿಯ ದುಡಿಮೆಯನ್ನು ಮಾಡಿಸಿಕೊಳ್ಳುವುದು ಕಂಡುಬಂದರೆ,


ಕೂಡ್ಲಿಗಿ ತಾಲೂಕಿನಲ್ಲಿ ದುಡಿದ ಮಹಿಳೆಯರಿಗೆ ವಿಳಂಬವಾಗಿ ಕೂಲಿಯನ್ನು ಕೊಡುವ ವ್ಯವಸ್ಥೆಯನ್ನು ಕಂಡುಕೊಳ್ಳಲಾಗಿದೆ.

ಕೋಷ್ಟಕ: ೫.೭ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರನ್ನು ಭೂ ಮಾಲೀಕರು ಕಾಣುವ ಬಗೆ

ಕ್ರ. ಸಂ.	ಭೂ ಮಾಲೀಕರು ಕೃಷಿ ಕಾರ್ಮಿಕರನ್ನು ಕಾಣುವ ಬಗೆ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಉತ್ತಮವಾಗಿದೆ	೪೭	೧೮.೮	೯೨	೪೬
೨	ಪರವಾಗಿಲ್ಲ	೧೫೯	೬೩.೬	೬೮	೩೪
೩	ಕೆಳಮಟ್ಟದಲ್ಲಿ	೪೪	೧೭.೬	೪೦	೨೦
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ಭೂಮಿಯನ್ನು ಹೊಂದಿದ ಭೂ ಮಾಲಿಕರು ಕೃಷಿ ಕಾರ್ಮಿಕರನ್ನು ವಿಶೇಷವಾಗಿ ಮಹಿಳಾ ಕೃಷಿ ಕಾರ್ಮಿಕರನ್ನು ಹೇಗೆ ಕಾಣುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಸಿಲಿಂಡರ್ ಆಕೃತಿ ಚಿತ್ರ : ೫.೭ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರನ್ನು ಭೂ ಮಾಲಿಕರು ಕಾಣುವ ವಿವರದ ಹಂಚಿಕೆ





ಹೊಸಪೇಟೆಯ ಬೇಡ ಕೃಷಿ ಕಾರ್ಮಿಕರು ತಮ್ಮನ್ನು ಮಾಲಿಕರು ಉತ್ತಮವಾಗಿ ನೋಡಿಕೊಳ್ಳುತ್ತಾರೆ ಎಂದು ಶೇ ೧೮.೮ರಷ್ಟು ಕಾರ್ಮಿಕರು ಹೇಳಿದರೆ, ಶೇ ೬೩.೬ರಷ್ಟು ಕಾರ್ಮಿಕ ಮಹಿಳೆಯರು ಪರವಾಗಿಲ್ಲ ಎಂದು ಹೇಳಿದ್ದಾರೆ, ಆದರೆ ಶೇ ೧೭.೬ರಷ್ಟು ಮಹಿಳಾ ಕಾರ್ಮಿಕರು ಕೆಳಮಟ್ಟದಲ್ಲಿ ಕಾಣುತ್ತಾರೆ ಎಂದು ಹೇಳಿರುವುದನ್ನು ಕಾಣಬಹುದು, ಅದೇ ರೀತಿಯಲ್ಲಿ ಕೂಡ್ಲಿಗಿ ಕೃಷಿ ಮಹಿಳಾ ಕೃಷಿ ಕಾರ್ಮಿಕರು ತಮ್ಮನ್ನು ಮಾಲಿಕರು ಉತ್ತಮವಾಗಿ ನೋಡಿಕೊಳ್ಳುತ್ತಾರೆ ಕೆಲಸದ ಸ್ಥಳದಲ್ಲಿ ಎಂದು ಶೇ ೪೬ರಷ್ಟು ಮಹಿಳೆಯರು ಹೇಳಿದರೆ, ಶೇ ೩೪ರಷ್ಟು ಕಾರ್ಮಿಕ ಮಹಿಳೆಯರು ಪರವಾಗಿಲ್ಲ ಎಂದು ಹೇಳಿದ್ದಾರೆ, ಆದರೆ ಶೇ ೨೦ರಷ್ಟು ಮಹಿಳಾ ಕಾರ್ಮಿಕರು ಕೆಳಮಟ್ಟದಲ್ಲಿ ಕಾಣುತ್ತಾರೆ ಎಂದು ಹೇಳಿರುವುದನ್ನು ಕಾಣಬಹುದು,


ಈ ಎರಡು ತಾಲೂಕುಗಳಲ್ಲಿ ಭೂ ಮಾಲಿಕರು ಬೇಡ ಮಹಿಳಾ ಕೃಷಿ ಕಾರ್ಮಿಕರನ್ನು ಉತ್ತಮವಾಗಿ ನೋಡಿಕೊಳ್ಳುವದನ್ನು ಗುರುತಿಸಬಹುದು. ಭೂ ಮಾಲಿಕರು ವಿಶೇಷವಾಗಿ ಅವರ ಮನೆಯಲ್ಲಿರುವ ಮಹಿಳೆಯರು ಕೂಲಿ ಮಾಡುವ ಮಹಿಳೆಯರ ಮೇಲ್ವಿಚಾರಣೆ ನೋಡಿಕೊಳ್ಳುದರಿಂದ ಉತ್ತಮವಾದ ಸಂಬಂಧವನ್ನು ಕಾಣಬಹುದು.

ಕೋಷ್ಟಕ: ೫.೮ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರಿಗೆ ಭೂ ಮಾಲೀಕರು ಸ್ಪಂದಿಸುವ ಬಗೆ

ಕ್ರ. ಸಂ.	ಕಾರ್ಮಿಕರ ಸಮಸ್ಯೆಗಳಿಗೆ ಭೂ ಮಾಲೀಕರು ಸ್ಪಂದಿಸುವುದರ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಸ್ಪಂದಿಸುತ್ತಾರೆ	೧೧೫	೪೬	೯೨	೪೬
೨	ಸ್ಪಂದಿಸುವುದಿಲ್ಲ	೬೯	೨೭.೬	೭೮	೩೯
೩	ಕೆಲವರು ಮಾತ್ರ	೬೬	೨೬.೪	೩೦	೧೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಮಹಿಳಾ ಕೃಷಿ ಕಾರ್ಮಿಕರು ಸಮಸ್ಯೆಯಲ್ಲಿದ್ದಾಗ ಭೂ ಮಾಲಿಕರು ಸ್ಪಂದಿಸುತ್ತಾರೆಯೇ ಇಲ್ಲವೇ ಎಂಬುದನ್ನು ಈ ಮೇಲಿನ ಕೋಷ್ಟಕವು ತಿಳಿಸಿಕೊಡುತ್ತದೆ.

ಸಿಲಿಂಡರ್ ಆಕೃತಿ ಚಿತ್ರ: ೫.೮ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರಿಗೆ ಭೂ ಮಾಲಿಕರು ಸ್ಪಂದಿಸುವ ವಿವರದ ಹಂಚಿಕೆ



ಹೊಸಪೇಟೆಯ ಭೂ ಮಾಲಿಕರು ಶೇ ೪೬ರಷ್ಟು, ಬೇಡ ಕೃಷಿ ಕಾರ್ಮಿಕರ ಕಷ್ಟ-ಕಾರ್ಪಣ್ಯಗಳಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ ಎಂದು ಹೇಳಿದ್ದು, ಶೇ ೨೭.೬ರಷ್ಟು ಮಹಿಳೆಯರು ಸ್ಪಂದಿಸುವುದಿಲ್ಲ ಎಂದಿದ್ದಾರೆ. ಕೆಲವು ಕೃಷಿ ಮಹಿಳಾ ಕಾರ್ಮಿಕರು ಮಾತ್ರ ನಾವು ಕಷ್ಟದಲ್ಲಿದ್ದಾಗ ಸಹಾಯ ಕೇಳಿಕೊಂಡು ಹೋಗಿ ಸಹಾಯ ಕೇಳಿದರೆ ಕೆಲವು ಭೂ ಮಾಲಿಕರು ಶೇ ೨೬.೪ರಷ್ಟು ಮಾತ್ರ ಸ್ಪಂದಿಸುತ್ತಾರೆ ಎಂದು ತಿಳಿಸಿದ್ದಾರೆ. ಕೂಡ್ಲಿಗಿ ಭಾಗದ ಭೂ ಮಾಲಿಕರು ಶೇ ೪೬ರಷ್ಟು, ಬೇಡ ಕೃಷಿ ಕಾರ್ಮಿಕರ ಕಷ್ಟ-ಕಾರ್ಪಣ್ಯಗಳಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ ಎಂದು ಹೇಳಿದ್ದು, ಶೇ ೩೯ರಷ್ಟು ಮಹಿಳೆಯರು ಸ್ಪಂದಿಸುವುದಿಲ್ಲ ಎಂದಿದ್ದಾರೆ. ಕೆಲವು ಕೃಷಿ ಮಹಿಳಾ ಕಾರ್ಮಿಕರು ಮಾತ್ರ ನಾವು ಕಷ್ಟದಲ್ಲಿದ್ದಾಗ ಸಹಾಯ ಕೇಳಿಕೊಂಡು ಹೋಗಿ ಸಹಾಯ ಕೇಳಿದರೆ ಕೆಲವು ಭೂ ಮಾಲಿಕರು ಶೇ ೧೫ರಷ್ಟು ಮಾತ್ರ ಸ್ಪಂದಿಸುತ್ತಾರೆ ಎಂದು ತಿಳಿಸಿದ್ದಾರೆ.

ಈ ಎರಡು ತಾಲೂಕುಗಳಲ್ಲಿ ಭೂ ಮಾಲಿಕರು ಬೇಡ ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ಉತ್ತಮವಾಗಿ ಸ್ಪದಿಸಿರುವುದನ್ನು ಕಾಣಬಹುದು.


ಕೋಷ್ಟಕ: ೫.೯ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಕೂಲಿಗೆ ಹೋಗುವ ಬಗೆ

ಕ್ರ. ಸಂ.	ಕೂಲಿಗೆ ಹೋಗುವ ಬಗೆ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ನಡೆದುಕೊಂಡು	೯೭	೩೮.೮	೯೪	೪೭
೨	ಸ್ವಂತ ವಾಹನ	೫೬	೨೨.೪	೩೮	೧೯

೩	ಮಾಲೀಕರ ವಾಹನ	೮೯	೩೫.೬	೫೭	೨೮.೫
೪	ಇತರೆ	೦೮	೩.೨	೧೧	೫.೫
	ಒಟ್ಟು ಕುಟುಂಬಗಳು	**೨೫೦**	**೧೦೦**	**೨೦೦**	**೧೦೦**

ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಆಧುನಿಕ ಸಾರಿಗೆ ವ್ಯವಸ್ಥೆ ಮುಂಚೂಣಿಯಲ್ಲಿದೆ. ಈ ಹಿಂದೆ ಕೃಷಿ ಚಟುವಟಿಕೆಗಳಲ್ಲಿ ಅಂದರೆ ಹೊಲ-ಗದ್ದೆಗಳಿಗೆ ಹೋಗಲು ಈಗಿನಂತೆ ಸಾರಿಗೆ ಸೌಲಭ್ಯಗಳಿರಲಿಲ್ಲ ನಡೆದುಕೊಂಡೇ ಹೋಗಬೇಕಾಗಿತ್ತು ಆದರೆ ಇಂದು ಅದು ಬದಲಾಗಿದೆ. ಈ ರೀತಿಯ ವ್ಯವಸ್ಥೆಯನ್ನು ಸೂಚಿಸುವ ಈ ಮೇಲಿನ ಕೋಷ್ಟಕವು ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

ಗೋಪುರ ಆಕೃತಿ ಚಿತ್ರ : ೫.೯ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಕೂಲಿಗೆ ಹೋಗುವ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ದುಡಿಯಲು ಕಾಲ್ನಡಿಗೆಯಲ್ಲಿಯೇ ಶೇ ೩೮.೮ರಷ್ಟು ಮಹಿಳೆಯರು ಹೊಗುತ್ತೇವೆ ಎಂದರೆ, ಇನ್ನೂ ಸ್ವಂತ ವಾಹನದ ಮೂಲಕ ದುಡಿಯಲು ಹೋಗುವವರ ಪ್ರಮಾಣ ಶೇ ೨೨.೪ರಷ್ಟು ಎಂದಿದ್ದು, ಕೃಷಿ ಕೆಲಸ ಬೇರೆ ಊರಿನಲ್ಲಿ ಅಥವಾ ಜಮೀನು ದೂರವಿದ್ದರೆ ಅಂತಹ ಸಂದರ್ಭದಲ್ಲಿ ಶೇ ೩೫.೬ರಷ್ಟು ಭೂ ಮಾಲಿಕರೇ ಕರೆದುಕೊಂಡು ಹೋಗುತ್ತಾರೆ. ಇತರೆ ಅಂದರೆ ಎತ್ತಿನ ಬಂಡಿ, ಟ್ರ್ಯಾಕ್ಟರ್ ಗಳಲ್ಲಿ ದುಡಿಯಲು ಹೊಗುವವರ ಪ್ರಮಾಣ ಶೇ ೩.೨ರಷ್ಟಿರುವುದು ಕಂಡು ಬಂದಿದೆ.



ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ದುಡಿಯಲು ಕಾಲ್ನಡಿಗೆಯಲ್ಲಿಯೇ ಶೇ ೪೭ರಷ್ಟು ಮಹಿಳೆಯರು ಹೊಗುತ್ತೇವೆ ಎಂದರೆ, ಇನ್ನೂ ಸ್ವಂತ ವಾಹನದ ಮೂಲಕ ದುಡಿಯಲು ಹೋಗುವವರ ಪ್ರಮಾಣ ಶೇ ೧೯ರಷ್ಟು ಎಂದಿದ್ದು, ಕೃಷಿ ಕೆಲಸ ಬೇರೆ ಊರಿನಲ್ಲಿ ಅಥವಾ ಜಮೀನು ದೂರವಿದ್ದರೆ ಅಂತಹ ಸಂದರ್ಭದಲ್ಲಿ ಶೇ ೨೮.೫ರಷ್ಟು ಭೂ ಮಾಲಿಕರೇ ಕರೆದುಕೊಂಡು ಹೋಗುತ್ತಾರೆ. ಇತರೆ ಅಂದರೆ ಎತ್ತಿನ ಬಂಡಿ, ಟ್ರ್ಯಾಕ್ಟರ್‌ಗಳಲ್ಲಿ ದುಡಿಯಲು ಹೊಗುವವರ ಪ್ರಮಾಣ ಶೇ ೫.೫ರಷ್ಟಿರುವುದು ಕಂಡು ಬಂದಿದೆ.

೫.೨ ಬೇಡ ಕೃಷಿ ಕಾರ್ಮಿಕರ ಶೈಕ್ಷಣಿಕ ಸ್ಥಿತಿಗತಿ

ಶಿಕ್ಷಣವು ಮನುಷ್ಯನನ್ನು ಅಜ್ಞಾನದಿಂದ ಜ್ಞಾನದೆಡೆಗೆ ಕರೆದೊಯ್ಯುವ ವಾಹನ. ಶಿಕ್ಷಣವು ಸಂವಿಧಾನವು ಭಾರತೀಯರಿಗೆ ನೀಡಿರುವ ಮೂಲಭೂತ ಹಕ್ಕುಗಳಲ್ಲಿ ಒಂದು. ಆದರೆ ಸ್ವಾತಂತ್ರ್ಯಾ ನಂತರದಲ್ಲಿ ಶಿಕ್ಷಣ ಪಡೆಯುತ್ತಿರುವವರ ಪ್ರಮಾಣವನ್ನು ಗಮನಿಸಿದರೆ ಪುರುಷರಿಗೆ ಅಧಿಕ ಆಧ್ಯತೆ ನೀಡಲಾಗಿದೆ. ೧೯೬೪-೬೫ರಲ್ಲಿ ಶಿಕ್ಷಣದ ಬಗ್ಗೆ ಕೊಠಾರಿ ಕಮಿಷನ್ ತನ್ನ ವರದಿಯಲ್ಲಿ ಶಿಕ್ಷಣವು ಬದಲಾವಣೆಯ ಅಸ್ತ್ರ. ಈ ಬದಲಾವಣೆ ದೊಡ್ಡ ಪ್ರಮಾಣದಲ್ಲಿ ಸಾಧ್ಯವಾದರೆ ಯಾವುದೇ ಹಿಂಸಾತ್ಮಕ ಕ್ರಾಂತಿಯಿಲ್ಲದೆ ಸುಧಾರಣೆ ಸಾಧ್ಯ. ಬದಲಾವಣೆಗೆ ಇರುವ ಒಂದೇ ಅಸ್ತ್ರ ಎಂದರೆ ಶಿಕ್ಷಣ ಎಂದು ಹೇಳುತ್ತದೆ. ಭಾರತೀಯ ಸಂವಿಧಾನದಲ್ಲಿ ಅನುಚ್ಛೇದ ೪೫ರಂತೆ ಶಿಕ್ಷಣವು ನಿರ್ದೇಶಿತ ತತ್ವಗಳಲ್ಲಿ ಪರಿಗಣಿಸಲ್ಪಟ್ಟಿತು. ಅದರಂತೆ ಭಾರತದ ಸಂವಿಧಾನವು ಜಾರಿಗೆ ಬಂದ ೧೦ ವರ್ಷಗಳಲ್ಲಿ ಎಲ್ಲ ಮಕ್ಕಳಿಗೆ ಅವರು ೧೪ ವರ್ಷ ತುಂಬುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಸೂಚಿಸಿದೆ. ೨೦೦೨ರಲ್ಲಿ ಅನುಚ್ಛೇದ ೨೧ನ್ನು ಸೇರಿಸುವುದರ ಮೂಲಕ ಉಚಿತ ಶಿಕ್ಷಣ ಪಡೆಯುವುದು ಎಲ್ಲಾ ಮಕ್ಕಳ ಕಡ್ಡಾಯ ಹಕ್ಕಾಗಿದೆ. ೨೦೦೯ ರಲ್ಲಿ ಶಿಕ್ಷಣದ ಹಕ್ಕು ಕಾಯಿದೆಯನ್ನೂ ಜಾರಿಗೆ ತರಲಾಗಿದೆ. ಒಟ್ಟು ಶಿಕ್ಷಣದ ಪ್ರಮಾಣವು ೧೯೫೧ರಲ್ಲಿ ಶೇಕಡಾ ೧೮.೩೩ ಇದ್ದದ್ದು, ೨೦೧೧ರ ಜನಗಣತಿಯ ಪ್ರಕಾರ ಶೇಕಡಾ ೭೪.೦೪ ರಷ್ಟು ವೃದ್ಧಿಸಿದೆ. ಆದರೆ ಇದೇ ಸಂದರ್ಭದಲ್ಲಿ ಶಿಕ್ಷಣದಲ್ಲಿ ಲಿಂಗ ತಾರತಮ್ಯವನ್ನೂ ಕೂಡ ಕಾಣಬಹುದು. ಗಂಡು-ಹೆಣ್ಣು ಶಿಕ್ಷಣದ ಅಂತರವು ೧೯೫೧ರಲ್ಲಿ ಶೇಕಡಾ ೧೮.೩೦ ಇದ್ದದ್ದು, ೨೦೧೧ರಲ್ಲಿ ಶೇಕಡಾ ೧೬.೬೮ಕ್ಕೆ ಇಳಿದಿದೆ. ೨೦೦೫ರಲ್ಲಿ ೬ರಿಂದ ೧೪ ವರ್ಷದ ಗಂಡು ಮಕ್ಕಳು ಶೇ. ೯೨ರಷ್ಟು ಮತ್ತು ಹೆಣ್ಣು ಮಕ್ಕಳು ಶೇಕಡಾ ೮೮ ರಷ್ಟು ಪ್ರಾಥಮಿಕ ಶಾಲೆಗೆ ದಾಖಲಾಗಿದ್ದಾರೆ. (ಅದೇ ಪುಟ ೭೫-೭೬). ಒಟ್ಟಾರೆ ಭಾರತದ ಚಿತ್ರಣಕ್ಕಿಂತಲೂ ಬೇಡ ಸುಮದಾಯದ ಮಹಿಳಾ ಕಾರ್ಮಿಕರ ಕುಟುಂಬಗಳಲ್ಲಿನ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಇಲ್ಲಿನ ಹೆಣ್ಣು ಮಕ್ಕಳನ್ನು ಬಾಲ್ಯದಲ್ಲಿ ವಿವಾಹ ಮಾಡುವ ದೇವದಾಸಿ ಪದ್ದತಿ ಬಿಡುತ್ತಿದ್ದುದರಿಂದ ಅವರನ್ನು ಶಿಕ್ಷಣದಿಂದ ದೂರವಿಡುತ್ತಿದ್ದುದು ಸಾಮಾನ್ಯವಾಗಿದೆ. ಈಗಲೂ ಹೆಣ್ಣು ಮಕ್ಕಳು ಹುಟ್ಟಿದರೆ ದುಃಖಿಸುವ ಮನಸ್ಥಿತಿ ಅಲ್ಲಲ್ಲಿ ಕಂಡುಬರುತ್ತದೆ. ಈ ಕುಲದಲ್ಲಿ ಗಂಡು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆಧ್ಯತೆ ನೀಡಲಾಗುತ್ತದೆ. ಇದರಿಂದಾಗಿ ಬಡತನದಲ್ಲಿ ಬದುಕುತ್ತಿರುವ ಈ ಕುಟುಂಬಗಳು ಮಹಿಳೆಯರ

ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸುತ್ತವೆ. ಸ್ತ್ರೀಯರ ಮದುವೆಯ ನಂತರ ಗಂಡ ದುಡಿಯುತ್ತಾನೆ ಎನ್ನುವ ಭಾವನೆ ಈಗಲೂ ಸರ್ವೇಸಾಮಾನ್ಯ. ಹಾಗೆಯೇ ಬೇಡ ಕುಲದಲ್ಲಿ ಹೆಚ್ಚು ಓದಿ ನೌಕರಿ ಮಾಡುವ ಗಂಡಸರ ಸಂಖ್ಯೆ ಕಡಿಮೆ. ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ಬಹುತೇಕ ಬೇಡ ಕುಲದ ಪುರುಷರು ಸರಕಾರಿ ನೌಕರಿಯಿಂದ ವಂಚಿತರಾಗಿದ್ದಾರೆ. ಇಂತಹುದರಲ್ಲಿ ಮಹಿಳೆಯರು ವಿದ್ಯಾಭ್ಯಾಸ ಮಾಡಿದರೆ ಅವರಿಗೆ ತಕ್ಕನಾದ ವರ ಸಿಗುವುದಿಲ್ಲ ಎಂಬ ನಂಬಿಕೆಯಿದೆ. ಇದರಿಂದಾಗಿಯೂ ಬೇಡ ಸಮುದಾಯದ ಮಹಿಳೆಯರು ಶಿಕ್ಷಣವನ್ನು ಪಡೆಯಲು ಹಿಂಜರಿಯುತ್ತಾರೆ. ವರದಕ್ಷಿಣೆ ಮತ್ತು ಸದ್ಯದಲ್ಲಿರುವ ದುಬಾರಿ ವೆಚ್ಚದ ಶಿಕ್ಷಣವು ಕೂಡ ಅವರ ಸಮಸ್ಯೆಗೆ ಕಾರಣವಾಗಿದೆ. ಅಲ್ಲದೆ ಶಿಕ್ಷಣದ ಒಳಗಡೆಯೇ ಇರುವ ಪಠ್ಯಗಳದ್ದು ಇನ್ನೊಂದು ಸಮಸ್ಯೆ. ಮಕ್ಕಳಿಗೆ ಕಲಿಸುವ ಶಿಕ್ಷಣವೂ ದೋಷಪೂರಿತವಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿನ ಅದೆಷ್ಟೋ ಪಠ್ಯಪುಸ್ತಕಗಳು ಪುರುಷ ಪ್ರಾಧಾನ್ಯತೆಯನ್ನು ಕಲಿಕೆಯಲ್ಲಿ ಮುಂದುವರೆಸಿವೆ.


ಕೋಷ್ಟಕ: ೫.೧೦ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಶೈಕ್ಷಣಿಕ ವಿವರ

ಕ್ರ. ಸಂ.	ಶೈಕ್ಷಣಿಕವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಅನಕ್ಷರಸ್ಥರು	೧೫೨	೬೦.೮	೧೨೯	೬೪.೫
೨	ಕಿರಿಯ ಪ್ರಾಥಮಿಕ ಶಿಕ್ಷಣ	೫೦	೨೦	೩೮	೧೯
೩	ಹಿರಿಯ ಪ್ರಾಥಮಿಕ ಶಿಕ್ಷಣ	೨೨	೮.೮	೧೬	೮
೪	ಪ್ರೌಢಶಾಲಾ ಶಿಕ್ಷಣ	೧೨	೪.೮	೮	೪
೫	ಪಿಯುಸಿ	೦೮	೩.೨	೭	೩.೫
೬	ಪದವಿ	೦೪	೧.೬	೧	೦.೫
೭	ಪದವಿ ಮೇಲ್ಪಟ್ಟು/ವೃತ್ತಿಪರ ಶಿಕ್ಷಣ	೦೨	೦.೮	೧	೦೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಗಂಡು ಹೆಣ್ಣು ಎಂಬ ಬೇದಭಾವಗಳಿಲ್ಲದೇ ಸಮಾನವಾಗಿ ಶಿಕ್ಷಣ ಒದಗಿಸಬೇಕು ಏಕೆಂದರೆ ಇಂದು ಅವಳು ಓದು ಬರಹ ಕಲಿತರೆ ಅವಳ ಜೀವನ ಹಸನವಾಗುತ್ತದೆ. ಅಲ್ಲದೇ ಇನ್ನೊಬ್ಬರ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಇದರಿಂದ ಮಹಿಳೆಯರು ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಣ ವಿನಿಯೊಗ ಮಾಡುವುದು ವ್ಯರ್ಥವೆಂಬ ಭಾವನೆ ಪೋಷಕರಲ್ಲಿದೆ. ಇದು ತೊಲಗಬೇಕು. ಇದು

ತೊಲಗಿದಾಗ ಮಾತ್ರ ಹೆಣ್ಣು ದೇಶದ ಕಣ್ಣು ಎನ್ನುವುದನ್ನು ಅರಿಕೊಂಡು ಅವರಿಗೆ ಶಿಕ್ಷಣ ನೀಡಿದರೆ ಸಮಾಜವು ಬದಲಾಗುತ್ತದೆ. ಭಾರತದಂತಹ ಪಿತೃಪ್ರಧಾನ ಸಮಾಜವೊಂದರಲ್ಲಿ ಈಗಲೂ ಹೆಣ್ಣು ಮಕ್ಕಳನ್ನು ಎಷ್ಟು ಓದಿಸಿದರು ಅಷ್ಟೇ ಬಿಡು ಎನ್ನುವ ಭಾವನೆ ಹಾಗೇ ಉಳಿದುಕೊಂಡಿದೆ. ಆದ್ದರಿಂದ ಗಂಡು ಹೆಣ್ಣು ಎಂಬ ಬೇದಭಾವವಿಲ್ಲದೇ ಸಮಾನವಾಗಿ ಶಿಕ್ಷಣವನ್ನು ಒದಗಿಸುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಹೈದ್ರಾಬಾದ್ ಕರ್ನಾಟಕದ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಶೈಕ್ಷಣಿಕ ಮಟ್ಟವನ್ನು ಈ ಮೇಲಿನ ಕೋಷ್ಟಕದಿಂದ ತಿಳಿದುಕೊಳ್ಳಬಹುದು.

ಲಂಬ ಚಿತ್ರ : ೫.೧೦ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಶೈಕ್ಷಣಿಕ ವಿವರದ ಹಂಚಿಕೆ



ಈ ಕೋಷ್ಟಕವನ್ನು ಗಮನಿಸಿದಾಗ ನಮಗೆ ಹಲವಾರು ವಿಷಯಗಳು ತಿಳಿಯುತ್ತವೆ. ಶಿಕ್ಷಣ ಮಟ್ಟದಲ್ಲಿ ಹೊಸಪೇಟೆ ತಾಲೂಕಿನ ಬೇಡ ಮಹಿಳಾ ಕೃಷಿ ಕಾರ್ಮಿಕರ ಶಿಕ್ಷಣದ ಮಟ್ಟದಲ್ಲಿ ಬಹುತೇಕ ಮಹಿಳೆಯರು ಶೇ ೬೦.೮ ಅನಕ್ಷರಸ್ಥರಿದ್ದರೆ, ಕಿರಿಯ ಪ್ರಾಥಮಿಕ ಶಿಕ್ಷಣ ಪೂರೈಸಿದವರು ಶೇ ೨೦, ಹಿರಿಯ ಪ್ರಾಥಮಿಕ ಶಿಕ್ಷಣ ಶೇ ೮.೮, ಪ್ರೌಢಶಾಲ ಶಿಕ್ಷಣ, ಶೇ ೪.೮, ಪಿಯುಸಿ ಶೇ ೩.೨, ಪದವಿ ಶೇ ೧.೬, ಇನ್ನುಳಿದಂತೆ ವೃತಿಪರ ಶಿಕ್ಷಣ ಪಡೆದವರು ಶೇ ೦.೮ ಇರುವುದನ್ನು ಕಾಣಬಹುದು. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನ ಮಹಿಳಾ ಕೃಷಿ ಕಾರ್ಮಿಕರ ಶಿಕ್ಷಣ ಮಟ್ಟದಲ್ಲಿ ಅನಕ್ಷರಸ್ಥರು ಶೇ ೬೪.೫ ಇದೆ. ಕಿರಿಯ ಪ್ರಾಥಮಿಕ ಶಿಕ್ಷಣ ಶೇ ೧೯ರಷ್ಟಿದ್ದರೆ, ಹಿರಿಯ ಪ್ರಾಥಮಿಕ ಶಿಕ್ಷಣ ಶೇ ೮ರಷ್ಟು ಕಂಡು ಬರುತ್ತದೆ. ಪ್ರೌಢಶಿಕ್ಷಣ ಪಡೆದವರು ಶೇ ೪, ಪಿಯುಸಿ ಓದಿದವರು ಶೇ ೩.೫ ಇದೆ. ಪದವಿ ಪಡೆದವರು ೦.೫ ಇದ್ದು, ಇನ್ನುಳಿದಂತೆ ಸ್ನಾತಕೋತ್ತರ, ವೃತ್ತಿಪರ ಶಿಕ್ಷಣ ಪಡೆದವರು ಶೇ ೦.೫ ಇರುವುದನ್ನು ಗುರುತಿಸಬಹುದು.



ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಮಹಿಳಾ ಕೃಷಿ ಕಾರ್ಮಿಕರು ಬಹುತೇಕರು ಅನಕ್ಷರಸ್ಥರು ಇರುವುದು ವಿಶೇಷ.

೫.೩ ಬೇಡ ಕೃಷಿ ಕಾರ್ಮಿಕರ ಆರ್ಥಿಕ ಸ್ಥಿತಿಗತಿ

ಪ್ರಾಚೀನ ಕಾಲದಲ್ಲಿ ಮಹಿಳೆಯರು ಪಾರಂಪರಿಕ ಕೃಷಿಕ್ಷೇತ್ರದಲ್ಲಿ ಸಾಗುವಳಿದಾರರಾಗಿ, ಕೃಷಿ ಕಾರ್ಮಿಕರಾಗಿ, ಕುಟುಂಬದ ಆರ್ಥಿಕ ಬೆಂಗಾವಲಾಗಿ ದುಡಿಯುತ್ತಿದ್ದರು. ಆಧುನಿಕ ಕೃಷಿ ಪದ್ಧತಿಯಲ್ಲಿ ಅವರ ಪಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತಿಲ್ಲ. ವ್ಯವಸಾಯದಲ್ಲಿ ಮಹಿಳೆಯರ ಪಾತ್ರ ಅಪಾರವಾದದ್ದು. ಬೀಜ ಬಿತ್ತುವುದು, ಪೈರು ನಾಟಿ ಮಾಡುವುದು, ಕಳೆ ಕೀಳುವುದು, ನೇಗಿಲು ಹಿಡಿಯುವುದೊಂದನ್ನು ಬಿಟ್ಟರೆ ಉಳಿದೆಲ್ಲಾ ಕೆಲಸಗಳನ್ನು ಮಹಿಳೆಯರು ನಿರ್ವಹಿಸುತ್ತಿದ್ದಾರೆ. "ಒಂದು ಅಧ್ಯಯನದ ಪ್ರಕಾರ ಅಡುಗೆ ಊಟೋಪಚಾರದಲ್ಲಿ ಮಹಿಳೆಯರು ಶೇಕಡಾ ೩೦.೧ ರಷ್ಟು ಶ್ರಮವನ್ನು ವ್ಯಯಿಸುತ್ತಾರೆ. ಉಳಿದಂತೆ ಶೇಕಡಾ ೨೧.೭, ಶೇಕಡಾ ೧೯.೮, ಶೇಕಡಾ ೧೬.೫, ಶೇಕಡಾ ೯.೬ ಮತ್ತು ಶೇಕಡಾ ೩.೩ ರಷ್ಟನ್ನು ಕ್ರಮವಾಗಿ ಬಟ್ಟೆ ಹೊಗೆಯುವುದು, ನೀರು ಸಂಗ್ರಹಿಸುವುದು, ಕುಟಂಬ ನಿರ್ವಹಣೆ, ಮಕ್ಕಳ ಪಾಲನೆ, ಸೌದೆ ತರುವುದು ಮುಂತಾದ ಕೆಲಸಗಳಲ್ಲಿ ತಮ್ಮ ಶ್ರಮ ವ್ಯಯಿಸುತ್ತಾರೆ." (ಮಹಿಳಾ ಶ್ರಮಘನತೆ, ಲೇ–ಡಾ. ಸಿದ್ಧಗಂಗಮ್ಮ, ಪುಟ ೨೧)

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ಬೇಡ ಕುಟುಂಬಗಳಲ್ಲಿ ಕೃಷಿಕರೇ ಹೆಚ್ಚು. ಅದರಲ್ಲೂ ಭೂಮಿ ಇದ್ದರೂ ಅತಿ ಕಡಿಮೆ ಪ್ರಮಾಣದಲ್ಲಿ. ಭೂರಹಿತ ಕುಟುಂಬಗಳೇ ಅಧಿಕ. ಇವರಿಗೆ ವ್ಯವಸಾಯ ಕೂಲಿಯೇ ಜೀವನಾಧಾರ. ಗ್ರಾಮೀಣ ಪ್ರದೇಶಗಳಲ್ಲಂತೂ ಮಹಿಳೆಯರಿಗೆ ವ್ಯವಸಾಯವನ್ನು ಬಿಟ್ಟರೆ ಬೇರೆ ಉದ್ಯೋಗದ ಅವಕಾಶಗಳೇ ಇಲ್ಲ. ಹೀಗಾಗಿ ಬೇಡ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ಕೂಲಿ ಮಾಡುವುದು ಅನಿವಾರ್ಯವಾಗಿದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಅವಸರದಲ್ಲಿ ಸುಧಾರಿತ ಕೃಷಿ ಉಪಕರಣಗಳಾದ ಟ್ರಾಕ್ಟರ್, ಟಿಲ್ಲರ್, ಕಟಾವು ಮಾಡುವ ಯಂತ್ರ, ಭತ್ತ ನಾಟಿ ಮಾಡುವ ಯಂತ್ರ ಮುಂತಾದ ಯಾಂತ್ರಿಕ ಉಪಕರಣಗಳ ಬಳಕೆಯಿಂದಾಗಿ ಈ ಮಹಿಳೆಯರೂ ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿನ ತಂತ್ರಜ್ಞಾನ ಪಾಶ್ಚಿಮಾತ್ಯ ತಂತ್ರಜ್ಞಾನದ ಅನುಕರಣೆಯಾಗಿದೆ. ಇದರ ಸ್ವಭಾವವೇನೆಂದರೆ ಕಾರ್ಮಿಕರ ಸಂಖ್ಯೆ ಕಡಿಮೆಯಿದ್ದು, ಮಾನವ ಶಕ್ತಿ ವಿರಳವಾಗಿರುವಂತಹ ಮತ್ತು ಯಂತ್ರಶಕ್ತಿಯನ್ನು ಯಥೇಚ್ಚವಾಗಿ ಬಳಸುವಂತದ್ದಾಗಿದೆ. ಆದರೆ ನಮ್ಮಲ್ಲಿ ಅಗತ್ಯಕ್ಕಿಂತ ಅಧಿಕ ಸಂಖ್ಯೆಯ ಕಾರ್ಮಿಕರಿದ್ದು, ನಿರುದ್ಯೋಗ ಬೃಹತ್ ಸಮಸ್ಯೆಯಾಗಿರುವಾಗ ತಂತ್ರಜ್ಞಾನ ಬಳಕೆಯು ನಮ್ಮ ಕೃಷಿ ಕಾರ್ಮಿಕರ ಕೆಲಸಗಳನ್ನು ಕಿತ್ತುಕೊಂಡು ಅವರನ್ನು ಇನ್ನಷ್ಟು ನಿರ್ಗತಿಕರನ್ನಾಗಿ ಮಾಡುತ್ತಿದೆ. ಬೇಡ ಸಮುದಾಯದ ಮಹಿಳೆಯರು ಕೆಲಸ ಹುಡುಕಿಕೊಂಡು ನಗರಗಳಿಗೂ ಹೋಗದೆ, ಗ್ರಾಮೀಣ ಪ್ರದೇಶಗಳಲ್ಲೂ ದುಡಿಮೆಯಿಲ್ಲದೆ ನಿರ್ಗತಿಕರಾಗುವ ಪರಿಸ್ಥಿತಿ ಎದುರಾಗಿದೆ.

ಅಭಿವೃದ್ಧಿ ಯೋಜನೆಗಳು ಮೇಲ್ನೋಟಕ್ಕೆ ಬೇಡ ಮಹಿಳೆಯರನ್ನು ಒಳಗೊಂಡಿರುವಂತೆ ತೋರುತ್ತಿದೆ. ಆದರೆ ಕಾರ್ಯರೂಪಕ್ಕೆ ಬರುವಾಗ ಈ ಯಾವ ಯೋಜನೆಗಳೂ ಸರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಪರಿಶಿಷ್ಟ ಪಂಗಡದ ಮಹಿಳೆಯರಿಗಾಗಿಯೇ ಸರ್ಕಾರಗಳು ವಿಶೇಷ ಯೋಜನೆಗಳನ್ನು ರೂಪಿಸಿತು. ಆದರೂ ಕೂಡ ಯಾವುದೇ ಸುಧಾರಣೆ ಕಂಡುಬರುತ್ತಿಲ್ಲ. ಮುಖ್ಯವಾಗಿ ಭೂ ಸುಧಾರಣೆಗಳಲ್ಲಿ ಬೇಡ ಮಹಿಳೆಯರನ್ನು ನಿರ್ಲಕ್ಷಿಸಲಾಯಿತು. ಪಂಚವಾರ್ಷಿಕ ಯೋಜನೆಗಳಲ್ಲಿ ಹಳ್ಳಿಗಾಡಿನ ಮಹಿಳೆಯರನ್ನು ಒಳಗೊಂಡಂತೆ ಅನೇಕ ಮಹಿಳಾ ಮಂಡಳಿಗಳು ಸ್ಥಾಪನೆಗೊಂಡು ಮಹಿಳೆಯರಿಗೆ ನೈಪುಣ್ಯತೆಯನ್ನು ಕಲಿಸಲು ಪ್ರಯತ್ನಿಸಲಾಯಿತು. ಆದರೆ ಅದು ಮಧ್ಯಮ ವರ್ಗದ ಮಹಿಳೆಯರ ವಿರಾಮ ವೇಳೆಯ ಕಲ್ಪನೆಯಾಗಿತ್ತು.

ಭಾರತೀಯ ಸಂವಿಧಾನದ ನೀತಿ ನಿರ್ದೇಶನ ತತ್ವದ ೩೯ನೇ ಅನುಚ್ಛೇದ ಹಾಗೂ ೧೫ನೇ ಅನುಚ್ಛೇದಗಳನ್ನು ಅನುಸರಿಸಿ ಸಮಾನ ಪರಿಶ್ರಮಕ್ಕೆ ಸಮಾನ ವೇತನ ಜಾರಿಗೆ ಬಂದಿದೆ. ಇದರ ೪(೧)ನೇ ಪ್ರಕರಣದಲ್ಲಿ ಲಿಂಗ ಸಮಾನತೆಯನ್ನು ಪ್ರತಿಪಾದಿಸಲಾಗಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ನೀತಿಯನ್ನು ರೂಪಿಸಿದ್ದರೂ ಮಹಿಳೆಯರು ಪುರುಷರಿಗಿಂತ ಕಡಿಮೆ ಕೂಲಿ ಪಡೆಯುತ್ತಿದ್ದಾರೆ.

ಪಾರಂಪರಿಕ ಕೃಷಿ ಪದ್ದತಿ ಜಾರಿಯಲ್ಲಿದ್ದಾಗ ಕೂಡ್ಲಿಗಿ ಮತ್ತು ಹೊಸಪೇಟೆ ಭಾಗದ ಬೇಡ ಮಹಿಳೆಯರು ಉಪಕಸುಬುಗಳನ್ನು ಮಾಡುವ ಮೂಲಕ ಆರ್ಥಿಕವಾಗಿ ಸ್ವಲ್ಪವಾದರೂ ಸಬಲರಾಗುತ್ತಿದ್ದರು. ಆದರೆ ಆಧುನಿಕತೆಯಿಂದಾಗಿ ಯಂತ್ರಗಳ ಬಳಕೆ ಎಲ್ಲ ಕ್ಷೇತ್ರಗಳಲ್ಲೂ ಬದಲಾವಣೆಯನ್ನು ತಂದಿದೆ. ಇದರಿಂದಾಗಿ ವಿವಿಧ ಉಪಕಸುಬುಗಳೂ ಕಣ್ಮರೆಯಾಗುತ್ತಿವೆ. ಇದು ಬೇಡ ಮಹಿಳೆಯರಿಗೆ ದೊಡ್ಡ ಹೊಡೆತ ನೀಡಿದೆ. ಈ ಮಹಿಳೆಯರು ಕೃಷಿಯನ್ನೇ ಅವಲಂಬಿಸುವಂತಾಗಿದೆ. ಮತ್ತು ಈ ರಂಗದಲ್ಲಿ ಎಷ್ಟೇ ಶೋಷಣೆ, ಅಸಮಾನತೆ ಕಂಡುಬಂದರೂ ಸಹಿಸುವಂತಹ ಸ್ಥಿತಿಗೆ ಮಹಿಳೆಯರನ್ನು ದೂಡಿದೆ.


ಕೋಷ್ಟಕ: ೫.೧೧ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಕುಟುಂಬದ ವಾರ್ಷಿಕ ಆದಾಯದ ವಿವರ

ಕ್ರ. ಸಂ.	ಕುಟುಂಬದ ವಾರ್ಷಿಕ ಆದಾಯದ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	೧೦.೦೦೦ ಕ್ಕಿಂತಕಡಿಮೆ	೨೩	೯.೨	೧೦೨	೫೧
೨	೧೦.೦೦೧ – ೨೦.೦೦೦	೮೫	೩೪	೫೧	೨೫.೫
೩	೨೦.೦೦೦ – ೩೦.೦೦೦	೧೦೯	೪೩.೬	೩೪	೧೭
೪	೩೦.೦೦೦ – ೪೦.೦೦೦	೨೫	೧೦	೧೧	೫.೫

೫	೫೦.೦೦೦ ಕ್ಕಿಂತ ಹೆಚ್ಚು	೦೮	೩.೨	೨	೧
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಆದಾಯವು ಕುಟುಂಬವನ್ನು ಸಲಹುವ ಪ್ರಮುಖ ಸಾಧನ ಎಂದರೆ ತಪ್ಪಾಗಲಾರದು, ಅಲ್ಲದೇ ಸಾಮಾಜಿಕ, ಆರ್ಥಿಕ ಅಂಶಗಳನ್ನು ಅಳೆಯುವ ಸಾಧನವಾಗಿ ಆದಾಯವನ್ನು ಪರಿಗಣಿಸಲಾಗುತ್ತದೆ. ಬಡವರು ಅದರಲ್ಲೂ ವಿಶೇಷವಾಗಿ ಮಹಿಳೆಯರು ಆದಾಯವನ್ನು ಗಳಿಸುವಲ್ಲಿ ಅತ್ಯಂತ ಶ್ರಮ ಪಡಬೇಕಾಗುತ್ತದೆ. ಕುಟುಂಬದ ಜವಬ್ದಾರಿಯನ್ನು ಹೊತ್ತು ಹಗಲಿರಳು ದುಡಿದು, ಮಕ್ಕಳ ಲಾಲನೆ-ಪಾಲನೆ ಮಾಡಬೇಕಾಗುತ್ತದೆ. ಅದರಲ್ಲೂ ಮಹಿಳಾ ಕಾರ್ಮಿಕರ (ಕೃಷಿ) ಸ್ಥಿತಿಯಂತೂ ತುಂಬಾ ಶೋಚನೀಯ ಹಂತದಲ್ಲಿದೆ. ದಿನವಿಡಿ ದುಡಿದರೂ ಕೂಲಿಯ ಪ್ರಮಾಣ ಅತ್ಯಂತ ನಿಕೃಷ್ಟವಾಗಿರುತ್ತದೆ. ಇಂತಹ ವ್ಯವಸ್ಥೆಯ ಮಧ್ಯೆ ಕುಟುಂಬದ ಆದಾಯ ಮೂಲಕ್ಕೆ ಸಂಬಂಧಿಸಿದ ಅಂಶಗಳನ್ನು ಈ ಮೇಲಿನ ಕೋಷ್ಟಕದಿಂದ ತಿಳಿದುಕೊಳ್ಳಬಹುದು.

ಲಂಬ ಚಿತ್ರ : ೫.೧೧ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಆದಾಯದ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರ ಆದಾಯವನ್ನು ನೋಡಿದಾಗ, ೧೦,೦೦೦ಕ್ಕಿಂತ ಕಡಿಮೆ ಆದಾಯ ಹೊಂದಿದವರು ಶೇ ೯.೨ರಷ್ಟು ಇದೆ. ೧೦,೦೦೦ರಿಂದ ೨೦,೦೦೦ರಷ್ಟು ಆದಾಯವನ್ನು ಹೊಂದಿದವರ ಪ್ರಮಾಣ ಶೇ ೩೪ರಷ್ಟಿದ್ದು, ೨೦,೦೦೦ದಿಂದ ೩೦,೦೦೦ರಷ್ಟು ಆದಾಯ ಹೊಂದಿದ ಕುಟುಂಬಗಳು ಶೇ ೪೩.೬ರಷ್ಟಿವೆ. ೩೦,೦೦೦ದಿಂದ ೪೦,೦೦೦ರಷ್ಟು ಆದಾಯ

ಹೊಂದಿದ ಕುಟುಂಬಗಳು ಶೇ ೧೦ರಷ್ಟು ಇವೆ. ೫೦,೦೦೦ಕ್ಕಿಂತ ಹೆಚ್ಚಿನ ಆದಾಯ ಹೊಂದಿದವರ ಕುಟುಂಬಗಳು ಶೇ. ೩೨ರಷ್ಟಿರುವುದನ್ನು ಕಾಣಬಹುದು. ಕೂಡ್ಲಿಗಿ ಬೇಡ ಮಹಿಳಾ ಕೃಷಿ ಕಾರ್ಮಿಕರ ಆದಾಯವನ್ನು ನೋಡಿದಾಗ, ೧೦,೦೦೦ಕ್ಕಿಂತ ಕಡಿಮೆ ಆದಾಯ ಹೊಂದಿದವರು ಶೇ ೫೧ರಷ್ಟು ಇದೆ. ೧೦,೦೦೦ರಿಂದ ೨೦,೦೦೦ರಷ್ಟು ಆದಾಯವನ್ನು ಹೊಂದಿದವರ ಪ್ರಮಾಣ ಶೇ ೨೫.೫ರಷ್ಟಿದ್ದು, ೨೦,೦೦೦ದಿಂದ ೩೦,೦೦೦ರಷ್ಟು ಆದಾಯ ಹೊಂದಿದ ಕುಟುಂಬಗಳು ಶೇ ೧೭ರಷ್ಟಿವೆ. ೩೦,೦೦೦ದಿಂದ ೪೦,೦೦೦ರಷ್ಟು ಆದಾಯ ಹೊಂದಿದ ಕುಟುಂಬಗಳು ಶೇ ೫.೫ರಷ್ಟು ಇವೆ. ೫೦,೦೦೦ಕ್ಕಿಂತ ಹೆಚ್ಚಿನ ಆದಾಯ ಹೊಂದಿದವರ ಕುಟುಂಬಗಳು ಶೇ. ೧ರಷ್ಟಿರುವುದನ್ನು ಕಾಣಬಹುದು.


ಕೋಷ್ಟಕದಿಂದ ತಿಳಿಯುವ ಸಂಗತಿಯೆಂದರೆ, ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರ ಆದಾಯ ಕೂಡ್ಲಿಗಿ ತಾಲೂಕಿನ ಬೇಡ ಮಹಿಳಾ ಕೃಷಿ ಕಾರ್ಮಿಕರಿಗಿಂತ ಉತ್ತಮ ಸ್ಥಿತಿಯಲ್ಲಿರುವುದನ್ನು ಕಾಣಬಹುದು.

ಕೋಷ್ಟಕ: ೫.೧೨ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಪಡಿತರ ಚೀಟಿ ವಿವರ

ಕ್ರ. ಸಂ.	ಪಡಿತರ ಚೀಟಿ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಬಿ.ಪಿ.ಎಲ್‌ಕಾರ್ಡ್	೧೫೬	೬೨.೪	೧೧೦	೫೫
೨	ಎ.ಪಿ.ಎಲ್‌ಕಾರ್ಡ್	೩೩	೧೩.೨	೨೧	೧೦.೫
೩	ಅಂತ್ಯೋದಯ	೩೬	೧೪.೪	೪೭	೨೩.೫
೪	ನೀಡಿಲ್ಲ	೨೫	೧೦	೨೨	೧೧
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ದೇಶದ ಪ್ರಜೆಗಳೆಂದು ಗುರುತಿಸಲು ಸರಕಾರವು ಅನೇಕ ಮಾನದಂಡಗಳನಿಟ್ಟುಕೊಂಡು ಜನರಿಗೆ ನೀಡುವ ಒಂದು ಸಾದನವಾಗಿದೆ. ಪಡಿತರ ಚೀಟಿಯು ಜನರ ಒಂದು ಹೊತ್ತಿನ ಊಟವನ್ನು ನಿಭಾಯಿಸುವಲ್ಲಿ ಪ್ರಮುಖವಾಗಿದೆ. ಮತ್ತು ಸರಕಾರವು ನೀಡುವ ಸೌಲಭ್ಯಗಳನ್ನು ಪಡೆಯಲು ಸಹ ಪಡಿತರ ಚೀಟಿ ಪ್ರಮುಖವಾಗಿದೆ. ಅದರಲ್ಲೂ ಕೃಷಿ ಚಟುವಟಿಕೆಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುವ ಕುಟುಂಬಗಳಿಗೆ ಪಡಿತರ ಚೀಟಿ ಜೀವಾಳವಾಗಿದೆ. ಈ ನೆಲೆಯಲ್ಲಿ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಪಡಿತರ ಚೀಟಿಯನ್ನು ಹೊಂದಿರುವ ಬಗೆಯನ್ನು ಈ ಈ ಮೇಲಿನ ಕೋಷ್ಟಕವು ಸ್ಪಷ್ಟಪಡಿಸುತ್ತದೆ.

ಲಂಬ ಚಿತ್ರ : ೫.೧೨ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಪಡಿತರ ವಿವರದ ಹಂಚಿಕೆ




ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಹೊಂದಿರುವ ಪಡಿತರ ಚೀಟಿಯನ್ನು ನೋಡಿದಾಗ ಬಹುತೇಕ ಕುಟುಂಬಗಳು ಶೇ ೬೨.೪.ರಷ್ಟು ಬಿಪಿಲ್ ಪಡಿತರ ಚೀಟಿಯನ್ನು ಹೊಂದಿದ್ದಾರೆ. ಎ.ಪಿ.ಎಲ್ ಪಡಿತರ ಚೀಟಿ ಶೇ ೧೩.೨ರಷ್ಟು, ಅಂತ್ಯೋದಯ ಪಡಿತರ ಚೀಟಿ ಶೇ ೧೪.೪ರಷ್ಟು, ಯಾವುದೇ ಪಡಿತರ ಚೀಟಿ ಹೊಂದಿಲ್ಲದವರ ಕುಟುಂಬಗಳು ಶೇ ೧೦ ಕಂಡು ಬಂದಿವೆ. ಕೂಡ್ಲಿಗಿ ಬೇಡ ಮಹಿಳಾ ಕೃಷಿ ಕಾರ್ಮಿಕರು ಹೊಂದಿರುವ ಪಡಿತರ ಚೀಟಿಯನ್ನು ನೋಡಿದಾಗ ಬಹುತೇಕ ಕುಟುಂಬಗಳು ಶೇ ೫೫ ರಷ್ಟು ಬಿಪಿಲ್ ಪಡಿತರ ಚೀಟಿಯನ್ನು ಹೊಂದಿದ್ದಾರೆ. ಎ.ಪಿ.ಎಲ್ ಪಡಿತರ ಚೀಟಿ ಶೇ ೧೦.೫ರಷ್ಟು, ಅಂತ್ಯೋದಯ ಪಡಿತರ ಚೀಟಿ ಶೇ ೨೩.೫ರಷ್ಟು, ಯಾವುದೇ ಪಡಿತರ ಚೀಟಿ ಹೊಂದಿಲ್ಲದವರ ಕುಟುಂಬಗಳು ಶೇ ೧೧ ಕಂಡು ಬಂದಿವೆ.

ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರ ಕುಟುಂಬಗಳು ಅಧಿಕ ಪ್ರಮಾಣದಲ್ಲಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಂಡಿರುವುದು ಕಂಡುಬಂದಿದೆ. ಇನ್ನು ವಿವಿಧ ಕಾರಣ ಹಾಗೂ ದಾಖಲಾತಿಗಳ ಕೊರತೆ, ಸರಕಾರಕ್ಕೆ ಸಲ್ಲಿಸಿದ ಅರ್ಜಿಗಳಿಂದ ಯಾವುದೇ ರೀತಿಯ ಪಡಿತರ ಚೀಟಿಯನ್ನು ಹೊಂದಿಲ್ಲದ ಕುಟುಂಬಗಳ ಪ್ರಮಾಣ ಇಲ್ಲಿ ಕಡಿಮೆ ಇರುವುದನ್ನು ಕಾಣಬಹುದು.

ಕೋಷ್ಠಕ: ೫.೧೩ ಕೃಷಿ ಕೂಲಿ ಕೆಲಸದ ಲಭ್ಯತೆಯ ವಿವರ					
ಕ್ರ. ಸಂ.	ಕೃಷಿ ಕೂಲಿ ಲಭ್ಯತೆಯವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	೩ ತಿಂಗಳು	೫೬	೨೨.೪	೧೦೩	೫೧.೫
೨	೩ ರಿಂದ ೬ ತಿಂಗಳು	೮೭	೩೪.೮	೮೬	೪೩
೩	೬ ರಿಂದ ೯ ತಿಂಗಳು	೭೫	೩೦	೦೯	೪.೫
೪	ವರ್ಷ ಪೂರ್ತಿ(೧೨ತಿಂಗಳು)	೩೨	೧೨.೮	೦೨	೧
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಬೇಸಾಯವು ಮಳೆಯೊಡನೆ ಆಡುವ ಜೂಜಾಟವಿದ್ದಂತೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ದೇಶದ ಗ್ರಾಮೀಣ ಆರ್ಥಿಕ ಪರಿಸ್ಥಿತಿ ನಿಂತಿರುವುದೇ ಬೇಸಾಯದ ಮೇಲೆ. ಹೀಗಿರುವಾಗ ಬೇಸಾಯವು ಮಳೆಯನ್ನೇ ಅವಲಂಭಿಸಿಕೊಂಡಿದೆ. ಗ್ರಾಮೀಣ ಕುಟುಂಬಗಳು ಬಹತೇಕ ಮಳೆಯಾಶ್ರಿತ ಜಮೀನುಗಳನ್ನು ಹೊಂದಿವೆ. ಸೂಕ್ತ ಸಮಯಕ್ಕೆ ಮಳೆಯಾದರೆ ಕೃಷಿ ಉತ್ಪಾದನೆಯು ಹೆಚ್ಚಾಗುತ್ತದೆ. ಹಾಗೂ ಕೃಷಿಯಲ್ಲಿ ತೊಡಗುವವರ ಪ್ರಮಾಣ ಅಧಿಕವಾದರೆ ಕೃಷಿ ಕೂಲಿಯನ್ನು ಅವಲಂಭಿಸಿಕೊಂಡು ಜೀವನ ನಡೆಸುತ್ತಿರುವವರ ಬದುಕು ಸುಧಾರಣೆಯಾಗುತ್ತದೆ. ಈ ರೀತಿಯಲ್ಲಿ ಬೇಡ ಮಹಿಳಾ ಕೃಷಿ ಕೂಲಿ ಲಭ್ಯತೆಯನ್ನು ಈ ಮೇಲಿನ ಕೋಷ್ಟಕವು ತೋರಿಸುತ್ತದೆ.

ಸಿಲಿಂಡರ್ ಆಕೃತಿ ಚಿತ್ರ: ೫.೧೩ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಕೃಷಿಕೂಲಿ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕ ಕುಟುಂಬಗಳು ೩ರಿಂದ ೬ತಿಂಗಳುಗಳ ಕಾಲ ಶೇ ೩೪.೮ರಷ್ಟು ಕೃಷಿಯಲ್ಲಿ ಅತಿ ಹೆಚ್ಚು ತೊಡಗಿರುವುದು ಕಂಡು ಬಂದರೆ, ೩ತಿಂಗಳು ಕಾಲ ಕೃಷಿಯಲ್ಲಿ ತೊಡಗಿದ ಕುಟುಂಬಗಳು ಶೇ ೨೨.೪.ರಷ್ಟು, ೬ರಿಂದ ೯ತಿಂಗಳು ಕೃಷಿ ಕೂಲಿಯಲ್ಲಿ ನಿರತರಾದ ಕುಟುಂಬಗಳು ಶೇ ೩೦ರಷ್ಟು ಕಂಡು ಬಂದರೆ, ಇನ್ನುಳಿದಂತೆ ವರ್ಷಪೂರ್ತಿ ಕೃಷಿಕೂಲಿಯನ್ನು ಹೊಂದಿರುವ ಕುಟುಂಬಗಳು ಶೇ ೧೨.೮ರಷ್ಟು, ಕಂಡುಬಂದಿದೆ. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕ ಕುಟುಂಬಗಳು ೩ತಿಂಗಳುಗಳ ಕಾಲ ಶೇ ೫೧.೫ರಷ್ಟು ಕೃಷಿಯಲ್ಲಿ ತೊಡಗಿರುವುದು ಅತಿ ಹೆಚ್ಚು ಕಂಡು ಬಂದರೆ, ೩ರಿಂದ ೬ತಿಂಗಳು ಕಾಲ ಕೃಷಿಯಲ್ಲಿ ತೊಡಗಿದ ಕುಟುಂಬಗಳು ಶೇ ೪೩ರಷ್ಟು, ೬ರಿಂದ ೯ತಿಂಗಳು ಕೃಷಿ ಕೂಲಿಯಲ್ಲಿ ನಿರತರಾದ ಕುಟುಂಬಗಳು ಶೇ ೪.೫ರಷ್ಟು ಕಂಡು ಬಂದರೆ, ಇನ್ನುಳಿದಂತೆ ವರ್ಷಪೂರ್ತಿ ಕೃಷಿಕೂಲಿಯನ್ನು ಹೊಂದಿರುವ ಕುಟುಂಬಗಳು ಶೇ ೧ರಷ್ಟು, ಕಂಡು ಬಂದಿದೆ.

ಈ ಎರಡು ತಾಲೂಕುಗಳಲ್ಲಿ ಹೊಸಪೇಟೆ ಬೇಡ ಮಹಿಳಾ ಕೃಷಿ ಕಾರ್ಮಿಕರ ಕುಟುಂಬಗಳು ೩ರಿಂದ ೬ತಿಂಗಳುಗಳ ಕಾಲ ಅಧಿಕವಾಗಿ ಕೃಷಿ ಚಟುವಟಿಕೆಯ ಬಗೆಯು ಕಂಡುಬಂದಿದೆ. ಇನ್ನು ಕೂಡ್ಲಿಗಿಯ ಭಾಗದಲ್ಲಿ ೩ತಿಂಗಳು ಮಾತ್ರ ಕೃಷಿಯು ಇರುತ್ತದೆ. ಈ ಸಂದರ್ಭದಲ್ಲಿಯೇ ಕೃಷಿಯ ಕೂಲಿ ಲಭ್ಯವಿರುತ್ತದೆ ಎಂಬುದು ತಿಳಿದುಬಂದಿದೆ.


ಕೋಷ್ಟಕ: ೫.೧೪ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಕೂಲಿಯನ್ನು ಪಡೆಯುವ ವಿವರ

ಕ್ರ. ಸಂ.	ಕೂಲಿಯನ್ನು ಪಡೆಯುವ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಕೂಲಿ ಮಾತ್ರ	೧೩೧	೫೨.೪	೭೩	೩೬.೫
೨	ಕೂಲಿ ಜೊತೆ ಊಟ	೫೨	೨೦.೮	೯೭	೪೮.೫
೩	ಕೂಲಿ ಜೊತೆ ಟೀ/ಕಾಫಿ/ಬ್ರೆಡ್	೪೫	೧೮	೦೯	೪.೫
೪	ಕೂಲಿಯ ಜೊತೆ ದವಸ	೨೨	೮.೮	೨೧	೧೦.೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಕೃಷಿಯಲ್ಲಿ ನಿರ್ವಹಿಸುವ ಕೂಲಿಯನ್ನು ಕೃಷಿಕೂಲಿ ಎಂದೂ ಕರೆಯಬಹುದು. ಭಾರತದ ಹೆಚ್ಚಾಗಿ ಕೃಷಿಯ ಮೇಲೆ ಅವಲಂಬನೆಯಾಗಿದೆ. ಅದಕ್ಕಾಗಿ ೧೯೫೧ರಲ್ಲಿ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಪ್ರಾಮುಖ್ಯತೆ ನೀಡಿರುವುದನ್ನು ನೋಡಬಹುದು. ಕೃಷಿಯಲ್ಲಿ ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರೇ ಹೆಚ್ಚು ಕೆಲಸ ನಿಭಾಯಿಸುತ್ತಾಳೆ. ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮತ್ತು ಕೊಡುಗೆ ಮಹತ್ವದ್ದಾಗಿದೆ. ಆದರೆ ಅವರ ಸೇವೆಗಳಿಗೆ ಸಿಗುತ್ತಿರುವ ಸಂಭಾವನೆ ಮಾತ್ರ

ಕಡಿಮೆ. ಕೃಷಿಯಲ್ಲಿ ತಾರತಮ್ಯವಿದೆ. ಇಲ್ಲಿ ಪುರುಷರು ಮತ್ತು ಮಹಿಳೆಯರಿಗೆ ನೀಡಲಾಗುತ್ತಿರುವ ಕೂಲಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಅದರಲ್ಲೂ ಮಹಿಳಾ ಕೃಷಿ ಕಾರ್ಮಿಕರ ವಿಷಯದಲ್ಲಿ ಶೋಚನೀಯ ಸ್ಥಿತಿಯಿದೆ. ಮಹಿಳೆ ಮತ್ತು ಪುರುಷರ ಕೂಲಿಯಲ್ಲಿ ಗಣನೀಯ ಪ್ರಮಾಣದ ವ್ಯತ್ಯಾಸವಿದೆ. ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕಿನ ಕೂಲಿಯ ಪ್ರಮಾಣ ಭಿನ್ನವಿದ್ದು, ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕುಗಳಲ್ಲಿ ಪುರುಷರಿಗೆ ೩೦೦ರೂಗಳಿದ್ದರೆ, ಮಹಿಳೆಯರಿಗೆ ೧೫೦ ರೂಗಳು ಇರುವುದನ್ನು ಈ ಮೇಲಿನ ಕೋಷ್ಟಕವು ತಿಳಿಸಿಕೊಡುತ್ತದೆ.

ಲಂಬ ಚಿತ್ರ : ೫.೧೪ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಕೃಷಿಕೂಲಿ ಪಡೆಯುವವರ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಮಾಡಿದ ಕೆಲಸಕ್ಕೆ ಕೂಲಿ ಮಾತ್ರ ತೆಗೆದುಕೊಳ್ಳುವವರು ಪ್ರಮಾಣ ಶೇ ೫೨.೪ರಷ್ಟು ಇದ್ದರೆ, ಕೂಲಿ ಜೊತೆ ಊಟವನ್ನು ನೀಡುವವರ ಪ್ರಮಾಣ ಶೇ ೨೦.೮ರಷ್ಟು, ಕೂಲಿ ಜೊತೆ ಟೀ/ಕಾಫಿ/ಬ್ರೆಡ್ ನೀಡುವವರ ಪ್ರಮಾಣ ಶೇ ೧೮ರಷ್ಟು ಕಂಡು ಬಂದರೆ, ಕೂಲಿ ಜೊತೆ ದವಸ ದಾನ್ಯಗಳನ್ನು ನೀಡುವವರ ಪ್ರಮಾಣ ಶೇ ೮.೮ರಷ್ಟು, ಕಂಡುಬಂದಿದೆ. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಮಾಡಿದ ಕೆಲಸಕ್ಕೆ ಕೂಲಿ ಮಾತ್ರ ತೆಗೆದುಕೊಳ್ಳುವವರು ಪ್ರಮಾಣ ಶೇ ೩೬.೫ರಷ್ಟು ಇದ್ದರೆ, ಕೂಲಿ ಜೊತೆ ಊಟವನ್ನು ನೀಡುವವರ ಪ್ರಮಾಣ ಶೇ ೪೮.೫ರಷ್ಟು, ಕೂಲಿ ಜೊತೆ ಟೀ/ಕಾಫಿ/ಬ್ರೆಡ್ ನೀಡುವವರ ಪ್ರಮಾಣ ಶೇ ೪.೫ರಷ್ಟು ಕಂಡು ಬಂದರೆ, ಕೂಲಿ ಜೊತೆ ದವಸ ದಾನ್ಯಗಳನ್ನು ನೀಡುವವರ ಪ್ರಮಾಣ ಶೇ ೧೦.೫ರಷ್ಟು, ಕಂಡುಬಂದಿರುವುದನ್ನು ಗುರುತಿಸಬಹುದಾಗಿದೆ.




ಈ ಎರಡು ತಾಲೂಕುಗಳಲ್ಲಿ ಹೊಸಪೇಟೆ ಬೇಡ ಮಹಿಳಾ ಕೃಷಿ ಕಾರ್ಮಿಕರು ಕೂಲಿಯನ್ನು ಮಾತ್ರ ತೆಗೆದುಕೊಳ್ಳುತ್ತಿದ್ದು, ಕೂಡ್ಲಿಗಿ ಭಾಗದಲ್ಲಿ ಮಾತ್ರ ಕೂಲಿಯ ಜೊತೆಗೆ ಊಟವನ್ನು ನೀಡುತ್ತಿರುವುದು ಕ್ಷೇತ್ರಾಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಕೋಷ್ಟಕ: ೫.೧೫ ಮಹಿಳಾ ಕೃಷಿ ಕಾರ್ಮಿಕರಿಗೆ ಸರ್ಕಾರದ ಕನಿಷ್ಠ ಕೂಲಿಯ ಬಗ್ಗೆ ಅರಿವು

ಕ್ರ. ಸಂ.	ಸರ್ಕಾರದ ಕನಿಷ್ಠ ಕೂಲಿಯ ಬಗ್ಗೆ ಅರಿವು	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ತಿಳಿದಿದೆ	೯೮	೩೯.೨	೪೭	೨೩.೫
೨	ತಿಳಿದಿಲ್ಲ	೧೫೨	೬೦.೮	೧೫೩	೭೬.೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೃಷಿಯಲ್ಲಿ ತೊಡಗಿರುವರನ್ನರಿಸಿ ಎಲಾ ಸಮುದಾಯದವರ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗೆ ಹಲವಾರು ಸೌಲಭ್ಯಗಳನ್ನು ಕಲ್ಪಿಸುತ್ತಿವೆ. ಆದರೆ ಸರಕಾರದ ಬಹುತೇಕ ಯೊಜನೆಗಳು ಅರ್ಹ ಫಲಾನುಭವಿಗಳಿಗೆ ದೊರೆಯುತ್ತಿಲ್ಲ ಎಂಬ ಸಂಗತಿಯನ್ನು ಈ ಮೇಲಿನ ಕೋಷ್ಟಕವು ಸ್ಪಷ್ಟಪಡಿಸುತ್ತದೆ.

ಲಂಬ ಚಿತ್ರ : ೫.೧೫ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಕನಿಷ್ಟ ಕೂಲಿಯ ಅರಿವಿನ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಕೃಷಿಗೆ ಇರುವ ಅನೇಕ ಸೌಲಭ್ಯಗಳ ಅರಿವಿನ ಪ್ರಮಾಣ ಕಡಿಮೆ ಇದೆ. ಅಂದರೆ ತಾವು ದುಡಿಯುತ್ತಿರುವ ಪ್ರತಿಪಲಕ್ಕೆ ಸೂಕ್ತವಾದ ಸರಕಾರ ನಿಗದಿಪಡಿಸಿರುವ ಕೂಲಿಯ ಅರಿವಿನ ಕೊರತೆಯ ಪ್ರಮಾಣ ಶೇ ೬೦.೮ರಷ್ಟು ಮಹಿಳೆಯರು ತಿಳಿದಿಲ್ಲ ಎಂದಿದ್ದರೆ, ಯಾವುದೇ ಕೃಷಿಯ ಯೋಜನೆಗಳ ಅರಿವು ತಿಳಿದಿರುವವರ ಮಹಿಳೆಯರ ಪ್ರಮಾಣ ಶೇ ೩೯.೨ರಷ್ಟು ಎಂಬುದನ್ನು ಕಂಡುಕೊಳ್ಳಲಾಗಿದೆ.

ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಕೃಷಿಗೆ ಇರುವ ಅನೇಕ ಸೌಲಭ್ಯಗಳ ಅರಿವಿನ ಪ್ರಮಾಣ ಕಡಿಮೆ ಇದೆ. ಅಂದರೆ ತಾವು ದುಡಿಯುತ್ತಿರುವ ಪ್ರತಿಪಲಕ್ಕೆ ಸೂಕ್ತವಾದ ಸರಕಾರ ನಿಗದಿಪಡಿಸಿರುವ ಕೂಲಿಯ ಅರಿವಿನ ಕೊರತೆಯ ಪ್ರಮಾಣ ಶೇ ೭೬.೫ರಷ್ಟು ಮಹಿಳೆಯರು ತಿಳಿದಿಲ್ಲ ಎಂದಿದ್ದರೆ, ಯಾವುದೇ ಕೃಷಿಯ ಯೋಜನೆಗಳ ಅರಿವು ತಿಳಿದಿರುವವರ ಮಹಿಳೆಯರ ಪ್ರಮಾಣ ಶೇ ೨೩.೫ರಷ್ಟು ಎಂಬುದನ್ನು ಕ್ಷೇತ್ರಾಧ್ಯಯನದಲ್ಲಿ ತಿಳಿಯಲಾಗಿದೆ.


ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರಿಗೆ ಸರಕಾರದ ಕನಿಷ್ಟ ಕೂಲಿಯ ಅರಿವು ಇಲ್ಲದೇ ಇರುವುದನ್ನು ಕಾಣಬಹುದು.

ಕೋಷ್ಟಕ: ೫.೧೬ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರಿಕರಿಗೆ ಯಂತ್ರೋಪಕರಣಗಳಿಂದ ದಕ್ಕೆಯಾಗಿರುವ ವಿವರ

ಕ್ರ. ಸಂ.	ಯಂತ್ರೋಪಕರಣಗಳಿಂದ ದಕ್ಕೆಯಾಗಿರುವ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ದಕ್ಕೆಯಾಗಿದೆ	೧೬೭	೬೬.೮	೧೪೨	೭೧
೨	ದಕ್ಕೆಯಾಗಿಲ್ಲ	೮೩	೩೩.೨	೫೮	೨೯
	ಒಟ್ಟು ಕುಟುಂಬಗಳು	**೨೫೦**	**೧೦೦**	**೨೦೦**	**೧೦೦**

ಪ್ರಸ್ತುತ ಜಾಗತೀಕರಣದ ಸಂದರ್ಭವು ಕೃಷಿಯ ಮೇಲೆ ಹಾಗೂ ಕೃಷಿಯಲ್ಲಿ ದುಡಿಯುತ್ತಿರುವ ಕೃಷಿ ಮಹಿಳೆಯರ ಮೇಲೆ ಆಗಾದವಾದ ಪರಿಣಾಮ ಬೀರಿದೆ ಎಂದರೆ ತಪ್ಪಾಗಲಾರದು ಏಕೆಂದರೆ ಇಂದು ಕೃಷಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಇರುವ ಬದಲು ಯಂತ್ರಗಳ ಸಂಖ್ಯೇ ಅಧಿಕವಾಗಿವೇ ಈ ನೆಲೆಯಲ್ಲಿ ಈ ಮೇಲಿನ ಕೋಷ್ಟಕವು ಯಂತ್ರೋಪಕರಣದಿಂದ ಕೃಷಿ ಮಹಿಳೆಯರ ಮೇಲೆ ಆದ ಪರಿಣಾಮಗಳ ಸ್ಪಷ್ಟ ಚಿತ್ರಣವನ್ನು ತಿಳಿಸುತ್ತದೆ.

ಲಂಬ ಚಿತ್ರ : ೫.೧೬ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಮೇಲೆ ಯಂತ್ರೋಪಕರಣಗಳಿಂದ ಆದ ಪರಿಣಾಮದ ಹಂಚಿಕೆಯ ವಿವರದ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಕೃಷಿಗೆ ಯಂತ್ರೋಪಕರಣಗಳಿಂದ ದಕ್ಕೆಯಾಗಿದೆ ಎಂದಿರುವ ಮಹಿಳೆಯರ ಪ್ರಮಾಣ ಶೇ ೬೬.೮ರಷ್ಟು ಮಹಿಳೆಯರು ದಕ್ಕೆಯಾಗಿದೆ ಇದರಿಂದ ನಮ್ಮ ಕೆಲಸವನ್ನು ಯಂತ್ರಗಳು ಕಿತ್ತುಕೊಂಡಿವೆ ಎಂದಿದ್ದರೆ, ಯಾವುದೇ ಯಂತ್ರೋಪಕರಣಗಳಿಂದ ಕೃಷಿಯ ಮೇಲೆ ದಕ್ಕೆಯಾಗಿಲ್ಲ ಆ ಯಂತ್ರಗಳು ಬಂದಿದ್ದರಿಂದ ಅತಿ ಬೇಗನೆ ಕೆಲಸ ಕಾರ್ಯಗಳು ಮುಗಿಯುತ್ತವೆ ಎಂದಿರುವವರ ಮಹಿಳೆಯರ ಪ್ರಮಾಣ ಶೇ ೩೩.೨ರಷ್ಟು ಎಂಬುದನ್ನು ಕಂಡುಕೊಳ್ಳಲಾಗಿದೆ. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಕೃಷಿಗೆ ಯಂತ್ರೋಪಕರಣಗಳಿಂದ ದಕ್ಕೆಯಾಗಿದೆ ಎಂದಿರುವ ಮಹಿಳೆಯರ ಪ್ರಮಾಣ ಶೇ ೭೧ರಷ್ಟು ಮಹಿಳೆಯರು ದಕ್ಕೆಯಾಗಿದೆ ಇದರಿಂದ ನಮ್ಮ ಕೆಲಸವನ್ನು ಯಂತ್ರಗಳು ಕಿತ್ತುಕೊಂಡಿವೆ ಎಂದಿದ್ದರೆ, ಯಾವುದೇ ಯಂತ್ರೋಪಕರಣಗಳಿಂದ ಕೃಷಿಯ ಮೇಲೆ ದಕ್ಕೆಯಾಗಿಲ್ಲ ಆ ಯಂತ್ರಗಳು ಬಂದಿದ್ದರಿಂದ ಅತಿ ಬೇಗನೆ ಕೆಲಸ ಕಾರ್ಯಗಳು ಮುಗಿಯುತ್ತವೆ ಎಂದಿರುವವರ ಮಹಿಳೆಯರ ಪ್ರಮಾಣ ಶೇ ೨೯ರಷ್ಟು ಎಂಬುದನ್ನು ಅಧ್ಯಯನದ ಮೂಲಕ ತಿಳಿಯಲಾಗಿದೆ.


ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರಿಗೆ ಯಂತ್ರೋಪಕರಣಗಳ ಬಳಕೆಯಿಂದ ಕೃಷಿ ಚಟುವಟಿಕೆಗೆ ದಕ್ಕೆ ತಂದಿದ್ದು, ನಮಗೆ ಕೂಲಿ ಕೆಲಸ ಇಲ್ಲಂದತಾಗಿದೆ.



ಕೋಷ್ಟಕ: ೫.೧೭ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಸ್ವ ಸಹಾಯ ಗುಂಪುಗಳಲ್ಲಿ ಸದಸ್ಯತ್ವ ಪಡೆದಿರುವ ವಿವರ					
ಕ್ರ. ಸಂ.	ಸದಸ್ಯತ್ವ ಪಡೆದಿರುವ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಸದಸ್ಯತ್ವ ಹೊಂದಿರುವವರು	೧೬೨	೬೪.೮	೧೩೨	೬೬
೨	ಸದಸ್ಯತ್ವ ಹೊಂದಿಲ್ಲದವರು	೮೮	೩೫.೨	೬೮	೩೪
	ಒಟ್ಟು ಕುಟುಂಬಗಳು	**೨೫೦**	**೧೦೦**	**೨೦೦**	**೧೦೦**

ಪ್ರಸ್ತುತ ಮಹಿಳಾ ಸ್ವ-ಸಹಾಯ ಗುಂಪುಗಳು ಭಾರತದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತಿವೆ. ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವಲ್ಲಿ ಯಶಸ್ಸಿನೆಡೆಗೆ ಸಾಗುತ್ತಿದೆ. ಯಾವುದೇ ರಾಷ್ಟ್ರದ, ಸಮುದಾಯದ ಅಭಿವೃದ್ಧಿಗೆ ಮಹಿಳಾ ಸಬಲೀಕರನ ಮತ್ತು ಸಮಗ್ರ ಅಭಿವೃದ್ದಿಯು ಅತಿ ಪ್ರಮುಖವಾದುದ್ದಾಗಿದೆ. ಇದನ್ನು ಅರಿತು ಸರಕಾರವು ಸ್ವ-ಸಹಾಯ ಗುಂಪುಗಳಿಗೆ ಉತ್ತೇಜನ ನೀಡುವ ಮೂಲಕ ಸಾಲ ಸೌಲಭ್ಯಗಳನ್ನು ನೀಡಲಗುತ್ತಿದೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿನ ಜನರು ಇಂತಹ ಸಂಘಗಳ ಮೂಲಕ ಸಾಲವನ್ನು ತೆಗೆದುಕೊಂಡು ಕೃಷಿಯ ಚಟುವಟಿಕೆಗೆ ಬಳಸಿಕೊಳ್ಳುವ ಪ್ರಕ್ರಿಯೆಯ ಬಗೆಯನ್ನು ಈ ಮೇಲಿನ ಕೋಷ್ಟಕವು ಮಹಿಳಾ ಕೃಷಿ ಕಾರ್ಮಿಕರ ಸದಸ್ಯತ್ವದ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ಸಿಲಿಂಡರ್ ಆಕೃತಿ ಚಿತ್ರ : ೫.೧೭ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸ್ವ-ಸಹಾಯ ಸಂಘಗಳಲ್ಲಿ ಸದಸ್ಯತ್ವದ ವಿವರದ ಹಂಚಿಕೆ





ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಸ್ವ-ಸಹಾಯ ಗುಂಪುಗಳಲ್ಲಿ ಸದಸ್ಯತ್ವವನ್ನು ಹೊಂದಿದವರ ಪ್ರಮಾಣ ಶೇ ೬೪.೮ರಷ್ಟು ಮಹಿಳೆಯರು ವಿವಿಧ ಕಾರಣಗಳಿಗಾಗಿ ಅಂದರೆ ಮಕ್ಕಳ ವಿದ್ಯಾಭ್ಯಾಸ, ಕೃಷಿಗೆ ಸಾಲ ತೆಗೆದುಕೊಳ್ಳಲು ಸಹಾಯವಾಗುತ್ತದೆ ಎಂಬ ಕಾರಣದಿಂದ ಸಂಘದಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿದ್ದರೆ, ಸಂಘದ ಸದಸ್ಯತ್ವವನ್ನು ಪಡೆದುಕೊಳ್ಳದೇ ಇರುವವರ ಪ್ರಮಾಣ ಶೇ ೩೫.೨ರಷ್ಟು ಇರುವುದನ್ನು ಕಂಡುಕೊಳ್ಳಲಾಗಿದೆ. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಸ್ವ-ಸಹಾಯ ಗುಂಪುಗಳಲ್ಲಿ ಸದಸ್ಯತ್ವವನ್ನು ಹೊಂದಿದವರ ಪ್ರಮಾಣ ಶೇ ೬೬.ರಷ್ಟು ಮಹಿಳೆಯರು ವಿವಿಧ ಕಾರಣಗಳಿಗಾಗಿ ಅಂದರೆ ಮಕ್ಕಳ ವಿದ್ಯಾಭ್ಯಾಸ, ಕೃಷಿಗೆ ಸಾಲ ತೆಗೆದುಕೊಳ್ಳಲು ಸಹಾಯವಾಗುತ್ತದೆ ಎಂಬ ಕಾರಣದಿಂದ ಸಂಘದಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿದ್ದರೆ, ಸಂಘದ ಸದಸ್ಯತ್ವವನ್ನು ಪಡೆದುಕೊಳ್ಳದೇ ಇರುವವರ ಪ್ರಮಾಣ ಶೇ ೩೪ರಷ್ಟು ಇರುವುದನ್ನು ಅಧ್ಯಯನದ ಮೂಲಕ ತಿಳಿಯಲಾಗಿದೆ.

ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರು ಸ್ವ-ಸಹಾಯ ಸಂಘಗಳಲ್ಲಿ ಅಧಿಕ ಪ್ರಮಾಣದಲ್ಲಿ ಸದಸ್ಯತ್ವವನ್ನು ಹೊಂದಿದ್ದು, ಸ್ವ-ಸಹಾಯ ಸಂಘದ ಮೂಲಕ ಕೃಷಿ ಚಟುವಟಿಕೆಗೆ ಹಾಗೂ ಕುಟುಂಬ ನಡೆಸಲು, ಹಣವನ್ನು ಸ್ವ-ಸಂಘದ ಮೂಲಕ ಪಡೆದುಕೊಳ್ಳುತ್ತಿರುವುದು ಕಂಡುಬಂದಿದೆ.


ಕೋಷ್ಟಕ: ೫.೧೮ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸಾಲ ಕೊಟ್ಟವರ ವಿವರ

ಕ್ರ. ಸಂ.	ಸಾಲ ಕೊಟ್ಟವರ ವಿವರ	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಸ್ವ ಸಹಾಯ ಸಂಘ	೮೮	೩೫.೨	೯೬	೪೮
೨	ಭೂ ಮಾಲೀಕರು	೭೮	೩೧.೨	೫೬	೨೮
೩	ಸ್ನೇಹಿತರು/ನೆಂಟರು	೫೪	೨೧.೬	೨೩	೧೧.೫
೪	ಸಹಕಾರಿ ಬ್ಯಾಂಕುಗಳು	೩೦	೧೨	೨೫	೧೨.೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಮಹಿಳಾ ಕೃಷಿ ಕಾರ್ಮಿಕರ ಸಾಮಾಜಿಕ ಆರ್ಥಿಕ ಅಂಶಗಳನ್ನು ಒಳಗೊಂಡಂತೆ ಇತರ ಸ್ಥಿತಿಗತಿಗಳನ್ನು ಪರಿಪೂರ್ಣವಾಗಿ ಅರ್ಥ ಮಡಿಕೊಳ್ಳಲು ಕೌಟುಂಬಿಕ ಸಾಲದ ವಿವರವನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆಯಲ್ಲಿ ನೋಡುವುದಾದರೆ ನಮ್ಮ ಸಮಾಜದಲ್ಲಿ ಮಹಿಳೆಗೆ ಆದಾಯವೇ ಇರುವುದಿಲ್ಲ. ದುಡಿದರೂ ಕೂಡ ಅವರ ಖರ್ಚಿಗೆ ಮನೆಯವರನ್ನೆ ಅವಲಂಭಿಸಬೇಕಾದ ಪರಿಸ್ಥಿತಿ ಇದೆ. ಅನೇಕ ಬೇಡ ಕೃಷಿ ಕಾರ್ಮಿಕರ ಕುಟುಂಬಗಳಲ್ಲಿ ಆದಾಯಕ್ಕಿಂತ ವೆಚ್ಚವೇ ಅಧಿಕವಾಗಿರುತ್ತದೆ. ಬಹಳಷ್ಟು ಕೂಲಿ ಕಾರ್ಮಿಕರು ಅಂದು ಕೂಲಿ ಮಾಡಿ

ಅಂದೇ ಬೇಕಾದ ದವಸ ದಾನ್ಯಗಳನ್ನು ಕಿರಾಣಿ ದಿನಸಿಗಳನ್ನು ತಂದು ಊಟ ಮಾಡಬೇಕು ಅಥವಾ ಸಾಲ ತಂದು ಅಂದಿನ ಹಸಿವನ್ನು ನೀಗಿಸಿಕೊಳ್ಳಬೇಕು ಈ ರೀತಿಯ ಅಂಶಗಳನ್ನು ಈ ಮೇಲಿನ ಕೋಷ್ಟಕವು ಕೃಷಿ ಕೂಲಿ ಕಾರ್ಮಿಕರ ಮಹಿಳೆಯರಿಗೆ ಸಾಲ ಕೊಟ್ಟವರ ಚಿತ್ರಣವನ್ನು ನೀಡುತ್ತದೆ.

ಸಿಲಿಂಡರ್ ಆಕೃತಿ ಚಿತ್ರ : ೫.೧೮ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರಿಗೆ ಸಾಲ ವಿವರದ ಹಂಚಿಕೆ




ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಸ್ವ–ಸಹಾಯ ಗುಂಪುಗಳಲ್ಲಿ ಸದಸ್ಯತ್ವವನ್ನು ಹೊಂದಿರುವ ಕಾರಣದಿಂದಾಗಿ ಬಹುತೇಕ ಮಹಿಳೆಯರು ಸ್ವ–ಸಹಾಯ ಸಂಘಗಳಲ್ಲಿಯೇ ಸಾಲವನ್ನು ತೆಗೆದುಕೊಂಡಿರುವ ಪ್ರಮಾಣ ಶೇ ೩೫.೨ರಷ್ಟು ಮಹಿಳೆಯರು ವಿವಿಧ ಕಾರಣಗಳಿಗಾಗಿ ಸಾಲವನ್ನು ಪಡೆದುಕೊಂಡಿದ್ದೇವೆ ಎಂದಿದ್ದಾರೆ. ಇನ್ನು ಭೂ ಮಾಲಿಕರಿಂದ ಶೇ ೩೧.೨ರಷ್ಟು, ಸ್ನೇಹಿತರು/ನೆಂಟರಿಂದ ಶೇ ೨೧.೬ರಷ್ಟು, ಇನ್ನಳಿದಂತೆ ಸಹಕಾರಿ ಬ್ಯಾಂಕ್‌ಗಳಿಂದ ಶೇ ೩೫.೨ರಷ್ಟು ಸಾಲ ಪಡೆದಿಕೊಂಡಿರುವದನ್ನು ತಿಳಿಯಬಹುದು. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಸ್ವ–ಸಹಾಯ ಗುಂಪುಗಳಲ್ಲಿ ಸದಸ್ಯತ್ವವನ್ನು ಹೊಂದಿರುವ ಕಾರಣದಿಂದಾಗಿ ಬಹುತೇಕ ಮಹಿಳೆಯರು ಸ್ವ–ಸಹಾಯ ಸಂಘಗಳಲ್ಲಿಯೇ ಸಾಲವನ್ನು ತೆಗೆದುಕೊಂಡಿರುವ ಪ್ರಮಾಣ ಶೇ ೪೮ರಷ್ಟು ಮಹಿಳೆಯರು ವಿವಿಧ ಕಾರಣಗಳಿಗಾಗಿ ಸಾಲವನ್ನು ಪಡೆದುಕೊಂಡಿದ್ದೇವೆ ಎಂದಿದ್ದಾರೆ. ಇನ್ನು ಭೂ ಮಾಲಿಕರಿಂದ ಶೇ ೨೮ರಷ್ಟು, ಸ್ನೇಹಿತರು/ನೆಂಟರಿಂದ ಶೇ ೧೧.೫ರಷ್ಟು, ಇನ್ನಳಿದಂತೆ ಸಹಕಾರಿ ಬ್ಯಾಂಕ್‌ಗಳಿಂದ ಶೇ ೧೨.೫ರಷ್ಟು ಸಾಲ ಪಡೆದಿಕೊಂಡಿರುವದನ್ನು ಕ್ಷೇತ್ರಾಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.



ಕೋಷ್ಟಕ: ೫.೧೯ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರಿಗೆ ದೊರೆಕಿರುವ ಸಾಮಾಜಿ ಭದ್ರತೆ ಸೌಲಭ್ಯಗಳ ವಿವರ					
ಕ್ರ. ಸಂ.	ಸಾಮಾಜಿಕ ಭದ್ರತೆಯ ಸೌಲಭ್ಯಗಳು	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಜೀವ ವಿಮೆ	೭೬	೩೦.೪	೬೩	೩೧.೫
೨	ಉಳಿತಾಯ ವಿಮೆ	೬೧	೨೪.೪	೭೨	೩೬
೩	ವಿಧವ ವೇತನ	೧೬	೬.೪	೦೮	೪
೪	ಅಂಗವಿಕಲ ವೇತನ	೪೫	೧೮	೩೪	೧೭
೫	ವೃದ್ಧಾಪ್ಯ ವೇತನ	೦೩	೧.೨	೦೨	೧
೬	ಇತರೆ	೪೯	೧೯.೬	೨೧	೧೦.೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯವು ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದು ಬೇಡ ಸಮುದಾಯಗಳನ್ನೊಳಗೊಂಡಂತೆ ಎಲ್ಲಾ ಸಮುದಾಯಗಳ ವೃದ್ದರು, ವಿಧವೆಯರು ಹಾಗೂ ಅಂಗವಿಕಲರಿಗೆ ಆರ್ಥಿಕ ಸಹಾಯವನ್ನು ಒದಗಿಸುವುದರ ಮೂಲಕ ಸಾಮಾಜಿಕ ಭದ್ರತೆಯನ್ನು ನೀಡುತ್ತಿದೆ. ಅಸಾಯಕ ಮತ್ತು ನಿರ್ಗತಿಕ ಮಹಿಳೆಯರನ್ನೊಳಗೊಂಡಂತೆ ಇತರ ಬಡ ಜನರ ಜೀವನ ಮಟ್ಟವನ್ನು ಉತ್ತಮಪಡಿಸುವ ಸಲುವಾಗಿ ಹಲವಾರು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕಲ್ಪಿಸುತ್ತದೆ. ಕೃಷಿ ಕಾರ್ಮಿಕರಿಗೆ ದೊರಕಿರುವ ಸಾಮಾಜಿಕ ಭದ್ರತೆಯ ಸೌಲಭ್ಯಗಳ ಬಗೆಯನ್ನು ಈ ಮೇಲಿನ ಕೋಷ್ಟಕವು ಸ್ವಷ್ಟಪಡಿಸುತ್ತದೆ.

ಸಿಲಿಂಡರ್ ಆಕೃತಿ ಚಿತ್ರ: ೫.೧೯ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರಿಗೆ ಸಾಮಾಜಿ ಭದ್ರತೆಯ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯಡಿಯಲ್ಲಿ ಜೀವವಿಮೆ ಪಡೆದುಕೊಂಡಿರುವವರ ಪ್ರಮಾಣ ಶೇ ೩೦.೪ರಷ್ಟು ಇದ್ದು, ಉಳಿತಾಯದ ವಿಮೆಯನ್ನು ಶೇ ೨೪.೪ರಷ್ಟು, ವಿಧವಾ ವೇತನ ಪ್ರಮಾಣ ಶೇ ೬.೪ರಷ್ಟು, ಅಂಗವಿಕಲ ವೇತನ ಶೇ ೧೮ರಷ್ಟು, ವೃದ್ಧಾಪ ವೇತನ ಶೇ ೧೨ರಷ್ಟಿದ್ದು, ಇತರೆ ಪ್ರಮಾಣ ಶೇ ೧೯.೬ರಷ್ಟು ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಹೊಂದಿರುವುದನ್ನು ತಿಳಿದುಕೊಳ್ಳಬಹುದು. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯಡಿಯಲ್ಲಿ ಜೀವವಿಮೆ ಪಡೆದುಕೊಂಡಿರುವವರ ಪ್ರಮಾಣ ಶೇ ೩೧.೫ರಷ್ಟು ಇದ್ದು, ಉಳಿತಾಯದ ವಿಮೆಯನ್ನು ಶೇ ೩೬ರಷ್ಟು, ವಿಧವಾ ವೇತನ ಪ್ರಮಾಣ ಶೇ ೪ರಷ್ಟು, ಅಂಗವಿಕಲ ವೇತನ ಶೇ ೧೭ರಷ್ಟು, ವೃದ್ಧಾಪ ವೇತನ ಶೇ ೧ರಷ್ಟಿದ್ದು, ಇತರೆ ಪ್ರಮಾಣ ಶೇ ೧೦.೫ರಷ್ಟು ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಹೊಂದಿರುವುದನ್ನು ಕ್ಷೇತ್ರಾಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಈ ಎರಡು ತಾಲೂಕುಗಳಲ್ಲಿ ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಹೆಚ್ಚಾಗಿ ಜೀವವಿಮೆಗೆ ಒಳಪಟ್ಟಿದ್ದರೆ, ಕೂಡ್ಲಿಗಿ ಭಾಗದಲ್ಲಿ ಅತಿ ಹೆಚ್ಚಾಗಿ ಉಳಿತಾಯ ವಿಮೆಯನ್ನು ಮಾಡಿಸಿರುವುದನ್ನು ಕಾಣಬಹುದು.

೫.೪ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಆರೋಗ್ಯ ಸ್ಥಿತಿಗತಿ

ರೋಗ ಇಲ್ಲದಿರುವುದನ್ನು ಆರೋಗ್ಯ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಆದರೆ ವಿಶ್ವ ಆರೋಗ್ಯ ಸಂಸ್ಥೆ (WHO) ತನ್ನ ಸಂವಿಧಾನದ ಪೀಠಿಕೆಯಲ್ಲಿ ಆರೋಗ್ಯವನ್ನು ಈ ರೀತಿ ಅರ್ಥೈಸುತ್ತದೆ. "ಆರೋಗ್ಯವೆಂದರೆ ರೋಗಗಳು ಅಥವಾ ದೌರ್ಬಲ್ಯವಿರುವುದು ಮಾತ್ರವಲ್ಲ. ಸಂಪೂರ್ಣ ಶಾರೀರಿಕ, ಮಾನಸಿಕ ಮತ್ತು ಸಾಮಾಜಿಕ ಕ್ಷೇಮ. ಆ ನಂತರದಲ್ಲಿ ಈ ಅರ್ಥೈಸುವಿಕೆಯನ್ನು ಇನ್ನಷ್ಟು ಹಿಗ್ಗಿಸಿ ಸಾಮಾಜಿಕ ಮತ್ತು ಆರ್ಥಿಕವಾಗಿ ಉತ್ಪನ್ನಕಾರಕ ಜೀವನ ಸಾಗಿಸುವ ಸಾಮರ್ಥ್ಯವನ್ನು ಸೇರಿಸಲಾಯಿತು. ಆದ್ದರಿಂದ ಆರೋಗ್ಯ ಎಂದರೆ ಒಳ್ಳೆಯ ಬಾಳು, ಒಳ್ಳೆಯ ಕೆಲಸ, ಒಳ್ಳೆಯ ಮನೋರಂಜನೆ (ಅದೇ ಪು. ೭೮–೭೯)

ಸರ್ಕಾರವು ಮಹಿಳಾ ಆರೋಗ್ಯಕ್ಕಾಗಿ ವ್ಯಾಪಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ೧೯೫೨ರಲ್ಲಿ ಕುಟುಂಬ ಯೋಜನೆ, ೧೯೬೦ರಲ್ಲಿ ಗರ್ಭಪಾತ ನಿಶೇಧ ಕಾಯಿದೆ ಜಾರಿ, ೧೯೭೫ರಲ್ಲಿ ಮಗುವಿನ ಸಮಗ್ರ ಬೆಳವಣಿಗೆ ಕಾರ್ಯಕ್ರಮ, ೧೯೮೨ರಲ್ಲಿ ರಾಷ್ಟ್ರೀಯ ಮಾನಸಿಕ ಕಾಯಿದೆ ಜಾರಿ, ೧೯೯೨ರಲ್ಲಿ ಮಹಿಳೆಯರಲ್ಲಿ ವ್ಯಾಪಕವಾಗಿ ಕಂಡುಬರುವ ರಕ್ತಹೀನತೆಯನ್ನು ನಿರ್ಮೂಲನೆ ಮಾಡುವ ಕಾರ್ಯಕ್ರಮ, ೨೦೦೧ರಲ್ಲಿ ಮಹಿಳಾ ಸಬಲೀಕರಣ ನೀತಿ ೨೦೦೫ರಲ್ಲಿ ರಾಷ್ಟ್ರೀಯ ಗ್ರಾಮೀಣ ಅಭಿಯಾನದಡಿಯಲ್ಲಿ ಪ್ರಾಥಮಿಕ ಹಂತದಲ್ಲಿ ಆರೋಗ್ಯ ವ್ಯವಸ್ಥೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಈ ಕಾರ್ಯಕ್ರಮಗಳಿಂದಾಗಿ ಮಹಿಳೆಯರ ಆರೋಗ್ಯದಲ್ಲಿ ವ್ಯಾಪಕ ಸುಧಾರಣೆಯೂ ಕಂಡುಬಂದಿದೆ. ಅದರಲ್ಲೂ ಈಗಿನ ಮಾರುಕಟ್ಟೆ ಸಂದರ್ಭದಲ್ಲಿ ಆರೋಗ್ಯದ ಕಾಳಜಿ ಅಧಿಕವಾಗುತ್ತಿದೆ. ಹಾಗೆಯೇ

ಚುಚ್ಚುಮದ್ದು ಮತ್ತು ಔಷಧಿಗಳು ದುಬಾರಿಯಾಗುತ್ತಿವೆ. ಇದೊಂದು ಸಮಸ್ಯೆಯಾಗಿ ಕಾಡುತ್ತಿದೆ. ಹಿಂದುಳಿದ ಗ್ರಾಮೀಣ ಪ್ರದೇಶದಲ್ಲಂತೂ ಇದು ಇನ್ನಷ್ಟು ತೀವ್ರವಾಗಿ ಕಾಡುತ್ತಿದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳು ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದವುಗಳಾಗಿವೆ. ಕೂಡ್ಲಿಗಿ ತಾಲೂಕು ಬಳ್ಳಾರಿಯಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶ. ಇಲ್ಲಿ ಅನಕ್ಷರತೆ, ಅಸಮಾನತೆಯ ಪ್ರಮಾಣ ಅಧಿಕವಾಗಿದೆ.

ನಿರಕ್ಷರತೆ, ಅಜ್ಞಾನ ಮೂಡನಂಬಿಕೆ, ಬಡತನ ಮುಂತಾದವುಗಳು ಈ ಪ್ರದೇಶಗಳಲ್ಲಿ ಕಂಡುಬರುವ ಪ್ರಮುಖ ಸಮಸ್ಯೆಗಳು. ಇದು ಆರೋಗ್ಯ ಕ್ಷೇತ್ರದಲ್ಲೂ ಪರಿಣಾಮ ಬೀರುತ್ತಿದೆ. ಹೊಸಪೇಟೆ ಮತ್ತು ಕೂಡ್ಲೀಗಿ ತಾಲೂಕಿನ ಶೇಕಡಾ ೭೦ಕ್ಕಿಂತ ಅಧಿಕ ಜನರಿಗೆ ಸುಸಜ್ಜಿನ ಆಸ್ಪತ್ರೆಗಳ ಸೌಲಭ್ಯ ದೊರಕುತ್ತಿಲ್ಲ. ಅದರಲ್ಲೂ ಬೇಡ ಸಮುದಾಯದ ಮಹಿಳೆಯರು ಹಲವಾರು ಮೂಡನಂಬಿಕೆಗಳಿಗೆ ದಾಸರಾಗಿದ್ದಾರೆ. ಕುಟುಂಬ ನಿರ್ವಹಣೆಯ ಹೊಣೆ ಹೊತ್ತ ಅವರು ರೋಗ ಕಂಡು ಬಂದ ತಕ್ಷಣ ಪ್ರಾಥಮಿಕ ಹಂತದಲ್ಲಿಯೇ ಅದನ್ನು ಸರಿಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ. ಹಾಗೆಯೇ ಕುಡಿಯವ ನೀರು, ಆಹಾರವನ್ನು ಶುದ್ಧವಾಗಿಟ್ಟುಕೊಳ್ಳುವುದಿಲ್ಲ. ಇದರಿಂದಾಗಿ ಆರಂಭದ ಹಂತದಲ್ಲಿಯೇ ಗುಣವಾಗಬಹುದಾದ ಹಲವಾರು ರೋಗಗಳು ಉಲ್ಬಣಗೊಂಡು ಅಧಿಕ ವೆಚ್ಚ ಭರಿಸುವಂತಾಗಿದೆ. ಈ ಭಾಗದಲ್ಲಿ ಆಧುನಿಕ ಔಷಧಿಗಳು ಲಭ್ಯವಿಲ್ಲ. ಇದಕ್ಕಾಗಿ ಹತ್ತಿರದ ಜಿಲ್ಲಾ ಆಸ್ಪತ್ರೆಗಳಿಗೆ ತೆರಳಬೇಕಿದೆ. ಇಲ್ಲವೇ ದಾವಣಗೆರೆ, ಮಣಿಪಾಲ್ ಮುಂತಾದ ಉನ್ನತ ವೈದ್ಯಕೀಯ ವ್ಯವಸ್ಥೆಯಿರುವ ನಗರಗಳನ್ನು ಹುಡುಕಿಕೊಂಡು ಹೋಗುವುದು ಅನಿವಾರ್ಯವಾಗಿದೆ. ಸುಸಜ್ಜಿತ ಆಸ್ಪತ್ರೆಗಳ ಕೊರತೆಯೂ ಇದಕ್ಕೆ ಒಂದು ಕಾರಣ. ಬೇಡ ಕುಲದ ಮಹಿಳೆಯರು ಸಾಮಾನ್ಯವಾಗಿ ರೋಗಗಳು ಉಲ್ಬಣಿಸಿದಾಗ ದೇವರಿಗೆ ಹರಕೆ ಹೋರುವುದು, ದೀಪ ಹಚ್ಚುವಂತಹ ಮೌಢ್ಯಕ್ಕೆ ಒಳಗಾಗಿರುವ ಹಲವಾರು ನಿದರ್ಶನಗಳು ಈಗಲೂ ಕಂಡುಬರುತ್ತವೆ. ಆರೋಗ್ಯ ಸೇವಾ ಕ್ಷೇತ್ರವು ಹೆಚ್ಚೆಚ್ಚು ವ್ಯಾಪಾರಿಕರಣವಾಗುತ್ತಿದೆ. ಹೊಸಪೇಟೆ ನಗರ ಒಂದರಲ್ಲೇ ೧೫೦ಕ್ಕಿಂತ ಹೆಚ್ಚು ವೈದ್ಯರು ಕ್ಲೀನಿಕ್ ಹಾಗೂ ಸೂಪರ್ ಸ್ಪೆಷಲಿಟಿ ಆಸ್ಪತ್ರೆಗಳಲ್ಲಿ ಖಾಸಗಿ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಇಡೀ ನಗರದಲ್ಲಿ ಸರಕಾರಿ ಆಸ್ಪತ್ರೆಗಳು ೩ ಮಾತ್ರ ಇವೆ. ಕೂಡ್ಲಿಗಿ ತಾಲೂಕಿನಾದ್ಯಂತ ಒಂದು ೧೦೦ ಹಾಸಿಗೆಯುಳ್ಳ ಒಂದೇ ಆಸ್ಪತ್ರೆಯಿದ್ದರೆ, ೧೦೦ಕ್ಕಿಂತ ಅಧಿಕ ಖಾಸಗಿ ಕ್ಲೀನಿಕ್‌ಗಳು ಚಾಲ್ತಿಯಲ್ಲಿವೆ.

ಇಲ್ಲಿನ ಬೇಡ ಕೃಷಿ ಕಾರ್ಮಿಕ ಮಹಿಳೆಯರಲ್ಲಿ ಅಪೌಷ್ಟಿಕತೆಯೊಂದು ದೊಡ್ಡ ತೊಡಕಾಗಿದೆ. ಬಹಳಷ್ಟು ತಾಯಂದಿರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಇದರಿಂದಾಗಿ ಶಿಶು ಮರಣ, ಮಾತೃ ಮರಣ, ಗರ್ಭಪಾತವಾಗುವುದು ಅಧಿಕವಾಗಿದೆ. ಬಹಳಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಶೇಕಡಾ ೬೦ಕ್ಕಿಂತ ಹೆಚ್ಚು ಬೇಡ ಮಹಿಳಾ ಕೃಷಿ ಕಾರ್ಮಿಕರಿಗೆ ಉತ್ತಮ ವೈದ್ಯಕೀಯ ಸೌಲಭ್ಯ ಸಿಗುತ್ತಿಲ್ಲ. ಹೆರಿಗೆಯ ಸಂದರ್ಭದಲ್ಲಿಯೇ ಬಹಳಷ್ಟು ಮಹಿಳೆಯರು ಸಾವನ್ನಪ್ಪುತ್ತಿದ್ದಾರೆ. ಅದರಲ್ಲೂ ಹೊಲದಲ್ಲೂ ದುಡಿಯಬೇಕು, ಮನೆಯಲ್ಲಿ ಕುಟುಂಬವನ್ನೂ ನಿರ್ವಹಿಸಬೇಕಿರುವ ಈ


ಮಹಿಳೆಯರು ಸದೃಢವಾಗಿರುವುದು ಅನಿವಾರ್ಯ.. ಆದರೆ ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಮತ್ತು ಕಲಬೆರಕೆ ಔಷಧಿಗಳ ಲಭ್ಯತೆಯಿಂದಾಗಿ ಇವರ ಆರೋಗ್ಯದ ಸ್ಥಿತಿ ಗಂಭೀರವಾಗಿದೆ. ಯೌವ್ವನದ ಸಂದರ್ಭದಲ್ಲಿ ಶಕ್ತಿಮೀರಿ ದುಡಿಯುವ ಈ ಮಹಿಳೆಯರು ವೃದ್ಯಾಪದಲ್ಲಿ ಮಂಡಿನೋವು, ದೃಷ್ಟಿ ದೋಷ, ಮುಂತಾದ ಕಾಯಿಲೆಗಳಿಂದ ನರಳುವಂತಾಗುತ್ತಾರೆ. ಗಣಿಗಾರಿಕೆಯು ಜಿಲ್ಲೆಯ ವಾತಾವರಣವನ್ನೇ ಹಾಳು ಮಾಡಿದೆ ಗಣಿಗಾರಿಕೆಯಿಂದಾಗಿ ದಿನಕ್ಕೆ ಸಾವಿರಾರು ಲಾರಿಗಳು ಹೊಸಪೇಟೆ ಮತ್ತು ಕೂಡ್ಲಿಗಿ ರಸ್ತೆಗಳಲ್ಲಿ ಸಂಚರಿಸುತ್ತವೆ. ಈ ಲಾರಿಗಳ ಸಂಚಾರದಿಂದಾಗಿ ಉಂಟಾಗುವ ಧೂಳಿನಿಂದಾಗಿ ಹೊಲದಲ್ಲಿ ದುಡಿಯುವ ಕೃಷಿಕರು ಅಸ್ತಮಾ ಸೇರಿದಂತೆ ಇನ್ನಿತರ ಉಸಿರಾಟದ ತೊಂದರೆಗಳಿಂದ ಬಳಲುತ್ತಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಘೋಷಣೆ ಮಾಡಿರುವ ಅತ್ಯವಶ್ಯಕ ಔಷಧಿಗಳೂ ಕೂಡ ಇಲ್ಲಿ ಸುಲಭವಾಗಿ ಲಭ್ಯವಾಗುವುದಿಲ್ಲ. ಇದು ಆರ್ಥಿಕವಾಗಿಯೂ ಬೇಡ ಕೃಷಿ ಕಾರ್ಮಿಕ ಮಹಿಳೆಯರಿಗೆ ಹೊಡೆತ ನೀಡುತ್ತಿದೆ.

ಕೋಷ್ಟಕ: ೫.೨೦ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಆರೋಗ್ಯ ಸಮಸ್ಯೆಯ ಬಳಲುವಿಕೆಯ ವಿವರ

ಕ್ರ. ಸಂ.	ಆರೋಗ್ಯ ಸಮಸ್ಯಗಳು	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೦೧	ಜ್ವರ	೫೪	೨೧.೬	೪೪	೨೨
೦೨	ಕೆಮ್ಮು	೭೮	೩೧.೨	೫೬	೨೮
೦೩	ಮಂಡಿ/ಕೀಲು ನೋವು	೪೩	೧೭.೨	೫೬	೨೮
೦೪	ಸೊಂಟ ನೋವು	೪೦	೧೬	೨೪	೧೨
೦೫	ಕ್ಷಯ	೧೨	೪.೮	೧೦	೫
೦೬	ಇತರೆ	೨೩	೯.೨	೧೦	೫
	ಒಟ್ಟು ಕುಟುಂಬಗಳು	**೨೫೦**	**೧೦೦**	**೨೦೦**	**೧೦೦**

ಬೇಡ ಮಹಿಳಾ ಕೃಷಿ ಕಾರ್ಮಿಕರು ಹಲವಾರು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವುದು ಅಧ್ಯಯನದಲ್ಲಿ ಕಂಡುಬಂದಿದೆ. ಆರೋಗ್ಯವು ಯಾವುದೇ ಒಂದು ಸಮುದಾಯದ ಅಭಿವೃದ್ಧಿಯ ಪ್ರಮುಖವಾದ ಸೂಚಕವಾಗಿದೆ. ಆರೋಗ್ಯವನ್ನು ವೃದ್ದಿಸಿಕೊಂಡು ಮತ್ತು ಅದನ್ನು ಕಾಪಾಡಿಕೊಂಡು ಹೋಗುವುದು ನಿರಂತರವಾದ ಪ್ರಕ್ರಿಯೆಯಾಗಿದೆ. ಕಳೆದ ಕೆಲವು ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರಕಾರವು ಆರೋಗ್ಯ ವಲಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪ್ರಾಮುಖ್ಯತೆ ಇದೆ. ಕೃಷಿ ಕಾರ್ಮಿಕರ ಆರೋಗ್ಯ ಸಮಸ್ಯೆಯ ಬಳಲುವಿಕೆಯ ಪ್ರಮಾಣವನ್ನು ಈ ಕೋಷ್ಟಕವು ತಿಳಿಸಿಕೊಡುತ್ತದೆ.

ಸಿಲಿಂಡರ್ ಆಕೃತಿ ಚಿತ್ರ: ೫.೨೦ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಆರೋಗ್ಯ ಸಮಸ್ಯೆಯ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಆರೋಗ್ಯ ಸಮಸ್ಯೆಯಿಂದ ಜ್ವರದಿಂದ ಬಳಲುತ್ತಿರುವವರ ಪ್ರಮಾಣ ಶೇ ೨೧.೬ರಷ್ಟು ಇದ್ದರೆ, ಕೆಮ್ಮಿನಿಂದ ಬಳಲುತ್ತಿರುವವರ ಪ್ರಮಾಣ ಶೇ ೩೧.೨ರಷ್ಟು, ಮಂಡಿ ಕೀಲು/ನೋವು ಶೇ ೧೭.೨,ರಷ್ಟಿದೆ, ಸೊಂಟನೋವಿನಿಂದ ಶೇ ೧೬ರಷ್ಟು ಮಹಿಳೆಯರು ಬಳಲುತ್ತಿದ್ದಾರೆ. ಕ್ಷಯ ರೋಗದಿಂದ ಶೇ ೪.೮ರಷ್ಟು ಮಹಿಳೆಯರು ಬಳಲುತ್ತಿದ್ದಾರೆ. ಇತರೇ ರೋಗಗಳಿಂದ ಗಂಭಿರ ಕಾಯಿಲೆಗಳಿಗೆ ತುತ್ತಾಗಿರುವವರ ಪ್ರಮಾಣ ಶೇ ೯.೨ರಷ್ಟು, ಇರುವುದನ್ನು ತಿಳಿಯಬಹುದು. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಆರೋಗ್ಯ ಸಮಸ್ಯೆಯಿಂದ ಜ್ವರದಿಂದ ಬಳಲುತ್ತಿರುವವರ ಪ್ರಮಾಣ ಶೇ ೨೨ರಷ್ಟು ಇದ್ದರೆ, ಕೆಮ್ಮಿನಿಂದ ಬಳಲುತ್ತಿರುವವರ ಪ್ರಮಾಣ ಶೇ ೨೮ರಷ್ಟು, ಮಂಡಿ ಕೀಲು/ನೋವು ಶೇ ೨೮,ರಷ್ಟಿದೆ, ಸೊಂಟನೋವಿನಿಂದ ಶೇ ೧೨ರಷ್ಟು ಮಹಿಳೆಯರು ಬಳಲುತ್ತಿದ್ದಾರೆ. ಕ್ಷಯ ರೋಗದಿಂದ ಶೇ ೫ರಷ್ಟು ಮಹಿಳೆಯರು ಬಳಲುತ್ತಿದ್ದಾರೆ. ಇತರೇ ರೋಗಗಳಿಂದ ಗಂಭಿರ ಕಾಯಿಲೆಗಳಿಗೆ ತುತ್ತಾಗಿರುವವರ ಪ್ರಮಾಣ ಶೇ ೫ರಷ್ಟು, ಇರುವುದನ್ನು ತಿಳಿಯಬಹುದು.


ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರ ಆರೋಗ್ಯವು ಕೃಷಿ ಚಟುವಟಿಗೆಗಳಿಂದ ಸಾಮಾನ್ಯ ಕಾಯಿಲೆಗಳಿಗೆ ತುತ್ತಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಕೋಷ್ಟಕ: ೫.೨೧ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರಿಗಿರು ಹವ್ಯಾಸಗಳು					
ಕ್ರ. ಸಂ.	ಕಾರ್ಮಿಕರಿಗಿರು ಹವ್ಯಾಸಗಳು	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಎಲೆ ಅಡಿಕೆ ಹಾಕುವುದು	೮೯	೩೫.೬	೭೬	೩೮
೨	ತಂಬಾಕು ಜಗಿಯುವುದು	೯೮	೩೯.೨	೬೩	೩೧.೫

೩	ನಸಿಪುಡಿ	೪೮	೧೯.೨	೫೬	೨೮
೪	ಮಧ್ಯಪಾನ	೧೫	೬	೦೩	೧.೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಬೇಡ ಸಮುದಾಯದ ಮಹಿಳೆಯರು ಕೃಷಿ ಕೂಲಿಯನ್ನೇ ನಂಬಿ ಬದುಕುತ್ತಿರುವುದರಿಂದ ಅವರು ಹೆಚ್ಚಾಗಿ ಹೊಲ-ಗದೆಗಲಲ್ಲಿ ಕಲ ಕಳೆಯುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರು ಕೆಲವೊಂದು ಹವ್ಯಾಸಳಿಗೆ ತುತ್ತಾಗಿರುತ್ತಾರೆ. ಅವುಗಳು ಅವರಿಗೆ ಮನಸ್ಸಿಗೆ ನೆಮ್ಮದಿ ಮತ್ತು ಧಣಿವನ್ನು ತಣಿಸಿಕೊಳ್ಳಲು ಕೆಲವೊಂದು ಚಟಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಇಂತಹ ಮಹಿಳಾ ಕೃಷಿ ಕಾರ್ಮಿಕರ ಹವ್ಯಾಸಗಳನ್ನು ಈ ಮೇಲಿನ ಕೋಷ್ಟಕವು ತೋರಿಸುತ್ತದೆ.

ಲಂಬ ಚಿತ್ರ : ೫.೨೧ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹವ್ಯಾಸಗಳ ವಿವರದ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಆರೋಗ್ಯವನ್ನು ಲೆಕ್ಕಿಸದೇ ಕೆಲವೊಂದು ಹವ್ಯಾಸಗಳನ್ನು ಬೆಳೆಸಿಕೊಂಡಿರುತ್ತಾರೆ ಅದರಲ್ಲಿ ಎಲೆ ಅಡಿಕೆ ಹಾಕುವ ಮಹಿಳೆಯರ ಪ್ರಮಾಣ ಶೇ ೩೫.೬ರಷ್ಟಿದೆ, ತಂಬಾಕು ಜಗಿಯುವ ಮಹಿಳೆಯರ ಪ್ರಮಾಣ ಶೇ ೩೯.೨ರಷ್ಟಿದೆ, ನಸಿಪುಡಿ ತಿಕ್ಕುವವರ ಪ್ರಮಾಣ ಶೇ ೧೯.೨ರಷ್ಟಿದೆ, ಇನ್ನು ಮಧ್ಯಪಾನ ಮಾಡುವವರ ಪ್ರಮಾಣ ಶೇ ೬ರಷ್ಟು ಇರುವುದನ್ನು ಗುರುತಿಸಬಹುದು. ಕೂಡ್ಲಿಗಿಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಆರೋಗ್ಯವನ್ನು ಲೆಕ್ಕಿಸದೇ

ಕೆಲವೊಂದು ಹವ್ಯಾಸಗಳನ್ನು ಬೆಳೆಸಿಕೊಂಡಿರುತ್ತಾರೆ ಅದರಲ್ಲಿ ಎಲೆ ಅಡಿಕೆ ಹಾಕುವ ಮಹಿಳೆಯರ ಪ್ರಮಾಣ ಶೇ ೩೮ರಷ್ಟಿದೆ, ತಂಬಾಕು ಜಗಿಯುವ ಮಹಿಳೆಯರ ಪ್ರಮಾಣ ಶೇ ೩೧.೫ರಷ್ಟಿದೆ, ನಸಿಪುಡಿ ತಿಕ್ಕುವವರ ಪ್ರಮಾಣ ಶೇ ೨೮ರಷ್ಟಿದೆ, ಇನ್ನು ಮಧ್ಯಪಾನ ಮಾಡುವವರ ಪ್ರಮಾಣ ಶೇ ೧.೫ರಷ್ಟು ಇರುವುದನ್ನು ಗುರುತಿಸಬಹುದು.

ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರು ಎಲೆ ಅಡಿಕೆಯನ್ನು ಕೃಷಿ ಕೂಲಿ ಸಂದರ್ಭಗಳಲ್ಲಿ ಒಂದು ಹವ್ಯಾಸವಾಗಿ ಮಾಡಿಕೊಂಡಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೫.೪ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸರಕಾರದ ಸೌಲಭ್ಯಗಳ ಸ್ಥಿತಿಗತಿ


ಪರಿಶಿಷ್ಟ ಪಂಗಡದ ಮಹಿಳಾ ಕಾರ್ಮಿಕರನ್ನೊಳಗೊಂಡಂತೆ ಗ್ರಾಮೀಣ ಬಡ ಜನರ ಅಭಿವೃದ್ಧಿಗಾಗಿ ಸರಕಾರವು ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಆದರೆ ಈ ಯೋಜನೆಗಳು ಎಷ್ಟರ ಮಟ್ಟಿಗೆ ಅರ್ಹರಿಗೆ ತಲುಪುತ್ತಿವೆ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಏಕೆಂದರೆ ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಬಡವರು ಬಡವರಾಗಿಯೇ ಉಳಿದಿದ್ದಾರೆ.

ಕೋಷ್ಟಕ: ೫.೨೨ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಸರಕಾರದಿಂದ ಪಡೆದಿರುವ ಸೌಲಭ್ಯಗಳ ವಿವರ

ಕ್ರ. ಸಂ.	ಸೌಲಭ್ಯಗಳು	ಹೊಸಪೇಟೆ	ಪ್ರತಿಶತ	ಕೂಡ್ಲಿಗಿ	ಪ್ರತಿಶತ
೧	ಗಂಗಾ ಕಲ್ಯಾಣ ಯೋಜನೆ	೪೮	೧೯.೨	೭೬	೩೮
೨	ಕೃಷಿ ಹೊಂಡಾ	೯೮	೩೯.೨	೬೩	೩೧.೫
೩	ಬೆಳೆ ವಿಮಾ ಸೌಲಭ್ಯ	೮೯	೩೫.೬	೫೬	೨೮
೪	ಬೆಳೆ ಸಾಲಕ್ಕೆ ಸಹಾಯಧನ	೧೫	೬	೦೩	೧.೫
	ಒಟ್ಟು ಕುಟುಂಬಗಳು	೨೫೦	೧೦೦	೨೦೦	೧೦೦

ಬೇಡ ಸಮುದಾಯದ ಮಹಿಳೆಯರು ಕೃಷಿ ಕೂಲಿಯನ್ನೇ ನಂಬಿ ಬದುಕುತ್ತಿರುವುದರಿಂದ ಅವರಿಗೆ ಸರಕಾರ ಸೌಲಭ್ಯಗಳನ್ನು ಹೆಚ್ಚೆಚ್ಚು ದೊರಕಿಸಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಕೃಷಿ ಕಾರ್ಮಿಕರು ಸರಕಾರದ ಸೌಲಭ್ಯಗಳನ್ನು ಪಡೆದುಕೊಂಡವರ ವಿವರವನ್ನು ಸ್ಪಷ್ಟ ಚಿತ್ರಣವನ್ನು ಈ ಮೇಲಿನ ಕೋಷ್ಟಕ ಸ್ಪಷ್ಟಿಕರಿಸುತ್ತದೆ.

ಸಿಲಿಂಡರಾಕೃತಿ ಚಿತ್ರ : ೫.೨೨ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರು ಸರಕಾರದಿಂದ ಪಡೆದಿರುವ ಸೌಲಭ್ಯಗಳ ಹಂಚಿಕೆ



ಹೊಸಪೇಟೆಯ ಬೇಡ ಮಹಿಳಾ ಕೃಷಿ ಕಾರ್ಮಿಕರು ಸರಕಾರ ಸೌಲಭ್ಯ ಪಡೆದ ಗಂಗಾ ಕಲ್ಯಾಣ ಯೋಜನೆ ಪಡೆದು ಕೊಂಡ ಮಹಿಳೆಯರ ಪ್ರಮಾಣ ಶೇ ೧೯.೨ರಷ್ಟಿದೆ, ಕೃಷಿ ಹೊಂಡಾ ಪಡೆದ ಮಹಿಳೆಯರ ಪ್ರಮಾಣ ಶೇ ೩೯.೨ರಷ್ಟಿದೆ, ಬೆಳೆ ವಿಮಾ ಸೌಲಭ್ಯ ಪ್ರಮಾಣ ಶೇ ೩೫.೬ರಷ್ಟಿದೆ, ಇನ್ನು ಬೆಳೆ ಸಾಲಕ್ಕೆ ಪಡೆದ ಸಹಾಯಧನ ಪ್ರಮಾಣ ಶೇ ೬ರಷ್ಟು ಇರುವುದನ್ನು ಗುರುತಿಸಬಹುದು.

ಕೂಡ್ಲಿಗಿ ಬೇಡ ಮಹಿಳಾ ಕೃಷಿ ಕಾರ್ಮಿಕರು ಸರಕಾರ ಸೌಲಭ್ಯ ಪಡೆದ ಗಂಗಾ ಕಲ್ಯಾಣ ಯೋಜನೆ ಪಡೆದು ಕೊಂಡ ಮಹಿಳೆಯರ ಪ್ರಮಾಣ ಶೇ ೩೮ರಷ್ಟಿದೆ, ಕೃಷಿ ಹೊಂಡಾ ಪಡೆದ ಮಹಿಳೆಯರ ಪ್ರಮಾಣ ಶೇ ೩೧.೫ರಷ್ಟಿದೆ, ಬೆಳೆ ವಿಮಾ ಸೌಲಭ್ಯ ಪ್ರಮಾಣ ಶೇ ೨೮ರಷ್ಟಿದೆ, ಇನ್ನು ಬೆಳೆ ಸಾಲಕ್ಕೆ ಪಡೆದ ಸಹಾಯಧನ ಪ್ರಮಾಣ ಶೇ ೧.೫ರಷ್ಟು ಇರುವುದನ್ನು ಗುರುತಿಸಬಹುದು.

ಈ ಎರಡು ತಾಲೂಕುಗಳಲ್ಲಿ ಬೇಡ ಮಹಿಳಾ ಕೃಷಿ ಕಾರ್ಮಿಕರು ಹೆಚ್ಚಾಗಿ ಬೆಳೆವಿಮಾ ಸೌಲಭ್ಯ, ಹಾಗೂ ಗಂಗಾಕಲ್ಯಾಣ ಯೋಜನೆಯನ್ನು ಪಡೆದುಕೊಂಡಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಒಟ್ಟಾರೆಯಾಗಿ ಕ್ಷೇತ್ರಾಧ್ಯಯನದ ಮೂಲಕ ವಿವಿಧ ರೀತಿಯಲ್ಲಿ ಬೇಡ ಸಮುದಾಯದ ಕೃಷಿ ಮಹಿಳೆಯರ ಬದುಕಿನ ಬಗೆ ಹಾಗೂ ಅವರು ಅನುಭವಿಸುತ್ತಿರುವ ನೈಜ ಸಮಸ್ಯೆಗಳ ಸ್ಥಿತಿಗಳನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.



ಆಧಾರಗಳು

ಸಿದ್ಧಗಂಗಮ್ಮ, ೨೦೧೩, ಮಹಿಳಾ ಶ್ರಮ ಘನತೆ, ಗಾನೆ ಪಬ್ಲಿಕೇಷನ್ಸ್, ಬೆಂಗಳೂರು

ನ್ಯಾ॥ ನಾಗಮೋಹನದಾಸ ಹೆಚ್.ಎನ್, ೨೦೧೪, ಮಹಿಳಾ ಅಸಮಾನತೆ, ಪ್ರಕಾಶಕರು, ಚಿಂತನ ಪುಸ್ತಕ, ಬೆಂಗಳೂರು

ಅಧ್ಯಾಯ : ಆರು

ಬೇಡ ಸಮುದಾಯದ ಕೃಷಿ ಕಾರ್ಮಿಕ ಮಹಿಳೆಯರ ಆಯ್ದ ಪ್ರಕರಣ ಅಧ್ಯಯನ

ಅಧ್ಯಾಯ : ಆರು

ಬೇಡ ಕೃಷಿ ಕಾರ್ಮಿಕ ಮಹಿಳೆಯರ ಆಯ್ದ ಪ್ರಕರಣ ಅಧ್ಯಯನ

ಈ ಅಧ್ಯಯನದ ಪೂರ್ಣತೆಯನ್ನು ಪಡೆಯಬೇಕಾದರೆ, ಕೆಲವು ಬೇಡ ಬುಡಕಟ್ಟು ಮಹಿಳೆಯರ ಕೃಷಿ ಜೀವನ ಸ್ಥಿತಿಗತಿ ಕುರಿತು ಸಂಕ್ಷಿಪ್ತವಾಗಿ ನೋಡಿದಾಗ ಮತ್ತು ಕುಟುಂಬದಲ್ಲಿ ಅವರಿಗೆ ಇರುವ ಕೃಷಿಯ ಮೇಲಿನ ಸ್ವಾತಂತ್ರ್ಯ ಹಾಗೂ ಕೂಲಿಯಿಂದ ಬಂದ ಹಣದ ಮೇಲಿನ ಅಧಿಕಾರ ಹೀಗೆ ಕೃಷಿ ಮಹಿಳೆ ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ತಿಳಿಯಲು ಕೆಲವೇ ಕೆಲವಾದರೂ ಮಹಿಳೆಯರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿ ಪಡೆಯುವುದು ಒಳಿತು ಎಂಬ ಕಾರಣಕ್ಕಾಗಿ ಅಧ್ಯಯನಕ್ಕೆ ಆಯ್ದುಕೊಂಡ ಕುಟುಂಬಗಳಲ್ಲಿಯೇ ಆಯ್ದ ಮಹಿಳೆಯರನ್ನು ವ್ಯಕ್ತಿ ಅಧ್ಯಯನಕ್ಕೆ ಒಳಪಡಿಸಲಾಯಿತು. ಅವರ ಅಭಿಪ್ರಾಯಗಳನ್ನೇ ಸ್ಥೂಲವಾಗಿ ಇಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬೇಡ ಮಹಿಳಾ ಕೃಷಿ ಕಾರ್ಮಿಕರನ್ನು ಹೊಸಪೇಟೆ ತಾಲೂಕಿನಿಂದ ಐದು ಕೂಡ್ಲಿಗಿ ತಾಲೂಕಿನಿಂದ ಐದು ಒಟ್ಟು ೧೦ ಮಹಿಳೆಯರನ್ನು ವ್ಯಕ್ತಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಅವರ ನಿರ್ಧಾರಗಳು ಕುಟುಂಬದಲ್ಲಿ ಅವರ ಸ್ಥಾನ ಮಾನ ಅವರ ಜೀವನದ ಆಗು ಹೋಗುಗಳು ಮತ್ತು ಪ್ರಸ್ತುತ ಆ ಮಹಿಳೆಯರ ಸ್ಥಿತಿಗತಿ ಮತ್ತು ಜೀವನೋಪಾಯಕ್ಕಾಗಿ ಅವರು ಅನುಸರಿಸುತ್ತಿರುವ ವೃತ್ತಿ(ಕೆಲಸ) ಹೀಗೆ ಹಲವು ಅನೇಕ ವಿಚಾರಗಳ ಕುರಿತಾದ ವಿವರಗಳು ಈ ಕೆಳಗೆ ನೀಡಲಾಗಿದೆ.

ಕೂಡ್ಲಿಗಿ

ಪ್ರಕರಣ-೧

ಹೆಸರು : ಮಾರಕ್ಕ ಗಂಡ ಸೂರಪ್ಪ

ವಯಸ್ಸು : ೬೫ ವರ್ಷ

ಗ್ರಾಮ : ನರಸಿಂಹಗಿರಿ

ಗ್ರಾಮ ಪಂಚಾಯತಿ : ಬೆಳ್ಳಗಟ್ಟ

ವಿದ್ಯಾಭ್ಯಾಸ : ಅನಕ್ಷರಸ್ಥೆ

ತಾಲೂಕು; ಕೂಡ್ಲಿಗಿ, ಜಿಲ್ಲೆ ಬಳ್ಳಾರಿ

ನಮ್ಮದು ಕುಡ್ಲಿಗಿ ತಾಲೂಕ ನಮ್ಮೂರಿಗೆ ನರಸಿಂಹನಗಿರಿ ಇಲ್ಲ ಏಳೂರು ಗುಡ್ಡ ಅಂತ ಊರುನ ಕರಿತಾರ ನನ್ನ ಹೆಸರ ಮಾರಕ್ಕ. ನನಿಗೆ ೬೫ ವರ್ಷ ವಯಸ್ಸಾಗೆದೆ. ಓದಾಕ ಬರಿಯಾಕಂತೂ ಬರಂಗ ಇಲ್ಲ ನಾಕಕ್ಷರ ಬರಲ್ಲ ಬಳಪ ಹಿಡಿಯಕು ಬರಂಗಿಲ್ಲ ನಾನು ಹೆಬ್ಬಟ್ಟದಿನಿ ನನಿಗೆನು ತಿಳಿಯಂಗಿಲ್ಲ. ಕೃಷಿ ಕಲಿತಿನಿ ಬಿಟ್ರ ಕೂಲಿ ಅದು ಬಿಟ್ರ ಏನೂ ಗೊತ್ತಿಲ್ಲ. ಸಣ್ಣ ವಯಸ್ಸಿನಾಗ ನನಿಗೆ ಲಗ್ನ ಮಾಡಿಕೊಟ್ರು ಆತಗು ಬಾಳ ವಯಸ್ಸಾಗಿತ್ತು ಮನಿಯಾಗ ಕಷ್ಟ. ಗಂಡನ ಮನಿಯಾಗೂ ಹೊಲ್ದಗ ದುಡಿಬಾಕು ತಿಂಬಾಕು ಲಗ್ನಾಗಿ ಒಂದತ್ತು ವರ್ಷದಾಗ ಆತನು ಹೊಂಟ ನನಗ ಗಂಡ ಇಲ್ಲ ತೀರಿಹೊಗ್ಯಾನ ನನಗ ಎರಡು ಹೆಣ್ಣು ಮಕ್ಕಳು ಮೂರು ಗಂಡು ಮಕ್ಕಳದಾವ ಅವು ಸಾಲಿ ಕಲಿಲಿಲ್ಲ. ಇಬ್ಬುರು ಹೆಣ್ಮಕ್ಳಿಗೆ ಲಗ್ನ ಮಾಡಿ ಗಂಡನ ಮನಿ ಸೇರಿಸಿನಿ. ಮತ್ತ ಗಣ್ಮಕ್ಕಳಿಗೂ ಕೂಡ ಲಗ್ನಮಾಡಿನಿ ಆದ್ರ ಅವುರು ನನ್ನೂಡಿ ಇಲ್ಲ ಲಗ್ನ ಆದಿಂದ ಒಬ್ಬೊಬ್ರ ಮನಿಬಿಟ್ಟು ಬ್ಯಾರೆ ಮನಿಮಾಡಿ ಜೀವನ ಮಾಡ್ತ ಅದಾರ. ಇರಾದು ನಾಕೆಕರಿ ಜಮೀನು ಅದುನು ಅವುರ ಲಗ್ನ ಸಂಬಂದ ಅಡ ಮಡಿಗಿವಿ. ಮೂರು ಗಂಡ್ಮಕ್ಳು ಇದ್ರು ಯಾರು ಬಿಡಸಾಕ ರೆಡಿ ಇಲ್ಲ ಯಾಕಂದ್ರ ಅವು ಕುಡಿತಕ್ಕ ಬಿದ್ದವ(ಮಧ್ಯಪಾನ ಸೇವನೆ) ಅವು ಕೂಡ ಕೂಲಿ ಹೋಗಿ ಬರ್ತಾವ ದುಡುದ ದುಡ್ಡೆಲ್ಲ ಕುಡಿಯಾಕ ನ್ಯಾರ ಮಾಡ್ತವ ನನ್ನನ್ನು ಮನಿಯಿಂದ ದೂರ ಮಾಡ್ಯಾರ ನಾನು ಒಂದು ಸಣ್ಣ ರೂಮಿನಾಗ ಜೀವನ ನಡುಸಕತ್ತೀನಿ ನಾನು ಕೂಲಿ ಹೋಗಿ ಹೊಟ್ಟೆಬಟ್ಟೆ ಕಟ್ಟಿ ಜೀವನ ಅರಿತ್ನಿ ಕೂಲಿ ಹೋಗಿಲ್ಲಂದ್ರ ತಿನ್ನಾಕ ಹಿಟ್ಟಿಲ್ಲ ಮಾರಾಯ ಎನ ಮಾಡದ ತಿಂಗಳ ಪಿಂಚಣಿ ಬಂದ್ರು ಕರೆಂಟ ಬಿಲ್ಲ ಸೋಪು ಬ್ಯಾಳಿ ಅಂತ ಖರ್ಚು ಅದರಾಗ ಹೆಣ್ಮಕ್ಳು ಮಕ್ಕಳು(ಮೊಮ್ಮಕ್ಕಳು)ಬಂದ್ರ ಅವುಕ್ಕೂ ಆಸಿ ಇರ್ತದಲ್ಲ ಅವ್ವ ಅವ್ವ ಅಂತಾವ ಅವುಕ್ಕು ಒಂದು ಹತ್ತತ್ತು ರೂಪಾಯಿ ಕೊಡ್ತಿನಿ ಮತ್ತ ಕೂಲಿ ಸಿಕ್ಕಿಲ್ಲಂದ್ರ ಜೀವನ ಸಲುವಕ ಬೇಕಲ್ಲ ಅದುಕ್ಕ. ಅಲ್ಲದ ನನಗು ವಯಸ್ಸಾದಂಗೆಲ್ಲ ಯಾರು ಕೂಲಿ ಕೊಡ್ತಾರ ನಿನ ಕೈಲಿ ಆಗಂಗಿಲ್ಲ ಹೋಗು ಅಂತಾರ ಅದರ ಜೋಡಿ ನನಗೂ ಮೊಣಕಾಲ ನೋವು ಬೆನ್ನನೋವು ಕೆಮ್ಮು ಕಾಡ್ತದ ಆದರ ತೋರುಸಾಕ ರೊಕ್ಕ ಇಲ್ಲ ಇದ್ದೋಸು ದಿನ ಹಿಂಗ ಬಾಳರಿಬಕು ಸುಮ್ನ ಡಾಕ್ಟುರತ್ರುಕ ಹೊಂಟ್ರ ರೊಕ್ಕ ದಂಡ ಅದು ಅಲ್ದ ಅಂಗ್ಡಿಗೋದ್ರ ಒಂದ ರೂಪಾಯಿಗ ಗುಳಿಗಿ ಸಿಕ್ತದ ಅದನ ನುಂಗಿದ್ರ ಮೇಲಾಗ್ತದ ದೊಡ್ಡು ಡಾಕ್ಟ್ರಪ್ಪತಗ ತೋರುಸಾನಂದ್ರ ಹಂಗ ಇಂಗ ಕೂಡಿಟ್ಟ ರೊಕ್ಕೆಲ್ಲ ದೊಡ್ಡಮಗ ಕಸಿತಾನ ಎಲ್ಲ ಕುಡುದು ಕಾಲಿ ಮಾಡ್ತನ ಇವತ್ತು ಸರಿ ಹೊಕ್ಕಾರೆ ನಾಳೆ ಸರಿ ಹೊಕ್ಕಾರಂತ ಕಾಯಕತ್ತಿನಿ ನೋಡಾನು ಎಷ್ಟಾರು ನನ್ನ ಮಕ್ಳು ಅವು ಏನೊ ಬೇಜಾರುಕ್ಕ ಕುಡಿತಾವ ನೋಡಾನು ನಮಿಗೆ ಜಮೀನಾದ್ರು ಇದ್ದುದ್ರ ಏನೊ ಮಾಡಬೋದಿತ್ತು ಆದ್ರ ಅದು ಇಲ್ಲ ಕೂಲಿ ಇದ್ರ ಹೊಟ್ಟೆ

ತುಂಬಂತ ಸ್ಥಿತಿಯಾಗ ನಾವದಿವಿ ಅನ್ನುವ ವಿಚಾರಗಳನ್ನು ಹೇಳುತ್ತಾರೆ. ಇಷ್ಟಲ್ಲ ಆದರೂ ಮಕ್ಕಳಿಗೆ ಒಂದು ಮಾತನ್ನು ಶಪಿಸುವುದಿಲ್ಲ ಆ ತಾಯಿ ಇದೆಲ್ಲವನ್ನು ನೋಡಿದರೆ ಈ ಮಹಿಳೆ ಸಂಪೂರ್ಣ ಕೂಲಿಮೇಲೆ ಬದುಕು ನಡೆಸುತ್ತಿರುವುದು ಕಂಡುಬರುತ್ತದೆ ಮೂರು ಜನ ಗಂಡು ಮಕ್ಕಳಿದ್ದರು ಅವಳಿಗೆ ಒಂದೊತ್ತಿನ ಊಟ ಹಾಕುವುದಿಲ್ಲ ಆದರೂ ಅವಳು ಸ್ವಂತ ದುಡಿದು ತಿನ್ನುತ್ತಿರುವುದನ್ನು ಕಾಣಬಹುದು.

ಪ್ರಕರಣ–೨

ಹೆಸರು : ಸಾಕಮ್ಮ ಗಂಡ ನಿಂಗಪ್ಪ

ವಯಸ್ಸು : ೨೫ ವರ್ಷ

ಗ್ರಾಮ : ಜರ್ಮಲಿ

ಗ್ರಾಮ ಪಂಚಾಯಿತಿ : ಜರ್ಮಲಿ

ವಿದ್ಯಾಭ್ಯಾಸ : ಒಂದನೇ ನೇ ತರಗತಿ

ನಮ್ಮದು ಕೂಡ್ಲಿಗಿ ತಾಲೂಕು ಬಳ್ಳಾರಿ ಜಿಲ್ಲೆ. ನಮ್ಮೂರು ಜೆರಿಮೆಲೆ (ಜರ್ಮಲಿ) ನಾನು ಶಾಲೆ ಕಲಿತಿರದು ಒಂದೇ ಕ್ಲಾಸು ಅದು ಸರಿಗೆ ಹೋಗಿಲ್ಲ ನಮ್ಮಪ್ಪರ ಮನೆಯಾಗು ಕಷ್ಟ. ನಾನು ನಮ್ಮಪ್ಪ ಅಮ್ಮರ ಜತಿಗೆ ಹೊಲುಕ್ಕೋಗ್ತಿದ್ದೆ. ನಮ್ಮಪ್ಪರಿಗೆ ನಾವು ನಾಕು ಜನ ಹೆಣ್ಮಕ್ಳು ಅದರಗ ನಾನು ಎರಡನೆಯೊಳು ಹಿಂಗ ಕೂಡಿ ಬಂದಾಗ ಖರ್ಚು ಆದ್ರು ಸಾಕು ಒಬ್ಬೊಬ್ರೆ ಅಂತ ಮದುವೆ ಮಾಡಿ ಕೊಟ್ರು ಹೊಸತ್ರಾಗ ನನ್ನ ಗಂಡ ಚನಾಗೆ ಇದ್ದ ಆಮೆಲೆ ಆಮೆಲೆ ಹುಚ್ಚನಂಗ ಆಡ್ತದಾನ ನನಿಗೆ ಒಂದು ಹೆಣ್ಣು ಒಂದು ಗಂಡು ಮಗ ಇದೆ. ನನ ಗಂಡನದು ಒಂದು ಎಕರೆ ಜಮೀನೈತೆ ಅದು ಅತ್ಲಗಿಲ್ಲ ಇತ್ಲಗಿಲ್ಲ ಮಾಡನು ನಾವೆ ಅಂದ್ರ ನನ ಗಂಡನಿಗೆ ಆಡೋದು ಬಿಟ್ರೆ ಬೇರೆ ಕೆಲಸ ಗೊತ್ತಿಲ್ಲ ನಾನಾದ್ರು ಒಬ್ಬಳೆ ಏನು ಮಾಡ್ಲಿ ಎತ್ತು ಬಂಡೀನು ಇಲ್ಲ. ಬಾಡಿಗೆ ಏಳುನೂರು ಎಂಟುನೂರು ಕೇಳ್ತಾರ ಅವತ್ತಿಗೆ ಊಟ ಸಿಕ್ರ ಸಾಕು ಅನ್ನಂಗ ನಾವದಿವಿ ಹಂಗಾಗಿ ನಾವೊಂದು ಏಳೆಂಟು ಜನ ಕೂಡಿ ಗುತ್ತಿಗಿ ಹಿಡಿತಿವಿ. ಇಲ್ಲಂದ್ರ ಕೂಲಿ ಹೊಗ್ತಿವಿ. ಅದ್ರಿಂದ ಬಂದ ಹಣದಗ ಮಕ್ಕಳ ಬಟ್ಟಿ ಬರಿ ಪೆನ್ನು ಪೇಪರ್ ಅಂತ ಖರ್ಚು. ಅದ್ರಗ ಸರಕಾರಿ ಶಾಲಿಗೆ ಹೊಕ್ಕಾವು ಮಕ್ಕಳು ಅಲ್ಲೆ ಶಾಲಿ ಬಟ್ಟಿ ಪುಸ್ತಕ ಕೊಡ್ತಾರ ಹಂಗಾಗಿ ಇಲ ಬಾಳು ಚಂದ. ನನ್ ಗಂಡ ಊರಗ ಸುಮ್ನೆ ತಿರುಗ್ತನೆ. ಅದೆಂತದೊ ಊರಮುಂದೆ ಕುಂತು ಹತ್ತಿಪ್ಪತ್ತು ಕಾಸು ಹಾಕಿ ದಶ್ಯಬಾರ ಆಡ್ತಾನೆ. ಅದಕ್ಕೂ ನಾನೆ ಕಾಸು ಕೊಡಬೇಕು ಸಂಜೆ ಆದ್ರ ಕುಡಿಯಾಕ ಕೊಡಬಕು. ಇಲ್ಲಂದ್ರೆ ನನಿಗೆ ಮಕ್ಕಿಗೆ ಹಿಡಿದು ಹೊಡಿತಾನೆ. ಬೆಳೆಯ ಮಕ್ಕಳದವ ಅಂತಾನು ನೋಡಲ್ಲ ಅವುಕ್ಕೆಂದು ಏನು ತಂದು ಕೊಡಲ್ಲ ನಮ್ಮಪ್ಪರಿಗೆನದ್ರು ಕೆಳಾನು ಒಂದು ಮಗುಗೆ ಅಲ್ಲೆ ಸೇರುಸನು ಶಾಲಿಗಂದ್ರ ಅವರದು ಕಷ್ಟ. ಅವುರು ಕೂಲಿನಾಲಿ ಮಾಡ್ತಾರೆ. ಇಲ್ಲಿ ಮೊದಲಾದ್ರು ನಾನು ಬೆಳಿಗ್ಗೆ ಅಡಿಗೆ ಮಾಡಿ ಕೂಲಿ ಹೋದ್ರೆ ಮಕ್ಕಳಿಗೆ ನೋಡಿಕೆನಕಾದ್ರು

ನಮ್ಮತ್ತೆ (ಗಂಡನ ತಾಯಿ) ಇದ್ರು ಈಗ ಅವುರು ಮಗಳಿಗೆ ಹುಶಾರಿಲ್ಲ ಅಂತ ಮಗಳನ್ನು ಕೊಟ್ಟ ಊರಿಗೆ ಹೋಗಿ ಕುಂತಾರೆ ಈಗ ನಾನೆ ಮಕ್ಕಳಿಗೆ ನೋಡಿಕೆಂಡು ಅವುಕ್ಕೆಲ್ಲ ರೆಡಿ ಮಾಡಿ ಹೋಗಬೇಕು. ಅಷ್ಟೊತ್ತಿಗೆನಾದ್ರು ಹೊತ್ತಾತಂದರೆ (ಹೆಚ್ಚು ಸಮಯ) ಕೂಲಿ ಇಲ್ಲ ಏನಿಲ್ಲ ಅಂತ ವಾಪಸ್ಸು ಕಳುಸ್ತಾರೆ ನಮ ಪರಿಸ್ತಿತಿ ಹಿಂಗಿದೆ. ಅದ್ರಗ ಮಗಳಿಗೆ ಆಗಾಗ ಹುಶಾರಿರಲ್ಲ ಅವಳಿಗೂ ತೋರಿಸ್ಬೇಕು ಮಗ ಮುಂಡ ಕೇಳಿದಾಗೆಲ್ಲ ರುಪಾಯಿ ಎರಡುರುಪಾಯಿ ಕೊಡಬೇಕು ಇಲ್ಲಂದ್ರೆ ಎಲ್ಲಾದ್ರು ಹೋಗಿ ಮನೆಗೆ ಬರದೆ ಕೂಡುತ್ತೆ ಹೋಗಿ ಮತ್ತೆ ನಾನೆ ಹುಡುಕಿ ಕರಕೊಂಡು ಬರಬೇಕು. ನನ ಗಂಡನಿಗಂತೂ ಮಕ್ಕಳ ಮೇಲೆ ಎಳ್ಳಷ್ಟು ಪ್ರೀತಿ ಇಲ್ಲ. ಮಕ್ಕಳೇನಾದ್ರು ಕೇಳಿದ್ರೆ ನಿಮ್ಮಮ್ಮನಿಗೆ ಕೇಳ್ರಿ ಅಂತಾನೆ. ಹಬ್ಬ ಹರಿದಿನ ಬಂದ್ರ ಹುಡುಗ್ರಿಗೆ ಬಟ್ಟೆ ತರನಂದ್ರೂ ಕಾಸು ಮಿಕ್ಕಲ್ಲ. ಬೇರೆ ಮಕ್ಕಳು ಹಾಕಿರೊ ಬಟ್ಟೆ ನೋಡಿ ನಮಗೂ ಕೊಡುಸು ಅಂತಾವೆ ಅದಕ್ಕಾಗಿ ಸಂಘಗಳಲ್ಲಿ ಸಾಲ ತಂದು ನಾನೆ ಎಲ್ಲ ನೋಡಿಕೊಂಡು ಮತ್ತೆ ಕೂಲಿಯಿಂದ ಬಂದಿದ್ರಗ ಸಾಲ ಕಟ್ಟಿ ಜೀವನ ನಡುಸ್ಬಕು. ಕೂಲಿ ಇಲ್ಲಂದ್ರ ಹೊಟ್ಟೆಗೆ ಗಂಜಿ ಕೂಡ ಇಲ್ಲ. ಯಾಕಂದ್ರ ಇವನಿಗೆ ಕುಡಿಯಾಕು ಕೊಡಬೇಕು. ಕೂಲಿ ಇರಲಾರದಗ ಯಾರದಾದ್ರು ಕಾಳು ಕಡಿ ಹಸ ಮಾಡಕ (ಸ್ವಚ್ಚ) ಇಲ್ಲಂದ್ರ ಹುಲಿಗಿಲಿ ಬೀಜ ಆರಸಕ ಹೋಕ್ಕಿನಿ ಅದು ಮಾರಿದ್ರ ರೊಕ್ಕ ಬರ್ತದ ಹಂಗ ಒಂದೆರಡು ಕುರಿ ಮಾಡಿನಿ ಅವುನ್ನು ಮೇಯಿಸಿದಂಗ ಆಗ್ತದೆ ಅಂತ. ಈಟೆಲ್ಲ ಮಾಡಿದ್ರು ಅವ ಸಂಜೆಗೆ ಹಿಡುದು ಹೊಡಿಯಾದಂತೂ ತಪ್ಪಂಗಿಲ್ಲ. ಒಂದಿನ ಮನಿಯಾಗಿರಂಗಿಲ್ಲ ಕೂಲಿ ಹೋಗು ಅಂತಾನ ಹೋಗಾಕ ದಿನಾಲು ಕೂಲಿ ಸಿಗಬಾಕಲ್ಲ. ಜೊತಿಗೆ ಬ್ಯಾರೆ ಊರಿಗು ಹೋಗಿ ಕೂಲಿ ಮಾಡಿ ಬರ್ತಿವಿ. ಹಿಂಗೆ ನಮ್ ಜೀವನ ಸಾಕ್ತದೆ ಎಂದು ಹೇಳಿ ಇದುಕ್ಕೇನರ ಪರಿಹಾರ ಇದ್ರ ಹೇಳ್ರಿ ಅಂತ ನಮಗೆ ಕೇಳಿದ ಸಂಧರ್ಭವೂ ಉಂಟಾಯಿತು. ಪಾಪ ಅವರ ಬದುಕಿನ ಇಡೀ ಜೀವನ ಕೃಷಿ ಕೂಲಿ ಮೇಲೆ ನಿಂತಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಪ್ರಕರಣ–೩

ಹೆಸರು : ನಾಗೇಂದ್ರಮ್ಮ ಗಂಡ ಮಹಾದೇವಪ್ಪ

ವಯಸ್ಸು : ೨೯ ವರ್ಷ

ಗ್ರಾಮ : ಗೆದ್ದಲಗಟ್ಟೆ

ಗ್ರಾಮ ಪಂಚಾಯಿತಿ : ಜರ್ಮಲಿ

ವಿದ್ಯಾಭ್ಯಾಸ : ೧೦ನೇ ತರಗತಿ

ನನ್ನ ಹೆಸರು ನಾಗೇಂದ್ರಮ್ಮ ನಮ್ಮೂರು ಗೆದ್ದಲಗಟ್ಟೆ. ನನಿಗೆ ೨೯ ವರ್ಷ ವಯಸ್ಸು. ನಮ್ಮ ಯಜಮಾನರು ಮನೆಯ ಚಿಂತೆ ಬಿಟ್ಟು ಹಾಕಿದ್ದಾರೆ ಸುಮ್ಮನೆ ಅವರಿವರ ಜೊತೆ ತಿರುಗಾಡಿ ಬರುತ್ತಾರೆ ಬೆಳಗಿನಿಂದ ಸಂಜೆಯಾಗುವಷ್ಟರಲ್ಲಿ ಐದರಿಂದ ಆರು ಕಟ್ಟು ಬಿಡಿ ಬೇಕು ಅದರ ಜೊತೆಗೆ

ಕುಡಿಯುವ ಚಟ ಬೇರೆ ಜೀವನವೆ ಸಾಕು ಎಂಬಂತಾಗಿದೆ. ಗಂಡು ಮಗುವನ್ನು ಬಯಸಿ ಬಿಟ್ಟುಕೊಂಡು ಐದು ಜನ ಹೆಣ್ಣು ಮಕ್ಕಳು ಹುಟ್ಟಿದರು. ಇದರಿಂದಾಗಿ ನಮ್ಮನೆಯವರು ಗಂಡುಮಗುವಾಗಲಿಲ್ಲವೆಂದು ಮಕ್ಕಳನ್ನು ನನ್ನನ್ನು ಸರಿಯಾಗಿ ಮುಖ ನೋಡಿ ಮಾತನಾಡೊದೆ ಇಲ್ಲ. ನಮ್ಮದು ಕೃಷಿ ಬದುಕು ಮೂರು ವರೆ (೩.೧/೨) ಎಕರೆ ಭೂಮಿ ಇದೆ. ಅದರಲ್ಲಿ ಒಂದು ವರೆ ಎಕ್ಕರೆ ಭೂಮಿಯನ್ನು ಮಾರಿದ್ದೇವೆ, ಏಕೆಂದರೆ ನಾನಾದರೂ ಓದಿಲ್ಲ ಮಕ್ಕಳಾದರೂ ಓದಲಿ ಎಂದು ಆದರೆ ಐದು ಜನ ಹೆಣ್ಣು ಮಕ್ಕಳ ಮದುವೆ ಜವಾಬ್ದಾರಿಯು ನನ್ನ ಹೆಗಲ ಮೇಲೆ ಇದ್ದುದರಿಂದ ಮೊದಲನೆ ಮಗಳು ಒಂಭತ್ತನೇ ತರಗತಿ ಓದಿದ್ದಾಳೆ ಅವಳನ್ನು ನನ್ನ ತಮ್ಮನಿಗೇ ಕೊಟ್ಟು ಮದುವೆ ಮಾಡಿದ್ದೇನೆ. ಅದೇನು ಅಷ್ಟು ಖರ್ಚು ಬರಲಿಲ್ಲ. ಆದರೂ ಸ್ವಲ್ಪ ಸಾಲ ಮಾಡಿಕೊಂಡಿದ್ದರಿಂದ ಎರಡನೆ ಮಗಳನ್ನು ಕೂಲಿ ಕರೆದುಕೊಂಡು ಹೋಗಬೇಕಾಯಿತು ನಂತರ ಅವಳಿಗೂ ಬೇರೆಕಡೆ ಸಂಬಂದ ಕೂಡಿ ಬಂತು ಅವಳಿಗೆ ಮದುವೆ ಮಾಡಲು ಉಳಿದ ಎರಡು ಎಕರೆಯಲ್ಲಿ ಮತ್ತೊಂದು ಎಕರೆ ಭೂಮಿಯನ್ನು ಅಡವಿಡಬೇಕಾದ ಪರಿಸ್ಥಿತಿ ಬಂದೊದಗಿತು. ಅದನ್ನು ಅಡವಿಟ್ಟು ಅವಳ ಮದುವೆನೂ ಮಾಡಿದೆ. ನಂತರ ಮೂರನೇ ಮಗಳಿಗೂ ಮೊನ್ನೆ ಮೊನ್ನೆ ಮದುವೆ ಮಾಡಿದೆ. ನಂತರ ಮೊದಲನೆ ಮತ್ತು ಎರಡನೆ ಮಕ್ಕಳಿಬ್ಬರೂ ಹೆರಿಗೆಗೆಂದು ಬಂದರು ಅವರ ಬಾಣಂತನವನ್ನು ಮಾಡಿಸಲು ಇದ್ದ ಮತ್ತೊಂದು ಎಕರೆ ಭೂಮಿಯಕ್ಕು ಕೈಚೆಲ್ಲಬೇಕಾಯಿತು. ಜೊತೆಗೆ ಮೊದಲಮಗಳ ಅರೈಕೆಮಾಡಲು ನಾಲ್ಕನೆ ಮಗಳು ಪುಚ ತೊರೆಯಬೇಕಾಯಿತು ಪ್ರಥಮ ವರ್ಷದ ಪಿಯುಸಿ ಯಲ್ಲಿಯೇ ಫೇಲಾದಳು. ಈಗ ಅವಳಿಗೂ ಮದುವೆ ನಿಶ್ಚಯ ಮಾಡಿದ್ದೇನೆ. ಇನ್ನು ಐದನೇ ಮಗಳು ಬಿ.ಎ(ಪವವಿ) ಕೊನೆಯ (ಅಂತಿಮ) ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದು ಅವಳಿಗೆ ಕೆಲಸ ಸಿಗಬಹುದು. ನಾನಿಗ ಎಲ್ಲವನ್ನು ಕಳೆದುಕೊಂಡಿದ್ದೇನೆ, ಮಕ್ಕಳ ಭವಿಷ್ಯಕ್ಕಾಗಿ ಜಮೀನು ಕಳೆದುಕೊಂಡೆ ಈಗ ಸಧ್ಯ ಕೂಲಿ ಮಾಡುತ್ತಿದ್ದೇನೆ. ಸಂಘಗಳಲ್ಲಿಯೂ ಸಾಲ ಪಡೆದಿದ್ದೇನೆ. ಸರಿಯಾಗಿ ಹಣ ಹೊಂದಿಕೆಯಾಗದ ಸಂಧರ್ಬದಲ್ಲಿ ಇತರೆ ಸದಸ್ಯರೊಡನೆ ಬೈಸಿಕೊಂಡಿದ್ದೂ ಉಂಟು. ಇರಲು ಸರಿಯಾಗಿ ನೆರಳೂ ಇಲ್ಲ, ಮನೆ ಚಿಕ್ಕದು ಅದು ಮಣ್ಣಿನ ಮನೆ ಮಳೆ ಬಂದರೆ ನೀರೆಲ್ಲ ಒಳಗೆ ಶೌಚಾಲಯ ಇಲ್ಲ. ನನ್ನ ಕತೆ ಕೇಳೋರೆ ಇಲ್ಲ. ಇವರದು ಇದ್ದದ್ದೆ ಎಂದು ಗೊಣಗುತ್ತಾರೆ. ಒಂದು ಗಂಡು ಮಗುವಾದರೂ ಇಲ್ಲ. ಗಂಡ ಹೆಸರಿಗೆ ಮಾತ್ರ ದುಡ್ಡು ಕೊಟ್ಟರೆ ಇರೊದು ಇಲ್ಲಂದರೆ ಹೋಗೋದು. ಇನ್ನು ಕೂಲಿಯೇ ನಮ್ಮ ಹುಸಿರು ಮಾಡಿದರೆ ಊಟ ಮಾಡಿಲ್ಲಂದ್ರೆ ನೀರೆ ಗತಿ. ಹೇಗೋ ಇನ್ನೆರಡು ಮಕ್ಕಳನ್ನು ದಡ ಸೇರಿಸಿದರೆ ಈ ಜೀವ ಯಾವಾಗಾದ್ರು ಸ್ವಾಮಿ ಪಾದ ಸೇರಲಿ ಎಂದರು. ನಮ್ಮಂತವರ ಕಷ್ಟ ಭಗವಂತನಿಗೆ ಹೇಗೆ ತಿಳಿಬೇಕು ನೀವಾದರೂ ಸರಕಾರಕ್ಕ ನಮಗೊಮದು ಮನಿ ಕೊಡ್ರಿ ಅಂತ ಪತ್ರ ಬರಿರಿ ಇನ್ನು ನಾನೊಬ್ಬಳೆ ಅಲ್ಲ ನನ್ನ ಹಾಗೆ ಸಾಕಷ್ಟು ಕಷ್ಟ ಪಡೊರು ಇದಾರೆ ಅವರಿಗು ಸಹಾಯ ಆದಂಗೆ ಆಗ್ತದೆ, ಇಲ್ಲಂದರೆ ನಾವು ಹೆಂಗೆ ಬದುಕಬೇಕು ನೀವೆ ಹೇಳಿ ಎಂಬ ಪ್ರಶ್ನೆಯನ್ನು ಎತ್ತುತ್ತಾರೆ.

ಪ್ರಕರಣ–೪

ಹೆಸರು : ಅನಿತ ಗಂಡ ನಾಗರಾಜ

ವಯಸ್ಸು : ೩೫ ವರ್ಷ

ಗ್ರಾಮ : ಯರೋಬಯ್ಯನಹಟ್ಟಿ

ಗ್ರಾಮ ಪಂಚಾಯಿತಿ : ಅಪ್ಪಯ್ಯನಹಳ್ಳಿ

ವಿದ್ಯಾಭ್ಯಾಸ : ೯ ನೇ ತರಗತಿ

ನನ್ನ ಹೆಸರು ಅನಿತ ನನಗೆ ೩೫ ವರ್ಷ ವಯಸ್ಸು. ಕೂಡ್ಲಿಗಿ ತಾಲೂಕು. ನಾನು ಹತ್ತನೇ ತರಗತಿಯವರೆಗೂ ಓದಿದ್ದೇನೆ ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿನಿ ಮುಂದೆ ಓದಬೇಕೆಂಬ ಆಸೆ ತುಂಬಾ ಇತ್ತು ಆದರೆ ನಮ್ಮಪ್ಪನ ಮನೇಲಿ ಬಡತನ ಇತ್ತು ಕೆಲಸ ಕೂಲಿ ಮತ್ತೆ ಅದರ ಜೊತಿಗೆ ನಮ್ಮದು ಎರಡು ಎಕ್ಕರೆ ಭೂಮಿ ಇತ್ತು. ಅದುಕ್ಕಾಗಿ ನಾನೂ ೧೬ ವಯಸ್ಸಿನಿಂದ ಕೂಲಿ ಹೋಗಾಕ ಶುರು ಮಾಡಿದೆ. ಜೊತೆಗೆ ಸಾಲದಕ್ಕೆ ೧೭ ನೇ ವಯಸ್ಸಿಗೆ ಮದುವೆ ಮಾಡಿ ಕೊಟ್ರು. ನನ್ನ ಅದೃಷ್ಟ ನೊಡಿ ಹೇಗಿದೆ ಗಂಡನ ಮನೆಯಲ್ಲೂ ಕೂಲಿ ಎಲ್ಲದಕ್ಕೂ ಹಣೆ ಬರಹ ನೆಟ್ಟುಗಿರಬೇಕು. ನಾನು ಹಿಂಗೆ ಬದುಕಬೇಕಂತ ದೇವರಿಚ್ಚೆ ಇದ್ರೆ ಏನ್ ಮಾಡಬೇಕು ಹೇಳಿ ನನಿಗೆ ಇಲ್ಲೂ ತಪ್ಪಿದ್ದಲ್ಲ. ಇನ್ನೆರಡು ವರ್ಷ ನನಿಗೆ ಓದಿಸಿದ್ರೆ ಏನಾದ್ರು ಚನಗಿರತಿತ್ತೇನೊ ಈ ಹಳ್ಳಿಯಾಗೊ ಕೂಲಿ ಬಿಟ್ರೆ ಮಾಡನಂದ್ರು ಬ್ಯಾರೆ ಕೆಲಸ ಇಲ್ಲ. ನಮ್ಮಪ್ಪನ ಮನೆಲಿ ಕಷ್ಟ ಇದ್ದದ್ದಕ್ಕೆ ಇವರಿಗೆ ಹಿಂದೂ ಮುಂದೂ ನೋಡದೆ ಮದುವೆ ಮಾಡಿ ಕೊಟ್ರು ಅಂತ ಅವಸರವಿತ್ತು ಅವರಿಗೆ ನಾನು ಅಲ್ಲಿದ್ರು ಕೂಲಿ ಮಾಡಿ ದುಡುದು ತಿಂತಿದ್ದೆ. ಆದ್ರು ನನಿಗೆ ಇಂತ ಮನೆಗೆ ಕೊಟ್ರು. ಇಲ್ಲಿ ದುಡುದು ತಂದು ಮಾಡಿ ಹಾಕಿದ್ರು ಇಲ್ಲಿ ಕಾಡಾಟ ತಪ್ಪಲಿಲ್ಲ. ಮದುವೆಯಾದ ಹೊಸತರಲ್ಲಿ ನನ್ನ ಗಂಡ, ಅತ್ತೆ ಮತ್ತು ಮಾವ ಚನ್ನಾಗಿನೋಡಿಕೊಳ್ಳುತ್ತಿದ್ದರು. ಆದರೆ ಮದುವೆಯಾಗಿ ಮೂರು ವರ್ಷವಾದ ನಂತರ ಮನೆಯಲ್ಲಿ ನೆಮ್ಮದಿಯೇ ಸತ್ತು ಹೋಯಿತು ಏಕೆಂದರೆ ನನಗೆ ಮಕ್ಕಳಾಗಲಿಲ್ಲವೆಂದು ಪ್ರತಿದಿನ ಬೈಗುಳ, ಚುಚ್ಚು ಮಾತುಗಳು, ಜೊತೆಗೆ ನನ್ನ ಗಂಡ ಕುಡಿಯುವ ಚಟವನ್ನು ಹತ್ತಿಸಿಕೊಡದ್ದು ಎಲ್ಲವೂ ನೋಡಿ ಜೀವನವೇ ಬೇಡವೆಂದು ಅನ್ನಿಸುತ್ತಿದೆ. ಅದಕ್ಕೆ ಮತ್ತೊಂದು ಸಮಸ್ಯೆಯೂ ಶುರುವಾಯಿತು. ಗಂಡನ ಕುಡಿತದಿಂದ ಮನೆಯವರಿಗೂ ಬೇಸರವಾಗಿ ಪ್ರತಿದಿನ ಈತನ ಹಿಂಸೆ ತಾಳಲಾರದೆ ಅತ್ತೆ ಮಾವ ನಮ್ಮನ್ನು ಮನೆಯಿಂದ ಹೊರಗೆ ಹಾಕಿದ್ರು. ನಂತರ ಇದೊಂದು ಸಣ್ಣ ಹಳ್ಳಿಯಾದ್ದರಿಂದ ಎರಡುನೂರು ರೂಪಾಯಿಯಂತೆ ಬಾಡಿಗೆ ಸಿಕ್ಕಿತು. ಈಗ ಮನೆಯನ್ನು ನಾನೆ ನೋಡಿಕೊಂಡು ಹೋಗ್ತಿದಿನಿ. ನಮ್ಮೂರಿನಲ್ಲಿ ಕೂಲಿ ಚನ್ನಾಗಿ ಸಿಗುತ್ತೆ ಮತ್ತೆ ನಾನು ಸ್ಥಿತಿವಂತರೊಬ್ಬರ ಮನೆಲಿ ಹೊಂದಿಕೊಂಡು ಬದುಕು ಮಾಡ್ತಿನಿ ಹಾಗಾಗಿ ನನಗೆ ಕಾಳು ಕಡಿ ಮತ್ತೆ ದಿನಕ್ಕೆ ನೂರರಿಂದ ನೂರೈವತ್ತು ರೂಪಾಯಿಯನ್ನು ಕೆಲಸದ ಮೇಲೆ ಹಣವನ್ನು ನೀಡ್ತಾರೆ. ಹಾಗಾಗಿ ಬದುಕು ಹಸನಗಿ ಇದೆ. ಏನು ಮಾಡೋದು

ಮಕ್ಕಳಾದ್ರು ಇದ್ದಿದ್ದರೆ ಅವುಗಳ ಮುಖನಾದ್ರು ನೋಡಿ ಖುಷಿ ಪಡಬಹುದಿತ್ತು, ಅವುಗಳಿಗಾದ್ರು ಎಜ್ಯುಕೇಶನ್ ಕೊಡಸಬೇಕೆಂ ಆಸೆ ಇತ್ತು. ದೇವರು ಇದೆಲ್ಲ ನೋಡಿ ಇಂತವರಿಗೆ ಮಕ್ಕಳು ಕೊಟ್ರೆ ಅವು ಕೂಡ ಇವರಂಗಾಗ್ತವಂತೆನಾದ್ರು ನನಿಗೊಂದು ಹೊಟ್ಟ್ಯಾಗ ಹುಳನು ಕೊಟ್ಟಿಲ್ಲ ಅನ್ನುಸತ್ತೆ ಇನ್ನೊಂದು ಕಡೆ ನಾನು ಪಡೊ ಕಷ್ಟ ಅವುಕ್ಕಯಾಕ ಇರೊಷ್ಟುದಿನ ಇದ್ದು ಸಾಯಬೇಕು ಅನ್ನುಸತ್ತೆ. ಆಕಡೆ ಅಪ್ಪನ ಮನೆಗೆ ಹೋಗಾನಂದ್ರೆ ಈ ಕಡೆ ಕುಡುಕ ಗಂಡ ಹೋದ್ರು ಎರಡು ದಿನ ಚಂದ ಹಾಗಾಗಿ ಅಲ್ಲಿಗೂ ಹೋಗಂಗಿಲ್ಲ. ಒಮ್ಮೊಮ್ಮೆ ಮಕ್ಕಳಾಸ್ಪತ್ರೆಗೆ ತೋರಿಸಿಕೊಳನಾ ಅನ್ನಸತ್ತೆ ಆದ್ರೆ ದುಡ್ಡಿನ ಸಮಸ್ಯೆ. ದುಡಿದ ಹಣವೆಲ್ಲ ಮನೆ ಬಾಡಿಗೆ ಈತನ ಬಾಯಾರಿಕೆ ತೀರಿಸಲು ಸಾಲದು ಬರುತ್ತದೆ. ಆ ಕಡೆ ನಮ್ಮಪ್ಪ ಅಮ್ಮನಿಗೂ ಆ ಚಿಂತೆ ಇಲ್ಲ. ನಾನೆಷ್ಟೊತ್ತಿದ್ದರೂ ಕೂಲಿನೇ ಮಾಡಬೆಕು ತಿನ್ನಬೇಕು ಒಂದಿನ ಅರಾಮಿಲ್ಲಂತ ಮನೆಗಿದ್ರೆ ಕರೆಂಟು ಬಿಲ್ಲು ಅದು ಇದು ಎಲ್ಲ ಸಮಸ್ಯೆ.

ನನ್ನ ಗಂಡನಿಗೆ ೩ ಎಕರೆ ಜಮೀನು ಇದೆ ಅದನ್ನ ನಮ್ಮತ್ತೆ ಮತ್ತು ಮಾವನಿಗೆ ಕೇಳಿದ್ರೆ ನಿನ್ನ ಗಂಡನಿಗೆ ಕುಡಿಯೋದು ಬಿಡೋಕೇಳು ನಂತರ ಜಮೀನು ಮನೆ ಎರಡು ಕೊಡ್ತಿವಿ. ನಾವು ಸಾಯೋವರೆಗೂ ಹೆಸರಿಗೆ ಮಾಡ್ಸಲ್ಲ. ನಮ್ಮನ್ನ ಚನ್ನಾಗಿ ನೋಡ್ಕೊಬೆಕು. ಅಲ್ಲಿವರೆಗು ಹಾಗೆ ಮಾಡ್ಕೊಂಡು ಹೊಗಿ ಬೆಕಾದ್ರೆ ಅಂತಾರೆ ಈ ಮಾರಾಯ ಕುಡಿಯೋದು ಬಿಡಲಿಲ್ಲ. ಅವರು ಜಮೀನೂ ಕೊಡಲ್ಲ. ನಾನಾದ್ರು ದುಡಿದಿದ್ದೆಲ್ಲ ನಿಮಗೆ ಕೊಡ್ತಿನಿ ಅತ್ತೆ ಮಾವ ಚನಾಗಿ ನೋಡ್ಕೊತಿನಿ. ಹೆಸರಿಗೂ ಬೇಡ ನಮ್ಮದೆ ಜಮೀನಿದ್ರು ಕೂಲಿ ಯಾಕೆ ಮಾಡ್ಬೇಕು ಅಂದ್ರೆ ಬದುಕೋಕೆ ಅಂತೆಳ್ತಾರೆ. ಹಾಗಾಗಿ ಹಣೆಲಿರೊದಿಷ್ಟು ದೇವರು ಕೊಟ್ಟಿಷ್ಟು ಮಾಡಿಕೊಂಡು ತಿನ್ನಾನು ಯಾವ ಮಕ್ಕಳು ಮರಿಗೆ ಮಾಡಬೇಕಾಗೈತಿ ಅಂತ ಎಲ್ಲ ಕೈಚೆಲ್ಲಿ ಕುಂತಿನಿ ಎಂದು ತಮ್ಮ ಅಳಲನ್ನು ಕಣ್ಣಂಚಿನ ನೀರಿನಲ್ಲೇ ಎಲ್ಲವನ್ನು ವ್ಯಕ್ತಪಡಿಸಿದರು. ಎಲ್ಲ ಇದ್ದು ಏನು ಇಲ್ಲವೆಂಬಂತೆ ಮೂರು ಎಕರೆ ಜಮೀನಿದ್ದರೂ ಕೂಲಿ ಹೋಗಿ ಜೀವನ ಮತ್ತು ತನ್ನ ಗಂಡನನ್ನು ಸಲಹುತ್ತಿರುವ ಮಹಿಳೆಯನ್ನು ಕಂಡರೆ ಕೂಲಿಯಮೇಲೆ ಇವರ ಬದುಕು ತುದಿಯಲ್ಲಿ ನಿಂತಿರುವುದನ್ನು ಕಾಣಬಹುದು.

ಪ್ರಕರಣ–೫

ಹೆಸರು	: ಮದ್ದಾನಮ್ಮ ಗಂಡ ಚನ್ನಪ್ಪ
ವಯಸ್ಸು	: ೨೮ ವರ್ಷ
ಗ್ರಾಮ	: ಹೊಸಹಟ್ಟಿ
ಗ್ರಾಮ ಪಂಚಾಯಿತಿ	: ಗುಂಡುಮುಣಗು
ವಿದ್ಯಾಭ್ಯಾಸ	: ೮ನೇ ತರಗತಿ

ನಮ್ದು ಕೂಡ್ಲಿಗಿ ತಾಲೂಕು ಊರು ಗುಂಡುಮುಣಗು ಚಿಕ್ಕಜೋಗಿಹಳ್ಳಿ ಹತ್ರ ನಮಿಗೆ. ನಾನು ಶಾಲಿ ಕಲಿತಿರದು ಎಂಟನೇ ತರಗತಿ. ನಮಿಗಾದ್ರು ಓದಾಕೆನು ಅಷ್ಟು ಬರಲ್ಲ. ಬಟ್ಟೆ ಊಟ ಕೊಡ್ತಾರಂತ

ಶಾಲಿಗೋಗತಿದ್ವಿ, ಮತ್ತೆ ಅಲ್ಲಿ ಒಂದೇ ಮೇಷ್ಟ್ರು ಇತ್ತು. ನಾನು ಅವಗೊಂದಿನ ಇವಗೊಂದಿನ ಶಾಲ್ಯಾಗೊಗತಿದ್ದೆ, ನಮ್ಮವ್ವ ಅಪ್ಪಗ ನಾನು ನಮ್ಮ ತಮ್ಮ ಇಬ್ರು ಮಕ್ಕಳಿದ್ವಿ ನಮ್ಮದು ಬಡ ಕುಟುಂಬ ಒಂದೆಕ್ರೆ ಹೊಲ ಐತೆ, ಎತ್ತು ಬಂಡಿ ಏನು ಇಲ್ಲ ಎರಡು ಹಸು ಒಂದೆಮ್ಮಿ ಇತ್ತು ಅವು ಕೊಟ್ಟ ಹಾಲಿನಿಂದ ಡೈರಿಗೆ ಹಾಕ್ತಿದ್ವಿ, ಅದ್ರಿಂದ ಸ್ವಲ್ಪ ಬಿಡಿಗಾಸು ಬರ್ತಿತ್ತು. ನಾವೆ ಹೊಲ ಮಾಡಕ ಅಷ್ಟು ಏನು ಇರಲಿಲ್ಲ ಬೇರೆರಿಂದ ಹೊಲ ಹೊಡಿಸಿ ದುಡ್ಡು ಕೊಡ್ತಿದ್ವಿ, ಜೊತಿಗೆ ಒಂದೆ ಎಕರೆ ಹೊಲ ಇದ್ದಿದ್ದರಿಂದ ನಮ್ಮೊಲದ ಕಳೆ ಗಿಳೆ ಅಂತ ಕೆಲಸ ಮುಗಿಸಿಗೆಂಡು ಬೆಳೆ ಅಷ್ಟೊ ಇಷ್ಟೊ ಬೆಳಿತಿತ್ತು ಅದಾದ ಮ್ಯಾಗ ನಮ್ಮೂರಗ ಬಾಳ ಜಮೀನಿರರಿಗೆ ನಾವು ಕೂಲಿ ಹೋಗ್ತಿದ್ವಿ, ನಮ್ ತಮ್ಮ ಹೊಲದ ಮಕ ನೋಡಿಲ್ಲ. ಅವನು ಗಂಡು ಮಗ ಅವ ಚನಾಗ ಹೋದಿದ್ರ ನಾಳೆ ದಿನ ನೀ ಗಂಡನ ಮನಿಯಾಗೋದ್ರು ಕರಿಯೋದು ಕಳುಸೋದು ಸೀರೆ ಗಿರೆ ತರೊದು ನಾಳೆ ನಿನಿಗೆ ಮಕ್ಕಳಾದ್ರ ಅವರಿಗೋದ್ನೋದು ಮಾಡ್ತನ ಅಂತ ಹೇಳಿ ಅವನಿಗೆ ಶಾಲಿ ಕಳುಸತಿದ್ರು. ನನಿಗೆ ಮಾತ್ರ ಬಟ್ಟೆ ಪುಸ್ತಕ ಕೊಡೊಮುಂದ ಶಾಲಿಗೆ ಕಳುಸತಿದ್ರು. ಆಮೆಲೆ ಹೊಲನೆ ಶಾಲಿ ನನಗ ಅಲ್ಲಿ ಕಳೆ ಕೀಳೊದು, ಶೇಂಗಾ ಕೀಳೊದು, ನವಣೆ ಕೊಯ್ಯೋದು ಅದೆ ಪಾಠವಾಗಿಬಿಟ್ಟಿತ್ತು. ಕೂಲಿಯಿಂದ ಬಂದ ರೊಕ್ಕದಾಗ ನನಿಗೊಂದು ಜತಿ ವರ್ಷಕ್ಕೊಂದು ಜತಿ ಬಟ್ಟೆ ನಮ್ಮೂರಗ ನಡಿಯ ಜಾತ್ರೆಗೊಂದು ಜತಿ ಕೊಡುಸತಿದ್ರು ಆಮೆಲೆ ಶಾಲೆಲಿ ಕೊಟ್ಟ ಬಟ್ಟೆನೆ ಗಟ್ಟಿ ಇರ್ತಾವಂತ ಅವ ಹೊಲಸಿ ಕೊಡಾಕಿ ಅಮ್ಮ ತಮ್ಮನಿಗೆ ಮಾತ್ರ ಹೊಸ ಬಟ್ಟೆ ಪಾಟಿ ಚೀಲ ಕೊಡಸಾರು ಆದ್ರು ನಾ ಸುಮ್ನಇರಕಿ ಯಾಕಂದ್ರ ಮನಿಯಾಗ ಕಷ್ಟೈತಂತ ಸುಮಾರು ಒಂದು ೧೭-೧೮ ವಯಸ್ಸಿನವರೆಗೂ ಕೂಲಿನಾಲಿ ಮಾಡಿ ಅಪ್ಪನ ಮನಿಯಾಗ ದುಡಿದೆ. ಇದ್ದದ್ದರಲ್ಲಿ ಅಪ್ಪ ಅಮ್ಮ ನಾನು ದುಡಿದು ಕೊಟ್ಟ ಹಣದಾಗ ಉಳಿಸಿ ಒಂದು ಜೊತಿ ಬೆಂಡಾಲಿ ನಾಕು ಮಾಮೂಲಿ ಸೀರೆ ಕಾಲುಂಗುರ ತಂದು ಮದುವೆ ಮಾಡಿದರು. ಅವರು ಎರಡೆಕ್ರೆ ಭೂಮಿ ಹೊಂದ್ಯಾರೆ ಆದರ ಇಬ್ಬರು ಗಮಡು ಮಕ್ಕಳು ಇದ್ರು ಅದರಲ್ಲಿ ಸಣ್ಣಾತನಿಗೆ ನನ್ನ ಮದವಿ ಮಾಡಿ ಕೊಟ್ರು. ಯಾಕಂದ್ರ ಅವರಿಗೆ ಹೆಣ್ಣು ಮಕ್ಕಳಿರಲಿಲ್ಲ ಹಂಗಾಗಿ ಯಾರು ಕಾಟ ಕೊಡಾರಿರಂಗಿಲ್ಲ ಅಂತ ತಿಳಿದು ನಮ್ಮಪ್ಪ ನನಿಗೆ ಮದುವಿ ಮಾಡಿ ಕೊಟ್ರು. ಒಂದು ವರುಷ ಆರು ತಿಂಗಳು ಎಲ್ಲರು ಚನಾಗೆ ಇದ್ರು ಆಮೆಲೆ ನನ್ಯಾರು ಸೇರಲಿಲ್ಲ ಯಾಕಂದ್ರ ನನ್ನ ಗಂಡನಿಗಿಂತ ದೊಡ್ಡಾತನ ಹೆಂಡತಿ ಮನೆಯವರು ಚನಾಗಿ ಇದ್ರು ಹಾಗಾಗಿ ಆ ಯಮ್ಮ ಕಾಳು ಅದು ಇದು ತರತಿದ್ಲು ನಾನೇನು ಮಾಡಲಿ ಸುಮ್ನೆ ಇರತಿದ್ದೆ. ಹಾಗಾಗಿ ಅತ್ತೆ ಮಾವ ಅವರಿಗೆ ಚನಾಗಿ ಮಾತನಾಡಿಸೂದು ಅವರೆ ಹೆಚ್ಚು ಅವಳಾದರೆ ಮನೆಗೆ ಸ್ವಲ್ಪ ಅದು ಇದು ತರ್ತಾಳೆ ನೀನೆನು ತರ್ತಿಯಾ ಅಂತ ಬೈತಿದ್ರು. ಬೆಳಗ್ಗೆ ಎಂಟು ಗಂಟೆಗೆಲ್ಲ ಹೊಲಸೇರಬೇಕಿತ್ತು ನನ್ನದು ಬೇಳಗಿನ ಊಟ ಮಧ್ಯಾನವಾಗ್ತಿತ್ತು. ಹೊಲದಲ್ಲಿ ಕತ್ತೆ ಹಾಗೆ ದುಡಿಯಬೇಕಿತ್ತು. ನಾನು ಸೊರಗಿ ಹೋಗಿದ್ದೆ. ನನ್ನ ಗಂಡನಾದರೂ ಎನು ಮಾಡ್ತರೆ ಪಾಪ ಅಪ್ಪ ಅಮ್ಮ ಹೇಳಿದಹಾಗೆ ಕೇಳಬೇಕಿತ್ತು. ಆಗ ನಾನು ಹೆರಿಗೆಗೆಂದು ತವರು ಮನೆಗೆ ಹೋದೆ ಅಲ್ಲಿ ಅಪ್ಪ ಅಮ್ಮನದು ಕಷ್ಟ. ತಮ್ಮ ಐಟಿಐ ಮಾಡಿ ಬೆಂಗಳುರಿಗೆ ದುಡಿಯಲು ಹೋಗಿದ್ದಾನೆ.

ಅವನಿಗೂ ಮದುವೆಯಾಗಿತ್ತು. ಮೊದಮೊದಲು ಚನ್ನಾಗಿದ್ದ ತಮ್ಮ ಹೆಂಡತಿ ಬಂದ ಮೇಲೆ ಸಿಟಿ ಜೀವನ ಸುಮ್ಮನಲ್ಲ ಖರ್ಚು ಬಾಳ ಅಂತ ಅವನು ಅಪ್ಪನಿಗೆ ದುಡ್ಡು ಕಳುಸುತ್ತಿಲ್ಲ. ಆಗ ಅಪ್ಪ ನಿನ್ನನ್ನೆ ಓದಿಸಬೇಕಿತ್ತು ಮಗಳೆ ತಪ್ಪು ಮಾಡಿದೆ ಅಂದರು ಆದದ್ದು ಆಯಿತು ಬಿಡಿ ಅಪ್ಪ ಅಂದು ಅವರನ್ನು ನಾನೆ ಸಮಾಧಾನ ಮಾಡಿದೆ ತಮ್ಮನೂ ಕೂಡ ಅವರ ಆಸೆಯನ್ನು ನಿರಾಸೆ ಮಾಡಿದ. ನಂತರ ನಾನು ನನ್ನ ಕಷ್ಟ ಅಪ್ಪನಿಗೆ ಹೇಳಿದೆ. ಅವರು ನನ್ನದು ಹೆರಿಗೆ ಆಗುವವರೆಗೂ ಸುಮ್ಮನಿದ್ದರು, ನನಗೂ ಗಂಡು ಮಗು ಆಯಿತು. ನನ್ನ ಗಂಡ ಬಿಟ್ಟರೆ ಅವರ ಮೆಯವರ್‍ಯಾರು ಬಂದು ನೊಡಲಿಲ್ಲ ಆಗ ಅಪ್ಪ ನಮ್ಮ ಪಾಲಿಗೆ ಬರಬೇಕಿದ್ದ ಹೊಲವನ್ನು ಕೊಡಿಸಿದರು ನಾನು ನನ್ನ ಗಂಡ ಮತ್ತು ಮಗ ಬ್ಯಾರೆ ಅದಿವಿ. ಅಪ್ಪ ಅಮ್ಮನೂ ಹೊಲದಲ್ಲಿ ಹೆಚ್ಚು ಕೆಲಸವಿದ್ದಾಗ ಬಂದು ಮಾಡಿ ಹೋಗ್ತಾರೆ. ಆದರೂ ನಮ್ಮದೇನು ಒಂದು ಬಿಡಿಗಾಸಿನೋಟು ಹೊಲ ಹಾಗಾಗಿ ಅದರಿಂದ ಬಂದ ಹಣ ಮಗನ ಓದು, ಕರೆಂಟು ಬಿಲ್ಲು, ಸೊಪ್ಪು ತರಕಾರಿ, ರೇಷನ್ ಅಂತ ಸಾಲಂಗಿಲ್ಲ ಹಂಗಾಗಿ ಕೂಲಿನೂ ಹೋಗಿ ಜೀವನ ನಡೆಸಾಕತ್ತಿನಿ, ಆದರೆ ಮಳೆ ಸರಿಯಾಗಿ ಬರದೆ ಕೈ ಕೊಟ್ಟರೆ ಒಮ್ಮೊಮ್ಮೆ ಅತಿಯಾದ ಮಳೆಯಿಂದಲೂ ಬೆಳೆ ಕೈ ಸಿಗುವುದಿಲ್ಲ ಅನ್ನುವ ಅಳಲನ್ನು ತೋಡಿಕೊಳ್ತಾರೆ. ಇದನ್ನು ಕಂಡರೆ ಬದುಕಿನ ಅವಶ್ಯಕವಾಗಿ ಕೂಲಿಯನ್ನೂ ಆಧರಿಸಿರುವುದು ಕಂಡುಬರುತ್ತದೆ.

ಪ್ರಕರಣ–೬

ಚಂದ್ರಮ್ಮ ಗಂಡ ಮಲ್ಲಿಕಾರ್ಜುನ

ವಯಸ್ಸು : ೫೮

ವೃತ್ತಿ : ಕೃಷಿ ಕೂಲಿ

ಊರು : ಕೂಡ್ಲಿಗಿ ಪಟ್ಟಣ

ನನ್ನ ಹೆಸರು ನಾಗಮ್ಮ ನಾನು ೬ ನೆ ಕ್ಲಾಸು ಕಲಿತಿನಿ ಅದುಕ್ಕ ಮೇಲೆ ನಮ್ಮಪ್ಪರು ಶಾಲಿಗೆ ಕಲಿಸಲಿಲ್ಲ ನಾನು ಸೈನುಗಿನು ಮಾಡ್ತಿನಿ. ಒಂದೊಂದು ಅಕ್ಷರ ಓದುತಿನಿ ಓದಾಕು ಬರ್‍ತೆ ಶಾಲಿ ಕಲಿಯಾಕ ಇಷ್ಟ ಇತ್ತು ಆದ್ರು ನಮ್ಮಪ್ಪ ಕಲಿಸಲಿಲ್ಲ ಮನಿ ಬಿಟ್ಟು ಎರಡು ಮೂರು ಕಿ. ಮೀ ದೂರ ಹೋಗಾಕಿತ್ತು ಹಂಗಾಗಿ ಮನ್ಯಾಗ ಕಲಿಸಲಿಲ್ಲ. ನಾನು ಸಣ್ಣಾಳಿದ್ದಾಗ್ಲಿಂದ ನಮ್ಮಮ್ಮನ ಜೊತಿ ಹೊಲುಕ್ಕ ಬುತ್ತಿ ಕೊಡಾಕು ಅಂತ ಹೊಲುಕ್ಕೋಕಿದ್ದೆ ನಾವು ೪ ಜನ ಹೆಣ್ಮಕ್ಳು ಗಂಡು ಮಕ್ಕಳು ಬೇಕಂತ ನಮ್ಮಪ್ಪ ಅವ್ವ ಹಂಗಾಗಿ ನಾವು ಬರಿ ಹೆಣ್ಮಕ್ಳಾದಿವಿ ನಾನ ಸಣ್ಣಾಕಿ ಅಕ್ಕರದು ಮದುವಿ ಮಾಡಿ ಕೊಟ್ರು ಅದು ಸಾಲ ಆಗಿತ್ತು ಅಂಗಾಗಿ ನಾನು ಶಾಲಿ ಹೋಗಲಿಲ್ಲ ಕಳಿ ಕೀಳಾಕ ಹೊಲದ ಕೆಲಸಕ್ಕ ಹೊಂದಿಕೆಂಡಿನಿ ಆಮೆಲೆ ನನಿಗು ಕೂಡಿ ಬಂತು ನಮ್ಮಕ್ಕರ ಮದುವಿಗೆ ಮಾಡಿದ ಸಾಲ ಎಲ್ಲ ಅಪ್ಪ ಅಮ್ಮ ನಾನು ತೀರಿಸಿದ್ವಿ ಆಮೆಲೆ ಕೂಡಿಟ್ಟ ದುಡ್ಡಿನ ಜೊತಿಗೆ ನಮ್ಮಮ್ಮ ಸಂಘದಾಗೆ ಸಾಲ ಮಾಡಿ

ಮದುವಿ ಮಾಡಿದ್ರು ನನ್ನ ಗಂಡನ ಮನೆರು ಹೊಲದಾಗೆ ದುಡುದು ತಿನ್ನದು ಹಾಮಗಾಗಿ ಇಲ್ಲಿ ಹೊಲದ ಕೆಲಸನೆ ಮಾಡ್ತಿನಿ. ಆದ್ರೆ ನಮ್ಮಪ್ಪರ ಮನೆಗೆ ಮಾಡಿದಷ್ಟು ಕೆಲಸ ಏನಿರಲಿಲ್ಲ ಹಿಂಗೆ ದಿನ ಕಳೆದು ಹೋದವು ನನಿಗೂ ಮದುವೆ ಆಗಿ ೬–೭ ವರ್ಷ ಆದ್ರು ಮಕ್ಕಳಾಗಲಿಲ್ಲ ಗಂಡನ ಮನಿಯಾಗ ದಿನ ಬೈಯ್ಯದು ಆಮೆಲೆ ಬ್ಯಾರೆ ಹುಡುಗಿ ನೋಡಿ ನನ್ನ ಗಂಡಗ ಮದುವಿ ಮಾಡಿದ್ರು ಈಗ ಎರಡು ಗಂಡು ಒಂದು ಹೆಣ್ಣು ಮಕ್ಕಳಾಗೆವೆ ಅವುರು ನನ್ನ ಚನಗೆ ಮಾತಾಡುಸ್ತಾರೆ ಎಲ್ಲರು ಕೂಡಿ ಚನಗೇ ಇದಿವಿ, ಮಕ್ಕಳು ಓದತದವೆ ಮುಂದೆ ಅವುರಿಗೆ ಚನಾಗ ದೊಡ್ಡ ಓದು ಓದುಸ್ಬಕಂತ ದುಡಿತದಿವಿ ನಮ್ಮ ತಂಗಿಗೆ ಹೊಲದ ಕೆಲಸ ಅಷ್ಟು ಬರಲ್ಲ, ನಾನೆ ಎಲ್ಲ ಮಾಡ್ತೀ ನಿ ಮನಿಯಾಗಿನ ಕೆಲಸ ಮಾಡಿ ಹೊಲಕ್ಕ ಉಣ್ಣಾಕ ಮಾಡಿಕೆಂಡು ಬರ್ತಾಳೆ. ಈಗೀಗ ಸ್ವಲ್ಪ ಕೆಲಸ ಮಾಡಾದು ಕಲುತಾಳೆ ನನ್ನ ಗಂಡ ಅಷ್ಟಕ್ಕಷ್ಟೆ ಅವರಿಗೂ ಹೊಲದ ಕೆಲಸ ಗೊತ್ತಿಲ್ಲ, ನಮ್ಮಾವ ಬ್ಯಾಸಾಯ ಚನಾಗೆ ಮಾಡ್ತಾರೆ ಹಂಗಾಗಿ ಇವರು ಕೂಡ ಅಲ್ಪಸಲ್ಪ ಕೆಲಸ ಮಾಡ್ತಾರೆ. ನಮ್ಮತ್ತೆ ನಾನು ಇಬ್ರು ಜಾಸ್ತಿ ಹೊಲದ ಕೆಲಸ ಮಾಡ್ತೀವಿ. ಹೇಳಿಕೆಳಾ ಅಷ್ಟೇನು ಹೊಲ ಇಲ್ಲ ಮೂರು ಎಕರೆ ಐತಿ ಹಂಗಾಗಿ ನಮ್ಮದು ಹೊಲದ ಕೆಲಸ ಆದಷ್ಟು ಜಲ್ದಿ ಮುಗಿಸಿ ಬ್ಯಾರೆ ಹೊಲಕ್ಕೂ ಕೂಲಿ ಹೋಕಿನಿ. ನಮ್ಮದು ನೀರಾವರಿ ಅಲ್ಲ ಬರಿ ಬೆದ್ದಲು ಹಂಗಾಗಿ ನೀರಾವರಿ ಇರರು ಬಾಳ ಮಂದಿ ಅದಾರ ಅವರ ಹೊಲಕ್ಕ ನಾನು ಹುಳಗಡ್ಡೆ ಕಳೆ ಕೀಳಾಕ ಸೊಪ್ಪು ಕೀಳಾಕ ತರಕಾರಿ ಕೀಳಾಕ ಹೋಕಿನಿ ಯಾಕಂದ್ರ ದುಡಿಯಾರು ಒಂದಿಬ್ರು ಆದ್ರ ಕುಂತು ತಿನ್ನಾರು ಹತ್ತು ಮಂದಿ ಆದ್ರ ಹೆಂಗ ಹುಡುಗ್ರು ಶಾಲಿ ಫೀಸು ಕಟ್ಟಾಕು ಬ್ಯಾರೆ ಸದುಕ್ಕ ಕೂಲಿನು ಹೊಕ್ಕೀನಿ ಮತ್ತೆ ಬಾಳ ಬಿಡುವು ಇದ್ರ ಕಟ್ಟಿಗೆ ಮಾಡಾಕ ಹೊಕ್ಕಿನಿ ಯಾಕಂದ್ರ ನಮ್ಮನಿಗುಳಗ ರೊಟ್ಟಿ ಮುದ್ದೆ ಜಾಸ್ತಿ ಮಾಡಾದು ಸಿಲೆಂಡ್ರು ರೇಟು ಜಾಸ್ತಿ ಆಗೆತಿ ಸದಕ ನಾವು ಹೊಲೆ ಮ್ಯಾಲೆ ಅಡಿಗೆ ಮಾಡ್ತೀವಿ, ಹಂಗ ಹೊಲುದ್ದು ಜತಿ ಕುರಿಗುಳದಾವ ೪ ಅವುನ್ನು ನೋಡಿಕೆಂಡು ಹೊಗ್ತಿನಿ ಮನ್ಯಾಗ ಎಲ್ಲರು ಚನಗದಿವಿ ನಮ್ಮತ್ತೆ ಮಾವನು ಚನಗದರ ಮದ್ಲಿಗೆ ಮಕ್ಕಳಾಗಲಿಲ್ಲಂತ ಸರಿಗೆ ಮಾತಡ್ತಿರಲಿಲ್ಲ. ಆಮೆಲೆ ನಾನೆ ಇನ್ನೊಂದು ಮದುವಿ ಮಾಡ್ರಿ ಅಂತ ಹೇಳಿ ಮಾಡಿಸಿದ್ವಿ ಇವಗ ಮಕ್ಕಳು ಅದಾವ ನಾವು ಎಲ್ಲರು ಕೂಡಿ ಚನಾಗದಿವಿ. ಇವಗ ಹೊಲನೆ ಕೂಲಿನಿ ನಮಿಗೆ ಆಧಾರ ಆಗೆತಿ ನೋಡಪ ಎಂದು ಉತ್ತರಿಸಿದ ಮಹಿಳೆ ಕೃಷಿ ಮಾಡುವುದನ್ನು ಖುಷಿಯಿಂದಲೇ ಹೇಳಿಕೊಂಡರು ಏಕೆಂದರೆ ಅವರಿಗೆ ಕೃಷಿಯೇ ಜೀವಾಳವಾಗಿರುವುದನ್ನು ಕಾಣಬಹುದಾಗಿದೆ.

ಪ್ರಕರಣ–೭

ಹೆಸರು : ರುದ್ರಮ್ಮ ಗಂಡ ರೇವಣಪ್ಪ

ವಯಸ್ಸು : ೩೬

ವೃತ್ತಿ : ವ್ಯವಸಾಯ

ಊರು : ಜರ್ಮಲಿ

ಜೊತಿಗೆ ಒಂದೆರಡು ಜೆರ್ಸಿ ಆಕಳ ಮಾಡಿಕೆಂಡಿವಿ ಅವುನ್ನು ಮೇಸಿಗೆಂಡು ಹಾಲನ್ನ ಡೈರಿಗೆ ಹಾಕ್ತಿನಿ ಹಿಂಗೆ ಜೀವನ ಸಾಗುತಿದೆ. ಈಗ ಒಂದು ವರ್ಷ ಆಯ್ತಿಗ ಅಜ್ಜಿನು ತೀರಿಹೋದ್ರು ನಾನೊಬ್ಬಳೆ ಇದೇ ಕೂಲಿ ನಾಲಿ ಮಾಡಿ ಅಕ್ಕನ್ನ ನೋಡಿಕಕೆಂಡು ಜೀವನ ಸಾಗಿಸ್ತಿದಿನಿ.

ನನ್ನ ಹೆಸರು ರುದ್ರಮ್ಮ ನಾನು ೬ ನೇ ತರಗತಿ ಓದಿನಿ ನಮ್ಮಮ್ಮ ನಾನು ಸಣ್ಣವಳಿದ್ದಾಗಲೇ ಸತ್ತು ಹೋದರು ನಮ್ಮಪ್ಪನು ನನ್ನ ಬಿಟ್ಟು ಬ್ಯಾರೆ ಊರಿಗೆ ಹೋದ್ರು ನಮ್ಮ ದೊಡ್ಡಮ್ಮ ಆಮೆಲೆ ನನ್ನ ನೋಡಿಕೆಂಡಿದ್ದು ಅದಾದ ಮೇಲೆ ನಾನು ಮುಂದುಕ್ಕೂ ಶಾಲೆಗೆ ಹೋಗಲಿಲ್ಲ ಮೇಲಾಗಿ ನನ್ನನ್ನ ಕೂಲಿ ಕಳಿಸಿದ್ರು ನನಿಗೆ ಅಲ್ಲಿ ಸರಿ ಹೋಗದಿದ್ದಕ್ಕೆ ನಮ್ಮಮ್ಮನ ತಾಯಿ ಹತ್ತಿರ ನಾನು ಅಂದರೆ ನಮ್ಮಜ್ಜಿ ಬೇರೆ ಮನೆ ಮಾಡಿಕೆಂಡು ಇದ್ದೆ ನಾನೆ ನಮ್ಮಜ್ಜಿ ಹೆಸರಿನಲ್ಲಿ ೪ ಎಕರೆ ಹೊಲ ಇತ್ತು ಅದನ್ನೆ ಶೇಂಗಾ ರಾಗಿ ಏನಾದ್ರು ಬೆಳಿತಿದ್ದೆ ಬಂದ ಬೆಲೆಯಿಂದ ನಾನು ಅಜ್ಜಿ ಜೀವನ ಸಾಗಿಸ್ತಿದ್ವಿ, ನನಿಗೆ ಮದುವೆ ಆಗಿಲ್ಲ. ಯಾಕಂದ್ರೆ ನಮ್ಮಜ್ಜಿ ಮದುವೆ ಮಾಡ್ತೀನಿ ಅಂದ್ರು ನನಿಗೆ ಇಷ್ಟ ಇರಲಿಲ್ಲ ಹಂಗಾಗಿ ಮದುವೆ ಆಗಿಲ್ಲ, ನಮ್ಮಪ್ಪನು ಕುಡಿತರೆ ನಮಿಗೆ ಒಂದು ದಿನನು ಚನಾಗಿ ನೋಡಿಕೆಂಡಿಲ್ಲ ಎಲ್ಲ ನಮ್ಮಮ್ಮನೆ ನೋಡಿಕೊಳ್ಳುತಿದ್ರು ಆಮೆಲೆ ನಮ್ಮಮ್ಮಗೆ ಹೊಡಿಯೋದು ಹಿಂಗೆ ದಿನಾ ಆಗಿ ನಮ್ಮಮ್ಮಗೆ ಹೊಟ್ಟೆ ನೋವು ಬಂದು ಸತ್ತೊದ್ರು ನಾವು ಇಬ್ಬರು ಹೆಣ್ಣು ಮಕ್ಕಳಿದ್ವಿ ನಾನೆ ಸಣ್ಣವಳು ನಮ್ಮಕ್ಕನಿಗೆ ನಮ್ಮ ಅಮ್ಮನ ತಮ್ಮಂದಿರು ೪ ಜನ ಅವರೆ ಎಲ್ಲರು ಸೇರಿ ಮದುವೆ ಮಾಡಿದ್ರು ಮೊದಲಿಗೆ ಅವರು ಚನಾಗೆ ಇದ್ರು ಆಮೆಲೆ ನಮ್ಮಕ್ಕನ ಗಂಡಾನು ಕುಡಿಯೋಕೆ ಶುರುಮಾಡಿದ ಅಕಿ ಜೀವನನು ಕಷ್ಟ ಆಯ್ತು ಅದಾದ ಮೇಲೆ ಆಕಿನು ಇರ ಎರಡು ಎಕರೆಗೆ ಜೋಳ ಶೇಂಗಾ ಬಿತ್ತಿ ಬಂದ ಹಣದಾಗೆ ಆತನಿಗೆ ಕುಡಿಯೋಕು ಕೊಟ್ಟು ಬೇರೆರ ಹೊಲಕ್ಕೂ ಕೆಲಸಕ್ಕೆ ಹೋಗುತಿದ್ಲು ಕುಡಿಯೋಕೆ ಕೊಡದಿದ್ರೆ ದಿನಾ ಹಿಡಿದು ಬಡಿಯೋದು ಬಾಯಿಗೆ ಬಂದಂಗೆ ಮಾತಾಡೋದು ದಿನಾ ಇದೇ ಕತೆ ಇರಾಕೆ ಗುಡಿಸಲು ಮನೆ ಮಳೆ ಬಂದ್ರೆ ನೀರೆಲ್ಲ ಒಳಗೆ ಹಿಂಗೆ ಜೀವನ ಇಂತ ಕಷ್ಟದಾಗೆ ಇರ ಎರಡು ಗಂಡು ಮಕ್ಕಳನ್ನ ಓದಿಸಿದ್ಲು ಎರಡು ವರ್ಷ ಆತು ಆತನೂ ತೀರಿ ಹೋದ ಈಗ ಅವಳು ಕೂಲಿನೆ ಮಾಡ್ತಾಳೆ, ಇನ್ನು ಇದೆಲ್ಲ ನೋಡಿ ನನಿಗೆ ಮದುವೆನೆ ಬ್ಯಾಡ ಅನಿಸಿ ಮದುವೆನು ಆಗಿಲ್ಲ, ಈಗ ಬೆದ್ದಲು ಹೊಲ ಮಾಡಿಕೆಂಡು ಹೋಗ್ತೀನಿ ಜೊತಿಗೆ ಇಲ್ಲಿ ರೇಷ್ಮೆ ಬೆಳೆ ಬೆಳೆತರೆ ರೇಷ್ಮೆ ಹುಳ ಎಲ್ಲ ನೋಡಿಕೆಣಕೆ ಆಳುಗುಳು ಬಾಳ ಮಂದಿ ಬೇಕು ಅದಿಕೆ ನಾವು ಹೋಗ್ತೀವಿ ಗುತ್ತಿಗೆ ಹಿಡಿದು ಐದಾರು ಹೆಣ್ಮಕ್ಳು ಅದೇ ಕೆಲಸ ಮಾಡ್ತಿವಿ ತಿಂಗಳಿಗೆ ಇಷ್ಟಂತ ಹಣ ಕೊಡ್ತಾರೆ, ಬಂದ ಹಣದಲ್ಲಿ ಜೀವನ ಸಾಗಿದ್ತೀನಿ ಅಕ್ಕನ್ನ ಕರಿಯಾದು ಕಳುಸಾದು ಎಲ್ಲ ನಾನೆ ಮಾಡ್ತೀನಿ ಹೊಲದಾಗಿನ ಕೆಲಸದ ಜೊತೆಗೆ ರೇಷ್ಮೆ ಕೆಲಸಾನು ಮಾಡ್ತೀನಿ ಕೂಲಿನೂ ಹೋಗ್ತೀನಿ, ಹಂಗೆ ಎರಡು ಜೆರ್ಸಿ ಆಕಳ ಮಾಡಿಕೆಂಡಿನಿ ಬಂದ ಹಾಲನ ಡೈರಿಗೆ ಹಾಕ್ತೀನಿ ಅದು ಒಂದಿಷ್ಟು ಹಣ ಬರುತ್ತೆ ಒಬ್ಬಳೆ ಜೀವನ ನಡೆಸತಿದಿನಿ ಅಜ್ಜಿನು ಈಗ ಒಂದು ವರ್ಷ ಆಯ್ತು ತೀರಿ ಹೋದ್ರು ಈಗ ಕೂಲಿ ಮಾಡಿ ಜೀವನ ನಡೆಸತಿದಿನಿ.

ಪ್ರಕರಣ–೮

ಹೆಸರು : ಮಹಾಲಕ್ಷ್ಮೀ ಗಂಡ ಮಲ್ಲಪ್ಪ

ವಯಸ್ಸು : ೩೨

ವೃತ್ತಿ : ವ್ಯವಸಾಯ ಕೃಷಿಕೂಲಿ

ಊರು : ಹಾಲಸಾಗರಹಟ್ಟಿ

ನನ್ನ ಹೆಸರು ಮಹಾಲಕ್ಷ್ಮೀ ಎಲ್ಲರು ಲಕ್ಷ್ಮೀ ಅಂತರ ನಾನು ಶಾಲೆನೆ ಕಲುತಿಲ್ಲ ಸಹಿನು ಮಾಡಕ ಬರಲ್ಲ ಹೆಬ್ಬೆಟ್ಟು ನನ್ನದು ಇದೇ ಗಂಡನ ಮನೆ ಇದೇ ತವರ ಮನೆ ನಮ್ಮಮ್ಮನ ತಮ್ಮನಿಗೆ ನನ್ನನ್ನ ಕೊಟ್ಟಾರ ನಾವು ೭ ಜನ ಹೆಣ್ಮಕ್ಕಳು ನಾನು ಆರನೆಯವಳು ನಮ್ಮಪ್ಪರಿಗೆ ಬಾಳ ಕಷ್ಟ ಇತ್ತು ಹಂಗಾಗಿ ಶಾಲಿಗು ಕಳಿಸಿಲ್ಲ. ನನಿಗೆ ಒಂದು ಹದಿನಾರು ವಯಸ್ಸಿದ್ದಾಗ ನನ್ನನ್ನ ಮದುವೆ ಮಾಡಿದ್ರು ನನಿಗೆ ಅಷ್ಟೇನು ತಿಳಿತಿರಲಿಲ್ಲ. ಇಲ್ಲಿನು ನನ್ನ ಗಂಡನ ಮನೆಲೆ ಕೃಷಿ ಮಾಡ್ತಾರೆ, ಅವರು ಇಬ್ಬರು ಗಂಡು ಮಕ್ಕಳು ನಾವು ಬ್ಯಾರೆ ಆಗಿವಿ ಹೊಲದ ಕೆಲಸ ನನ್ನ ಗಂಡನಿಗೆ ಬರಲ್ಲ. ಹಂಗಾಗಿ ಕುರಿ ಮಾಡಿಕೊಟ್ಟೀವಿ ಕುರಿ ಸಾಕ್ತಾನ. ನಾನು ಹೊಲದ ಕೆಲಸ ಎಲ್ಲ ಮಾಡ್ತೀನಿ ನಮ್ಮದು ಬಾಳ ಕಷ್ಟ. ನಮಿಗು ಈಗ ನಾಕು ಹೆಣ್ಣು ಅದಾವೆ ಗಂಡು ಹುಡುಗ ಬೇಕಂತ ಬಿಟ್ಟು ಒಟ್ಟು ೮ ಜನ ಮಕ್ಕಳು ಇದ್ದವು ಅವು ಹೆಣ್ಣು ಮೊದಲು ಎರಡು ತೀರಿದವು ಹುಟ್ಟಿ ಆಮೆಲೆ ಮೂರನೆದು ಉಳಿತು ನಾಕನೆದು ಐದನೆದು ತೀರಿದವು ಏಳನೆದು ಉಳಿತು ಎಂಟನೆದು ಗಂಡು ಮಗ ಆತು ಅವು ಇನ್ನ ಸಣ್ಣವು ಓದತದಾವೆ ನಮ್ಮತ್ತರ ದುಡ್ಡಿಲ್ಲ ಹಂಗಾಗಿ ಅವು ತಿಳದಾಗ ಶಾಲಿಗೋಕ್ತವೆ ಇಲ್ಲಂದ್ರೆ ಇಲ್ಲ ನಾನು ಕೂಲಿಗೆ ಹೋಗ್ತೀನಿ ನಮ್ಮ ಹೊಲನು ನಾನೆ ಮಾಡಿಸ್ತೀನಿ ನನ್ನ ಗಂಡಗ ಬೇಸಾಯ ಕೂಲಿ ಏನು ಗೊತ್ತಿಲ್ಲ ನಾನೆ ಎಲ್ಲ ನೋಡಿಕೆಂಡು ಹೋಗ್ತೀನಿ ನಮ್ಮದು ನೀರಾವರಿನು ಐತೆ ಅದರಲ್ಲಿ ತರಕಾರಿನು ಬೆಳಿತಿನಿ ಅದು ಮನೆ ಸ್ವಾಮಾನಕ್ಕ ಸರಿಹೋಗ್ತತೆ ಅದರು ಜೊತೆಗೆ ಈಚಲು ಪೊರಕೆ ಬರಲು ಪೊರಕೆ ಕಟ್ಟಿ ಮಾರ್ತೀನಿ. ಬ್ಯಾರೆರ ಹೊಲಕ್ಕೂ ಕೂಲಿ ಹೋಗ್ತೀನಿ, ಇಲ್ಲಿ ಎಲೆ ತೋಟ ಅದಾವೆ ಎಲೆನೂ ಕೀಳಾಕ ಹೋಗತೀನಿ ಅಂದರೆ ಕಾಲಿ ಕುಂದ್ರಲ್ಲ ಏನಾದ್ರು ಮಾಡ್ತೀನಿ. ಗದ್ದೆ ಹಚ್ಚಕ ಹೋಗ್ತೀನಿ ನನ್ನ ಮಗನ್ನ ಚನಾಗೆ ಓದಸ್ಬೇಕು ಅಂತ ದುಡ್ಡು ಕೂಡಿಹಾಕ್ತದಿನಿ ಹೆಣ್ಮಕ್ಕಳು ಕೊಟ್ಟಮನಿಗೆ ಹೋಗ್ತಾರೆ ಅವರದೆಂಗೊ ಹಾಗ್ತತೆ ಇವನನ್ನ ಚನಾಗೆ ಕಲಿಸಬೇಕು ಅಂತ ಹಗಲು ರಾತ್ರಿ ಜೀವ ತೇದು ದುಡಿತದಿನಿ ಕೂಲಿನಗೆ ಬಾಳು ನಿಂತತೆ ನೋಡಬೇಕು ಏನು ಮಾಡಬೇಕು ಅಂತ ಎನ್ನುವ ಮಾತನ್ನು ಮಹಿಳೆ ಅಸಹಾಯಕತನದಿಂದ ಹೇಳಿರುವುದನ್ನು ನೋಡಬಹುದು ಹುಟ್ಟಿದ ಮನೆಯಿಂದ ಹಿಡಿದು ಹೋದ ಮನೆಯಲ್ಲೂ ಕೂಲಿಯನ್ನೇ ವೃತ್ತಿಯನ್ನಾಗಿಸಿಕೊಂಡು ಬದುಕುತ್ತಿರುವುದನ್ನು ಕಾಣಬಹುದು.

ಪ್ರಕರಣ–೯

ಹೆಸರು : ನಾಗಮ್ಮ ಗಂಡ ಬಸಣ್ಣ

ವಯಸ್ಸು : ೩೭

ವೃತ್ತಿ : ಕೃಷಿಕೂಲಿ

ಊರು : ಮಡಕುಲ ಕಟ್ಟೆ

ನನ್ನ ಹೆಸರು ಚಂದ್ರಮ್ಮ ನಾನು ನಾಕನೇ ಕ್ಲಾಸು ಕಲಿತಿನಿ ನನ್ನ ಗಂಡ ಏನು ಕಲಿತಿಲ್ಲ. ಆತ ಸಣ್ಣಾನಿದ್ದಾಗಿನಿಂದ ವ್ಯವಸಾಯ ಮಾಡಿಕೆಂಡು ಬಂದಾರೆ ನಾನು ಮದುವೆ ಆದಾಗ ನನಿಗೆ ವಯಸ್ಸು ಹದಿನಾರು ಇತ್ತು ನನ್ನ ಗಂಡನಿಗೆ ೨೭ ವಯಸ್ಸಿತ್ತು ಅಲ್ಲಿ ನಮ್ಮನೆಯಾಗ ಕಷ್ಟ ಹಂಗಾಗಿ ಇವರು ಏನು ವರದಕ್ಷಿಣೆ ಬ್ಯಾಡ ಎಲ್ಲ ನಮ್ಮದ ಖರ್ಚು ಅಂದುದ್ದಕ ನಮ್ಮಪ್ಪ ಅಮ್ಮ ಮದುವೆಮಾಡಿ ಕೊಟ್ಟರು. ನಾನು ಹೊಲದ ಕೆಲಸ ಮಾಡುತದ್ದೆ ನನಗೆ ಮೂರು ಜನ ಹೆಣ್ಣು ಮಕ್ಕಳು ಅವರಿಗೂ ಒಳ್ಳೆ ಮನೆ ಸೇರಿಸಿದಿವಿ. ಆದರೆ ಅವರಿಗೆ ಹೊಲದ ಕೆಲಸ ಏನು ಇಲ್ಲ ಚನಾಗೆ ಇರುವವರಿಗೆ ಕೊಟ್ಟೇವಿ ದೊಡ್ಡಮಗಳು ಮಾತ್ರ ಹೊಲದ ಕೆಲಸ ಮಾಡುಸ್ತಾಳೆ. ಈಗ ಮದುವೆಗೆ ಅಂತ ಮಾಡಿದ ಸಾಲ ತೀರಿಸಾಕ ಹೊಲದಗ ಮನೆ ಮಾಡಿ ಹೊಲದ ಕೆಲಸ ಮಾಡತದಿವಿ, ಈಗ ಆಗಲೆ ನನ್ನ ಗಂಡನ ಕೈಲಿ ಕೆಲಸ ಮಾಡಾಕೆ ಆಗಂಗಿಲ್ಲ ಮೊನ್ನೆ ಮೊನ್ನೆ ಮಗನಿಗೂ ಮದುವೆ ಮಾಡಿದ್ವಿ ಈಗ ಹೊಲದಲ್ಲಿ ನಾನು ನನ್ನ ಮಗ ಸೊಸೆ ಹೆಚ್ಚು ಕೆಲಸ ಮಾಡ್ತೀವಿ ನನ್ನ ಗಂಡ ದನ ಕರು ನೋಡ್ತಾರೆ. ನನಗಂತೂ ಪುರುಸೊತ್ತಿಲ್ಲ ಬೆದ್ದಲು ಎರಡು ಎಕರೆ ಭೂಮಿ ಇದೆ. ನೀರಾವರಿ ಎರಡು ಎಕರೆ ಭೂಮಿ ಇದೆ. ಆ ಎಲಸ ಮುಗಿದ್ರೆ ಇದು ಇದು ಮುಗಿದ್ರೆ ಅದು ಅನ್ನಂಗೆ ಹೊಲದಗೆ ಬಿಡುವಿಲ್ಲ ರೇಷ್ಮೆ ಬೇರೆ ಮಾಡಿದಿವಿ. ಅದು ಸೊಪ್ಪು ಕೊಯ್ಯೋದು ಹುಳ ಹಾಕೋದು ಗೂಡು ಬಿಡಿಸೋದು ಅಂತ ಪುರುಸೊತ್ತಿಲ್ಲ. ಬಿಡುವಿಲ್ಲದಂಗ ಕೆಲಸ ಅದಾದರೆ ಅದರ ಜೊತಿಗೆ ನವಣೆ ಕೊಯ್ಯೋದು ರಾಗಿ ಕೊಯ್ಯೋದು ಜೊತೆಗೆ ಕನಕಾಂಬರಿ ಹೂ ಬಿಡಿಸೋದು ಹೀಗೆ ಬಿಡುವಿಲ್ಲದಂಗೆ ಕೆಲಸ ಇದ್ದೆ ಇರ್ತದೆ. ನಾವು ಒಂದಿನ ಬಿಡುವು ಮಾಡನಂದರೆ ಮೈ ತುಂಬ ಸಾಲ ಮಕ್ಕಳ ಮದುವೆಗೆಂದು ಮತ್ತು ಅವರ ಬಾಣಂತನ ಆಮೇಲೆ ಮೊಮ್ಮಕ್ಕಳ ನಾಮಕರಣ ಅಂತ ದುಡ್ಡು ಹೊಳೆಲಿ ಹುಣಿಸೆಹಣ್ಣು ತೊಳೆದಂಗೆ ಆಗೋಯ್ತು ಹಾಗಾಗಿ ಹೊಲದ ಕೆಲಸ ಅನಿವಾರ್ಯ ಹೀಗೆ ಮಾಡದಿದ್ದರೆ ಸಾಲ ತೀರಲ್ಲ ಹಣ ಕೊಟ್ಟವರು ಮನೆ ಮುಂದೆ ಬಂದು ಕೂಡ್ತಾರೆ ನಮಿಗೆ ಹೊಲದಲ್ಲಿ ದುಡಿಯಬೇಕಾದದ್ದೆ ಇದೆ ಅನಿವಾರ್ಯ ಎಂದು ನುಡಿದರು.

ಹೊಸಪೇಟೆ

ಪ್ರಕರಣ–೧

ಹೆಸರು	: ನೇತ್ರಾವತಿ ಗಂಡ ವಿಶ್ವನಾಥ
ವಯಸ್ಸು	: ೩೧ ವರ್ಷ
ಗ್ರಾಮ	: ಹೊಸೂರು
ಗ್ರಾಮ ಪಂಚಾಯಿತಿ	: ಹೊಸೂರು
ವಿದ್ಯಾಭ್ಯಾಸ	: ಎಂ.ಎ

ನನ್ನ ಹೆಸರು ನೇತ್ರಾವತಿ, ವಯಸ್ಸು ೩೧ ವರ್ಷ. ನಾನು ಎಂಎ ಪದವೀಧರೆ. ನಮ್ಮದು ಕೃಷಿ ಕುಟುಂಬ ಮೊದಲೆಲ್ಲ ನಾನು ರಜೆ ಸಂಧರ್ಬದಲ್ಲಿ ಕೂಲಿ ಮಾಡಿ ಬಂದ ಹಣವನ್ನು ನಾನೆ ನನ್ನ ಓದಿನ ಖರ್ಚಿಗೆ ಎತ್ತಿ ಇಡ್ತಿದ್ದೆ. ಯಾಕಂದರೆ ಮನೆಲಿ ಬಡತನ ಇತ್ತು. ಜೊತೆಗೆ ನಾವು ಇಬ್ಬರು ಹೆಣ್ಣು ಮಕ್ಕಳು ಜೊತೆಗೆ ಒಬ್ಬ ಗಂಡು ಮಗ ನಾನೆ ಚಿಕ್ಕವಳು ಅಣ್ಣನಿಗೆ ಓದು ಕಲಿಸ್ತಿದ್ರು ಆದರೆ ಅಕ್ಕನಿಗೆ ತಲೆಗೆ ಅಕ್ಷರ ಹೋಗಲಿಲ್ಲ ಆಗಾಗಿ ಅವಳು ಅಪ್ಪ ಅಮ್ಮನೊಂದಿಗೆ ಇರುವ ಎರಡು ಎಕರೆ ಭೂಮಿಲಿ ತಾನು ಕೆಲಸಕ್ಕೆ ಹೋಗ್ತಿದ್ಲು. ಮತ್ತು ಅಮ್ಮನೊಂದಿಗೆ ನಮ್ಮ ಹೊಲದಲ್ಲಿ ಕೆಲಸದ ಬಿಡುವಿನ ವೇಳೆಯಲಿ ಬೇರೆಯವರ ಹೊಲಕ್ಕೆ ಕೂಲಿನೂ ಹೋಗ್ತಿದ್ಲು, ನನಗೆ ನೀನಾದರೂ ಓದಿ ಅಂತ ನನ್ನ ಬೆನ್ನಿಗೆ ನಿಂತು ಸಪೋರ್ಟ್ ಮಾಡ್ತಿದ್ಲು. ನನಗೆ ಓದಬೇಕೆಂಬ ಹಂಬಲ ಹೆಚ್ಚಿತ್ತು, ಹಾಗಾಗಿ ಮನೆಲಿ ಒಂದೊಂದು ಬಾರಿ ಅಪ್ಪ ಅಮ್ಮ ಓದಿ ಏನು ಬಾರಿ ನೌಕರಿ ಪಡೀತಿ ನೋಡ್ತೀವಿ ಅಂತಿದ್ರು ಅವರದಾದ್ರು ತಪ್ಪೇನಿದೆ, ಮನೆಲಿ ಕಷ್ಟ ಹಾಗಾಗಿ ಹೇಳ್ತಿದ್ರು ನಾನು ತಲೆ ಕೆಡಿಸಿಕೊಳ್ತಿರಲಿಲ್ಲ. ಹೇಗೋ ಅಂಗನವಾಡಿ ಕೆಲಸ ಗಿಟ್ಟಿಸಿಕೊಂಡೆ ನಂತರ ಅದೇ ಅಪ್ಪ ಅಮ್ಮ ನನ್ನನ್ನು ಮೆಚ್ಚಿದರು. ನಂತರ ಅಕ್ಕನ ಮದುವೆ, ಮತ್ತು ಅಣ್ಣನ ಮದುವೆ ಮಾಡಿದ್ವಿ ಅಣ್ಣನು ಕಂಪನಿಲಿ ಕೆಲಸ ಮಾಡ್ತಿದನೆ, ಈಗ ಸ್ವಲ್ಪ ಚನಾಗಿದಿವಿ. ಆಮೆಲೆ ನನ್ನನ್ನು ಅಮ್ಮನ ಸಣ್ಣ ತಮ್ಮನಿಗೆ ವಿವಾಹ ಮಾಡಿ ಕೊಟ್ರು. ಆತನು ಕೃಷಿ ಚನ್ನಾಗಿ ಮಾಡ್ತಾನೆ ಆದ್ದರಿಂದ ಬರುವ ತಿಂಗಳ ಸಂಬಳದಲ್ಲಿ ಸ್ವಲ್ಪ ಸ್ವಲ್ಪ ಹಣ ಕೂಡಿಟ್ಟು ನನ್ನ ಅಣ್ಣನು ಒಂದಿಷ್ಟು ಹಣ ನೀಡಿದರು. ನಮ್ಮನೆಯವರಿಗೆ ಅಜ್ಜಿ ತಾತ ಮಾಡಿಸಿದ ಎಲ್ ಐ ಸಿ ಯಿಂದ ಬಂದ ಹಣವನ್ನೆಲ್ಲ ಕೂಡಿಸಿ ಇರುವ ಎರಡು ಎಕರೆ ಭೂಮಿ ಜೊತೆಗೆ ಮತ್ತೊಂದು ಎರಡು ಎಕರೆ ಭೂಮಿ ಕರೀದಿಸಿದೆ. ಹಾಗೆ ನಾನೆ ಹೊಲದಲ್ಲಿ ಆಳು ಕಾಳುಗಳಿಗೆ ಕೂಲಿ ನೀಡಿ ಹೊಲವನ್ನೂ ನೋಡೊಕೊಳ್ತಿದಿನಿ. ನನ್ನ ಗಂಡಾನೂ ನೋಡಿಕೊಳ್ತಾರೆ ಆದರೆ ಸಂಪೂರ್ಣ ಜವಾಬ್ದಾರಿಯನ್ನು ನಾನೆ ಹೊತ್ತಿದ್ದೇನೆ. ಒಂದು ಖುಷಿ ಮಾತ್ರ ಇದೆ. ಅಂದು ಕೂಲಿಗಾಗಿ ಕರಿತಿದ್ದ ಅಪ್ಪ ಅಮ್ಮ ಇವತ್ತು ನೀನೆ ನಾಲ್ಕು ಜನಕ್ಕೆ ಕೂಲಿ ನೀಡ್ತಿದ್ದಿ ಅಂತಾರೆ ನನಗೂ ಕೃಷಿ ಅಂದ್ರ ಇಷ್ಟ ಆದ್ರೆ ನನಿಗೆ ಓದಿ ಕೆಲಸ

ತೊಗೊಬೆಕು ಅಂತ ಇತ್ತು ಹಾಗಾಗಿ ನೌಕರಿ ಸಿಕ್ಕ ಮೇಲೆ ನೌಕರಿ ಜೊತಿಗೆ ಕೃಷಿ ನಿರ್ವಹಣೆನೂ ಮಾಡ್ತ ಇದಿನಿ ಅದೇನು ದೊಡ್ಡ ನೌಕರಿ ಅಂತ ಎಷ್ಟೋ ಜನ ಅಂತಾರೆ ಆದರೆ ನನಗೆ ಗೊತ್ತು ಆ ಮಟ್ಟಕ್ಕೆ ಬೆಳೆಯಲು ಎಷ್ಟು ಕಷ್ಟ ಅಂತ ಅದೇ ನನಗೆ ದೊಡ್ಡ ನೌಕರಿ ಎಂದು ಖುಷಿಯಿಂದಲೇ ಹೇಳ್ತಾರೆ. ಇದೆಲ್ಲ ನೋಡಿದರೆ ನೌಕರಿ ಇದ್ದರು ಕೃಷಿ ನಿರ್ವಹಣೆ ಮಾಡ್ತಿರೊದನ್ನು ನೋಡಬಹುದು.

ಪ್ರಕರಣ–೨

ಹೆಸರು	:ಶಾರದಮ್ಮ ಗಂಡ ಹನುಮಂತಪ್ಪ
ವಯಸ್ಸು	: ೪೦ ವರ್ಷ
ಗ್ರಾಮ	: ಮಲಪನಗುಡಿ
ಗ್ರಾಮ ಪಂಚಾಯಿತಿ	: ಮಲಪನಗುಡಿ
ವಿದ್ಯಾಭ್ಯಾಸ	: ೫ ನೇ ತರಗತಿ

ನನ್ನ ಹೆಸರು ಶಾರದಮ್ಮ. ನಮ್ದು ಮಲಪನ ಗುಡಿ ನಾನು ಬಡಮನ್ಯಾಗ ಹುಟ್ಟಿ ಬೆಳೆದಾಕಿ ಆ ಕಾಲದಾಗ ಶಾಲಿ ಐದು ಕಲ್ತಿನಿ. ನಮ್ಮನಿಯಾಗ ನಾನೆ ಹಿರೆ ಮಗಳು ನಾವು ನಾಕು ಮಂದಿ ನಮ್ಮಿಂದೆ ಒಬ್ಬ ತಮ್ಮ ಅದಾನ. ಅವುನ್ನ ಬಯಸಿ ಬಯಸಿ ನಮ್ಮವ್ವ ಅಡಕೊಂಡಾಳ ಅದಕಾಗಿ ನಾವು ನಾಕು ಮಂದಿ ಹೆಣ್ಣಾದರೂ ಗಂಡು ಬೇಕಂತ ನಮ್ಮವ್ವ ಅಪ್ಪ ಬಿಟ್ಟಿದ್ರು. ನಮ್ಮನಿಯಾಗ ಅವನು ದೇವರು ಕೊಟ್ಟ ವರ ಆಗ್ಯಾನ ಅವನಂದ್ರ ಬಾಳ ಮುದ್ದು ಮನ್ಯಾಗ. ನಮ್ದು ಬಾಳ ಕಷ್ಟ ಅದರಾಗ ನಮ್ಮ ಅಕ್ಕ ತಂಗ್ಯಾರೆಲ್ಲರು ನಾವು ಆರೆಳನೆ ಕ್ಲಾಸುವರೆಗು ಶಾಲಿ ಕಲಿತಿವಿ. ನಮ್ಮಪ್ಪ ಅವ್ವನು ಬಾಳ ಒಳ್ಳೇರು ನಾವು ನಾಕು ಮಂದಿ ಅದೀವಂದ್ರು ಭೇದ ಮಾಡ್ಲಿಲ್ಲ ಯಾಕಂದ್ರ ಅವರೊಟ್ಟಿಗೆ ಕೂಲಿ ಹೋಕಿದ್ವಿ ನಮಿಗೆ ಆಸ್ತಿ ಗೀಸ್ತಿ ಏನು ಇಲ್ಲ. ಬ್ಯಾರೆರು ಹೊಲ ಕಟ್ಟುಗುತ್ತಿಗೆ ಹಿಡಿತಿದ್ವಿ ಅದರಗ ಬೆಳದುದು ನಮಿಗರ್ಧ ಮತ್ತೆ ಹೊಲಕೊಟ್ಟೋರಿಗೆ ಅರ್ಧ ಕೊಡಬೇಕಿತ್ತು ಹೋದಂಗ ಬಂದಂಗ ನಮಿಗೆ ಒಂದೀಟು ತಿನ್ನಾಕಾಗೊಷ್ಟು ಕಾಳು ಕಡಿ ಸಿಗ್ತಿತ್ತು. ಜೊತಿಗೆ ಬ್ಯಾರೆ ದೊಡ್ಡಕುಲದಾರ ಮನಿಗೆ ಕೆಲಸಕ್ಕೋಗ್ತಿದ್ವಿ, ಕೂಲಿ ಮಾಡಕ ಅದುನ್ನ ಒಂದೀಟು ಹಿಂದುಕಾಕಿ ಒಂದೀಟು ದುಡುಕಂಡು ತಿನ್ನಾರು ಮನಿಗಡ ನನ್ನ ಲಗ್ನ ಮಾಡಿ ಕೊಟ್ರು. ಅಲ್ಲಿ ನನಗಂಡ ಬಾಳ ಒಳ್ಳೇನು ಆದ್ರ ಅವಗ ನನಗ ಲಗ್ನ ಸಮಯದಗ ೨೧ ವಯಸಿತ್ತು ಆತನಿಗೆ ೩೧ ವಯಸ್ಸಿತ್ತು. ಒಳ್ಳೆ ಮಂದಿ ಅದಾರಂತ ನಮ್ಮಪ್ಪ ಅವ್ವ ಲಗ್ನ ಮಾಡಿಕೊಟ್ರ ನನ ಗಂಡ ಮಾವ ಅತ್ತೆ ಎಲ್ಲರೂ ಒಳ್ಳೇರದರ ಆದ್ರ ನಾನ ಹೆಚ್ಚು ಮನಿಭಾರ ಹೊರಬೇಕಾಗೆತಿ. ಮೊದಲೆಲ್ಲ ನನ ಗಂಡ ತೆಗುವಿರ ಕೆಲಸ ಮಾಡ್ತಿದ್ದ ಆದರ ಈಗ ಆತನಿಗೆ ಆಗಂಗಿಲ್ಲ ಆದ್ರ ಮಾಡ್ತನ ಮದಲಿನಷ್ಟು ಕೆಲಸ ಮಾಡಲ್ಲ. ನಾವು ಒಂದೆಕರಿ ಭೂಮಿ ಮಾಡ್ತಿದ್ವಿ ಅದರ ಜೊತಿಗೆ ಮದಲು ಹೊಲಕ್ಕ ಬಾಡಿಗೆ ಹೊಡಿತಿದ್ದ ನಮ್ಮವೆ ಎತ್ತು ಬಂಡಿ ಇದ್ವು, ಹಂಗೆ ಮಧ್ಯಾನ ಬಿಡುವಿಲ್ಲದಂಗ

ಕಟ್ಟಿಗೆ ಕಡಿಯಾಕ ಹೋಗ್ತಿದ್ದ ಇಲ್ಲಿ ನೀರು ಕಾಯಿಸಕ ರೊಟ್ಟಿ ಮಾಡಕ ಸಿಲೆಂಡರ್ ಬಾಳ ಖರ್ಚಾಗ್ತದಂತ ಹೊಲೆ ಹಚ್ಚರು ಬಾಳ ಮಂದಿ ಹಂಗಾಗಿ ಕಟ್ಟಿಗಿನು ಕೊಂಬತಿದ್ರು. ಈಗ ಯಾವಗಲು ಅರಾಮಿದ್ರ ಹೋಕಾನ ಇಲ್ಲಂದ್ರ ಮನ್ಯಾಗಿರತಾನ ನನಿಗಿವತ್ತಿನೊರಿಗು ಒಂದು ಮಾತಂದವಲ್ಲ ಅವ ಕುಡಿಯದು ಬೀಡಿ ಸೇದದಂತೂ ಆ ಚಟನೆ ಇಲ್ಲ. ತಿರುಗಾಕು ಹೋಗಲ್ಲ. ಮನ್ಯಾಗ ಮಕ್ಕಳು ಟಿವಿ ತಂದಾವ ನೋಡಿಕೆಂಡು ಇರ್ತಾನ. ಕೆಲಸ ಮಾಡ್ತಿನಿ ಅಂತಾನ ಆದ್ರ ಅವ ಕೈಲಿ ಶಕ್ತಿ ಇಲ್ಲಂಗಾಗೆದೆ ಹಂಗಾಗಿ ನಮಿಗು ಎರಡು ಗಂಡು ಮಕ್ಕಳದಾವ ಅದ್ರಗ ಒಬ್ಬ ಡ್ರೈವರ್ ಅದಾನ ಮತ್ತೊಬ್ಬ ಜಿಂದಾಲು ಫ್ರಯಾಕ್ಟ್ರಿಗೋಕಾನ ಈಗ ಒಂದೀಟು ಚೊಲೊ ಅದೀವಿ ಆದ್ರ ನಮ್ಮಾತನಿಗೆ ಮಂಡಿ ನೋವು, ಅತ್ತೆ ಮಾವಗೂ ಅವಗವಗ ವನಗಿರಲ್ಲ ಹಂಗಾಗಿ ದೊಡ್ಡಾಸ್ಪತ್ರೆಗೆ ತೋರ್ಸಾಕಂತ ರೊಕ್ಕನೂ ಹಿಂದುಕಾಕಿನಿ ಜೊತಿಗೆ ಬೆಳೆದು ನಿಂತಾವ ಮಕ್ಕಳು ಅವುಕ್ಕು ಲಗ್ನ ಮಾಡಬಕು ಹಂಗಾಗಿ ನಾನು ಮಕ್ಕಳು ತಿಂಗಳಿಗೆ ಒಬ್ಬ ಎರಡು ಸಾವುರ ಇನ್ನೊಬ್ಬ ಎರಡುವರಿ ಇಲ್ಲ ಮೂರು ಕೊಡ್ತಾನ ಪಾಪ ಅವುಕ್ಕು ಖರ್ಚು ಇರ್ತವಲ್ಲ. ಹಂಗಾಗಲಿ ನಾನು ಏನು ಕೇಳಂಗಿಲ್ಲ ಅದರಗ ಪಿಗ್ಮಿ ಕಟ್ಟುತಿನಿ ೧೦೦ ರುಪಾಯಿ ಮತ್ತೆ ಮನೆಗ ಬೇಕಾದ ಸಾಮಾನು ದಿನಿಸಿ ಎಲ್ಲ ನನ್ ಕೂಲಿ ದುಡ್ಡಿನಾಗ ಮಾಡ್ತಿನಿ ತರತಿನಿ ಕರೆಂಟು ಬಿಲ್ಲು ಕರೆಟ್ಟು ಕಟ್ಟಬಕು ಇಲ್ಲಂದ್ರ ಕರೆಂಟು ವೈರು ತೆಗಿತ್ನಿ ಅಂತಾರ ಹಂಗಾಗಿ ಎಲ್ಲ ನೋಡಿಕೆಬಕಲ್ಲ ಅದಕ್ಕ ಕೂಲಿ ಒಂದಿನ ಬಿಡಲ್ಲ. ಒಬ್ಬರೊಲ ಮುಗಿಯವರಿಗು ಅವರಿಗೆ ಹೊಂದಿಕೆಂಡು ಕೆಲಸ ಮಾಡ್ತಿನಿ, ಅವರದು ಮುಗುದ್ರ ಮತ್ತೊಬ್ಬರದು ಹಿಂಗೆ ಹಬ್ಬ ಅರಿದಿನದಗಷ್ಟ ರಜ ಮಾಡ್ತಿನಿ ಉಳಿದ ದಿನ ಎಲ್ಲ ಕೂಲಿ ಹೋಕಿನಿ. ಮನ್ಯಾಗ ಸಣ್ಣಪುಟ್ಟ ಕೆಲಸ ನಮ್ಮತ್ತೆ ಮಾಡ್ತಾತೆ. ಪಾಪ ಅದುಕು ವಯಸ್ಸಾಗೆತಿ. ಅಂತ ಹೇಳ್ತಾರೆ. ಇದೆಲ್ಲ ನೋಡಿದಾಗ ಕೂಲಿಯಿಂದನೇ ಬಹುಕು ಕಟ್ಟಿಕೊಂಡು ವಯಸ್ಸಾದ ಗಂಡನನ್ನೂ ಬಿಟ್ಟುಕೊಡದೆ ಮನೆ ನಿರ್ವಹಿಸುತ್ತಿರುವುದನ್ನು ಕಾಣಬಹುದು.

ಪ್ರಕರಣ–೩

ಹೆಸರು : ಅಂಜೀನಮ್ಮ ಗಂಡ ಶಾಂತಪ್ಪ

ವಯಸ್ಸು : ೪೫ ವರ್ಷ

ಗ್ರಾಮ : ನಾಗೇನಹಳ್ಳಿ

ಗ್ರಾಮ ಪಂಚಾಯಿತಿ : ನಾಗೇನಹಳ್ಳಿ

ವಿದ್ಯಾಭ್ಯಾಸ : ಅನಕ್ಷರಸ್ಥೆ

ನಾನು ಅಂಜಿನಮ್ಮ ಅಂತ ನನಿಗೆ ಒಂದು ೪೫ ವಯಸ್ಸಿರಬೋದು ನಾನು ಶಾಲಿ ಕಲಿತಿಲ್ಲ. ಸಣ್ಣಾಕಿದ್ದಾಗ ನನಿಗೆ ಎಮ್ಮಿ ಕಾಯಕ ಕಳುಸ್ತುದ್ರು. ನಮ್ಮಪ್ಪ ಅಮ್ಮ ಹೊಲದಾಗ ಕೆಲಸ ಮಾಡ್ತುದ್ರು. ಆಮೇಲೆ ಎಮ್ಮೆ ಬಿಟ್ಟಗಂಡು ಕೂಲಿನು ಮಾಡ್ತಿದ್ದೆ. ನಮ್ದು ಬಾಳ ಕಷ್ಟ ಜೀವನ ಇತ್ತ ಹೇಳಿದ್ರ

ತೀರಂಗಿಲ್ಲ. ಇಲ್ಲಿ ಕೂಲಿ ಇಲ್ಲಂದ್ರ ಬೆಂಗಳೂರು ಮೈಸೂರು ಅಂತ ಬ್ಯಾಸಿಗ್ಯಾಗ ಪಾಳಿ ಹಿಡಿತಿದ್ವು ಮತ್ತ ಮಳೆಗಾಲ ಬಂದಾಗ ಊರಕಡಿ ಮಖ ಮಾಡ್ತಿದ್ವಿ ಮನೆಯಾಗ ನಾವು ವಾಪಸ್ಸಾಗವರಿಗು ಅಮ್ಮ, ಅಜ್ಜಿ, ತಾತ ಮಾತ್ರ ಇರತಿದ್ವು ಆಮೆಲೆ ಮತ್ತದೆ ಹೊಲ ಕೂಲಿ ಗುತ್ತಿಗೆ ಇದೆ ನಡಿತಿತ್ತು ನಮ್ಮಪ್ಪಗ ನಾವು ಇಬ್ರು ಹೆಣ್ಮಕ್ಲು ಮತ್ತ ನಮ್ಮ ಅಣ್ಣ ಒಬ್ಬಾನಿದ್ದಾನ. ಅವನು ಒಂದೀಟು ಏಳು ಶಾಲಿ ಕಲುತಾನ ಆಮೆಲೆ ಶಾಲಿ ಕಲುಸಾಕ ರೊಕ್ಕಿಲ್ಲ ಅಂತ ಅಪ್ಪ ಹೊಲುಕ್ಕಚ್ಚಿದ ಅವುನು ಅದುರ ಜತಿಗೆ ಅವರಿವುರು ಜತಿ ಸೇರಿ ಆಟ ಓಡುಸಾದು ಕಲ್ತಾನ ಅವುನು ಹಠ ಹಿಡುದು ಈಗ ಅವ್ವ ಇರ ಸಂಘದಗ ಸಾಲ ಕೊಡಿಸಿ ಕಂತಿನಮ್ಯಾಗ ಆಟೊ ಕೊಡಿಸ್ಯಾಳೆ ಅದುನ್ನ ಅವ ತಿಂಗಳಾಗ ಕಟ್ಟುತಾನ ಅವನು ಶ್ಯಾಣ ಅದಾನ ಅಂತ ಪುಂಡಟಿಕೆ ಮನುಷ್ಯ ಅಲ್ಲ. ಅವ ದುಡುದುದ್ರಗ ಎಷ್ಟುಳಿತತೊ ಅಷ್ಟು ಕೊಡತಾನ. ನನಿಗೆ ಮತ್ತೆ ತಂಗಿಗೆ ಇಬ್ರುಗು ಮದುವಿ ಮಾಡಿದ್ರು ಅದು ಒಂದೇ ಸರಿಗೆ ಖರ್ಚು ಉಳಿತದೆ ಅಂತ ಒಂದೇ ಚಪ್ಪರದಡಿ ಎರಡು ಮದುವಿ ಮಾಡಿದ್ರು. ಮತ್ತೆ ನಮ ಗಂಡನ ಮನೆಲಿ ದೊಡ್ಡ ಕುಟುಂಬ ಹಂಗಾಗಿ ಎಲ್ಲರು ಕೂಡಿ ಇದ್ದಿವಿ ಸುಮಾರು ೧೫ ಜನ ಇದ್ದಿವಿ ನನ ಗಂಡನೆ ಸಣ್ಣಾತ ೩ ಜನ ಒಟ್ಟು ಅವರು ಎಲ್ಲರಿಗು ಇಬ್ಬರು ಮೂರು ಮಕ್ಕಳು ಅದಾರೆ ನನಗು ಎರಡು ಗಂಡು ಒಂದು ಹೆಣ್ಣು. ಈಗೊಂದು ಎರಡು ವರ್ಷ ಆತು ಎಲ್ಲರು ಬ್ಯಾರೆ ಆದ್ವಿ ಅದರಾಗ ಎರಡೆರಡು ಎಕ್ಕರೆ ಭೂಮಿ ಸಿಕ್ಕಿತ್ತು ಮನಿ ದೊಡ್ಡಾರಿಗೆ ಹೋಗಿತ್ತು. ಈಗ ನಾವು ಬ್ಯಾರಾದಿಂದೆ ಸರಕಾರ ಕೊಟ್ಟ ಮನಿ ಜೊತಿಗೆ ನಾವು ಒಂದೆಕರಿ ಹೊಲ ಮಾರಿ ಸಂಘದಗು ಸಾಲ ಪಡುದು ಮನಿ ಮಾಡಿಕೆಂಡಿವಿ ಇನ ಹುಳುದುದ್ದೊಂದು ಎಕರೆ ಭೂಮಿ ಅದರಗ ಆಟು ಈಟು ಬೆಳೆದು ಬೆಳೆಗ ಮನಿಗೊಂದೀಟು ಉಳಿಸಿಗೆಂಡು ಉಳುದುದ್ದು ಮಾರಿ ಸಂಘದಗ ಸಾಲ ಕಟ್ಟುತ ಇದಿನಿ ಮತ್ತೆ ಎರಡು ಮಕ್ಕಳು ಓದುತದವ ಒಂದನೆ ಮಗಳ ಮದಿವಿ ಮಾಡಿವಿ ಅಷ್ಟೇನು ಖರ್ಚು ಆಗಿಲ್ಲ ಯಾಕಂದ್ರ ಅವುರು ಏನು ವರದಕ್ಷಿಣೆ ಅಂತ ಕೇಳಿಲ್ಲ. ಆದರೂ ಅನ್ನದ ಖರ್ಚು ಮಾಮೂಲಿ ಮಗಳಿಗೆ ಏನು ಕೊಡಬೇಕು ಅದು ಕೊಡಬೇಕಲ್ಲ ಹಾಗಾಗಿ ಸ್ವಲ್ಪ ಒಂದು ಮುವತ್ತು ಸಾವಿರ ಕೈಲಿ ಬಿದ್ದೆತೆ ಅದುನ್ನ ತೀರುಸ್ತದಿನಿ ಇರ ಒಂದೆಕರೆಗೆ ಏನು ಆಗಂಗಿಲ್ಲ ಅಂತ ಜಮೀನ ಬಾಳಿದ್ದು ಮಾಡಕಾಗದಿರರತ್ರ ಒಂದೆರಡೆಕ್ರಿ ಗುತ್ತಿಗಿ ಜೊತಿಗೆ ಕೂಲಿನು ಹೊಕ್ಕಿನಿ ಕೊಬ್ಬು ಕೀಳಾಕ ದಾಳಿಂಬ್ರಿ ಕೀಳಾಕ ಕಳೆ ಹಿಂಗ ಕೂಲಿ ಹೋಗಿಬರ್ತಿವಿ ನಾನು ನನಗಂಡ ಇನ್ನೆರಡು ಮಕ್ಕಳು ಓದುತಾವ ನನ ಗಂಡನು ಕೂಡ ಮಕ್ಕಳು ಓದಲಿ ಅಂತ ತಾನು ದುಡಿತಾನ ಆದ್ರು ಒಮ್ಮೊಮ್ಮೆ ಕಾಲುಕೈ ನೋವು ಅಂತ ಮನೆಗುಳಿತಾನ ನನಗೊಂತು ಕಣ್ಣು ಮುಚ್ಚಿದ್ರು ಸಾಲ ಕಟ್ಟಬಕು ಕಣ್ಣು ತರಿದ್ರು ಮೊದಲದನ್ನ ಬಾಕಿ ಅರಿಬಕನ್ನದ ಚಿಂತೆ ಅದಕ್ಕ ನಾ ಒಂದಿನ ಮನ್ಯಾಗಿರಕೆಲ್ಲ ಹುಡಿಕೆಂಡಾದ್ರು ಕೆಲಸಕ್ಕೋಗ್ಯಾಕಿ ನಾನು ಎಂದು ತಮ್ಮ ಜೀವನದ ನೋವನ್ನು ಬಿಚ್ಚಿಟ್ಟರು. ಇದನ್ನು ನೋಡಿದಾಗ ಜೀವನಾವಶ್ಯಕ್ಕಾಗಿ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಅವರು ಪಡುತ್ತರುವ ಕಷ್ಟ ಹರಸಾಹಸವೇ ಸರಿ.

ಪ್ರಕರಣ–೪

ಹೆಸರು : ನಾಗಮ್ಮ ಗಂಡ ಹನುಮಂತಪ್ಪ

ವಯಸ್ಸು : ೪೦ ವರ್ಷ

ಗ್ರಾಮ : ವೆಂಕಾಟಪುರ

ಗ್ರಾಮ ಪಂಚಾಯಿತಿ : ಬುಕ್ಕಸಾಗರ

ವಿದ್ಯಾಭ್ಯಾಸ : ಅನಕ್ಷರಸ್ಥೆ (ಎರಡನೇ ತರಗತಿ)

ನನ್ನ ಹೆಸರು ನಾಗಮ್ಮ ಗಂಡ ಹನುಮಂತಪ್ಪ, ನಾನು ಎರಡನೇ ಕ್ಲಾಸು ಓದಿನಿ. ನಮ್ಮಪ್ಪ ಅಮ್ಮನಿಗೆ ನಾನೊಬ್ಬಳೆ ಮಗಳು ನಮ್ಮವ್ವಗ ಹೆರಿಗೆ ನಾನೊಬ್ಬಳ ಮಗಳು ಅದೀನಿ. ಮೊದಲೆಲ್ಲ ನಾವು ಮನೆಕಡೆ ಚನ್ನಾಗೆ ಇದ್ದಿವಂತೆ ಆದರೆ ನನಗಿಂತ ಮೊದಲು ಎರಡು ಮಕ್ಕಳು ತೀರಿ ಹೋಗ್ಯಾವಂತೆ. ಅವು ನಮ್ಮಮ್ಮಿಗಿ ಹೊಟ್ಟೆ ಕೊಯ್ದು ಹೊಲಿಗಿ ಆಕಿದ್ರಂತೆ ಆ ಕೂಸುಗುಳು ಉಳಿಲಿಲ್ಲಂತೆ ಅವು ಗಂಡುಕೂಸು ಅಂತ ನಮ್ಮವ್ವ ಹೇಳಿ ಹೇಳಿ ಅಳಾಳು ಕೊನಿಗೆ ನಾನೆ ಬದುಕಿ ಉಳಿದಿನಂತೆ ಅವಗ ದವಾಖಾನಿಗೆ ಬಾಳ ರೊಕ್ಕ ಇಟ್ಟು ಎಲ್ಲ ಕಳಕೊಂಡ್ರಂತೆ. ಒಂದುವರೆ ಎಕರಿ ಭೂಮಿ ಐತೆ ಅದರಗ ಶೇಂಗಾ ಇಲ್ಲ ಸಜ್ಜೆ ಏನಾದ್ರು ಬೆಳಿತಾರೆ. ಇನ್ನರ್ಧದಗ ಪಕ್ಕದ ಹೊಲದೋರು ಬಾಳ ಒಳ್ಳೇರು ಅದಾರ ಅವರದು ನೀರಾವರು ನಮ್ಮದು ಬೆದ್ಲು ಹಂಗಾಗಿ ನಮ್ಮ ಕೆಲಸ ಮುಗಿದು ಇನ್ನ ಆರು ತಿಂಗಳು ಕಾಲಿ ಇರ್ತಿದ್ವಿ ನಮ್ದು ಕೆಲಸ ಇದ್ದಾಗಲೇ ನಮ್ಮಪ್ಪ ಅಮ್ಮ ಕೂಲಿ ಹೋಕ್ಕಿದ್ರು ನಾನು ಸಣ್ಣೋಳಿದ್ದೆ ಸಾಲಿಗೂ ನಮ್ಮವ್ವ ಅಪ್ಪನ್ನ ಬಿಟ್ಟು ಸರಿಯಾಗಿ ಹೋಗಲಿಲ್ಲ ಇರಾದೊಂದು ಕೂಸೈತಿ ಅಂತ ಅವರೂ ನನ್ನನ್ನ ಬೈದೊ ಹೊಡುದೊ ಶಾಲಿಗೆ ಕಳಿಸಿಲ್ಲ. ನಾನೂ ಹೋಗಿಲ್ಲ. ಪಕ್ಕದಲ್ಲಿ ನೀರಾವರಿ ಇರೊರು ಒಂದು ಅರ್ಧ ಇದ್ದೆಕರಿಗೆ ನೀರು ಹರಿಸಿಕೆಣಕೆ ಬಿಡ್ತುದ್ರು ಅದ್ರಗ ನಮ್ಮವ್ವ ಸೊಪ್ಪು ತರಕಾರಿ ಬೆಳಿತಿದ್ಲು. ಯಾಕಂದ್ರ ಅವರದು ಕೂಲಿ ಕೆಲಸ ಮಾಡಿ ಕೊಡ್ತಿದ್ವಿ ಹೊಲನು ಕಾಯ್ತಿದ್ವಿ ಹಂಗಾಗಿ, ಮಧ್ಯಾನದವರೆಗೂ ಅಲ್ಲಿ ಕೆಲಸ ಮಾಡಿ ಮಧ್ಯಾನದ ಮೇಲೆ ನಮ್ಮವ್ವ ಮಾರ್ಕೇಟಿಗೆ ಹೋಗಿ ತರಕಾರಿ ಮಾರಿ ಬರತಿದ್ದಲು. ಯಾಕಂದ್ರ ಅವಳು ಆಸ್ಪತ್ರೆಲಿ ಇದ್ದಾಗ ರೊಕ್ಕೆಲ್ಲ ಕಾಲಿ ಆಗಿತ್ತಂತೆ ಅದಕ್ಕೆ ದುಡಿಬಾಕು ಅನ್ನೋ ಛಲದಿಂದ ಹಂಗೆ ಹುಚ್ಚು ಹಿಡಿದಾರಂಗೆ ಕೆಲಸ ಮಾಡ್ತಿದ್ಲು.

ನನಗೊಂದು ೧೯ ವಯಸ್ಸು ಇತ್ತೇನೊ ಆಗ ನಾವು ಒಂದೀಟು ಚನಗಾಗಿದ್ವಿ ನಮ್ಮವ್ವ ಅಪ್ಪನು ಹನ ಹಿಂದುಕಾಕಿದ್ರು. ಮಗಳು ಬೆಳೆದು ನಿಂತಾಳ ಅಂತ ಮದ್ವಿ ಮಾಡಕಂತ ಚಿಂತಿ ಮಾಡಿದ್ರು. ಯಾರೊ ಒಳ್ಳೆ ಸಂಬಂಧ ಚನಾಗಿದರೆ ಮನೆಕಡೆ ಅಂತೇಳಿದ್ದೆ ತಡ ಹಿಂದು ಮುಂದು ನೋಡದೆ ೨೮ ಇಲ್ಲ ೨೯ ಇರಬಕು ಅಂತನಿಗೆ ಕಟ್ಟ್ಯಾಕಿದ್ರು ಅವುರು ಮೊದಲೆಲ್ಲ ಅದು ಇದೆ ಇದು ಇದೆ ಅಂತ ಸುಳ್ಳು ಹೇಳಿ ನಂಬಿಸಿದ್ರು ಮದುವಿ ಆದ ಮೇಲೆ ಗೊತ್ತಾತು ಇವುರು ಎಲ್ಲ ಸುಳ್ಳು ಹೇಳ್ಯಾರಂತ

ಒಬ್ಬಳೆ ಮಗಳು ಅದಾಳ ಎಲ್ಲ ಆಸ್ತಿ ಸಿಕ್ತದೆ ಅಂತ ಮೋಸ ಮಾಡಿದರು. ಇವನಿಕೆ ಅಂಗೈಯೋಟಲ್ಲ ಕಾಸಿನೋಟು ಜಾಗಿಲ್ಲ. ಅಂತ ಅವನಿದ್ದ ಮನಿನು ಬಾಡಿಗೆ ಮನಿ ಒಬ್ಬನದನ ಅತ್ತೆ ಮಾವ ಇಲ್ಲ ಮಗಳಿಗೆ ಕಿರುಕುಳ ಇರಲ್ಲಂತ ಮಾಡಿದ್ರ ಇವ ಇಷ್ಟು ದೊಡ್ಡ ಬಹುಮಾನ ಕೊಟ್ಟನ, ಇದೆಲ್ಲ ತಿಳುದ ನಮ್ಮಪ್ಪ ಸೀಟಿನ ಮನಿ ಹಾಕಿಸಿ ಕೊಟ್ಟಾನ ನಮ್ಮವ್ವ ಇರಾಳೊಬ್ಬಳು ಮಗಳು ಅಂತ ಚನಾಗಿ ದುಡುದು ಸಾಕಿ ಹೊಟ್ಟೆ ಬಟ್ಟೆ ಕಟ್ಟಿಟ್ವೆ ಆದರೆ ಹುಡುಗನ ವಿಚಾರ ಮಾಡಿ ಮಗಳ ಕೊಡಬೇಕಿತ್ತಂತ ಮನಸಾಗೆ ಕೊರಗ್ತಾಳ, ಜೊತಿಗೆ ಒಂದು ಕೆಲಸ ಮುಟ್ಟಿದಾಕಿ ಅಲ್ಲ ನಾನು ಈಗ ಹೊಲಕ್ಕ ಕೂಲಿ ಹೋಗಬೇಕಾಗೆತಿ ಜೊತೆಗೆ ಈ ದಂಡಪಿಂಡಾನೂ ಸಾಕಬೇಕಾಗೆತಿ ಕೆಲಸ ಗೊತ್ತಿಲ್ಲ, ಈಗಿಗ ಕೆಲಸ ಕಲುತಾನ ಆದ್ರು ತಗಂಡು ಏನ್ ಮಾಡದು ನನ್ನಂಗ ಆಗಬಾರದಂತ ಒಂದು ಗಂಡು ಮಗನ ನಮ್ಮವ್ವರತ್ರ ಬಿಟ್ಟೆನಿ ಅದು ಅಲ್ಲೆ ಸಾಲಿ ಕಲಿತತಿ ಹುಡುಗಿ ಸಣ್ಣದು ನಂತಾವ ಐತಿ ಅದುನಾದ್ರು ಏಟು ಕಷ್ಟ ಬಂದ್ರು ಬಿಡಲ್ಲ ಓದಿಸಿ ಅದರ ಕಾಲಮೇಲೆ ಅದನ ನಿಲ್ಲಿಸ್ತಿನಿ ಹಗಲು ರಾತ್ರಿಯಾದರೂ ಕೂಲಿ ಮಾಡಿ ಅವುಕ್ಕ ಜೀವನುಕ್ಕ ದಾರಿ ಮಾಡ್ತಿನಿ, ನಾ ತವರು ಮನ್ಯಾಗ ಕಷ್ಟಪಟ್ಟಿಲ್ಲಂತ ದೇವರು ಇಲ್ಲಿ ಕಷ್ಟ ಇಟ್ಟನ ಅಂತ ತಮ್ಮ ನೋವನ್ನು ಹೇಳಿಕೊಂಡರು. ಇಷ್ಟೆಲ್ಲ ಕಷ್ಟದ ನಡುವೆಯೂ ಮಕ್ಕಳ ಭವಿಷ್ಯಕ್ಕಾಗಿ ದುಡಿಯುತ್ತಿರುವುದನ್ನು ನೋಡಬಹುದು.

ಪ್ರಕರಣ–೫೫

ಹೆಸರು	: ಸರಸ್ವತಿ ಗಂಡ ಹುಲುಗಪ್ಪ
ವಯಸ್ಸು	: ೩೮ ವರ್ಷ
ಗ್ರಾಮ	: ಕಡ್ಡಿರಾಂಪುರ
ಗ್ರಾಮ ಪಂಚಾಯಿತಿ	: ಹಂಪಿ
ವಿದ್ಯಾಭ್ಯಾಸ	: ೧ ನೇ ತರಗತಿ

ನನ್ನ ಹೆಸರು ಪೆದ್ದಮ್ಮ ಗಂಡ ಹುಲಿಗೆಪ್ಪ. ನಾನ್ನ ಹೆಸರು ಯಾಕಂಗಿಟ್ಟರಂದ್ರ ನಮ್ಮವ್ವಗ ಮದವಿ ಆಗಿ ಒಂದತ್ತು ವರ್ಷಆದ ಮ್ಯಾಗ ನಾ ಹುಟ್ಟಿನಂತೆ ಅದು ಪೆದ್ದಮ್ಮದೇವಿಗೆ ಹರಕೆ ಕಟ್ಟಿಕೆಂಡಾಗ ನಾ ಆದ್ನಂತೆ. ಹಂಗಾಗಿ ಪೆದ್ದಮ್ಮ ಅಂತ ಕರಿತಾರೆ. ನಾನು ಒಂದನೇ ತರಗತಿ ಓದಿನಂತೆ ನನಿಗೆ ಶಾಲಿ ನೆನಪಿಲ್ಲ. ನಮ್ದು ಬಾಳ ಕಷ್ಟ ಇತ್ತು ಹಂಗಾಗಿ ನಾನು ಅಮ್ಮನ ಕೂಡಿ ಕೆಲಸಕ್ಕ ಹೋಗ್ತಿದ್ದೆ, ಹಾಗಾಗಿ ಅವಳು ಮಾಡೊ ಕೆಲಸ ನೋಡಿ ಅಲ್ಪಸ್ವಲ್ಪ ಕಲಿತಿದ್ದೆ. ಅಮ್ಮ ಕೂಲಿ ಹೋಗಾಳು ಆಮೆಲೆ ಒರಲು ಕಿತ್ತುಕೊಂಡು ಬಂದು ಪೊರಕಿ ಮಾಡಿ ಮಾರ್ತಿದ್ಲು. ಅದಾದಮ್ಯಾಲೆ ಧೂಳು ಕೊಡವೊ ಪೊರಕೆ ಮಾಡ್ತಿದ್ಲು ಕಡ್ಡಿ ಕಸಪರಿಕೆ ಜೊತಿಗೆ ಈಚಲ ಪೊರಕೆ ಕಟ್ಟುತಿದ್ಲು ಇದೆಲ್ಲ ಮುಗಿದು ಮ್ಯಾಲೆ ಮಾರತಿದ್ಲು ಬಂದ ಹಣದಿಂದ ಜೀವನ ಅಪ್ಪನು ತೀರಿಹೋಗಿದ್ದ, ನಾನಾದಮ್ಯಾಲೆ ಮತ್ತೆ ನನ್ನಿಂದ

ಅಮ್ಮನಿಗೆ ಮಕ್ಕಳೆ ಆಗಲಿಲ್ಲ. ಅಮ್ಮ ಒಬ್ಬಳೆ ಕೂಲಿ ಮಾಡಿ ದುಡಿತಿದ್ರು ನಂತರ ನಾನು ಒಂದು ೧೭ ವಯಸ್ಸಾದ ಮ್ಯಾಗ ಮದುವೆ ಮಾಡಿದ್ಲು ಅಮ್ಮ ಅವನು ಏನು ಸಾಲಿ ಕಲಿತಿಲ್ಲ, ನಾವು ಬಡವರು ನಮಿಗ್ಯಾರು ಬರ್ತರ ಮದವಿ ಮಾಡಿಕೆನಕ ಅಂತ ಏನು ಕಲಿತಿಲ್ಲದ್ನಿಗೆ ಮತ್ತ ಏನು ಇಲ್ಲದವನಿಗೆ ನನ್ನ ಕಟ್ಟಿದಳ,

ನಾನು ಕೂಲಿ ಹೋಗಾದುರು ಜೊತಿಗೆ ಬುಟ್ಟಿ ಎಣಿಯದು, ಪೊರಿಕಿ ಕಟ್ಟದು ಕೆಲಸ ಮಾಡ್ತಿದಿನಿ ನನಿಗೆ ಇಷ್ಟೊರ್ಷ ಆದರೂ ಮಕ್ಕಳಾಗಿಲ್ಲ, ಎಲ್ಲಾದರೂ ತೋರುಸಬಕು, ಅದುಕ್ಕ ಅವ್ವ ನಾನು ಕುಲಿ ಮಾಡ್ತದಿವಿ. ಅವ ದುಡಿತಾನ ಆದ್ರು ಅಷ್ಟಕ್ಕಷ್ಟೆ ಗಂಡು ದಿಕ್ಕಿಲ್ಲದ ಮನಿಯಾಗ ಹೆಂಗು ಇರಲಿ ಅಂತ ನಾವು ಏನು ಕೇಳಾಂಗಿಲ್ಲ ಕೂಲಿನಾಲಿ ತಪ್ಪಿದ್ದಲ್ಲ ಅಂತಾರೆ. ಇವರನ್ನು ನೋಡಿದರೆ ಬರಿ ಕೂಲಿಯಿಂದ ಬಂದ ಹಣ ಜೀವನಕ್ಕೆ ಸಾಕಾಗದೆ ಇರೊದರಿಂದ ಅವರು ಪೊರಕೆ ಕಟ್ಟುವುದು ಅದು ಇದು ಕೆಲಸ ಮಾಡಿ ಜೀವನ ನಡೆಸುತ್ತಿರುವುದಂತೂ ವಿಪರ್ಯಾಸ.

ಒಟ್ಟಾರೆಯಾಗಿ ಈ ಎಲ್ಲ ಮಹಿಳೆಯರನ್ನು ನೋಡಿದಾಗ ಬಹುತೇಕ ಕೂಲಿಯ ಮೇಲೆ ಇವರೆಲ್ಲರ ಜೀವನ ಸಾಗುತ್ತಲಿದೆ. ಅಕ್ಷರ ಜ್ಞಾನವೂ ಇಲ್ಲ ಕಾರಣ ಬಡತನ ಅದರಿಂದ ಒಂದೊತ್ತಿನ ಊಟ ಸಿಕ್ಕರೆ ಸಾಕೆಂಬ ಪರಿಸ್ಥಿತಿ, ಇನ್ನೆಲ್ಲಿ ಓದು ಬರಹ ಕಲಿಯಲು ಆಸಕ್ತಿ ಇದ್ದರೂ ಸಹ ಬಡತನ ಅವರನ್ನು ಕೈಕಟ್ಟಿ ಕೂರಿಸಿದೆ, ಇನ್ನೊಂದು ಕಡೆ ನಾವಾದರೂ ಓದಿಲ್ಲ ಮಕ್ಕಳಾದರೂ ಕಲಿಯಲಿ ಎಂದು ಅವರಿಗಾಗಿ ಹಗಲಿರುಳು ಕೂಲಿ ಎಣಿಸುತ್ತಿದ್ದಾರೆ, ನಂತರ ಕುಡುಕ ಗಂಡಂದಿರು ಇನ್ನು ಕೆಲವರು ವಯಸ್ಸಾದವರು ಒಂದಿಷ್ಟು ಮಹಿಳೆಯರು ಅಲ್ಪ ಸ್ವಲ್ಪ ಭೂಮಿಯಿಂದ ಹಸನಾದ ಬದುಕು ಕಂಡಿದ್ದರೂ ಅಲ್ಲಿಯಾದರೂ ಅದೇ ಹೊಲ ಗೆಲಸ ಮಾಡಬೇಕಾಗಿದೆ. ಜೊತೆಗೆ ಹೀಗೆ ಒಂದೆರಡು ಮಹಿಳೆಯರಿಗೆ ರಾಜಕೀಯದಲ್ಲಿ ಬಾಗವಹಿಸಲು ಆಸಕ್ತಿ ಇದೆಯೇ ಎಂದು ಕೇಳಿದಾಗ ನಾವು ಬದುಕೋದೆ ದೊಡ್ಡದು ಅದರಲ್ಲಿ ದುಡ್ಡಿದ್ದವರಿಗೆ ಆ ರಾಜಕೀಯ ನಾವು ನೆನಪಾಗೋದು ಮತ ಹಾಕುವಾಗ ಅಷ್ಟೇ ನಂತರ ನಾವು ಹೋಗಿ ಅವರ ಕೈಕಾಲು ಹಿಡಿದು ಮನೆಕೊಡಿ ನಾವೀಗಿರುವುದು ಬೀಳುಹಾಗಿದೆ ಅಂದರೆ ಕಾಲಿನ ದೂಳಿಗಿಂತ ಕಡೆ ನೋಡ್ತಾರೆ ದೊಡ್ಡಮಂದಿ ದುಡ್ಡಿರರು ಸಹವಾಸ ನಮಿಗ್ಯಾಕೆ ಅಂತಾರೆಹೀಗೆ ಏಳುಬೀಳುಗಳ ನಡುವೆ ಎರಡು ದೋಣಿಗಳ ಮೇಲೆ ಕಾಲಿರಿಸಿದಂತೆ ಇದೆ ನಮ್ಮ ಬದುಕು ಎಂಬ ಅಂಶವನ್ನು ಹೇಳುತ್ತಾರೆ. ಇದನ್ನು ನೋಡಿದಾಗ ಇವರೆಲ್ಲ ಸಂಪೂರ್ಣ ಕೃಷಿ ಮೇಲೆ ಅವಲಂಭಿತವಾಗಿರುವುದಂತೂ ಸತ್ಯ.

ಪ್ರಕರಣ–೬

ಹೆಸರು : ಪದ್ದಮ್ಮ ಗಂಡ ಪಂಪಾಪತಿ

ವಯಸ್ಸು : ೨೬

ವೃತ್ತಿ : ವ್ಯವಸಾಯ ಕೃಷಿಕೂಲಿ

ಊರು : ಕರೆಕಲ್ಲು ಮಾಗಣಿ

ನನ್ನ ಹೆಸರು ಪದ್ದಮ್ಮ ಅಂತ ಎಲ್ಲರು ಪದ್ದು ಅಂತ ಕರಿತಾರೆ ನಾನು ೭ನೇ ಕ್ಲಾಸ್ ಓದಿದಿನಿ ಫಸ್ಟ್ ಕ್ಲಾಸ್ ಆಗಿದೆ. ನಮ್ಮಮ್ಮ ಅಪ್ಪ ವ್ಯವಸಾಯ ಮಾಡ್ತಾರೆ ನಾವು ಮೂರು ಜನ ಹೆಣ್ಣು ಮಕ್ಕಳು ಒಬ್ಬ ಅಣ್ಣ ಇದಾನೆ ಆತನು ಬೇಸಾಯನೆ ಮಾಡ್ತಾನೆ. ನಮ್ಮಕ್ಕನರದು ಮದುವೆ ಆಗಿದೆ ಅಣ್ಣಂದು ಆಗಿದೆ ನನ್ನ ಮದುವೆ ಆಗಿ ೩ ವರ್ಷ ಆಯ್ತು ನಾನು ಹತ್ತನೇ ತರಗತಿ ಓದಿದ್ದು ಎಲ್ಲನೂ ವ್ಯರ್ಥ ಆಯ್ತು ಬುದ್ಧಿ ಇದೆ ಆದ್ರೆ ಬೇರೆ ಏನು ಕೆಲಸ ಮಾಡೋಕಾಗ್ತಿಲ್ಲ. ಅದು ಮನೆಲೆ ಶಾಲೆಗೆ ಕಳಿಸದಿದ್ರು ಹಠ ಮಾಡಿ ನಾನೆ ರಜೆ ದಿನಗಳಲ್ಲಿ ಕೂಲಿ ಹೋಗಿ ಬಂದ ಹಣ ಕೂಡಿಟ್ಟು ಹಾಗೊ ಹೀಗೊ ೧೦ ನೇ ತರಗತಿ ಮುಗಿಸಿದೆ. ಆದರೆ ಈಗ ಅದೂನೂ ಉಪಯೋಗ ಆಗ್ತಿಲ್ಲ. ಕೂಲಿನೆ ನನ್ನ ಹಣೆ ಬರದಲ್ಲಿ ಬರೆದಿದೆ. ನನ್ನ ಗಂಡ ಡ್ರೈವರ್ ಒಂದು ವಾರ ಹೋದ್ರೆ ಇನ್ನು ಒಂದು ವಾರ ಮನೆಲಿ ಜೀವನ ಕಷ್ಟ. ಕೂಲಿ ಕೆಲಸ ಮಾಡಲ್ಲ ಗುತ್ತಿಗೆ ಹಿಡಿದು ಮಾಡಾಣ ಅಂದ್ರೆ ಈತನು ನಾನು ಬೇಸಾಯ ಮಾಡಲ್ಲ ಗಾಡಿಗೋಗಿ ಬಂದು ಎಷ್ಟು ಸಾಧ್ಯ ಅಷ್ಟು ಹಣ ಕೊಡ್ತೀನಿ ಬೇಕಿದ್ರೆ ನೀನೆ ಮಾಡು ಅಂತಾನೆ ಸಾಲದಕ್ಕೆ ಎರಡು ಹೆಣ್ಣು ಮಕ್ಕಳಾಗಿದವೆ ಈಗ ಗಂಡು ಮಗು ಬೇಕು ಅಂತಿದನೆ. ಅದಕ್ಕೆ ಹೀಗೆ ಇದ್ದರೆ ಕಷ್ಟ ಅಂತ ಬೇರೆಯವರ ಹೊಲವನ್ನ ಕಟಗುತ್ತಿಗೆ ಹಿಡಿದಿದ್ದೀನಿ ಅಂದರೆ ಎರಡು ವರ್ಷ ಅಥವಾ ಮೂರು ವರ್ಷ ಹಿಡಿಯೋದು ಅದಕ್ಕೆ ನಾವು ಮತ್ತು ಹೊಲದೊರು ಕೂಡ ಸರಿಸಮ ಕಾಳು ಗೊಬ್ಬರ ಹಾಕ್ತೀವಿ ಆದರೆ ಅವರು ಹೊಲ ಮಾಡಲ್ಲ ನಾವೆ ಮಾಡಬೇಕು ಬೆಳೆದ ಬೆಳೆಯಲ್ಲಿ ಅವರಿಗೆ ಅರ್ಧ ನಮಗರ್ಧ ಯಾಕಂದ್ರೆ ಹೊಲ ಅವರದು ಹಾಗಾಗಿ ನಮ್ಮಪ್ಪರು ಹಾಗೆ ಹೊಲ ಮಾಡ್ತಾರೆ ಅದರಲ್ಲಿ ನಮ್ಮಮ್ಮನೆ ಎಲ್ಲ ಹೊಲದ ಕೆಲಸ ನಿಭಾಯಿಸೊದು ಅಲ್ಲಿ ಕೆಲಸ ಮುಗಿಸಿಕೊಂಡು ಅಮ್ಮ ಇಲ್ಲಿನು ನನ್ನ ಕೆಲಸಕ್ಕೆ ಜೊತೆಯಾಗ್ತಾರೆ, ಇಷ್ಟೆಲ್ಲ ಮಾಡಿದ್ರು ನನ್ನ ಗಂಡ ಕುಡಿಯೋದು ಬಿಡ್ತಿಲ್ಲ. ನಮ್ಮಮ್ಮ ಈಗ ಅಂತಾರೆ ನೀನು ಓದುತಿದ್ದೆ ನಾನೆ ತಪ್ಪು ಕೆಲಸ ಮಾಡಿದೆ ನಿನ್ನನ್ನ ಓದಿಸಬೇಕಿತ್ತು. ಅಂತಾರೆ ಈಗ ಅಂದರೆ ಏನು ಪ್ರಯೋಜನ ನನಗೂ ನಮ್ಮಮ್ಮನ ಮೇಲೆ ಕೋಪ ಬರುತ್ತೆ ಆದರೆ ಆಗ ಪರಿಸ್ಥಿತಿ ಹಾಗಿತ್ತು ಮುಂದೆ ಓದಲು ಹಣ ಬೇಕಿತ್ತು ಸಾಲದಕ್ಕೆ ಇಪ್ಪತ್ತೈದು ಕಿ ಮೀ ದೂರಹೋಗಬೇಕಿತ್ತು ಅಂದು ಕೊಂಡು ನಾನು ಸುಮ್ಮನಾಗ್ತೀನಿ ಆದರೆ ನಾನಾದರೂ ಅಂದುಕೊಂಡ ಗುರಿ ಮುಟ್ಟಲಾಗದಿದ್ದರೂ ಇರುಮ ನನ್ನ ಮಕ್ಕಳನಾದ್ರು ಚನಾಗಿ ಓದಿಸ್ಬೇಕು ಅಂತ ಕೂಲಿ ಕೆಲಸ ಹೊಲದ ಕೆಲಸ ಎಲ್ಲ ಮಾಡ್ತ ಇದಿನಿ ಎಂದರು, ಕಲಿಯಲು ಆಸಕ್ತಿ ಇದ್ದರು ಪರಿಸ್ಥಿತಿ ಚನ್ನಾಗಿರಲಿಲ್ಲ ಎಂಬ ನಿಟ್ಟುಸಿರು ಬಿಟ್ಟದ್ದನ್ನು ಇಲ್ಲಿ ಕಾಣಬಹುದು.

ಪ್ರಕರಣ-೭

ಹೆಸರು : ಸಂಧ್ಯಾ ಗಂಡ ಮೌನೇಶ

ವಯಸ್ಸು : ೩೧

ವೃತ್ತಿ : ಕೃಷಿಕೂಲಿ

ಊರು : ಇಪ್ಪಿತ್ತೇರಿ ಮಾಗಣಿ

ನನ್ನ ಹೆಸರು ಸಂಧ್ಯಾ ನಾನು ೪ ನೇ ತರಗತಿ ಓದಿದಿನಿ ನಮ್ಮದು ಚಿಕ್ಕ ಕುಟುಂಬ ಆಗಿತ್ತು. ನಾನು ನಮ್ಮಪ್ಪ ನಮ್ಮಮ್ಮನಿಗೆ ಒಬ್ಬಳೆ ಮಗಳು ನಮಗೆ ಆಸ್ತಿ ಇರಲಿಲ್ಲ. ಅಪ್ಪ ಬೇರೆಯವರ ತೋಟದಲ್ಲಿ ಕೆಲಸ ಮಾಡ್ತಿದ್ರು ಅಮ್ಮ ಕೂಲಿ ಮಾಡ್ತಿದ್ರು ಆದರೆ ನಾವು ಚನಾಗೆ ಇದ್ದಿವಿ ಒಂದು ಸಲ ಅಪ್ಪನಿಗೆ ಪಾರ್ಶು ಹೊಡೆದು ಮನೆಲಿ ಹಾಸಿಗೆ ಹಿಡಿದರು. ನನ್ನ ಓದಿನ ಖರ್ಚಿಗೆ ಅಂತ ಕೂಡಿಟ್ಟ ಹಣವೆಲ್ಲ ಅಪ್ಪನಿಗೆ ತೋರ್‍ಸೋಕಂತ ಕಾಲಿಯಾಯ್ತು ಯಾವ ಸಂಬಂಧಿಕರು ಬಂದು ಕೈ ಹಿಡಿಲಿಲ್ಲ ಅಂತ ಸಂಧರ್ಭದಲ್ಲಿ ನಾನು ಅನಿವಾರ್ಯವಾಗಿ ಅಮ್ಮನೊಟ್ಟಿಗೆ ಕೆಲಸಕ್ಕೆ ಹೋಗಲೇಬೇಕಾಯಿತು. ನಾನು ಕೂಲಿ ಹೋಗುತಿದ್ದೆ ಆಮೆಲೆ ಬೇಸಿಗೆ ಸಮಯದಲ್ಲಿ ಹುಣಿಸೆ ಹಣ್ಣು ಕುಟ್ಟಲು ಹೋಗ್ತಿದ್ದೆ ಅಮ್ಮನೊಂದಿಗೆ ನಾನು ಕೆಲಸ ಮಾಡಾಕೆ ಶುರುಮಾಡಿದೆ ಶಾಲೆ ಬಿಟ್ಟೆ ಆಮೆಲೆ ಬೆಂಗಳೂರು ಕಡೆ ದುಡಿಯಾಕು ಹೋದೆ ಅಲ್ಲಿಗೆ ಬ್ಯಾಸಿಗೆಗೆ ನಮ್ಮೂರಿನೆಗೆ ಅಕ್ಕ ಪಕ್ಕಮನಿದೋರು ಜೊತೆ ಹೋಗಿ ಒಂದು ಇಪ್ಪತ್ತಿಪ್ಪತ್ತೈದು ಸಾವಿರ ತರುತಿದ್ದೆ ಆದರೆ ಅಪ್ಪನಿಗೆ ತೋರಿಸಾಕೆ ಮನೆ ಖರ್ಚಿಗೆ ಸಾಕಾಗುತಿತ್ತು. ಆಮೆಲೆ ಅಪ್ಪನಿಗೆ ಇನ್ನೇನು ತುಂಬಾ ಆರೋಗ್ಯ ಹದಗೆಟ್ಟಿತು ಅಮ್ಮನಿಗೆ ಮದುವೆ ಮಾಡು ಇರೊ ಒಬ್ಬಳು ಮಗಳು ನಾನು ಅಕ್ಕಿಕಾಳು ಹಾಕಿ ಸಾಯ್ತೀನಿ ಅಂತ ಹೇಳ್ತಿದ್ರು ಹಾಗಾಗಿ ಅಮ್ಮನು ನನ್ನ ಮದುವೆ ಮಾಡಿದ್ಲು ನನ್ನ ಗಂಡ ಐಟಿಐ ಮಾಡಿದನೆ ಬೆಂಗಳೂರಗೆ ದುಡಿತನೆ ಇಲ್ಲಿ ಅಪ್ಪನು ತೀರಿ ಹೋಗಿದ್ರಿಂದ ಇರೊ ಮನೆನು ಮಾರಿ ಅಮ್ಮ ನನ್ನೊಂದಿಗೆ ಇದಾರೆ ಅಮ್ಮ ನಾನು ಅತ್ತೆ ಮಾವ ಇದಿವಿ ನನ್ನ ಗಂಡ ಬೆಂಗಳೂರಿನಿಂದ ರಜೆ ಇದ್ದಾಗ ಬರ್ತಾರೆ. ಇಲ್ಲಿ ಅಮ್ಮನೂ ನಿಮ್ಮನೆಲಿ ಹಂಗೆ ತಿನ್ನಕಾಗಲ್ಲ ನಾನು ಏನಾದ್ರು ಕೆಲಸ ಮಾಡ್ತೀನಿ ಅಂತ ಹೇಳಿ ಅವರೂ ಕೂಡ ಕೆಲಸ ಮಾಡ್ತಾರೆ ನನ್ನ ಗಂಡ ಅಲ್ಲಿ ದುಡಿದು ಕಳಿಸಿದ್ದು ಇಲ್ಲ ಆಗಲ್ಲ ಹಂಗಾಗಿ ನಾನು ನಮ್ಮಮ್ಮನು ಕೂಲಿ ಮಡ್ತಿವಿ ಮುಂದೆ ಜಮೀನು ಕರೀದಿಸಬೇಕು ಅಂತಿದಿನಿ ಅಲ್ಲಿ ನೀರಾವರಿ ಮಾಡಬೇಕು ಅಂತ ಇದಿನಿ ನನಿಗೆ ನಮ್ಮದೇ ಜಮೀನು ಕೊಂಡುಕೊಳ್ಳಬೇಕು ಅನ್ನೋ ಆಸೆ ಇದೆ ಹಾಗಾಗಿ ನಾನು ಹಣ ಕೂಡಿಡ್ತ ಇದಿನಿ ಹಾಗೆ ಸಂಘದಲ್ಲೂ ನಾನು ಸದಸ್ಯೆ ಆಗಿದಿನಿ ಅಲ್ಲಿ ಸಾಲ ತಗೊಂಡು ಹೊಲ ಕರೀದಿ ಮಾಡಬೇಕು ದುಡಿಬೇಕು ಅಂತ ಇದಿನಿ. ಅಮ್ಮನು ಕೂಲಿ ಮಾಡ್ತಾರೆ ಮತ್ತೆ ಬೇರೆಯವರ ಮನೆಲಿ ಕಾಳು ಕಸ ಮಾಡ್ತಾರೆ ನಾನು ಕೂಲಿ ಮಾಡ್ತೀನಿ ನನ್ನ ಗಂಡ ಒಳ್ಳೆಯವರಿದಾರೆ ಅವರೂ ದುಡಿದು ಕಳಿಸ್ತಾರೆ ಅದನ್ನೂ ಕೂಡಿ ಇಡ್ತಾ ಇದಿನಿ ನನಗೆ ಇನ್ನು ಮಕ್ಕಳಾಗಿಲ್ಲ ಡಾಕ್ಟರ್ ಹತ್ತಿರ ತೋರಿಸ್ಬೇಕು ಅಮತ ಇದಿವಿ ನನ ಗಂಡ ಅದಕಾಗಿ ಹಣ ಇಡುತಿದರೆ ನಾನು ಕೂಲಿ ಮಾಡ್ತಿನಿ ಇನ್ನು ಮನಿ ಕಟ್ಟುಸ್ಬಾಕು ಹಾಗಾಗಿ ಹಣ ಇಡ್ತಿದಿನಿ. ಎಂದು ಹೇಳಿದರು ಇಲ್ಲಿ ಕೂಲಿ ಮಾಡಿದರೂ ಬದುಕಿನ ಹಲವಾರು ಕನಸು ಹೊತ್ತ ಮಹಿಳೆ ಯಾವುದೋ ಪರಿಸ್ಥಿತಿಗೆ ಒಳಗಾಗಿ ಕೂಲಿ ಮಾಡಿ ಬದುಕುವ ಸ್ಥಿತಿಯನ್ನು ತೋರಿಸುತ್ತದೆ.

ಪ್ರಕರಣ-೮

ಹೆಸರು : ತಿಪ್ಪಮ್ಮ ಗಂಡ ಶ್ರೀನಿವಾಸ

ವಯಸ್ಸು : ೨೭

ವೃತ್ತಿ : ಕೃಷಿಕೂಲಿ

ಊರು : ಕಮಲಾಪುರ

ನನ್ನೆಸುರು ತಿಪ್ಪಮ್ಮ ನಾನು ಏಳನೆ ಕ್ಲಾಸು ಕಲಿತಿನಿ ನನಿಗೆ ಓದಾಕ ಅಷ್ಟು ಬರಲ್ಲ. ನಮ್ಮಮ್ಮನು ದಡ್ಡಿ ನಮ್ಮಪ್ಪನಿಗು ಏನು ತಿಳಿಯಲ್ಲ. ನಮ್ಮಮ್ಮ ಹೇಳಿದ್ದು ಮಾಡ್ತಾನೆ ನಾವು ಇಬ್ಬರು ಹೆಣ್ಣು ಮಕ್ಕಳು ನಮ್ಮಮ್ಮ ಹೊಟ್ಟೆ ತುಂಬಿದ್ರೆ ಸಾಕು ಅಂತಾಳೆ ದುಡಿಯೊದು ತಿನ್ನೊದು ಅನ್ನೋ ಹಾಗೆ ಜೀವನ ಆಗಿತ್ತು. ಶಾಲಿಗೆ ಹೋದ್ರೆ ಸರಿಯಾಗಿ ಪುಸ್ತಕ ಇಲ್ಲ ಬಟ್ಟೆ ಇಲ್ಲ ಏಳು ಓದಿಸಿದ್ದು ಅದು ದೊಡ್ಡದು ಅದುಕ್ಕೂ ಶಾಲಿಗೆ ಹೋಗಲಿಲ್ಲ ಬಟ್ಟೆ ಬುಕ್ಕ ಕೊಡುವಾಗ ಮಾತ್ರ ಕಳುಸ್‌ತಿದ್ಲು ಶಾಲಿಗೆ ಆಮೆಲೆಲ್ಲ ಕೂಲಿಗೆ ಹೊಲನೂ ಇರಲಿಲ್ಲ. ನನಗೂ ಬುದ್ದಿ ಬಂದ ಮೇಲೆ ಕೂಲಿ ಹೋಗಿದ್ದೆಲ್ಲ ದೊಂಡುಗಿಟ್ಟು ಕಿವಿಯಾಕೆ ಬೆಂಡಾಲೆ ಕಾಲಕ ಚೈನ ಸೀರೆಗಳು ಎಲ್ಲ ತಗಂಡಿನಿ ಆಮೆಲೆ ಮನೆ ಸೋರುತಿತ್ತು ಮೇಲೆ ಮಣ್ಣಿಂದು ಸೀಟು ಹಾಕಿಸಿವಿ ನನಿಗೆ ಇಷ್ಟ ಇಲ್ಲಂದ್ರು ಹದಿನೇಳನೆ ವಯಸ್ಸಿಗೆ ನಮ್ಮ ಅಮ್ಮನ ಚಿಕ್ಕಮ್ಮನ ಮಗನಿಗೆ ನನ್ನ ಗಂಟಾಕಿದ್ರು ಆತನೂ ಶುದ್ದ ದಡ್ಡ ಹೇಳಿದ್ರೆ ಏನನ ಕೆಲಸ ಮಾಡ್ತಾನೆ ಇಲ್ಲಂದರೆ ಊರಗಲದಾಡಿ ಉಂಡು ಮಕ್ಕಳ್ತಾನೆ ಇದೆ ಆತನ ಕೆಲಸ ನಾನು ಇದೆಲ್ಲ ನೋಡಿ ನೋಡಿ ಸಾಕಾಗಿ ಮಂಗಳೂರು ಕಡಿಗೆ ಕಾಫಿ ಬೀಜ ಬಿಡುಸಾಕ ಮತ್ತ ಮೆಣಸಿನಕಾಯಿ ಬಿಡುಸಾಕ ಬ್ಯಾರೆ ಕಡೆ ದುಡಿಯಾಕಂತ ನನ್ನ ಗಂಡನ ಕರಕಂಡು ಒಂದು ಐದು ವರ್ಷ ದುಡಿಯಾಕ ಹೋದೆ ಆಮೆಲೆ ಒಂದೀಟು ಎಲ್ಲ ದೊಂಡುಗಿಟ್ಟಗಂಡು ಬಂದು ಒಂದೆಕರೆ ಹೊಲ ಕರೀದಿಸಿದಿವಿ ಓದು ಎಪ್ಪತ್ತೆಪ್ಪತ್ತೈದು ಸೇರು ಬೀಜ ಅರಿತತೆ ಅಂತ ಹೊಲ ಕರೀದಿ ಮಡಿನಿ ಗೌರಮೆಂಟು ಕೊಡ ಮನಿಜೊತಿಗೆ ನಾನು ಒಂದಿಷ್ಟು ಕೈಲಾಕಿ ಮನಿ ಕಟ್ಟಿಸಿನಿ ಇಂತ ಗಂಡ ದಡ್ಡನ್ನ ಹಿಡಕೊಂಡು ಹೊಲ ಮಾಡತಿದಿನಿ. ನನಿಗೆ ಒಣದೆ ಗಮಡು ಮಗ ಇದೆ ಸಾಕು ಸುಮ್ಮನೆ ಮಕ್ಕಳು ಮಾಡಿಕೆಂಡು ನಾವು ಕಷ್ಟ ಪಡದಲ್ದ ಅವುಕ್ಕು ಯಾಕ ಕಷ್ಟ ಕೊಡಬೇಕು ಕೈಲಾದರೆ ದುಡುದು ಮಕ್ಕಳನ್ನ ಒಳ್ಳೆ ಸ್ಥಾನುಕ್ಕ ತರಂಗಿರಬಕು ಈಗ ನಾವಾದಂಗ ಮಕ್ಕಳಾಗಬಾರದು ಈ ವಯಸ್ಸಿಗೆ ನಾನು ಪಡಬಾರದ ಕಷ್ಟ ಪಟ್ಟೀನಿ ಮತ್ತೆ ಕಣ್ಣೀರಿನಾಗೆ ಕೈ ತೊಳಿದಿನಿ ಎಲ್ಲ ಇದ್ದೋರ ಮನಿಯಾಗ ಹುಟ್ಟಿದ್ರ ಒಂದು ಲೆಕ್ಕ ಇಲ್ಲಂದ್ರ ಏನೂ ಇರಲಾರದವರ ಮನಿಯಾಗ ಹುಟ್ಟಬೇಕು ಅರ್ಧಬರ್ಧ ಇರೊ ಇಂತ ಮನಿಗಳಗ ಹುಟ್ಟಬಾರದು ನಾನೆನಂತ ಧರಿದ್ರಕ್ಕೆ ಹುಟ್ಟಿದಿನಿ ಅಂತ ತಿಳಿದಿಲ್ಲ ಬೆಳಗಾದ್ರೆ ಒಂದುಕಷ್ಟ ಹೊತಾದರೆ ಒಂದು ಕಷ್ಟ ಒಂದು ಕಟ್ಟಿಕೊಂಡ ಗಂಡನಾದ್ರೂ ಬದುಕಂದ್ರೆ ಏನು ಅಂತ ತಿಳಿದಿರಬೇಕು ಇನ್ನೊಂದು ಕಟ್ಟಿಕೊಳ್ಳೊಳಾದ್ರು ತಿಳಿದಿರಬೇಕು ಇಲ್ಲಂದ್ರೆ ಬಾಳು ನಮ್ಮದಾದಂಗೆ ಆಗೋದು ಹಾಗಾಗಿ ನಮ್ಮ ಕಾಲ ಮೇಲೆ ನಾವು

ನಿಲ್ಲಬೇಕು ಎಲ್ಲರಿಗೂ ಈ ಕೂಲಿ ಮಾಡಕಾಗಲ್ಲ ವಯಸ್ಸಿರುವರಿಗೂ ಮಾಡಬೋದು ಆಮೇಲೆ ಜೀವನಕ್ಕ ಏನಾದ್ರು ಮಾಡಬಕಲ್ಲ ಸ್ವಂತ ಹೊಲನಾದ್ರು ಇರಬೇಕು ಇಲ್ಲಂದ್ರೆ ಬರೆ ಬ್ಯಾರೆರ ಹೊಲದಾಗ ಜೀತ ಮಾಡ ಪರಿಸ್ಥಿತಿ ಇರ್‍ತದೆ ಅಷ್ಟೆ ಎಂದು ಆ ಮಹಿಳೆ ತನ್ನ ಜೀವನ ಕೂಲಿ ಮೇಲೆಯೇ ನಿಂತಿದೆ ಎಂದು ಹೇಳಿದರು.

ಪ್ರಕರಣ–೯

ಹೆಸರು : ಲಲಿತಮ್ಮ ಗಂಡ ಹುಲುಗಪ್ಪ

ವಯಸ್ಸು : ೪೭

ವೃತ್ತಿ : ಕೃಷಿಕೂಲಿ

ಊರು : ಹೊಸಪೇಟೆ ಪಟ್ಟಣ

ನನ್ನ ಹೆಸರು ಲಲಿತಮ್ಮ ನನ್ನ ಗಂಡ ಹುಲುಗಪ್ಪ ನಾನು ಓದಿಲ್ಲ ನನ್ನ ಗಂಡ ಆರನೆ ತರಗತಿ ಓದಿದರೆ ನಮ್ಮಪ್ಪನವರದು ಕೃಷಿ ಕುಟುಂಬ ೪ ಎಕರೆ ಜಮೀನು ಇದೆ ನಾವು ಮೂರು ಜನ ಹೆಣ್ಣು ಮಕ್ಕಳು ನಮ್ಮಣ್ಣಂದಿರು ಇಬ್ಬರು ಅದರಲ್ಲಿ ಒಬ್ಬುರು ಬೇರೆ ಕಡೆ ಇದರೆ ಇನನೊಬ್ಬರು ವ್ಯವಸಾಯ ಮಾಡ್ತಾರ ನಮ್ಮದು ಎದುರೆಣ್ಣು ಮಾಡೆರೆ ಅಂದರೆ ನಮ್ಮ ಸಣ್ಣ ಅಣ್ಣನಿಗೆ ನನ್ನ ಗಂಡನ ತಂಗಿಯನ್ನು ಮದುವೆ ಮಾಡಿದ್ದಾರೆ ನನ್ನನ್ನು ಅವರಿಗೆ ಮದುವೆ ಮಾಡಿದ್ದಾರೆ ಅಂದರೆ ಎದುರೆಣ್ಣು ಎಂದು ಕರಿತಾರೆ. ನನ್ನ ಗಂಡ ವ್ಯವಸಾಯಗಾರ ಆತ ಒಳ್ಳೆಯವನು ಅವರದು ಮೂರು ಎಕರೆ ಜಮೀನು ಇದೆ ನಮ್ಮ ಅತ್ತೆ ಮಾವ ತುಂಬಾ ಒಳ್ಳೆಯವರಿದ್ದಾರೆ. ಅವರೂ ಸಹ ಹೊಲದ ಕೆಲಸ ಮಾಡ್ತಾರೆ ನಮಗೆ ಇಬ್ಬರು ಹೆಣ್ಣು ಮಕ್ಕಳು ಇದಾರೆ ಒಬ್ಬ ಮಗ ಒಬ್ಬ ಮಗಳಿಗೆ ಬಿ ಎ ಮಾಡಿಸಿದಿವಿ ಇನ್ನೊಬ್ಬ ಮಗಳಿಗೆ ಪಿ ಯು ಸಿ ಮಗ ಐಟಿಐ ಮಾಡಿದಾನೆ ದುಡಿಯಾಕೆ ಹೋಗ್ಯಾನೆ ನನ್ನಸಣ್ಣಮಗಳಿಗೆ ಅಂಗನವಾಡಿ ಟೀಚರ್ ಕೆಲಸ ಸಿಕ್ಕಿದೆ.ಇಬ್ಬರಿಗೂ ಮದುವೆ ಮಾಡಿಸಿದಿನಿ ನಾವು ಮನೆಯಲಿ ಚನಾಗಿ ಇದಿವಿ ಆದರೆ ಮನೆ ಹಳೆಯದು ಮಣ್ಣು ಸುರಿತಿದೆ ಮನೆ ಕಟ್ಟಿಸಬೇಕು ಅಂತ ದುಡಿತಿದಿವಿ ಮಗನೂ ದುಡಿತಿದನೆ ಈಗ ಹೆಣ್ಣು ಮಕ್ಕಳ ಹೆರಿಗೆ ಖರ್ಚು ಅಂತ ಹೇಳಿ ಸಾಲ ಮಾಡಿದಿವಿ ಅದಕ್ಕಾಗಿ ನಮ್ಮದೇ ಹೊಲದಲ್ಲಿ ದುಡಿತಿದಿವಿ. ಒಂದೆಕರಿಗೆ ನೀರು ಹರಿಸಿ ಸೊಪ್ಪು ತರಕಾರಿನೂ ಬೆಳಿತಿದಿವಿ ದನ ಕರ ಸಾಕಿವಿ ಅವುಕ್ಕು ಹುಲ್ಲು ಬೆಳಿತಿವಿ ನನ್ನ ಗಂಡನೂ ಬ್ಯಾಸಾಯ ಬಾಡಿಗೆ ಹೋಗ್ತಾರೆ ನಾನು ಕೂಲಿ ನಾಲಿ ಮಾಡ್ತೀನಿ. ನನಿಗೆ ಹೊಲದಾಗಿನ ಬದುಕು ಬಿಟ್ರೆ ಬ್ಯಾರೊಂದು ಕೆಲಸ ಗೊತ್ತಿಲ್ಲ. ವೀಳೆದೆಲೆ ಕತ್ತರಸಕ ಹೋಕಿನಿ ಅದಕ್ಕ ಕೂಲಿನು ಚನಾಗ ಸಿಕ್ತತೆ ಯಾಕಂದ್ರ ವೀಳ್ಯೆದೆಲೆ ಎಲ್ಲರಿಗೂ ತೆಗಿಯಾಕ ಬರಂಗಿಲ್ಲ ಹಾಂಗಾಗಿ ಉಳ್ಳಾಗಡ್ಡೆ ಕೀಳಾಕ ಸವತೆಕಾಯಿ ಕೀಳಾಕ ಹಿಂಗೆ ಮಾಡ್ತಿದಿವಿ ಯಾಕಂದ್ರ ನಮಿಗೆ ಹೊಲುದ್ದ ಕೆಲಸ ಬಿಟ್ರೆ ಬ್ಯಾರೆ ಕೆಲಸ ಗೊತ್ತಿಲ್ಲ ಹಂಗಾಗಿ ಮಗ ಇನ್ನಮ್ಯಾಲೆ

ಮನಿಯಾಗಿಂದಷ್ಟ ನೋಡ್ಕೊಳಿ ಹೊಲದಾಗ ಕುಲಿ ಹಾಳ ಇಟ್ಟು ಮಾಡಿಸಿ ಹಣ ಕೊಟ್ಟರಾಯ್ತು ಅಂತಾನೆ ಅದರೆ ಕೆಲಸ ಮಾಡಿದ್ದು ಕೈಗುಳು ಸುಮ್ಮನೆ ಕೂಡಂಗನಸ್ಲ್ಲ ಮೇಲಾಗಿ ಅವನೊಬ್ಬನೆ ದುಡುದುದ್ದ ಮನೆಗೆ ಸಾಲಂಗಿಲ್ಲ, ಹೆಣ್ಣು ಮಕ್ಕಳನ್ನ ಕರಿಯೋದು ಕಳುಸೋದು ಹಬ್ಬ ಹುಣಿವೆ ಬಟ್ಟೆ ಬರೆ ಅಂತ ಖರ್ಚು ಬಾಳ ಹಂಗಾಗಿ ಹೊಲದ ಕೆಲಸ ಮಾಡ್ತೀನಿ ಎಂದರು.

ಪ್ರಕರಣ–೧೦

ಹೆಸರು : ಈರಮ್ಮ ಗಂಡ ರಾಮಪ್ಪ

ವಯಸ್ಸು : ೪೮

ವೃತ್ತಿ : ಕೃಷಿಕೂಲಿ

ಊರು : ಬಸವನದುರ್ಗ

ನನ್ನ ಹೆಸರು ಈರಮ್ಮ ನಾನು ನಾಕನೇ ಕ್ಲಾಸು ಕಲಿತಿನಿ ನಮ್ಮಪ್ಪರ ಮನೆಲಿ ನಾವು ಕೆಲಸ ಮಾಡಿದಲ್ಲ ನಮ್ಮನ್ನ ಹಂಗ ಸಾಕ್ಯಾರೆ ಏನು ದನ ಕರುಕ್ಕ ನೀರು ಮೇವು ಅಷ್ಟೇ ನೋಡ್ತಿದ್ವಿ ನಾವು ಮೂರು ಜನ ಹೆಣ್ಮಕ್ಕಳು ಅದರಲ್ಲಿ ನಾನೆ ದೊಡ್ಡೋಳು ನನ್ನ ತಂಗೆರು ಇಬ್ಬರು ಒಳ್ಳೆ ಮನಿಯಾಗೆ ಅದಾರೆ ನನ್ನದೆ ಒಂದೀಟು ಬದುಕು ಕಷ್ಟ. ನನಿಗೆ ನಾಕು ಹೆಣ್ಮಕ್ಕಳು ಒಂದು ಗಂಡು ಮಗ, ನನ್ನ ಗಂಡ ಕುಡಿಯೊದು ಊರಲ್ಲಿ ಅಡ್ಡಾಡದು ಬಿಟ್ರೆ ಬೇರೆ ಕೆಲಸ ಗೊತ್ತಿಲ್ಲ. ದೊಡ್ಡ ಮಗಳನ್ನು ನನ್ನ ತಮ್ಮನಿಗೇ ಕೊಟ್ಟೀನಿ ಎರಡನೆ ಮಗಳನ್ನ ನನ್ನ ಗಂಡನ ತಂಗಿ ಮಗನಿಗೆ ಕೊಟ್ಟೀವಿ ಇನ್ನೆರಡು ಮಕ್ಕಳನ್ನ ಬೇರೆ ಕಡೆ ಕೊಟ್ಟೀನಿ ಮೊದಲೆರಡು ಮಕ್ಕಳ ಮದುವೆ ಖರ್ಚು ಅಷ್ಟು ಬರಲಿಲ್ಲ. ಆದರೆ ಮೂರು ಮತ್ತು ನಾಲ್ಕನೆ ಮಕ್ಕಳ ಮದುವೆಗೆ ಖರ್ಚು ಹೆಚ್ಚಾದರಿಂದ ಸಾಲ ಹೊರೆಯಾಯ್ತು ಜೊತೆಗೆ ನನಗೂ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಆಸ್ಪತದರೆಗೆಂದು ಹಣ ತುಂಬಾ ಖರ್ಚಾಯ್ತು ಆಮೆಲೆ ಇರುವ ಮೂರು ಎಕ್ಕರೆ ಹೊಲವನ್ನು ನಾನೆ ಎಲ್ಲ ಸ್ವಚ್ಛಮಾಡಿ ಕೃಷಿ ಮಾಡ್ತಾ ಇದಿನಿ. ನನ್ನ ತಮ್ಮ ಎಲ್ಲನು ನೋಡಿಕೊಳ್ತಾನೆ ಆಗಾಗ ಬಂದು ನನ್ನ ಗಂಡ ಹೀಗೆ ಕುಡಿದು ಬಡಿದು ಬೇರೊಬ್ಬಳ ಸಹವಾಸ ಮಾಡಿ ಅಷ್ಟಿಷ್ಟು ದುಡಿದ ಹಣವನ್ನೆಲ್ಲ ಖರ್ಚು ಮಾಡ್ತಾನೆ ಸುಮ್ಮನೆ ಅವರಿವರಿಂದೆ ತಿರುಗುತಾನೆ ಇರುವ ಒಬ್ಬ ಮಗನನ್ನು ಹದ್ದುಬಸ್ತು ಇಟ್ಟಿಲ್ಲ. ಅವನೂ ಹೇಳಿದ ಮಾತು ಕೇಳ್ತಿಲ್ಲ. ಅವನೂ ಎಲ್ಲಿ ಅವರಪ್ಪನ ಹಾಗೆ ಹಾಕ್ತಾನೊಅನ್ನೋ ಭಯ, ನಾನೇನಾದರೂ ಹೇಳಿದ್ರೆ ನನಗೆ ಹೊಡಿತಾನೆ ಇರೋ ಒಬ್ಬ ಮಗ ಹೆಂಗಾದ್ರೂ ಇರಲಿ ಅವನಿಗಿಷ್ಟ ಬಂದಂಗೆ ಇರಲಿ ಬಿಡು ಅಂತಾನೆ ಇಂತವರಿಗೆಲ್ಲ ಹೆಂಡತಿ ಮಕ್ಕಳು ಯಾಕೆ ಬೇಕು ಅನ್ನಿಸ್ತತೆ ನಾನು ಕಷ್ಟಪಟ್ಟು ದುಡಿದು ಹೊಲದಲ್ಲಿ ಬೆಳೆ ಬೆಳೆದರೆ ಅದೂ ಕೂಡ ಪೂರ್ತಿ ನನ್ನ ಕೈ ಸೇರಲ್ಲ ಏನು ಮಾಡೋದು ನನ್ನ ಹಣೆ ಬರಹ ಅಂತ ಹೇಳಿದರು.

ಆಧಾರಗಳು

ಮಾರಕ್ಕ(ಮಾ) ವಯಸ್ಸು ೬೫, ವೃತ್ತಿ : ಕೂಲಿ, ನರಸಿಂಹನಗಿರಿ, ಕೂಡ್ಲಿಗಿ ತಾಲೂಕು

ಸಾಕಮ್ಮ(ಮಾ) ವಯಸ್ಸು ೨೫, ವೃತ್ತಿ : ಕೂಲಿ, ಜರ್ಮಲಿ, ಕೂಡ್ಲಿಗಿ ತಾಲೂಕು

ನಾಗೇಂದ್ರಮ್ಮ(ಮಾ) ವಯಸ್ಸು ೨೯, ವೃತ್ತಿ : ಬೇಸಾಯ, ಗೆದ್ದಲಗಟ್ಟೆ, ಕೂಡ್ಲಿಗಿ ತಾಲೂಕು

ಅನಿತಾ(ಮಾ) ವಯಸ್ಸು ೩೫, ವೃತ್ತಿ : ಕೂಲಿ, ಯರೋಬಯ್ಯನಹಟ್ಟಿ, ಕೂಡ್ಲಿಗಿ ತಾಲೂಕು

ಮದ್ದಾನಮ್ಮ(ಮಾ) ವಯಸ್ಸು ೨೮, ವೃತ್ತಿ : ಕೂಲಿ, ಹೊಸಹಟ್ಟಿ, ಕೂಡ್ಲಿಗಿ ತಾಲೂಕು

ಚಂದ್ರಮ್ಮ (ಮಾ) ವಯಸ್ಸು ೫೮, ವೃತ್ತಿ : ಕೂಲಿ, ಕೂಡ್ಲಿಗಿ ಪಟ್ಟಣ, ಕೂಡ್ಲಿಗಿ ತಾಲೂಕು

ರುದ್ರಮ್ಮ (ಮಾ) ವಯಸ್ಸು, ೩೬, ವೃತ್ತಿ : ವ್ಯವಸಾಯ, ಜರ್ಮಲಿ, ಕೂಡ್ಲಿಗಿ ತಾಲೂಕು

ಮಹಾಲಕ್ಷ್ಮಿ (ಮಾ), ವಯಸ್ಸು, ೩೨ : ಕೃಷಿ ಕೂಲಿ, ಹಾಲಸಾಗರಹಟ್ಟಿ, ಕೂಡ್ಲಿಗಿ ತಾಲೂಕು

ನಾಗಮ್ಮ (ಮಾ) ವಯಸ್ಸು, ೩೭ : ಕೃಷಿ ಕೂಲಿ, ಮಡಕಲ ಕಟ್ಟೆ, ಕೂಡ್ಲಿಗಿ ತಾಲೂಕು

ನೇತ್ರಾವತಿ(ಮಾ) ವಯಸ್ಸು ೩೧, ವೃತ್ತಿ : ಬೇಸಾಯ, ಹೊಸೂರು, ಹೊಸಪೇಟೆ, ತಾಲೂಕು

ಶಾರದಮ್ಮ(ಮಾ) ವಯಸ್ಸು ೪೦, ವೃತ್ತಿ : ಕೂಲಿ, ಮಲಪನಗುಡಿ, ಹೊಸಪೇಟೆ, ತಾಲೂಕು

ಅಂಜೀನಮ್ಮ(ಮಾ) ವಯಸ್ಸು ೪೫, ವೃತ್ತಿ : ಬೇಸಾಯ, ನಾಗೇನಹಳ್ಳಿ, ಹೊಸಪೇಟೆ, ತಾಲೂಕು

ನಾಗಮ್ಮ(ಮಾ) ವಯಸ್ಸು ೪೦, ವೃತ್ತಿ : ಕೂಲಿ, ವೆಂಕಾಟಪುರ, ಹೊಸಪೇಟೆ, ತಾಲೂಕು

ಸರಸ್ವತಿ(ಮಾ) ವಯಸ್ಸು ೪೦, ವೃತ್ತಿ : ಕೂಲಿ, ಕಡ್ಡಿರಾಂಪುರ, ಹೊಸಪೇಟೆ, ತಾಲೂಕು

ಪದ್ಮಮ್ಮ (ಮಾ), ವಯಸ್ಸು, ೨೬, ವೃತ್ತಿ : ಕೃಷಿ ಕೂಲಿ, ಕರಕಲ್ಲ್ ಮಾಗಾಣಿ ಹೊಸಪೇಟೆ ತಾಲೂಕು

ಸಂಧ್ಯ (ಮಾ) ವಯಸ್ಸು ೩೧, ವೃತ್ತಿ : ಕೃಷಿ ಕೂಲಿ, ಇಪ್ಪಿತ್ತೇರಿ ಮಾಗಾಣಿ, ಹೊಸಪೇಟೆ ತಾಲೂಕು

ತಿಪ್ಪಮ್ಮ (ಮಾ) ವಯಸ್ಸು ೨೭, ವೃತ್ತಿ : ಕೃಷಿ ಕೂಲಿ, ಕಮಲಾಪುರು, ಹೊಸಪೇಟೆ ತಾಲೂಕು

ಲಲಿತಮ್ಮ (ಮಾ) ವಯಸ್ಸು ೪೭, ವೃತ್ತಿ : ಕೃಷಿ ಕೂಲಿ, ಹೊಸಪೇಟೆ ಪಟ್ಟಣ, ಹೊಸಪೇಟೆ ತಾಲೂಕು

ಈರಮ್ಮ(ಮಾ) ವಯಸ್ಸು ೪೮, ವೃತ್ತಿ : ಕೃಷಿ ಕೂಲಿ, ಬಸವನ ದುರ್ಗ, ಹೊಸಪೇಟೆ ತಾಲೂಕು

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು
ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಯನಕ್ಕೆ ಸಂಬಂಧಿಸಿದ ಸಲಹೆಗಳು

ಮುಂದಿನ ಅಧ್ಯಯನದ ಸಾಧ್ಯತೆಗಳು

ಅಧ್ಯಾಯ : ಏಳು

ಸಮಾರೋಪ

ಭಾರತದ ಕೃಷಿ ಸಮುದಾಯದಲ್ಲಿ ಮಹಿಳೆಯರ ಪ್ರಮಾಣ ಒಂದು ಅಂದಾಜಿನ ಪ್ರಕಾರ ೬೦ ರಷ್ಟಿದೆ. ಶೇಕಡ ೭೦ ರಷ್ಟು ಕೃಷಿ ಕೆಲಸಗಳನ್ನು ಮಾಡುವವರು ಅವರೇ, ಹೆಚ್ಚಿನ ಕೌಶಲ್ಯ ಬೇಕಿಲ್ಲದ ಈ ವಲಯ ಮಹಿಳೆಗೆ ಕೆಲಸವಿಲ್ಲದೆ ಆಹಾರವನ್ನು ನೀಡುತ್ತದೆ. ಹೀಗಾಗಿ ಆಹಾರ ಉತ್ಪಾದನೆಯಲ್ಲಿ ಮಹಿಳೆಯರದೆ ಪ್ರಮುಖ ಪಾತ್ರ. ನಂತರ ಅಡುಗೆ ಮನೆಯಲ್ಲಿ ಆಹಾರ ಬೇಯಿಸುವವಳು ಅವಳೇ ಆದರೂ ಆಕೆಯನ್ನೇ ಅಪೌಷ್ಟಿಕತೆ ತೀವ್ರವಾಗಿ ಕಾಡುತ್ತದೆ ಏಕೇ? ಅದು ಆಕೆಗೆ ನ್ಯಾಯವಾಗಿ ಸಿಗಬೇಕಾದ ಸಮಪಾಲು ಸಿಗದಿರುವುದು. ಸಮಪಾಲು ಸಿಗುವುದಿರಲಿ ಆಕೆಯ ಅಸ್ತಿತ್ವವೇ ಅಗೋಚರವಾಗುವ ಕಟು ವಾಸ್ತವವೂ ಇದೆ. ಪ್ರಾಚೀನ ಕಾಲದಲ್ಲಿ ಮಹಿಳೆಯರು ಪಾರಂಪರಿಕ ಕೃಷಿಕ್ಷೇತ್ರದಲ್ಲಿ ಸಾಗುವಳಿದಾರರಾಗಿ, ಕೃಷಿ ಕಾರ್ಮಿಕರಾಗಿ, ಕುಟುಂಬದ ಆರ್ಥಿಕ ಬೆಂಗಾವಲಾಗಿ ದುಡಿಯುತ್ತಿದ್ದರು. ಆಧುನಿಕ ಕೃಷಿ ಪದ್ಧತಿಯಲ್ಲಿ ಅವರ ಪಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತಿಲ್ಲ. ವ್ಯವಸಾಯದಲ್ಲಿ ಮಹಿಳೆಯರ ಪಾತ್ರ ಅಪಾರವಾದದ್ದು. ಮಾನವನ ಉಗಮದಿಂದ ಹಿಡಿದು ಇಂದಿನವರೆಗೂ ಕೃಷಿ ಆಚರಣೆ ಪದ್ಧತಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮತ್ತು ತೀವ್ರಗತಿಯಲ್ಲಿ ಬದಲಾವಣೆ ಮತ್ತು ಅಭಿವೃದ್ಧಿಯನ್ನು ಕಂಡುಕೊಳ್ಳಲಾಗಿದೆ. ಇದಕ್ಕೆ ಮಾನವನ ಬುದ್ಧಿಶಕ್ತಿ ಮತ್ತು ಕೃಷಿಗೆ ಸಂಬಂಧಿಸಿದ ಶಿಕ್ಷಣವೇ ಪ್ರಮುಖ ಕಾರಣ. ಮಾನವನ ವಿಕಾಸದ ನಂತರ ಮಾನವನು ಮೊದಲು ಕಾಡು, ಗುಡ್ಡ, ಗುಹೆಗಳಲ್ಲಿ ವಾಸಿಸುತ್ತ ಬೇಟೆಯೇ ಮೂಲಕಸುಬನ್ನಾಗಿ ಮಾಡಿಕೊಂಡು ಜೀವಿಸುತ್ತಾ ಕಾಲಕ್ರಮೇಣ ತನ್ನಲ್ಲಿರುವ ಬುದ್ಧಿಯನ್ನು ಬಳಸಿ ಕೃಷಿಯತ್ತ ಒಲವು ತೋರಿಸುತ್ತಾ ಹಂತ-ಹಂತವಾಗಿ ಬದಲಾವಣೆಗಳನ್ನು ಕಂಡುಕೊಂಡಿದ್ದಾನೆ. ಅಂದಿನಿಂದ ಭಾರತದ ಬೆನ್ನೆಲುಬೇ ರೈತನಾಗಿದ್ದಾನೆ.

ಬೇಟೆಗಾರಿಕೆಯ ವೃತ್ತಿಯನ್ನು ತೊರೆದು ಕೃಷಿಗೆ ಹೆಚ್ಚಿನ ಮನ್ನಣೆ ಕೊಡುತ್ತಾ ಕೃಷಿಗೆ ಬೇಕಾಗಿರುವ ಸಾಮಾನುಗಳನ್ನು ತಯಾರಿಸಿಕೊಂಡು ತನ್ನ ಜೀವಿತಾವಧಿಗೆ ಬೇಕಾಗಿರುವ ಆಹಾರ ಧಾನ್ಯಗಳನ್ನು ಬೆಳೆಯತೊಡಗಿದ. ಪ್ರಾಚೀನ ಕಾಲದ ಕೃಷಿ ಪದ್ಧತಿಯ ಆಚರಣೆಗೂ ಇಂದಿನ ಆಧುನಿಕ ಯುಗದ ಕೃಷಿ ಪದ್ಧತಿಗೂ ಮತ್ತು ಆಚರಣೆಗೂ ಹೋಲಿಸಿ ನೋಡಿದರೆ ಅಜಗಜಾಂತರದ ವ್ಯತ್ಯಾಸಗಳು ಕಂಡು ಬರುತ್ತಿವೆ. ಪ್ರಾಚೀನ ಕಾಲದ ಕೃಷಿ ಪದ್ಧತಿಯು ವೈಭವದಿಂದ ಕೂಡಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬಗಳು ಕಾಣುತ್ತಿದ್ದವು. ವ್ಯವಸಾಯಗಾರರ ಬದುಕು ವೈವಿಧ್ಯತೆ ಮತ್ತು ಅನೋನ್ಯತೆಗಳಿಂದ ಕೂಡಿದ್ದವು. ಯಾವುದೇ ವಿನೂತನ ಕೃಷಿಯನ್ನು ಅನುಸರಿಸಬೇಕಾದರೆ ಪೂಜೆ-ಪುನಸ್ಕಾರಗಳು, ಧಾರ್ಮಿಕ ಆಚರಣೆಗಳು, ಮನೋರಂಜನೆಗಳು, ಹಬ್ಬ-ಹರಿದಿನಗಳು, ಬಾಂಧವ್ಯ, ಬಂಧುತ್ವ ಹಲವಾರು ಸಂಪ್ರದಾಯಗಳಿಂದ ಕೂಡಿದ ಕೃಷಿ ಪದ್ಧತಿಗೂ ಇಂದಿನ ಕೃಷಿ ಪದ್ಧತಿಗೂ ನಾನಾ ರೀತಿಯ ಬದಲಾವಣೆಗಳು ಕಂಡು ಬರುತ್ತಿವೆ. ದುಡಿಮೆಯ ಜಗತ್ತಿನಲ್ಲಿ ಮಹಿಳೆಯರು ಕಣ್ಣಿಗೆ ಕಣುವುದಿಲ್ಲ. ಅವರು ಇನ್ ವಿಜಿಬಲ್ ಆಗಿದ್ದಾರೆ ಎಂದು ಹೇಳಲಾಗುತ್ತಿದೆ. ದುಡಿಮೆ ಅನ್ನೋದು ಮಹಿಳೆಯರಿಗೆ ಸಂಬಂಧಿಸಿದ ಸಂಗತಿಯಲ್ಲ ಎನ್ನಲಾಗಿದೆ. ಅದು ಪುರುಷರ ಜಗತ್ತು ಎಂದು ಪ್ರತಿಪಾದಿಸಲಾಗುತ್ತಿದೆ. ದುಡಿಮೆಯ ಜಗತ್ತಿನಲ್ಲಿ ಪುರುಷರು ಮಾತ್ರ ನೋಡಲು ಸಿಗುತ್ತಾರೆ ಎಂದು ಹೇಳಲಾಗುತ್ತಿದೆ. ಈ ಬಗೆಯ ಅಭಿಪ್ರಾಯಗಳು ಸಮಾಜದಲ್ಲಿ ನೆಲೆಯೂರಿಬಿಟ್ಟಿವೆ. ಆದರೆ ದುಡಿಮೆಯ ಜಗತ್ತನ್ನು ಅತ್ಯಂತ ಸೂಕ್ಷ್ಮವಾಗಿ ಪ್ರಜ್ಞಾಪೂರ್ವಕವಾಗಿ ತೆರೆದ ಕಣ್ಣಿನಿಂದ ಪರೀಕ್ಷಿಸಿದರೆ ಅಲ್ಲಿ ಮಹಿಳೆಯರು ಅಪಾರ ಸಂಖ್ಯೆಯಲ್ಲಿ ಬೆವರು ಕಣ್ಣೀರು ರಕ್ತ ಹರಿಸುತ್ತಿರುವುದು ಕಂಡು ಬರುತ್ತದೆ. ಅದನ್ನು ನೋಡುವ ಕಣ್ಣು ಬೇಕು. ಅದನ್ನು ನೋಡಿಕೊಳ್ಳುವ ಮನಸ್ಸು ಬೇಕು. ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರು ಲಾಗಾಯ್ತಿನಿಂದಲೂ ಎಲ್ಲಾ ರೀತಿಯ ಕಸುಬು, ವೃತ್ತಿ, ಉದ್ಯೋಗ, ದುಡಿಮೆಗಳಲ್ಲಿ ತೊಡಗಿರುವುದು ಕಂಡು ಬರುತ್ತದೆ. ಕುಂಬಾರಿಕೆಯಲ್ಲಿ ಅವರಿದ್ದಾರೆಮ ನೇಯ್ಗೆಯಲ್ಲಿ ಅವರ ದುಡಿಮೆ ಅನಿವಾರ್ಯವೆನ್ನುವಷ್ಟು ಅಗಾಧವಾಗಿದೆ. ಕೃಷಿಯಲ್ಲಿ ಅವರದು ವೈವಿಧ್ಯಮಯವಾದ ದುಡಿಮೆಯಾಗಿದೆ. ನಿಜವಾಗಿ ಹೇಳಬೇಕೆಂದರೆ ಒಕ್ಕಲುತನದಲ್ಲಿ ಮಹಿಳೆಯರು ದುಡಿಮೆಯನ್ನು ಬದುಕುತ್ತಿದ್ದಾರೆ. ಹೈನುಗಾರಿಕೆಯಂತೂ ಅವರ ಮನಾಪಲಿ, ಕುರಿ-ಕೋಳಿ, ಹಂದಿ ಸಾಕಾಣಿಕೆಗಳಲ್ಲಿ ಅವರ ಪಾತ್ರ ತುಂಬಾ ಮಹತ್ವದ್ದಾಗಿದೆ. ಬುಟ್ಟಿ ಎಣೆಯುವುದು, ಜಾಪೆ ಮಾಡುವುದು, ಪರಕೆ ಕಟ್ಟುವುದು, ಕೌದಿ ಮಾಡುವುದು, ಬಟ್ಟೆ ಹೊಲಿಯುವುದು, ಮಹಿಳೆಯರಿಗೆ ಮೀಸಲಾದ ಚಟುವಟಿಕೆಗಳಾಗಿವೆ. ಕಟ್ಟಡ ನಿರ್ಮಾಣ, ರಸ್ತೆ, ಸೇತುವೆ ಕಟ್ಟುವ ಕಾಮಗಾರಿಗಳಲ್ಲಿ ಅವರು ಅಪಾರ ಸಂಖ್ಯೆಯಲ್ಲಿದ್ದಾರೆ. ಈ ಎಲ್ಲ ವೃತ್ತಿ ಕಸುಬು ಉದ್ಯೋಗಗಳಿಗೆ ಸಂಬಂಧಿಸಿದಂತೆ 'ದುಡಿಮೆ' ಯಲ್ಲಿ ಮಹಿಳೆಯರಿದ್ದಾರೆ. ದುಡಿಮೆಯ ಯಾವ ಕ್ಷೇತ್ರದಲ್ಲಿ ಮಹಿಳೆಯರಿಲ್ಲ ಎಂಬುದು ನಿಜವಾಗಿ ಕೇಳಬೇಕಾಗಿರುವ ಪ್ರಶ್ನೆಯಾಗಿದೆ. ಈ ರೀತಿಯಾಗಿ ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು

ಹಾಗೂ ಅವರು ಎದುರಿಸುತ್ತಿರುವ ಕೃಷಿಯಲ್ಲಿನ ಸಮಸ್ಯೆಗಳು ಸವಾಲುಗಳನ್ನು, ಪರಿಹಾರಗಳನ್ನು ಹುಡುಕುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ.

ಮೊದಲ ಅಧ್ಯಾಯವು ಪ್ರವೇಶ ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಅಧ್ಯಯನ ವಿಧಾನ, ಅಧ್ಯಾಯಗಳ ಸ್ವರೂಪ ಹಾಗೂ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಾಹಿತ್ಯ ಸಮೀಕ್ಷೆ ಮಾಡಲಾಗಿದೆ. ಎರಡನೇ ಅಧ್ಯಾಯದಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಹೊಂದಿದ ಬಳ್ಳಾರಿ ಜಿಲ್ಲೆಯ ಅಧ್ಯಯನ ಕ್ಷೇತ್ರದ ಭೌಗೋಳಿಕ ಪರಿಚಯ ಮಾಡಿಕೊಡಲಾಗಿದೆ. ಇದರಲ್ಲಿ ಜಿಲ್ಲೆಯ ಪರಿಚಯ, ಜನಸಂಖ್ಯೆ, ಲಿಂಗಾನುಪಾತ, ಸಾಕ್ಷರತೆ, ಜಿಲ್ಲೆಯ ಕಾರ್ಮಿಕರು, ಸಂಪನ್ಮೂಲ ಇತ್ಯಾದಿ ವಿವರಗಳನ್ನು ನೋಡಲಾಗಿದೆ. ಅಧ್ಯಾಯ ಮೂರರಲ್ಲಿ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ ಹಾಗೂ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಹಿಳಾ ಕೃಷಿ ಕಾರ್ಮಿಕರ ಹಿನ್ನೆಲೆ, ಅವರ ಸಮಸ್ಯೆಗಳು, ಕೃಷಿ ಕಾರ್ಮಿಕರ ಮೇಲೆ ಜಾಗತೀಕರಣದ ಪರಿಣಾಮ, ಹಾಗೂ ಬೇಡ ಸಮುದಾಯದ ಮಹಿಳೆಯರ ಆರೋಗ್ಯದ ಮೇಲೆ ಗಣಿಗಾರಿಕೆಯ ಪ್ರಭಾವದ ಕುರಿತು ಗಮನಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಮಹಿಳಾ ಕೃಷಿ ಕಾರ್ಮಿಕರು ಮತ್ತು ಸರಕಾರದ ಯೋಜನೆಗಳ ಪರಿಶೀಲನೆ ಇದೆ. ಅಧ್ಯಾಯ ಐದರಲ್ಲಿ ಬೇಡ ಸಮುದಾಯದ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿ ನೆಲೆಯಲ್ಲಿ ಅವರ ಸಾಮಾಜಿಕ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ ಆರೋಗ್ಯದ ಸ್ಥಿತಿಗತಿ ಹಾಗೂ ಸರಕಾರದ ಸೌಲಭ್ಯಗಳ ಪರಿಶೀಲನೆ ಇದೆ. ಅಧ್ಯಾಯ ಆರರಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಬೇಡ ಕೃಷಿ ಕಾರ್ಮಿಕ ಮಹಿಳೆಯರ ಆಯ್ದ ಪ್ರಕರಣ ಅಧ್ಯಯನವನ್ನು ನೋಡಲಾಗಿದೆ. ಕೊನೆಯಲ್ಲಿ ಸಮಾರೋಪವಿದ್ದು ಇದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಕೊನೆಯಲ್ಲಿ ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಮಾಹಿತಿದಾರರ ವಿವರ, ಕೋಷ್ಟಕಗಳು, ನಕ್ಷೆಗಳು, ಹಾಗೂ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು ಮಹಿಳೆಯರ ಅಧ್ಯಯನಕ್ಕೆ ಸಂಬಂಧಿಸಿದಂತೆ ಛಾಯಚಿತ್ರಗಳನ್ನು ಒದಗಿಸಲಾಗಿದೆ.

ಬೇಡ ಬುಡಕಟ್ಟು ಮಹಿಳೆಯರ ಕೃಷಿ ಕೂಲಿಯ ಸ್ಥಿತಿಯನ್ನು ಅರಿಯಲು ಎಲ್ಲಾ ಬುಡಕಟ್ಟು ಮಹಿಳೆಯರನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವ ಅವಶ್ಯಕತೆ ಇಲ್ಲ. ಆ ವಲಯದಲ್ಲಿರುವ ಕೆಲವು ಮಹಿಳೆಯರನ್ನು ಅಧ್ಯಯನ ಮಾಡುವುದರಿಂದ ಬೇಡ ಬುಡಕಟ್ಟು ಮಹಿಳೆಯರ ಜೀವನ ಸ್ವರೂಪದ ಸಮಗ್ರ ಮಾಹಿತಿ ದೊರೆಯಬಲ್ಲದು. ಈ ಆಶಯದಿಂದಲೇ ಹೈದ್ರಾಬಾದ ಕರ್ನಾಟಕ ಭಾಗದ ಬಳ್ಳಾರಿ ಜಿಲ್ಲೆಯ ಬೇಡ ಬುಡಕಟ್ಟು ಮಹಿಳೆಯರ ಕೃಷಿ ಕಾರ್ಮಿಕರ ಸ್ಥಿತಿಗತಿಯ ಸ್ವರೂಪವನ್ನು ತಿಳಿಯಲು ಪ್ರಮುಖವಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಹಾಗೂ ಆರೋಗ್ಯ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗಿದೆ.

ಆಧುನಿಕ ಶಿಕ್ಷಣ, ಆರ್ಥಿಕತೆ, ಆರೋಗ್ಯ, ಸೌಲತ್ತುಗಳನ್ನು ಪಡೆದು ಆ ಮುಖಾಂತರ ಸಬಲಳಾಗಿ

